ಕೊಡಗಿನ ಗೌಡಕನ್ನಡದ ಭಾಷಿಕ ನೆಲೆಗಳು

(ಕನ್ನಡ ವಿಶ್ವವಿದ್ಯಾಲಯ, ಹಂಪಿ ಪಿಎಚ್.ಡಿ. ಪದವಿಗಾಗಿ ಸಾದರಪಡಿಸಲಾದ ಮಹಾಪ್ರಬಂಧ)

ಸಂಶೋಧಕರು

ಲಾವಣ್ಯ ಸಿ.ಪಿ.

ಮಾರ್ಗದರ್ಶಕರು

ಡಾ. ಸಾಂಬಮೂರ್ತಿ

ಪ್ರಾಧ್ಯಾಪಕರು

ಭಾಷಾ ನಿಕಾಯ

ಕನ್ನಡ ಭಾಷಾಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ 583 276

2015–16

ಕೊಡಗಿನ ಗೌಡಕನ್ನಡದ ಭಾಷಿಕ ನೆಲೆಗಳು

(ಕನ್ನಡ ವಿಶ್ವವಿದ್ಯಾಲಯ, ಹಂಪಿ ಪಿಎಚ್.ಡಿ. ಪದವಿಗಾಗಿ ಸಾದರಪಡಿಸಲಾದ ಮಹಾಪ್ರಬಂಧ)

ಸಂಶೋಧಕರು

ಲಾವಣ್ಯ ಸಿ.ಪಿ.

ಮಾರ್ಗದರ್ಶಕರು

ಡಾ. ಸಾಂಬಮೂರ್ತಿ

ಪ್ರಾಧ್ಯಾಪಕರು

ಭಾಷಾ ನಿಕಾಯ

ಕನ್ನಡ ಭಾಷಾಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

೨೦೧೫-೧೬

ಪ್ರಮಾಣ ಪತ್ರ

ಕೊಡಗಿನ ಗೌಡಕನ್ನಡದ ಭಾಷಿಕ ನೆಲೆಗಳು ಎಂಬ ಶೀರ್ಷಿಕೆಯ ಈ ಮಹಾಪ್ರಬಂಧವನ್ನು ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯದ ಕನ್ನಡ ಭಾಷಾಧ್ಯಯನ ವಿಭಾಗಕ್ಕೆ ಸಲ್ಲಿಸುತ್ತಿದ್ದೇನೆ. ಈ ಮಹಾಪ್ರಬಂಧವನ್ನು **ಡಾ. ಸಾಂಬಮೂರ್ತಿ** ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿರುತ್ತೇನೆ. ಸದರಿ ಮಹಾಪ್ರಬಂಧವು ಈ ಮೊದಲು ಯಾವ ಪದವಿಗೂ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ಲಾವಣ್ಯ ಸಿ.ಪಿ.
ಸಂಶೋಧನ ವಿದ್ಯಾರ್ಥಿನಿ
ಕನ್ನಡ ಭಾಷಾಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ

ಸ್ಥಳ: ವಿದ್ಯಾರಣ್ಯ
ದಿನಾಂಕ: ೨೭-೦೮-೨೦೧೫.

ಮಾರ್ಗದರ್ಶಕರ ದೃಢೀಕರಣ ಪತ್ರ

ಲಾವಣ್ಯ ಸಿ.ಪಿ. ಅವರು **ಕೊಡಗಿನ ಗೌಡಕನ್ನಡದ ಭಾಷಿಕ ನೆಲೆಗಳು** ಎಂಬ ಶೀರ್ಷಿಕೆಯ ಈ ಮಹಾಪ್ರಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ ಈ ಮಹಾಪ್ರಬಂಧವನ್ನು ಈ ಮೊದಲು ಯಾವ ಪದವಿಗೂ ಸಲ್ಲಿಸಲ್ಪಟ್ಟಿಲ್ಲವೆಂದು ದೃಢೀಕರಿಸುತ್ತೇನೆ.

ಡಾ. ಸಾಂಬಮೂರ್ತಿ
ಪ್ರಾಧ್ಯಾಪಕರು
ಕನ್ನಡ ಭಾಷಾಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ.

ಸ್ಥಳ: ವಿದ್ಯಾರಣ್ಯ
ದಿನಾಂಕ: 26.8.2015

ಪರಿವಿಡಿ

ಅಧ್ಯಾಯ ೧

ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ಸ್ವರೂಪ

ಅಧ್ಯಾಯ ಒಂದು

ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ಸ್ವರೂಪ

ಪೀಠಿಕೆ:

ಕನ್ನಡದ ಲಭ್ಯಗ್ರಂಥ ಕವಿರಾಜಮಾರ್ಗದಲ್ಲಿ ಅನೇಕ ಪ್ರಭೇದಗಳಿದ್ದವೆಂದು ಹೇಳಿ ಅವುಗಳಲ್ಲಿ ಒಂದು ಭಾಗದ ಕನ್ನಡವನ್ನು 'ತಿರುಳ್ಗನ್ನಡ' ಎಂದು ಕವಿರಾಜ ಮಾರ್ಗಕಾರ ಹೇಳಿದ್ದಾನೆ. ಅಂದರೆ, ಆಗಿನ ಕಾಲಕ್ಕೆ ಕನ್ನಡ ನಾಡಿನಲ್ಲಿ ಹಲವು ಪ್ರಭೇದಗಳು ಇದ್ದುದು ತಿಳಿದು ಬರುತ್ತದೆ. ಕೇಶಿರಾಜನು ಇವುಗಳನ್ನು ಉತ್ತರ ಮತ್ತು ದಕ್ಷಿಣ ಪ್ರಭೇದಗಳು ಎಂದು ಹೇಳುತ್ತಾನೆ. ಒಂದು ನಿರ್ದಿಷ್ಟ ಪ್ರದೇಶ ಹಾಗೂ ಸಾಮಾಜಿಕ ಪರಿಸರದಲ್ಲಿ ಬಳಸುವ ಭಾಷೆಯನ್ನು ಪ್ರಭೇದ ಭಾಷೆ ಎಂದು ಕರೆಯಲಾಗಿದೆ. ಆಧುನಿಕ ಸಂದರ್ಭದಲ್ಲಿ ಪ್ರಾದೇಶಿಕವಾಗಿ, ಸಾಮಾಜಿಕವಾಗಿ ಮತ್ತು ಅನ್ಯ ಭಾಷಾ ಪ್ರಭಾವಗಳನ್ನಾಧರಿಸಿ ಕನ್ನಡ ಭಾಷೆಯ ಪ್ರಭೇಧಗಳನ್ನು ಗುರುತಿಸುವುದು ನಡೆದಿದೆ. ಪ್ರಾದೇಶಿಕವಾಗಿ ನಾಲ್ಕು ಉಪಭಾಷೆಗಳ (ಕಲಬುರ್ಗಿ ಕನ್ನಡ, ಧಾರವಾಡ ಕನ್ನಡ, ಕರಾವಳಿ ಕನ್ನಡ, ಮೈಸೂರು ಕನ್ನಡ) ಬಗೆಗೆ ಅಧ್ಯಯನ ನಡೆದಿದ್ದರೆ ಸಾಮಾಜಿಕವಾಗಿ ಹಲವು ಪ್ರಭೇದಗಳ ಬಗೆಗೆ ಅಧ್ಯಯನ ನಡೆದಿವೆ. ಅವುಗಳಲ್ಲಿ ಹಾಲಕ್ಕಿ ಕನ್ನಡ, ಹವ್ಯಕ ಕನ್ನಡ, ಒಕ್ಕಲಿಗರ ಕನ್ನಡ, ಹರಿಜನರ ಕನ್ನಡ, ಗೌಡ ಕನ್ನಡ, ನಾಡವರ ಕನ್ನಡಗಳ ಬಗೆಗಿನ ಅಧ್ಯಯನಗಳು ಮುಖ್ಯವಾದವುಗಳು.

ಪ್ರತಿ ಇಪ್ಪತ್ತು ಕಿಲೋಮೀಟರ್‌ಗಳಿಗೆ ಭಾಷೆ ಬದಲಾಗುವುದು ಎಂದು ಭಾಷಾಶಾಸ್ತ್ರಜ್ಞರು ಹೇಳುತ್ತಾರೆ. ಅಂದರೆ, ಒಂದೊಂದು ತಾಲ್ಲೂಕು ಒಂದೊಂದು ಪ್ರಭೇದದ ಪ್ರದೇಶವಾಗಬಹುದು. ಇದರಿಂದ ಕರ್ನಾಟಕದಲ್ಲಿ ಎಷ್ಟು ತಾಲ್ಲೂಕುಗಳಿವೆಯೋ ಅಷ್ಟು ಪ್ರಭೇದ ಭಾಷೆಗಳಿವೆ ಎಂದು ಹೇಳಬಹುದು. ಪ್ರಾದೇಶಿಕವಾಗಿ ಕೊಡಗಿನ 'ಗೌಡಕನ್ನಡ'ವು ಕರಾವಳಿ ಕನ್ನಡಕ್ಕೆ ಸೇರಿದ ಭಾಷೆಯಾಗಿದೆ. ಕರಾವಳಿ ಕನ್ನಡವು ಮಂಗಳೂರು ಜಿಲ್ಲೆ, ಮಡಿಕೇರಿ, ಕಾರವಾರ ಜಿಲ್ಲೆ ಹಾಗೂ ಚಿಕ್ಕಮಗಳೂರು ಜಿಲ್ಲೆಯ ಕೆಲವು ಪ್ರದೇಶಗಳಲ್ಲಿ ಬಳಕೆಯಲ್ಲಿರುವ ಭಾಷೆಯಾಗಿದೆ. ಅಂದರೆ, ಕರಾವಳಿ ಕನ್ನಡವು

[illegible]

[illegible]

[illegible]

ಹವ್ಯಕ ಕನ್ನಡ, ಶಿವಳ್ಳಿ ಕನ್ನಡ ಮತ್ತು ಗೌಡಕನ್ನಡದ ಮಿಶ್ರಣವಾಗಿದೆ. ಕರಾವಳಿ ಕನ್ನಡದ ಶಬ್ದಗಳಲ್ಲಿ ನಾಸಿಕ್ಯ ಧ್ವನಿಯ ಬಳಕೆ ವಿಶಿಷ್ಟವಾಗಿದೆ. ಗೌಡಕನ್ನಡದಲ್ಲಿ ಈ ಲಕ್ಷಣವು ವಿಶಿಷ್ಟವಾಗಿದೆ.

ಉದಾ: ನಾಂಯಿ(ನಾಯಿ), ಮಾಂಯಣ(ಮೇಣ) ಇತ್ಯಾದಿ.

ಗೌಡಕನ್ನಡವು ಶಿಷ್ಟಕನ್ನಡಕ್ಕಿಂತ ಉಚ್ಚಾರಣೆ, ಶಬ್ದ ಸಮೂಹ ಹಾಗೂ ವ್ಯಾಕರಣ ಪ್ರಕ್ರಿಯೆಯಲ್ಲಿ ಭಿನ್ನವಾಗಿರುವುದರಿಂದ ಇದನ್ನು ಕನ್ನಡದ ಉಪಭಾಷೆ ಎಂದು ಗುರುತಿಸಲಾಗಿದೆ. ಒಂದು ನಿರ್ದಿಷ್ಟ ಪ್ರದೇಶ ಮತ್ತು ಜನಾಂಗದಲ್ಲಿ ಬಳಕೆಯಲ್ಲಿರುವ ಈ ಭಾಷೆಯನ್ನು 'ಗೌಡಕನ್ನಡ' ಎಂದು ಗುರುತಿಸುವುದರ ಮೂಲಕ ಅದರ ವೈಶಿಷ್ಟ್ಯವನ್ನು ಪರಿಗಣಿಸಿದಂತಾಗಿದೆ. ಕೊಡಗಿನ ಗೌಡಜನಾಂಗದವರು ಮಾತನಾಡುವ ಭಾಷೆಯಾದ 'ಗೌಡ ಕನ್ನಡ'ಕ್ಕೆ ಕೊಡಗಿನಲ್ಲಿ 'ಅರೆಭಾಷೆ' ಎಂದು ಹೆಸರಿದೆ.

ಭೌಗೋಳಿಕ ವ್ಯಾಪ್ತಿ:

ಪಶ್ಚಿಮ ಘಟ್ಟಗಳ ಪೂರ್ವ ಮತ್ತು ಪಶ್ಚಿಮ ಇಳಿಜಾರು ಪ್ರದೇಶವನ್ನೊಳಗೊಂಡ ಕೊಡಗು ಜಿಲ್ಲೆಯು ಬೆಟ್ಟಗುಡ್ಡಗಳಿಂದ ಕೂಡಿದ ಸಂಪತ್ತನ್ನೊಳಗೊಂಡ ಸುಂದರ ಆಕರ್ಷಣೀಯ ಜಿಲ್ಲೆಯಾಗಿದೆ. ಈ ಜಿಲ್ಲೆಯ ಮನೋಹರವಾದ ಪ್ರಕೃತಿ ಸೌಂದರ್ಯ ಅದರ ಸೊಬಗು, ಸಾಲು ಸಾಲಾಗಿರುವ ಹಸಿರು ಬೆಟ್ಟಗುಡ್ಡಗಳೂ, ಕಣಿವೆಗಳು, ಗದ್ದೆಗಳು, ಕಡು ದಟ್ಟವಾದ ಅರಣ್ಯಗಳು ಹಾಗೂ ಇದಕ್ಕೆಲ್ಲಾ ಮೆರುಗಾಗಿರುವ ಸುಂದರವಾದ ಕಾಫಿ, ಏಲಕ್ಕಿ, ಅಡಿಕೆ, ಕಿತ್ತಳೆಯ ತೋಟಗಳು ಇತ್ಯಾದಿ ನೈಸರ್ಗಿಕ ವೈಶಿಷ್ಟ್ಯತೆಗಳಿಂದ ತನ್ನ ಸ್ಥಾನವನ್ನು ಹಿರಿದಾಗಿಸಿಕೊಂಡಿದೆ. ಇದು ತನ್ನ ಪ್ರಕೃತಿ ಸೌಂದರ್ಯಕ್ಕಾಗಿ 'ದಕ್ಷಿಣ ಕಾಶ್ಮೀರ', 'ಭಾರತದ ಸ್ವಿಟ್ಜರ್‌ಲ್ಯಾಂಡ್' ಎಂದೆಲ್ಲಾ ಹೆಸರುವಾಸಿಯಾಗಿದೆ. ಈ ಜಿಲ್ಲೆಗಿರುವ 'ಕೊಡಗು' ಎಂಬ ಹೆಸರಿನ ಮೂಲದ ಬಗೆಗೆ ನಿಖರವಾದ ಆಕರಗಳಿಲ್ಲ. ಸುಂದರವಾದ ಈ ಕೊಡಗು ಜಿಲ್ಲೆಗೆ ಮತ್ಸ್ಯದೇಶ, ಕ್ರೋಢದೇಶ ಮತ್ತು ಬ್ರಹ್ಮದೇಶಗಳೆಂದು ಹೆಸರುಗಳಿದ್ದುವೆಂದು ಚರಿತ್ರೆಯಿದೆ.[೧] ಬ್ರಹ್ಮದೇವನು ಪವಿತ್ರನದಿ ಕಾವೇರಿಯ ಉಗಮಸ್ಥಾನವಾದ ತಲಕಾವೇರಿಯಲ್ಲಿರುವ ಬೆಟ್ಟದಲ್ಲಿ ಕೆಲಕಾಲ ತಪಸ್ಸು ಮಾಡಿದ ಕಾರಣ ಆ ಬೆಟ್ಟಕ್ಕೆ 'ಬ್ರಹ್ಮಗಿರಿ' ಎಂದೂ, ಕೊಡಗು ಬ್ರಹ್ಮದೇಶವೆಂದು ಕರೆಯಿಸಿಕೊಂಡಿತು. ಮತ್ಸ್ಯದೇಶದ ರಾಜ ಚಂದ್ರವರ್ಮನು ಈ ನಾಡಿನಲ್ಲಿ ರಾಜ್ಯಭಾರ ಮಾಡಿದ್ದರಿಂದ ಆ ಸ್ಥಳಕ್ಕೆ ಮತ್ಸ್ಯದೇಶವೆಂಬ ಹೆಸರಿತ್ತು. ಇದೇ ಚಂದ್ರವರ್ಮನ ಸಂತತಿಯು ಕೊಡಗಿನಲ್ಲಿ ಕೃಷಿ ನಡೆಸಲು ತಮ್ಮ ಕ್ರೋಢ(ಉಗುರು)ದಿಂದ ನೆಲವನ್ನು ಹದಗೊಳಿಸಿದ ಕಾರಣ ಅವರಿಗೆ ಕ್ರೋಢ ಜನರೆಂದು ಹೆಸರಾಯಿತು. ಈ ಕ್ರೋಢ ಜನರಿರುವ ಪ್ರದೇಶವು ಕ್ರೋಢ ದೇಶವೆಂದು ಕರೆಸಿಕೊಂಡಿತು.[೨] ಕಾಲಾಂತರದಲ್ಲಿ ಈ ಕ್ರೋಢ ದೇಶವು 'ಕೊಡಗು' ಎಂದು ರೂಪಾಂತರಗೊಂಡಿತು ಎಂಬ ವಿವರಣೆಯಿದೆ.

ಕೊಡಗು ಜಿಲ್ಲೆಯ ಒಟ್ಟು ಭೌಗೋಳಿಕ ವಿಸ್ತೀರ್ಣ ೪,೧೦೨ ಚ.ಕಿ.ಮೀಗಳಾಗಿದೆ. ಈ ಜಿಲ್ಲೆಯು ಮಡಿಕೇರಿ, ವೀರರಾಜಪೇಟೆ, ಸೋಮವಾರಪೇಟೆಗಳೆಂಬ ಮೂರು ತಾಲ್ಲೂಕುಗಳನ್ನೊಳಗೊಂಡಿದೆ. ಮಡಿಕೇರಿಯು ಕೊಡಗು ಜಿಲ್ಲೆಯ ಮುಖ್ಯಪಟ್ಟಣವಾಗಿದೆ. ಕರ್ನಾಟಕ ರಾಜ್ಯದಲ್ಲಿರುವ

ಹಲವು ಜಿಲ್ಲೆಗಳಂತೆ ಕೊಡಗು ಜಿಲ್ಲೆ ತನ್ನ ಜಿಲ್ಲಾ ಕೇಂದ್ರದ ಹೆಸರಿನಿಂದ ಪ್ರಸಿದ್ಧಿಯಾಗಿಲ್ಲ. ಈ ಜಿಲ್ಲೆಯ ಜಿಲ್ಲಾಕೇಂದ್ರ ಮಡಿಕೇರಿಯಾಗಿದೆ. ಇರುವ ಮೂರು ತಾಲ್ಲೂಕುಗಳಲ್ಲಿ ವೀರರಾಜಪೇಟೆ (ವೀರರಾಜೇಂದ್ರ ಪೇಟೆ) ತಾಲ್ಲೂಕು ೧,೬೪೬ ಚ.ಕಿ.ಮೀ. ವಿಸ್ತೀರ್ಣ ಹೊಂದಿದ್ದು, ವಿಸ್ತೀರ್ಣದಲ್ಲಿ ಜಿಲ್ಲೆಯ ಅತಿದೊಡ್ಡ ತಾಲ್ಲೂಕು ಆಗಿದೆ. ಮಡಿಕೇರಿಯು ವಿಸ್ತೀರ್ಣದಲ್ಲಿ ೧೪೪೯ ಚ.ಕಿ.ಮೀ. ಇದ್ದರೆ ೯೯೯ ಚ.ಕಿ.ಮೀ. ವಿಸ್ತೀರ್ಣ ಹೊಂದಿದ ಸೋಮವಾರಪೇಟೆ ತಾಲ್ಲೂಕು ಜಿಲ್ಲೆಯ ಚಿಕ್ಕ ತಾಲ್ಲೂಕು ಆಗಿದೆ. ಮೂರೂ ತಾಲ್ಲೂಕುಗಳು ಸೇರಿ ಸುಮಾರು ೨೯೬ ಗ್ರಾಮಗಳನ್ನು ಹೊಂದಿವೆ. ೧೯೯೧ರ ಜನಗಣತಿಯ ಪ್ರಕಾರ ಜಿಲ್ಲೆಯ ಒಟ್ಟು ಜನಸಂಖ್ಯೆ ೪,೮೫,೨೨೯ ಇದರಲ್ಲಿ ೨,೪೩,೯೭೭ರಷ್ಟು ಗಂಡಸರು ಮತ್ತು ೨,೪೧,೨೫೨ರಷ್ಟು ಹೆಂಗಸರು ಎಂದು ತಿಳಿದುಬರುತ್ತದೆ

ಜಿಲ್ಲೆಯ ಭೌಗೋಳಿಕ ಲಕ್ಷಣಗಳಲ್ಲಿ ವ್ಯತ್ಯಾಸವಿರುವುದನ್ನು ಇಲ್ಲಿ ಕಾಣಬಹುದು. ಮಡಿಕೇರಿಯು ಜಿಲ್ಲೆಯ ಮಧ್ಯಭಾಗದಲ್ಲಿದ್ದು ಗುಡ್ಡಗಳು, ಆಳವಾದ ಕಣಿವೆಗಳನ್ನು ಒಳಗೊಂಡ, ಸುತ್ತಲೂ ಕಾಡುಗಳಿಂದ ಆವೃತವಾದ ಪ್ರದೇಶವಾಗಿದೆ. ಸೋಮವಾರಪೇಟೆ ತಾಲ್ಲೂಕಿನಲ್ಲಿ ಬಯಲು ಸೀಮೆಯ ಲಕ್ಷಣಗಳನ್ನು ಕಾಣಬಹುದು. ವೀರರಾಜಪೇಟೆ ತಾಲ್ಲೂಕು ಅತೀ ಎತ್ತರವಲ್ಲದ ದಟ್ಟವಲ್ಲದ ಕಾಡುಗಳನ್ನು ಒಳಗೊಂಡು ಏರುಪೇರುಗಳು ಮಿತವಾಗಿರುವ ಬಯಲನ್ನು ಒಳಗೊಂಡಿದೆ. ಕರ್ನಾಟಕದ ಪ್ರಮುಖ ನದಿಗಳಲ್ಲಿ ಒಂದಾದ ಕಾವೇರಿ ನದಿಯು ಕೊಡಗಿನ ಪ್ರಮುಖ ನದಿಯಾಗಿದೆ. ಇತರ ಪ್ರಮುಖ ನದಿಗಳು ಹೇಮಾವತಿ, ಲಕ್ಷ್ಮಣತೀರ್ಥ, ಹಾರಂಗಿ, ಬರಪೊಳೆ. ಇವಲ್ಲದೆ ಕನ್ನಿಕೆ, ಕಕ್ಕಬೆ ಹೊಳೆ, ಕದನೂರು(ಕಾಡನೂರು)ಹೊಳೆ, ಚಿಕ್ಕಿ(ಚಿಕ್ಕ)ಹೊಳೆ, ಹಟ್ಟಿ ಹೊಳೆ ಇವೇ ಮೊದಲಾದ ಉಪನದಿಗಳು ಇಲ್ಲಿ ಹರಿಯುತ್ತವೆ. ಬರಪೊಳೆ, ನೂಜಿಕಲ್ಲು ನದಿ ಮತ್ತು ಕುಮಾರಧಾರ ನದಿಗಳು ಕೊಡಗಿನಲ್ಲಿ ಹುಟ್ಟಿ ಪಶ್ಚಿಮಾಭಿಮುಖವಾಗಿ ಹರಿದು ಅರಬ್ಬೀಸಮುದ್ರವನ್ನು ಸೇರುತ್ತವೆ.

ಕೊಡಗು ಬೆಟ್ಟಗುಡ್ಡಗಳಿಂದ ಕೂಡಿದ ಜಿಲ್ಲೆಯಾಗಿದ್ದು, ಇಡೀ ಕೊಡಗು ಪರ್ವತಮಯವಾಗಿದೆ. ಪಶ್ಚಿಮದ ಕಡೆಗೆ ಪಶ್ಚಿಮ ಘಟ್ಟದ ಉನ್ನತ ಶ್ರೇಣಿಗಳು ವ್ಯಾಪಿಸಿವೆ. ಈ ಪಶ್ಚಿಮ ಘಟ್ಟ ಸಾಲು ದಕ್ಷಿಣಕ್ಕೆ ತನ್ನ ಉಪಭಾಗಗಳನ್ನು ಚಾಚಿದೆ. ಈ ಉಪಭಾಗಗಳಲ್ಲಿ ಪ್ರಮುಖವಾದುದು ಬ್ರಹ್ಮಗಿರಿಯ ಸಾಲು. ಕೊಡಗಿನ ಆಗ್ನೇಯ ತುದಿಯಲ್ಲಿ ಈ ಬ್ರಹ್ಮಗಿರಿ ಶ್ರೇಣಿಯಿದೆ. ಭಾಗಮಂಡಲದ ಕಾವೇರಿ ನದಿಯ ಉಗಮಸ್ಥಾನದಲ್ಲಿರುವ ಶಿಖರ ಸಾಲಿಗೂ ಬ್ರಹ್ಮಗಿರಿ ಎನ್ನುವರು. ಈ ಶ್ರೇಣಿಯ ಪಶ್ಚಿಮಕ್ಕೆ ಹನುಮನ ಬೆಟ್ಟ, ಪೆರಮಾಲ ಮಲೆ, ಕೋಡಂಗ ಮಲೆ ಎಂಬ ಶಿಖರವಿದೆ. ವೀರರಾಜಪೇಟೆಯ ಬಳಿ ಅಂಬಟೆ ಬೆಟ್ಟ, ಬಿಟ್ಟಂಗಾಲ ಬೆಟ್ಟ, ಹತ್ತೂರು ಬೆಟ್ಟ ಅಥವಾ ಕುಂಡದ ಬೆಟ್ಟ, ಸಿದ್ದೇಶ್ವರ ಬೆಟ್ಟ, ಮೊಣಕಾಲು ಬೆಟ್ಟ ಮುಖ್ಯವಾದವು. ಪಶ್ಚಿಮ ಘಟ್ಟಗಳ ಬೆಟ್ಟಸಾಲುಗಳಲ್ಲೆಲ್ಲಾ ಅತಿಮುಖ್ಯವಾದುದು ಪೆರಂಬಾಡಿ ನಾಲ್ಕುನಾಡು ಬೆಟ್ಟಸಾಲು. ತಡಿಯಂಡ ಮೋಳು ಶಿಖರ ಕೊಡಗು ಜಿಲ್ಲೆಯಲ್ಲೇ ಅತಿ ಎತ್ತರದ ಶಿಖರವಾಗಿದೆ. ಪೂರ್ವದಲ್ಲಿ ಬೇಂಗುನಾಡು ಪರ್ವತಗಳ ಸಾಲಿದೆ. ಅಲ್ಲದೆ, ಸುಬ್ರಹ್ಮಣ್ಯ ಬೆಟ್ಟಸಾಲು, ಕೋಟ ಬೆಟ್ಟದ ಸಾಲು, ನೂರೊಕ್ಕಲು ಬೆಟ್ಟಸಾಲು, ಶಾಂತಳ್ಳಿ ಬೆಟ್ಟ, ಏರು ಮುಕ್ರಿ ಬೆಟ್ಟ, ಮಾಲಂಬಿ ಬೆಟ್ಟ, ಸೂರ್ಲಬ್ಬಿ ಬೆಟ್ಟ, ಮುಕೂರಿ ಬೆಟ್ಟ, ತಾಕೇರಿ ಬೆಟ್ಟ ಮುಂತಾದವು ಮುಖ್ಯವಾದವುಗಳು.

ಒಟ್ಟಿನಲ್ಲಿ ಕೊಡಗು ಅತಿ ಎತ್ತರವಾದ ಶಿಖರಗಳನ್ನು, ರಭಸವಾಗಿ ಹರಿಯುವ ಹೊಳೆಗಳನ್ನೂ, ಭೀಕರ ಕಮರಿಗಳು, ಹಸಿರಾದ ಕಣಿವೆಗಳು ಮತ್ತು ಅದರ ಸುತ್ತಮುತ್ತಲಿನ ನೈಸರ್ಗಿಕ ಸೌಂದರ್ಯಗಳನ್ನೊಳಗೊಂಡ ನಾಡಾಗಿದೆ. ಈ ಜಿಲ್ಲೆಯಲ್ಲಿ ಕೃಷಿಗೆ ಮೊದಲ ಸ್ಥಾನವಿದ್ದು, ಭತ್ತ ಪ್ರಮುಖವಾಗಿ ಬೆಳೆಯುವುದಲ್ಲದೆ, ವಾಣಿಜ್ಯ ಬೆಳೆಗಳಾದ ಕಾಫಿ, ಎಲಕ್ಕಿ, ಕಾಳುಮೆಣಸು, ರಬ್ಬರ್, ಅಡಿಕೆ, ಕಿತ್ತಳೆ ಬೆಳೆಗಳಿಗೂ ಪ್ರಸಿದ್ಧವಾಗಿದೆ.

ಕೊಡಗು ಜಿಲ್ಲೆಯಲ್ಲಿ ಕೊಡವರು, ಗೌಡರು, ಅಗಸರು, ಅಡಿಯರು, ಅಮ್ಮ ಕೊಡವರು, ಈಡಿಗರು, ಉಪ್ಪಾರರು, ಪಿರಿಗಳು, ಕಾಪಾಳರು, ಕಣಿಯರು, ಕುಡಿಯರು, ಕುರುಬರು, ಕಂಬಾರರು, ಕೆಂಬಟ್ಟಿ ಹೊಲೆಯರು, ಗೊಲ್ಲರು, ದೇವರ ಮಕ್ಕಳು, ಜೇನುಕುರುಬರು, ಪಾಲೆಯರು, ಪೆಗ್ಗಡೆಗಳು, ಬಣಜಿಗರು, ಬೆಟ್ಟಕುರುಬರು, ಬೆಸ್ತರು, ಬ್ರಾಹ್ಮಣರು, ಮಲೆಯರು, ಮೇದರು, ಮಾರಂಗಿಗಳು, ಯರವರು ಮುಂತಾದ ಜಾತಿ ಹಾಗೂ ಬುಡಕಟ್ಟಿನವರು ವಾಸವಾಗಿದ್ದಾರೆ. ಇವರಲ್ಲಿ ಕೊಡವರು ಮತ್ತು ಗೌಡಜನಾಂಗದವರು ಪ್ರಮುಖ ನಿವಾಸಿಗಳಾಗಿದ್ದಾರೆ. ಅಮ್ಮಕೊಡವ, ಅಗಸ, ಪೆಗ್ಗಡೆ, ಮೇದ, ಕುಂಬಾರ, ಕೊಯವ, ಐರಿ, ಗೊಲ್ಲ, ಕೆಂಬಟ್ಟಿ ಹೊಲೆಯ, ಹಜಾಮ ಮುಂತಾದವರು ಕೊಡವ ಭಾಷೆಯನ್ನೇ ಮಾತನಾಡುತ್ತಾರೆ. ಇಲ್ಲಿನ ಇನ್ನೊಂದು ಪ್ರಮುಖ ಭಾಷೆಯಾದ ಗೌಡಕನ್ನಡವು ಗೌಡಜನಾಂಗದವರು ಮಾತನಾಡುವ ಭಾಷೆಯಾಗಿದೆ. ಈ ಭಾಷೆಗೆ 'ಅರೆಗನ್ನಡ', 'ಅರೆಭಾಷೆ' ಎಂದೂ ಹೇಳಲಾಗುತ್ತದೆ. ಕಳೆದ ಶತಮಾನದ ಆರಂಭದಲ್ಲಿ ಇದು ಕೇವಲ ಗೌಡರ ನಡುವೆ ಮತ್ತು ಅವರ ಮನೆ ವ್ಯವಹಾರದ ನೆಲೆಯಲ್ಲಿ ಮಾತ್ರ ಬಳಕೆಯಲ್ಲಿತ್ತು ಎಂದು ತಿಳಿದುಬರುತ್ತದೆ. ಮೇಲ್ನೋಟಕ್ಕೆ ಇಂದು ಕೂಡ ಅದನ್ನು ಮಾತನಾಡುವಾಗ ಕೇಳುಗರಿಗೆ ಭಿನ್ನ ಭಾಷೆಗಳ ಅರ್ಧ ಸೇರುವಿಕೆಯಿಂದಾದ ಭಾಷೆಯಂತೆ ಕೇಳುತ್ತಿದೆ. ಆ ಭಾಷೆ ಬಾರದವರಿಗೂ ಅರ್ಧಂಬರ್ಧ ಅರ್ಥವಾಗುವಂತಿದೆ. ಬಹುಶಃ ಈ ಕಾರಣಗಳಿಗಾಗಿಯೆ ಅದನ್ನು 'ಅರೆಭಾಷೆ' ಎಂದು ಕರೆದಿರಬೇಕು. ಭಾಷಾ ವೈಜ್ಞಾನಿಕತೆಯ ಹಿನ್ನೆಲೆಯಲ್ಲಿ ನೋಡಿದರೆ ಅದನ್ನು ಆ ರೀತಿ ಕರೆಯುವುದು ಬಾಲಿಶವಾಗುತ್ತದೆ. ಅದು ಅರ್ಧ ಭಾಷೆಯಲ್ಲ, ಪೂರ್ಣಭಾಷೆ 'ಗೌಡಕನ್ನಡ' ಎಂದು ಅದನ್ನು ಗುರುತಿಸುವುದರಿಂದ ಅದರ ವೈಶಿಷ್ಟ್ಯವನ್ನು ಪರಿಗಣಿಸಿದಂತಾಗುತ್ತದೆ.[೩]

ಗೌಡಜನಾಂಗ:

ಹತ್ತು ಕುಟುಂಬ ಹದಿನೆಂಟು ಗೋತ್ರಕ್ಕೆ ಸೇರಿದವರಾದ ಗೌಡ ಜನಾಂಗದವರು ಕೊಡಗು ಜಿಲ್ಲೆಗೆ ದಕ್ಷಿಣ ಕನ್ನಡ ಜಿಲ್ಲೆಯಿಂದ ವಲಸೆ ಬಂದವರಾಗಿದ್ದಾರೆ. ವಿಜಯನಗರದ ಪತನವಾದ ನಂತರ ಇವರು ಇಕ್ಕೇರಿ ಸಂಸ್ಥಾನಕ್ಕೆ ಬಂದು ಅಲ್ಲಿಂದ ದಕ್ಷಿಣ ಕನ್ನಡ ಜಿಲ್ಲೆಯ ಮೂಲಕ ಕೊಡಗಿಗೆ ಬಂದವರು ಎಂಬ ಅಭಿಪ್ರಾಯವಿದೆ.

ಇತಿಹಾಸದ ಪ್ರಕಾರ ಕೊಡಗಿನ ಗೌಡ ಜನಾಂಗದವರು ವಿಜಯನಗರದ ಕೃಷ್ಣದೇವರಾಯನ ಕಾಲದಲ್ಲಿದ್ದವರು. ಇವರು ತಾಳಿಕೋಟೆಯ ಯುದ್ಧದ ನಂತರ ವಿಜಯನಗರ ಸಾಮ್ರಾಜ್ಯ ಅಳಿದು ಅಲ್ಲಿನ ಮುಸ್ಲಿಮರ ಆಳ್ವಿಕೆಯನ್ನು ಧಿಕ್ಕರಿಸಿ ಇಕ್ಕೇರಿ ಸಂಸ್ಥಾನದಲ್ಲಿ ಬಂದು ನೆಲೆಯೂರಿದರು.

ನಂತರದಲ್ಲಿ ಇಕ್ಕೇರಿ ನಾಯಕರು ದಕ್ಷಿಣ ಕನ್ನಡ ಜಿಲ್ಲೆಯನ್ನು ತಮ್ಮ ವಶಕ್ಕೆ ತೆಗೆದುಕೊಂಡ ಸಂದರ್ಭದಲ್ಲಿ ತಮ್ಮ ಸಂಸ್ಥಾನದಲ್ಲಿದ್ದ ಗೌಡ ಜನಾಂಗದವರನ್ನು ದಕ್ಷಿಣಕನ್ನಡ ಜಿಲ್ಲೆಯ ಘಟ್ಟದ ಸರಹದ್ದು ಪ್ರದೇಶಗಳಲ್ಲಿ ಬಂದು ನೆಲೆನಿಲ್ಲುವಂತೆ ಮಾಡಿದರೆಂದು ತಿಳಿದು ಬರುತ್ತದೆ (ಕುದುಪಜೆ ಬಿ.ಕೃಷ್ಣಪ್ಪ, ಗೌಡ ಸಂಸ್ಕೃತಿ:೧೯೮೫). ಐಗೂರು ಸೀಮೆಯಿಂದ ಶಿರಾಡಿ, ಸುಬ್ರಹ್ಮಣ್ಯಗಳ ಮೂಲಕ ದಕ್ಷಿಣಕನ್ನಡ ಜಿಲ್ಲೆಯ ಬೆಳ್ತಂಗಡಿ, ಬಂಟ್ವಾಳ, ಪುತ್ತೂರು, ಸುಳ್ಯ, ಕಾಸರಗೋಡಿನ ಪೂರ್ವಭಾಗಗಳಿಗೆ ತಂದು ಅಲ್ಲಿ ಭೂಮಿಕೊಟ್ಟು ನಿಲ್ಲಿಸಿದರೆಂದು ತಿಳಿದುಬರುತ್ತದೆ. ಗೌಡಜನಾಂಗದವರು ಕಾಸರಗೋಡಿನ ಗಡಿಯಲ್ಲಿರುವ ನೆರೆ ಜಿಲ್ಲೆಯಾದ ದಕ್ಷಿಣಕನ್ನಡ ಜಿಲ್ಲೆಯ ಸುಳ್ಯ ಹಾಗೂ ಪುತ್ತೂರಿನ ಜನವಿರಳವಾದ ಪ್ರದೇಶಗಳಲ್ಲಿ ಬಂದು ನೆಲೆಸಿದರು. ಆ ಮೂಲಕ ಗೌಡ ಜನಾಂಗದವರು ದಕ್ಷಿಣಕನ್ನಡ ಜಿಲ್ಲೆಯಲ್ಲಿ ನೆಲೆಸಿ ಕೃಷಿಯನ್ನು ತಮ್ಮ ವೃತ್ತಿಯಾಗಿಸಿಕೊಂಡರು.

ಮುಂದೆ ಕೊಡಗು ಜಿಲ್ಲೆಯು ಟಿಪ್ಪು ಸುಲ್ತಾನನ ವಶಕ್ಕೆ ಬಂದ ಸಂದರ್ಭದಲ್ಲಿ ಕೊಡಗಿನ ಜನರು ಟಿಪ್ಪು ಸುಲ್ತಾನನ ಆಳ್ವಿಕೆಯನ್ನು ವಿರೋಧಿಸಿ, ಆತನ ವಿರುದ್ಧ ಹಲವು ಬಾರಿ ದಂಗೆ ಎದ್ದರು. ಇದರಿಂದ ಕೋಪೋದ್ರಿಕ್ತನಾದ ಟಿಪ್ಪು ಸುಲ್ತಾನನು ದೊಡ್ಡ ಸೈನ್ಯದೊಂದಿಗೆ ಕೊಡಗಿಗೆ ಬಂದು ಅಲ್ಲಿದ್ದ ಜನರಲ್ಲಿ ದೊಡ್ಡ ಪ್ರಮಾಣವಾದ ಸುಮಾರು ಎಂಬತ್ತು ಸಾವಿರ ಜನರನ್ನು ಶ್ರೀರಂಗಪಟ್ಟಣಕ್ಕೆ ಕರೆದೊಯ್ದು ಅವರನ್ನು ಮುಸಲ್ಮಾನರನ್ನಾಗಿ ಮತಾಂತರಿಸಿದನು.[೪] ಈ ರೀತಿ ಹೆಚ್ಚಿನ ಪ್ರಮಾಣದ ಜನರು ಕೊಡಗಿನಿಂದ ಮೈಸೂರು ಜಿಲ್ಲೆಗೆ ರವಾನಿಸಲ್ಪಟ್ಟ ಪರಿಣಾಮವಾಗಿ ಕೊಡಗಿನಲ್ಲಿ ಜನ ವಿರಳತೆ ಉಂಟಾಯಿತು. ಪರಿಣಾಮವಾಗಿ ಇಲ್ಲಿನ ಬಹುತೇಕ ಕೃಷಿ ಭೂಮಿಗಳು ಪಾಳುಬಿದ್ದವು. ಕ್ರಿ.ಶ ೧೭೯೨ರಲ್ಲಿ ಅಮರ ಸುಳ್ಯ ಮಾಗಣೆಗಳು ಕೊಡಗಿನ ಹಾಲೇರಿ ಅರಸರಲ್ಲಿ ಪ್ರಖ್ಯಾತನಾದ ದೊಡ್ಡ ವೀರರಾಜೇಂದ್ರನ ವಶವಾಯಿತು. ಇತಿಹಾಸದ ಪ್ರಕಾರ ಗೌಡ ಜನಾಂಗದವರು ದಕ್ಷಿಣಕನ್ನಡ ಜಿಲ್ಲೆಯಿಂದ ಕೊಡಗಿಗೆ ಬಂದು ನೆಲೆಸುವಂತೆ ಮಾಡುವ ಕಾರ್ಯದಲ್ಲಿ ಪ್ರಮುಖ ಪಾತ್ರವಹಿಸಿದವನು ಇದೇ ಹಾಲೇರಿ ಅರಸ ದೊಡ್ಡವೀರ ರಾಜೇಂದ್ರ. ದಕ್ಷಿಣ ಕನ್ನಡ ಜಿಲ್ಲೆಯ ಪ್ರದೇಶವು ತನ್ನ ವಶಕ್ಕೆ ಬಂದ ನಂತರ ಅರಸ ದೊಡ್ಡವೀರ ರಾಜೇಂದ್ರನು ಅಲ್ಲಿ ನೆಲೆಸಿದ್ದ ಗೌಡ ಜನಾಂಗದವರನ್ನು ಜನವಿರಳವಾಗಿದ್ದ ಕೊಡಗಿಗೆ ಬಂದು ನೆಲೆಸುವಂತೆ ಮಾಡಿದನು. ಹೀಗೆ ೧೮ನೇ ಶತಮಾನದ ಅಂತ್ಯ ಹಾಗೂ ೧೯ನೇ ಶತಮಾನದ ಆದಿಯಲ್ಲಿ ಗೌಡ ಜನಾಂಗದವರು ಕೊಡಗಿಗೆ ಬಂದು ನೆಲೆಸಿದರು. ಇವರು ದಕ್ಷಿಣಕನ್ನಡ ಜಿಲ್ಲೆಯಿಂದ ಬಂದು ಭಾಗಮಂಡಲ ಮತ್ತು ನಾಪೋಕ್ಲುನಾಡು, ಮಡಿಕೇರಿ ಮತ್ತು ಗಾಳಿಬೀಡು ನಾಡುಗಳಲ್ಲೂ ನೆಲೆನಿಂತರು. ಸುಮಾರು ಕ್ರಿ.ಶ. ೧೭೯೯ರಿಂದ ಕ್ರಿ.ಶ ೧೮೦೮ರ ವರೆವಿಗೂ ಕೊಡಗಿನಲ್ಲೆ ನೆಲೆನಿಂತ ಗೌಡಜನಾಂಗದವರಿಗೆ ರಾಜ ದೊಡ್ಡವೀರ ರಾಜೇಂದ್ರನು ಅವರು ನೆಲೆನಿಂತ ಭೂಮಿಯನ್ನು ಕ್ರಿ.ಶ ೧೮೦೮ರಲ್ಲಿ ಜಮ್ಮಾ ಅಥವಾ ಉಂಬಳಿಯಾಗಿ ನೀಡಿದನು. ನಂತರದ ಕಾಲಗಳಲ್ಲಿ ಇವರುಗಳು ಕೊಡಗಿನ ಮಡಿಕೇರಿ, ವೀರರಾಜಪೇಟೆ ಹಾಗೂ ಸೋಮವಾರಪೇಟೆಗಳಲ್ಲಿ ನೆಲೆಸಿ ಕೊಡಗಿನ ಖಾಯಂ ನಿವಾಸಿಗಳಾದರು.[೫]

ಯೂರೋಪಿನ ಚರಿತ್ರೆಯ ಪ್ರಕಾರ ದ್ರಾವಿಡ ಜನಾಂಗದವರಲ್ಲಿ 'ಹಟ್ಟಿಕಾರ' ಎಂಬ ವಂಶವಿತ್ತು. ಈ ಹಟ್ಟಿಕಾರ ಪಂಗಡದ ಉಪಪಂಗಡದವರು ವೆಳ್ಳರು ಮತ್ತು ನಂದಿಧ್ವಜರು. ಈ ನಂದಿಧ್ವಜರಲ್ಲಿ

ತುರುವರು, ಕುರುವರು ಎಂಬ ಪಂಗಡವಿತ್ತು. ಈ ತುರುವರಲ್ಲಿ ಗೌಳ(ಗೌಡ) ಎಂಬ ಉಪಪಂಗಡವಿತ್ತೆಂದು ತಿಳಿದು ಬಂದಿದೆ. ಇವರ ಪ್ರಕಾರ ಈ ಗೌಳ ಅಥವಾ ಗೌಡರ ಮೂಲ ಪುರುಷ ಯೂರೋಪಿನಿಂದ ಹಿಂದೂ ದೇಶಕ್ಕೆ ಬಂದು ಸಿಂಧೂನದಿ ಪ್ರದೇಶದಲ್ಲಿ ವಾಸವಾಗಿದ್ದು, ಆರ್ಯರ ದಾಳಿಯಿಂದಾಗಿ ಈಗಿರುವ ಬಂಗಾಳ ಹಾಗೂ ಅಸ್ಸಾಂ ರಾಜ್ಯಗಳಿಗೆ ವಲಸೆ ಬಂದನು ಎಂದು ಹೇಳುತ್ತಾರೆ. ಈ ಪ್ರದೇಶಗಳಲ್ಲಿ ಬೆಲ್ಲ(ಗೂಡ್ ಅಸ್ಸಾಮಿನಲ್ಲಿ)ವನ್ನು ಹೆಚ್ಚಾಗಿ ಉತ್ಪಾದಿಸುತ್ತಿದ್ದ ಕಾರಣ ಈ ರಾಜ್ಯಕ್ಕೆ ಗೂಡ್‌ದೇಶ ಎಂಬ ಹೆಸರಾಯಿತು. ಕ್ರಮೇಣ ಈ ಗೂಡ್‌ದೇಶ ಗೌಡದೇಶವಾಗಿ ಈ ದೇಶದಿಂದ ಬಂದವರು ಗೌಡರೆಂದು ಕರೆಯಲ್ಪಟ್ಟರು. ಇವರು ವ್ಯವಸಾಯ ಮತ್ತು ಗೋಪಾಲನೆಯನ್ನು ತಮ್ಮ ವೃತ್ತಿಯನ್ನಾಗಿ ಮಾಡಿಕೊಂಡಿದ್ದರು. ಗೋಪಾಲನೆಯಿಂದಾಗಿ ಇವರಿಗೆ ಹಾಲಿನ ಸಂಬಂಧ ಹೆಚ್ಚಾಗಿದ್ದುದರಿಂದ ಗೌಡರ ಪೈಕಿ ಕೆಲವರು ಹಾಲು ಉತ್ಪಾದಕರಾದರು. ಈ ರೀತಿ ಹಾಲು ಉತ್ಪಾದಕರ ಪಂಗಡದವರು ಹಾಲು ಒಕ್ಕಲು ಮಕ್ಕಳು, ಗೊಲ್ಲರು, ಗೋಪಾಲರು, ಯಾದವರು ಮುಂತಾದ ಉಪಪಂಗಡಗಳಾದರು. ಈ ಸಂದರ್ಭ ದಕ್ಷಿಣ ದೇವಗಿರಿಯಲ್ಲಿ ಯಾದವ ವಂಶದವರು ತಮ್ಮ ಯಾದವ ರಾಜ್ಯವನ್ನು ಸ್ಥಾಪಿಸಿ ಆಳುತ್ತಿದ್ದರು. ಈ ಹಾಲಿನ ಸಂಬಂಧವುಳ್ಳ ಗೌಡರು ಅಲ್ಲಿಗೆ ಬಂದು ನೆಲೆಸಿದರೆಂದು ತಿಳಿದುಬರುತ್ತದೆ.

ಅಲ್ಲಾ-ಉದ್ದೀನ್-ಖಿಲ್ಜಿಯ ದಂಡನಾಯಕನಾದ ಮಲ್ಲಿಕಾಫರನು ದಕ್ಷಿಣ ದೇಶಗಳ ಕಡೆ ದಂಡಯಾತ್ರೆ ನಡೆಸಿದಾಗ ಯಾದವ ವಂಶದ ರಾಜನಾದ ರಾಮಚಂದ್ರನನ್ನು ಸೋಲಿಸಿ ದೇವಗಿರಿಯನ್ನು ತನ್ನ ವಶಕ್ಕೆ ತೆಗೆದುಕೊಂಡನು. ದೇವಗಿರಿಯಲ್ಲಿ ನೆಲೆಸಿದ್ದ ಹಾಲು ಒಕ್ಕಲು ಗೌಡರು ಮುಸ್ಲಿಮರ ದಾಳಿಯಿಂದ ತಪ್ಪಿಸಿಕೊಂಡು ಹಂಪೆಯ ಹಕ್ಕ-ಬುಕ್ಕರ ಸಾಮ್ರಾಜ್ಯಕ್ಕೆ ವಲಸೆ ಬಂದು ನೆಲೆಸಿದರು. ಈ ರೀತಿಯಾಗಿ ವಿಜಯನಗರ ಸಾಮ್ರಾಜ್ಯವಾಸಿಗಳಾದ ಇವರ ಸಂಸ್ಕೃತಿಯು ಆ ರಾಜ್ಯದ ಸಾಂಸ್ಕೃತಿಕ ಪ್ರಭಾವಕ್ಕೊಳಗಾಯಿತು. ಶೃಂಗೇರಿ ಜಗದ್ಗುರುಗಳ ಸಂಬಂಧಿಕರೂ, ಶಿಷ್ಯ ವೃಂದರೂ ಆದ ವಿದ್ಯಾರಣ್ಯರ ಪ್ರಭಾವ ವಿಜಯನಗರದ ಅರಸರ ಮೇಲೆ ಇದ್ದಿತು. ಇದರಿಂದಾಗಿ ಅಲ್ಲಿದ್ದ ಹಾಲು ಒಕ್ಕಲು ಮಕ್ಕಳು ಶೃಂಗೇರಿ ಜಗದ್ಗುರುಗಳನ್ನು ತಮ್ಮ ಗುರುವಾಗಿ ಸ್ವೀಕರಿಸಿದರು. ಇದರಿಂದಾಗಿ ಇವರ (ಕೊಡಗಿನ ಗೌಡರು) ವಿವಾಹಗಳಲ್ಲಿ ಶೃಂಗೇರಿಯ ಸುಬ್ಬಮ್ಮ ದೇವರಿಗೆ ಹರಕೆ ಹಣ ಕಟ್ಟುವ ಪದ್ಧತಿ ಬಂದಿದೆ ಎಂದು ಹೇಳಲಾಗಿದೆ. ಹಿಂದಿನ ಕಾಲದಲ್ಲಿ ಈ ಹಣವನ್ನು ಕಟ್ಟೆಮನೆ ಗೌಡರ ಮೂಲಕ ಶೃಂಗೇರಿ ಮಠಕ್ಕೆ ಸಲ್ಲಿಸಲಾಗುತ್ತಿತ್ತು. ಈಗ ಅದು ನಿಂತು ಹೋಗಿ ಹರಕೆಯ ಹಣವನ್ನು ತಿರುಪತಿ ವೆಂಕಟರಮಣ ಸ್ವಾಮಿಯ ಮುಡುಪಿಗೆ ಹಾಕುತ್ತಾರೆ.

ವಿಜಯನಗರ ಅರಸರ ಕುಲದೇವತೆ ತಿರುಪತಿಯ ಶ್ರೀ ವೆಂಕಟರಮಣನಾಗಿದ್ದರಿಂದ ರಾಜನನ್ನು ಅನುಸರಿಸಿ ಪ್ರಜೆಗಳೂ ಶ್ರೀ ವೆಂಕಟೇಶ್ವರನನ್ನು ತಮ್ಮ ಮನೆದೇವರಾಗಿ ಪೂಜಿಸಿದರು. ಇಂದಿಗೂ ಗೌಡರ ಮನೆದೇವರು ಶ್ರೀ ವೆಂಕಟರಮಣ ಸ್ವಾಮಿಯಾಗಿದ್ದಾನೆ. ಗೌಡರಲ್ಲಿರುವ ಗುರುಭಕ್ತಿ ಮತ್ತು ದೇವಭಕ್ತಿ ಎರಡಕ್ಕೂ ವಿಜಯನಗರ ರಾಜರುಗಳ ಪ್ರಭಾವವೇ ಕಾರಣವೆನ್ನಬಹುದು. ವಿಜಯನಗರವು ಮಹಮದೀಯರ ದಾಳಿಗೆ ತುತ್ತಾದ ನಂತರ, ಇವರು ಮುಸಲ್ಮಾನರ ಆಳ್ವಿಕೆಯನ್ನು ವಿರೋಧಿಸಿದರು.

ಈ ಹಾಲು ಒಕ್ಕಲು ಗೌಡರು ಆಗಿನ ವಿಜಯನಗರ ಅರಸರ ಆತ್ಮ ಸ್ನೇಹಿತರೂ ಹಾಗೂ ಮಾಂಡಲಿಕರೂ, ಬಲಾಢ್ಯರೂ ಆಗಿದ್ದ ಇಕ್ಕೇರಿ ವಂಶದ ನಾಯಕರ ಆಶ್ರಯವನ್ನು ಪಡೆದರು. ಇವರು ಶಿವಮೊಗ್ಗ ಹಾಗೂ ಉತ್ತರಕನ್ನಡ ಜಿಲ್ಲೆಗಳನ್ನು ಆಳುತ್ತಿದ್ದರು. ಆಗ ಉತ್ತರಕನ್ನಡ ಜಿಲ್ಲೆಯಲ್ಲಿ ಹೆಚ್ಚಾಗಿ ಹವೀಕ-ಬ್ರಾಹ್ಮಣರು ವಾಸಿಸುತ್ತಿದ್ದರು. ಇವರ ಸಂಸರ್ಗದಿಂದಾಗಿ ಗೌಡರು ಅವರ ಕನ್ನಡ ಭಾಷೆಗೆ ಹೆಚ್ಚು ವ್ಯತ್ಯಾಸವಿರದ ತಮ್ಮದೇ ಆದ ಭಾಷೆಯನ್ನು ಆಡಲು ಪ್ರಾರಂಭಿಸಿದರು. ಈ ಭಾಷೆಯೇ 'ಅರೆಭಾಷೆ' (ಅರೆಬಾಸೆ) ಎನ್ನಲಾಗಿದೆ. ನಂತರ ಇಕ್ಕೇರಿ ಅರಸರು ವಲಸೆ ಬಂದ ಗೌಡರನ್ನು ತಮ್ಮ ರಾಜ್ಯದ ಅಂಗವಾಗಿದ್ದ ಹಾಸನ ಜಿಲ್ಲೆಯ ಐಗೂರು ಸೀಮೆಗೆ ಕಳುಹಿಸಿದರು. ತರುವಾಯ ಇಕ್ಕೇರಿ ನಾಯಕರ ಅಧೀನದಲ್ಲಿದ್ದ ಮಲೆನಾಡು ಪ್ರದೇಶಗಳಾದ ಬೆಳ್ತಂಗಡಿ, ಸುಬ್ರಹ್ಮಣ್ಯ, ಸುಳ್ಯ, ಪುತ್ತೂರು, ಬೆಳ್ಳಾರೆ, ವಿಟ್ಲ ಪ್ರದೇಶಗಳಲ್ಲಿ ವ್ಯವಸಾಯ ಮಾಡುವುದಕ್ಕಾಗಿ ಸ್ಥಳ ಪಲ್ಲಟನೆಯಾಯಿತು. ಕ್ರಿ.ಶ.೧೬೬೩ ರಲ್ಲಿ ಇಕ್ಕೇರಿ ನಾಯಕರು ಸುಳ್ಯ ಪ್ರಾಂತ್ಯವನ್ನು ಕೊಡಗು ರಾಜರಿಗೆ ಹಾಲು ಬೆಣ್ಣೆಗಾಗಿ ದಾನ ಮಾಡಿದರು. ಇದರಿಂದಾಗಿ ಸುಳ್ಯಕ್ಕೆ 'ಅಮೃತ ಸುಳ್ಯ' ಅಥವಾ 'ಅಮರ ಸುಳ್ಯ'ವೆಂದು ಹೆಸರಾಯಿತು. ಕ್ರಿ.ಶ. ೧೬೬೩ರಿಂದ ಕ್ರಿ.ಶ. ೧೭೮೩ರ ಅವಧಿಯಲ್ಲಿ ಕೊಡಗು ರಾಜರಾದ ಲಿಂಗರಾಜ, ಮುದ್ದುರಾಜರುಗಳು ಮಲೆನಾಡಿನ ಇನ್ನುಳಿದ ಭಾಗಗಳನ್ನು ಖರೀದಿಸಿದರು. ಇದರಿಂದ ದಕ್ಷಿಣಕನ್ನಡ ಜಿಲ್ಲೆಯಲ್ಲಿ ಈಗ ಗೌಡರು ವಾಸವಾಗಿರುವ ಹೆಚ್ಚು ಕಡಿಮೆ ಎಲ್ಲಾ ಪ್ರದೇಶವೂ ಕೊಡಗು ಸಂಸ್ಥಾನಕ್ಕೆ ಸೇರಿತು. ಕ್ರಿ.ಶ.೧೮೩೪ ರಲ್ಲಿ ಕೊಡಗು ಬ್ರಿಟೀಷರ ವಶವಾದ ನಂತರ ಇದನ್ನು ವಿಂಗಡಿಸಿ ದಕ್ಷಿಣಕನ್ನಡ ಜಿಲ್ಲೆ ಎಂದು ಮಾಡಲಾಯಿತು. ನಂತರ ಕೊಡಗು ಟಿಪ್ಪುವಿನ ವಶವಾದ ನಂತರ ಕೊಡಗಿನ ಮಡಿಕೇರಿನಾಡು (ಕಗ್ಗೋಡು ಗ್ರಾಮ), ಹುದುಕೇರಿನಾಡು, ಬೆಂಗುನಾಡು, ಕಾವುನಾಡು, ಕಡಿಯತ್‌ನಾಡು, ನಾಲ್ಕುನಾಡು, ಕುಯ್ಯಂಗೇರಿ ನಾಡುಗಳಲ್ಲಿ ಜನರಿಲ್ಲದೆ ವ್ಯವಸಾಯ ಮಾಡಲು ತೊಂದರೆಯಾಯಿತು. ಈ ಕಾರಣದಿಂದಾಗಿ ಈಗಿನ ದಕ್ಷಿಣಕನ್ನಡ ಜಿಲ್ಲೆಯ ಮೇಲೆ ತಿಳಿಸಿದ ಪ್ರದೇಶಗಳಿಂದ ಗ್ರಾಮವೊಂದಕ್ಕೆ ೧೫ ಜನರಂತೆ ಗೌಡರನ್ನು ಕ್ರಿ.ಶ ೧೭೮೩ರಲ್ಲಿ ಅರಸ ದೊಡ್ಡವೀರರಾಜೇಂದ್ರ ಕೊಡಗಿನ ಮೇಲೆ ತಿಳಿಸಿರುವ ನಾಡುಗಳಲ್ಲಿ ಬಂದು ನೆಲೆಸುವಂತೆ ಮಾಡಿ ಜಮ್ಮ ಹಾಗೂ ಉಂಬಳಿ ಕೊಟ್ಟನು. ಹೀಗೆ ಬಂದವರಲ್ಲಿ ಗೌಡರೇ ಅತಿ ಹೆಚ್ಚಿನ ಸಂಖ್ಯೆಯಲ್ಲಿದ್ದರು. ದನಗಳನ್ನು ಸಾಕಿ ಹಾಲಿನ ಉತ್ಪಾದನೆಯಲ್ಲಿ ತೊಡಗಿದ್ದ ಹಾಲು ಒಕ್ಕಲು ಗೌಡರು ವಲಸೆ ಹೋಗುವಾಗ ದನಗಳನ್ನು ಸಾಗಿಸಲಾರದೆ, ವ್ಯವಸಾಯವನ್ನು ಅವಲಂಬಿಸಿದರು ಎಂಬುದಾಗಿ ಗೌಡರ ಮೂಲದ ಬಗೆಗಿನ ವಿಚಾರಗಳಿಂದ ತಿಳಿದುಬರುತ್ತದೆ.[೬]

ಕೊಡಗಿನ ಗೌಡ ಜನಾಂಗದವರು ಹಿಂದೂಗಳಾಗಿದ್ದು, ಇವರು ಹತ್ತು ಕುಟುಂಬ ಮತ್ತು ಹದಿನೆಂಟು ಗೋತ್ರಗಳಿಗೆ ಸೇರಿದವರು. ಹಲವು ಕುಟುಂಬಗಳನ್ನೊಳಗೊಂಡ ಒಂದು ಜನ ಸಮೂಹವನ್ನು ಗೋತ್ರ ಎನ್ನಲಾಗುತ್ತದೆ. ಗೋತ್ರಕ್ಕೆ 'ಬಟೆ' ಎಂದೂ ಕರೆಯಲಾಗುತ್ತದೆ. ಒಂದು ಗೋತ್ರಕ್ಕೆ ಒಳಪಟ್ಟ ಕುಟುಂಬದವರು ರಕ್ತಸಂಬಂಧಿಗಳು, ಒಂದೇ ಮನೆಯವರು ಎಂಬ ಪ್ರತೀತಿ ಇದೆ. ಈ ಕಾರಣದಿಂದಾಗಿ ಒಂದೇ ಗೋತ್ರದ ಕುಟುಂಬಗಳ ನಡುವೆ ವಿವಾಹ ಸಂಬಂಧಗಳು ಏರ್ಪಾಡುವುದಿಲ್ಲ. ಇವರು ತಮ್ಮ ಕುಟುಂಬಗಳಿಗೆ ವಿಭಿನ್ನ ಹೆಸರುಗಳನ್ನು ಹೊಂದಿದ್ದು, ಈ

ಕುಟುಂಬದ ಹೆಸರಿನಿಂದಲೇ ಗುರುತಿಸಿಕೊಳ್ಳುತ್ತಾರೆ. ಕೊಡಗು ಜಿಲ್ಲೆಯಲ್ಲಿ ಸುಮಾರು ನಾನೂರರಷ್ಟು ವಿಭಿನ್ನ ಹೆಸರುಗಳನ್ನೊಳಗೊಂಡ ಗೌಡ ಕುಟುಂಬಗಳಿವೆ. ಇವರ ಮನೆದೇವರು ತಿರುಪತಿ ಶ್ರೀ ವೆಂಕಟರಮಣಸ್ವಾಮಿ. ಕೆಲವು ಕುಟುಂಬಗಳು ದುರ್ಗಿ, ಸುಬ್ಬಮ್ಮ(ಶರ್ವಾಂಬೆ, ಶಾರದೆ)ರನ್ನೂ ಮನೆ ದೇವರಾಗಿ ಪೂಜಿಸುವರು. ಕೆಲವು ಕುಟುಂಬಗಳಲ್ಲಿ ಭೂತಾರಾಧನೆಯಿದ್ದು ಕಲ್ಲವ್ವ, ಮಲ್ಲವ್ವ, ಕಲ್ಲಪ್ಪ, ಮಲ್ಲಯ್ಯ ಮೊದಲಾದ ದೆವ್ವ ದೇವತೆಗಳನ್ನು ಪೂಜಿಸುತ್ತಾರೆ. ಇವುಗಳು ತಲತಲಾಂತರದ ಆಚರಣೆಯಿಂದ ನಡೆದು ಬಂದಿರುವ ಭಕ್ತಿಯ ಮಾರ್ಗಗಳಾಗಿವೆ. ಕೊಡಗಿನ ಗೌಡ ಜನಾಂಗದವರ ಕುಲಗುರುಗಳಾದ ಶೃಂಗೇರಿ ಮಠದ ಗುರುಗಳಿಗೆ ಕಾಣಿಕೆ ಅರ್ಪಿಸುವುದು ಗೌಡ ಜನಾಂಗದಲ್ಲಿ ಹಿಂದಿನಿಂದಲೂ ನಡೆದು ಬಂದಿದೆ. ಇವರ ವಿವಾಹ ಸಂದರ್ಭಗಳಲ್ಲಿ ಹೆಣ್ಣಿನ ಮುತ್ತೈದೆತನಕ್ಕೆ ಶೃಂಗೇರಿ ಮಠಕ್ಕೆ 'ತೆರ' ನೀಡುವ ನಿಯಮವಿದೆ. ಹಿಂದೆ ಇದರ ಮೊತ್ತ ನಾಲ್ಕುರೂಪಾಯಿ ಮೂವತ್ತು ಪೈಸೆಗಳಾಗಿದ್ದವು. ಇಲ್ಲಿನ ಕುಟುಂಬಗಳಲ್ಲಿ ವೆಂಕಟರಮಣ ದೇವರ ಆರಾಧನೆಯನ್ನು 'ಹರಿಸೇವೆ' ಎಂಬುದಾಗಿ ಆಚರಿಸುತ್ತಾರೆ. ನಿಯಮದ ಪ್ರಕಾರ ಪ್ರತಿ ಐದು ವರ್ಷಗಳಿಗೊಮ್ಮೆ ಈ ಆಚರಣೆ ಪ್ರತಿ ಕುಟುಂಬದಲ್ಲಿ ನಡೆಯುತ್ತದೆ.

ಕೊಡಗಿನ ಗೌಡ ಜನಾಂಗದವರ ಸಾಂಪ್ರದಾಯಿಕ ಉಡುಗೆ ತೊಡುಗೆಗಳು ವಿಶಿಷ್ಟವಾದುದಾಗಿದೆ. ಪುರುಷರ ಮುಖ್ಯ ಉಡುಪು ಬಿಳಿಯ ಬಣ್ಣದ ಕುಪ್ಪಸ (ಉದ್ದವಾದ ನಿಲುವಂಗಿ), ಕೆಂಪು ಬಣ್ಣದ ದಟ್ಟಿ, ರುಮಾಲು, ಪೀಚೆಕತ್ತಿ, ಸ್ತ್ರೀಯರ ಸಾಂಪ್ರದಾಯಿಕ ಉಡುಗೆ ಗೇಂಟಿ (ಗಂಟು)ಸೀರೆ, ಉದ್ದ ತೋಳಿನ ಜಾಕೀಟು(ರವಿಕೆ), ತಲೆಗೆ ಜರಿವಸ್ತ್ರ. ಇವರ ಮುಖ್ಯ ಆಭರಣಗಳು ಮಾಂಗಲ್ಯ, ಓಲೆ ಹಾಗೂ ಮೂಗುತಿ. ಇವರಲ್ಲಿ ವಿವಾಹ ಸಂದರ್ಭದಲ್ಲಿ ಮೂಗುತಿ ಧರಿಸದ ಹೆಣ್ಣನ್ನು ಧಾರೆ ಎರೆಯುವಂತಿಲ್ಲ. ವಿವಾಹಿತ ಸ್ತ್ರೀಯು ಕೊರಳಿನಲ್ಲಿ ಮಾಂಗಲ್ಯವಿಲ್ಲದೆ ಮೂಡಣ ಕಟ್ಟಳೆ (ಪೂರ್ವ ದಿಕ್ಕಿನ ಬಾಗಿಲು) ದಾಟಬಾರದು, ಪತಿಗೆ ಊಣಲು ಬಡಿಸಬಾರದು ಎಂಬ ನಿಯಮವಿದೆ.

ಗ್ರಾಮ, ಕುಟುಂಬ ಅಥವಾ ಸಂಬಂಧಿಕರಲ್ಲಿ ಯಾರೇ ಸಾವನ್ನಪ್ಪಿದರೂ ಸಾವಿಗೆ (ಶವದ ದರ್ಶನಕ್ಕೆ) ಹೋಗುವಾಗ ಶುಭ್ರ ಬಿಳಿಯ ಬಣ್ಣದ ಅಂಗಿ ಮತ್ತು ಪಂಚೆಯನ್ನು ಪುರುಷರು ಧರಿಸಿದರೆ ಸ್ತ್ರೀಯರು ಬಿಳಿಸೀರೆ, ರವಿಕೆ ಧರಿಸುತ್ತಾರೆ.

ಆಚರಣೆಗೆ ಸಂಬಂಧಿಸಿದಂತೆ ಕೊಡಗಿನ ಗೌಡಜನಾಂಗದವರು ಯುಗಾದಿ, ಬಿಸು ಸಂಕ್ರಮಣ, ಕಾವೇರಿ ಸಂಕ್ರಮಣ, ದೀಪಾವಳಿ, ಹುತ್ತರಿ ಹಬ್ಬ, ಕೈಲು ಮಹೂರ್ತ, ಕಿಡ್ಡಾಸ, ಸುಬ್ರಹ್ಮಣ್ಯ ಷಷ್ಠಿ ಮೊದಲಾದ ಹಬ್ಬಗಳೊಂದಿಗೆ ಆಯಾ ಗ್ರಾಮ ದೇವತೆಗಳನ್ನು ಆರಾಧಿಸುವ ಹಬ್ಬಗಳನ್ನು ಆಚರಿಸುತ್ತಾರೆ. ಇವರು ಮಾಂಸಾಹಾರಿಗಳಾಗಿದ್ದು ಇವರ ಮುಖ್ಯ ಆಹಾರ ಪದಾರ್ಥ ಅಕ್ಕಿ (ಅಕ್ಕಿರೊಟ್ಟಿ ಇವರಿಗೆ ಬಹಳ ಪ್ರಿಯವಾದ ಆಹಾರ), ಹಂದಿಯ ಮಾಂಸವನ್ನು ಹೆಚ್ಚಾಗಿ ಉಪಯೋಗಿಸುತ್ತಾರೆ.

ಭಾಷೆ:

ಕೊಡಗಿನ ಗೌಡ ಜನಾಂಗದವರು ಮಾತನಾಡುವ ಭಾಷೆ 'ಗೌಡಕನ್ನಡ' ಅಥವಾ 'ಅರೆಭಾಷೆ'. ಕನ್ನಡದ ಸಾಮಾಜಿಕ ಉಪಭಾಷೆಗಳಲ್ಲಿ ಒಂದಾದ ಈ ಭಾಷೆಯ ಪ್ರಾಚೀನತೆಯ ಬಗ್ಗೆ ನಿಖರವಾದ

ಆಧಾರಗಳು ದೊರೆತಿಲ್ಲ. ಲಭ್ಯವಿರುವ ಆಧಾರದ ಪ್ರಕಾರ ಗೌಡಕನ್ನಡವು ದ್ರಾವಿಡ ಭಾಷಾ ಗುಂಪಿಗೆ ಸೇರಿದುದಾಗಿದೆ ಈಗಿನ ಪಶ್ಚಿಮ ಪಾಕಿಸ್ಥಾನದ ಕಲತ್ ಹಾಗೂ ದಕ್ಷಿಣ ಅಫ಼್‌ಘಾನಿಸ್ಥಾನದ ಇರಾನ್‌ಗಳಲ್ಲಿ ಬಳಕೆಯಲ್ಲಿರುವ 'ಬ್ರಾಹೂಯಿ'ಯ ನಂತರದ ಸ್ಥಾನವನ್ನು ಪಡೆಯುತ್ತದೆ ಎಂದು ಖ್ಯಾತ ವಿದ್ವಾಂಸ ಎಸ್.ವಿ. ಷಣ್ಮುಗಂ ಉಲ್ಲೇಖಿಸಿರುವುದನ್ನು ಪ್ರೊ.ಕೆ. ಕುಶಾಲಪ್ಪಗೌಡರು ಪ್ರಸ್ತಾಪಿಸುತ್ತಾರೆ. ಆದರೆ, ಇದನ್ನು ಅವರು ತಮ್ಮ ಬರಹಗಳಲ್ಲಿ ದಾಖಲಿಸಿಲ್ಲ.

ಕೊಡಗಿನಲ್ಲಿ ಗೌಡಕನ್ನಡ ಭಾಷೆಯು ಸರಕಾರದ ವ್ಯವಹಾರಗಳಲ್ಲಿ, ವ್ಯಾಪಾರ ವಹಿವಾಟುಗಳಲ್ಲಿ ಹಾಗೂ ವಿದ್ಯಾಸಂಸ್ಥೆಗಳಲ್ಲಿ ಬಳಸುವ ಕನ್ನಡಕ್ಕಿಂತ ಭಿನ್ನವಾದ ಭಾಷೆಯಾಗಿದೆ. ಈ ಭಾಷೆಯು ಪೂರ್ತಿಯಾಗಿ ಕನ್ನಡದಲ್ಲಿಲ್ಲ. ಆದರೆ ಇದು ಸ್ವಲ್ಪ ಪ್ರಮಾಣದಲ್ಲಿ ಕನ್ನಡ ಮಾತನಾಡುವವರಿಗೆ ಅರ್ಥವಾಗುವಂತಿದೆ. ಅತ್ತ ಪೂರ್ತಿಯಾಗಿ ಕನ್ನಡವೂ ಅಲ್ಲದ ಇತ್ತ ಪೂರ್ತಿಯಾಗಿ ಬೇರೆ ಭಾಷೆಯೂ ಅಲ್ಲದ ಇದನ್ನು ನಮ್ಮದು 'ಅರ್ಧ ಕನ್ನಡ ಭಾಷೆ', 'ಅರ್ಧ ಭಾಷೆ', 'ಅರೆಭಾಷೆ', ಎಂದು ಅವರ ಭಾಷೆಯನ್ನು ಗುರುತಿಕೊಳ್ಳುತ್ತಾರೆ. ಮುಂದೆ 'ಅರ್ಧ ಭಾಷೆ'ಯು 'ಅರೆಭಾಷೆ'ಯಾಯಿತು. ಆದ್ದರಿಂದ ಇದನ್ನು 'ಅರೆಗನ್ನಡ' ಅಥವಾ 'ಅರೆಭಾಷೆ' ಎಂದು ಗುರುತಿಸಲಾಗಿದೆ ಎಂಬುದು ಗೌಡಕನ್ನಡ ಭಾಷಿಕರ ಅನಿಸಿಕೆಗಳು. ಒಂದು ಸಮುದಾಯಕ್ಕೆ ಸೀಮಿತವಾದ ಕನ್ನಡ ಪ್ರಭೇದವನ್ನು ಆ ಸಮುದಾಯದ ಹೆಸರಿನೊಂದಿಗೆ ಗುರುತಿಸುವ ರೂಢಿ ಭಾಷಾವಿಜ್ಞಾನ ಕ್ಷೇತ್ರದಲ್ಲಿದೆ. ಆ ಪ್ರಕಾರವಾಗಿ ಗೌಡರ ಕನ್ನಡದ ಪ್ರಭೇದಕ್ಕೆ 'ಗೌಡಕನ್ನಡ' ಎಂದು ಹೆಸರಿಸಲಾಯಿತು. ಈ ಭಾಷೆಗೆ 'ಗೌಡಕನ್ನಡ' ಎಂಬ ಹೆಸರನ್ನು ಪ್ರೊ.ಎಂ. ಮರಿಯಪ್ಪಭಟ್ಟರು ಅಂಕಿತಗೊಳಿಸಿದರು. ಇವರು ಮದರಾಸಿನಲ್ಲಿ ಜರುಗಿದ ಭಾಷಾಧ್ಯಯನ ಸಂದರ್ಭವೊಂದರಲ್ಲಿ ವಾಸ್ತವಿಕವಾಗಿ ಪ್ರಸ್ತಾಪಿಸಿದ್ದನ್ನು ಭಾಷಾವಿಜ್ಞಾನಿ ಪ್ರೊ.ಕೆ.ಕುಶಾಲಪ್ಪಗೌಡರು ದಾಖಲಿಸಿದ್ದಾರೆ. (ಪ್ರೊ. ಕೆ.ಕೆ. ಗೌಡ ೧೯೬೭) ಪ್ರೊ.ಕೆ. ಕುಶಾಲಪ್ಪಗೌಡರು 'ಗೌಡಕನ್ನಡ' ಎಂಬ ಹೆಸರನ್ನೇ ಇಟ್ಟುಕೊಂಡು ಈ ಭಾಷೆಯ ವೈಜ್ಞಾನಿಕ ಅಧ್ಯಯನ ನಡೆಸಿದರು. ನಂತರದ ಅಧ್ಯಯನಗಳಲ್ಲಿ ಈ ಭಾಷೆಯು 'ಗೌಡಕನ್ನಡ' ಎಂದೇ ಗುರುತಿಸಿಕೊಂಡಿದೆ.

ಗೌಡಜನಾಂಗದವರಲ್ಲಿ ಎರಡು ಭಾಷಿಕ ಗುಂಪುಗಳಿದ್ದು, ತುಳು ಮಾತನಾಡುವ ಗೌಡಜನಾಂಗ ಪುತ್ತೂರು, ಸುಳ್ಯ ಹಾಗೂ ಕಾಸರಗೋಡಿಗೆ ಸೇರಿದವರಾಗಿದ್ದು ತಮ್ಮ ಕೌಟುಂಬಿಕ ಹಾಗೂ ಜನಾಂಗದ ನೆಲೆಯಲ್ಲಿ ಗೌಡಕನ್ನಡವನ್ನೇ ಬಳಸಿದರೂ ಇವರು ಸಾಮಾಜಿಕ ಸಂವಹನಕ್ಕಾಗಿ ಬಳಸುವ ಭಾಷೆ ತುಳು. ಇನ್ನೊಂದು ಗುಂಪು ಕನ್ನಡ ಭಾಷೆಯನ್ನು ಮಾತನಾಡುವ ಜನಾಂಗ. ಇವರು ಕೊಡಗು ಜಿಲ್ಲೆಗೆ ಸೇರಿದವರಾಗಿದ್ದು ಇವರ ಸಂವಹನ ಭಾಷೆ ಕೊಡವ ಮತ್ತು ಕನ್ನಡ. ಇವರ ಕೌಟುಂಬಿಕ ಹಾಗೂ ಜನಾಂಗದ ನೆಲೆಯಲ್ಲಿ ಗೌಡಕನ್ನಡ ಚಾಲ್ತಿಯಲ್ಲಿದೆ.

ಗೌಡಜನಾಂಗದ ಕೌಟುಂಬಿಕ ಹಾಗೂ ಸಾಮಾಜಿಕ ವಲಯಗಳಲ್ಲಿ ಗೌಡಕನ್ನಡ ಭಾಷೆಯು ಪೂರ್ಣ ಪ್ರಮಾಣದಲ್ಲಿ ಬಳಕೆಯಾಗುತ್ತಿದ್ದು. ಈ ಭಾಷಿಕರ ಸಂಸರ್ಗದಿಂದಾಗಿ ಇತರರೂ ಗೌಡಕನ್ನಡವನ್ನು ಮಾತನಾಡುವುದು ಕಂಡುಬಂದಿದೆ. ಕೊಡಗು ಜಿಲ್ಲೆಯು ಸುಳ್ಯ ಹಾಗೂ

ಕೇರಳದ ಕಾಸರಗೋಡಿಗೆ ಸಮೀಪವಾಗಿರುವುದರಿಂದ ಗೌಡಕನ್ನಡ ಭಾಷೆಯು ತುಳು ಹಾಗೂ ಮಲೆಯಾಳಂ ಭಾಷಾ ಸಂಸ್ಕೃತಿಗಳ ಸಂಸರ್ಗಕ್ಕೆ ಒಳಗಾಗಿದೆ. ಹಾಗೆಯೇ ಕೊಡಗಿನಲ್ಲಿ ಈ ಭಾಷೆಯು ಕೊಡವ ಭಾಷಾ ಪ್ರಭಾವಕ್ಕೂ ಒಳಗಾಗಿದೆ. ಜೊತೆಗೆ ಈ ಭಾಷೆ ತನ್ನೊಳಗೇ ಪ್ರಾದೇಶಿಕ ಭಿನ್ನತೆಯನ್ನು ಹೊಂದಿದೆ. ದಕ್ಷಿಣಕನ್ನಡ ಜಿಲ್ಲೆಯ ಸುಳ್ಯ ಪರಿಸರದಲ್ಲಿ ಈ ಭಾಷೆ ಗಡುಸಾದ ಅಭಿವ್ಯಕ್ತಿಯನ್ನು ಹೊಂದಿದ್ದರೆ, ಕೊಡಗಿನ ಮಡಿಕೇರಿ ಸುತ್ತ ಮುತ್ತಲಿನ ಗೌಡಕನ್ನಡವು ಲಾಲಿತ್ಯದಿಂದ ಕೂಡಿದೆ.

ಗೌಡಕನ್ನಡ ಭಾಷೆಯ ಪ್ರಾಚೀನತೆಯನ್ನು ಕುರಿತ ನಿಖರವಾದ ಆಧಾರಗಳು ಸಿಗುವುದಿಲ್ಲ. ದಟ್ಟಕಾಡು ಪ್ರದೇಶಗಳಿಂದಾವೃತವಾದ, ನೈಸರ್ಗಿಕ ಸಂಪನ್ಮೂಲಗಳಿಂದ ಶ್ರೀಮಂತವಾದ ಸುಳ್ಯ ಪ್ರದೇಶದಲ್ಲಿ ನೆಲೆನಿಂತಿದ್ದ ಗೌಡ ಜನಾಂಗದವರು ಮೂಲತಃ ಕನ್ನಡವನ್ನು ಮಾತನಾಡುತ್ತಿದ್ದರು. ನಂತರ ಇವರು ಅನ್ಯ ಪರಿಸರದ ಸಂಸರ್ಗವಾದಾಗಲು, ತಮ್ಮದೇ ಆದ ಸ್ವತಂತ್ರ ಭಾಷೆಯನ್ನು ರೂಪಿಸಿಕೊಂಡರು. ಈ ಭಾಷೆಯೇ 'ಗೌಡಕನ್ನಡ' ಭಾಷೆಯಾಗಿದೆ. ಭಾಷೆಯ ದೃಷ್ಟಿಯಿಂದ ಯಥಾಸ್ಥಿತಿಯನ್ನು ಇರಿಸಿಕೊಂಡು ಭೌಗೋಳಿಕ ಮತ್ತು ಸಾಮಾಜಿಕ ಹಿನ್ನಲೆಯಲ್ಲಿ ಪರಿಸರದ ಸಾಂಸ್ಕೃತಿಕ ನೆಲೆಗಟ್ಟುಗಳನ್ನು ಸ್ವೀಕರಿಸಿದರು. ತುಳುನಾಡಿಗೆ ಬಂದ ಗೌಡ ಜನಾಂಗದವರು ಮುಂದೆ ಕೃಷಿ ಭೂಮಿಗಾಗಿ ಕಾಸರಗೋಡು ಹಾಗೂ ಕೊಡಗು ಪ್ರದೇಶಗಳಲ್ಲಿ ವಿಸ್ತರಿಸಿಕೊಂಡರು. ಪಟ್ಟ-ವರ್ಗ ಭೂಮಿಗಳ ಒಡೆಯರಾಗಿ ಆರ್ಥಿಕವಾಗಿಯೂ, ಸಾಮಾಜಿಕವಾಗಿಯೂ ಗಟ್ಟಿನೆಲೆ ನಿಂತರು. ಈ ಸಬಲತೆಯಿಂದ ತಮ್ಮ ಭಾಷೆಯನ್ನು ಉಳಿಸಿಕೊಳ್ಳುವಲ್ಲಿ ಇವರು ಸಬಲರಾದರು[೭].

ಕೊಡಗು ಜಿಲ್ಲೆಯಲ್ಲಿ ಬಹಳಷ್ಟು ಜಾತಿ ಸಮುದಾಯಗಳಿದ್ದರೂ, ಸಂಖ್ಯಾದೃಷ್ಟಿಯಿಂದ ಬಹುಪಾಲು ಕೊಡವ ಹಾಗೂ ಗೌಡ ಸಮುದಾಯದವರಿಂದ ಕೂಡಿದೆ. ೨೦೦೪ರ ಸಮೀಕ್ಷೆಯ ಪ್ರಕಾರ ಜಿಲ್ಲೆಯಲ್ಲಿ ಸುಮಾರು ಒಂದು ಲಕ್ಷಕ್ಕಿಂತ ಹೆಚ್ಚು ಗೌಡ ಜನಾಂಗದವರು ಇದ್ದಾರೆ. ಈ ಜಿಲ್ಲೆಯಲ್ಲಿ ಸಾಮಾಜಿಕ ಸಂವಹನ ಭಾಷೆಯಾಗಿ ಕೊಡವ ಭಾಷೆ ಬಳಕೆಯಲ್ಲಿದೆ. ಇದರೊಂದಿಗೆ ಕೌಟುಂಬಿಕ ನೆಲೆ ಹಾಗೂ ಜನಾಂಗದ ನೆಲೆಯಲ್ಲಿ ಗೌಡಕನ್ನಡ ಚಾಲ್ತಿಯಲ್ಲಿದೆ. ಹಿಂದೆ ವೈವಾಹಿಕ ಸಂಬಂಧಗಳಿಂದ ಪರಸ್ಪರ ಭಾಷೆಯ ಅರಿವಿಲ್ಲದಿರುವುದು, ಭಾಷೆಯಲ್ಲಿ ಪರಿಣತಿ ಇಲ್ಲದಿರುವುದು ಅಥವಾ ಮಕ್ಕಳಿಗೆ ಶೈಕ್ಷಣಿಕವಾಗಿ ಕಲಿಯಲು ಸುಲಭವಾಗುವ ಉದ್ದೇಶದಿಂದ ಕನ್ನಡವನ್ನೇ ಮನೆಮಾತಾಗಿ ಇಟ್ಟುಕೊಂಡ ಗೌಡಜನಾಂಗದವರು ಬಹಳಷ್ಟು ಇದ್ದರು. ಆದರೆ, ಇತ್ತೀಚಿನ ದಿನಗಳಲ್ಲಿ ಭಾಷೆಯ ಉಳಿವು ಹಾಗೂ ಬೆಳವಣಿಗೆಯ ದೃಷ್ಟಿಯಿಂದ ಕೊಡಗು ಗೌಡ ಸಂಘ, ಸಂಸ್ಥೆಗಳು ಹಲವು ನಿಯಮಗಳನ್ನು ಜಾರಿಗೆ ತಂದು ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಂಡ ಕಾರಣ ಇಂದು ಗೌಡಕನ್ನಡವು ಕೊಡಗಿನಲ್ಲಿ ಒಂದು ಪ್ರಮುಖ ಭಾಷೆಯಾಗಿದೆ. ಹೀಗೆ ಒಂದು ನಿರ್ದಿಷ್ಟ ಜನಾಂಗದವರಲ್ಲಿ ಮಾತ್ರ ಬಳಕೆಯಲ್ಲಿರುವ ಭಾಷೆಯಾದ 'ಗೌಡಕನ್ನಡ'ವು ಸಾಮಾಜಿಕ ಭಾಷೆಯಾಗಿ ಗುರುತಿಸಿಕೊಂಡಿದೆ.

ಅಧ್ಯಯನದ ಉದ್ದೇಶ:

ಗೌಡಕನ್ನಡದ ವಿವಿಧ ನೆಲೆಗಳ ಭಾಷಿಕ ಬಳಕೆಯನ್ನು ಅಧ್ಯಯನ ಮಾಡುವ ಉದ್ದೇಶ ಇಲ್ಲಿದೆ. ಈ ಭಾಷೆಯ ಬಗೆಗೆ ಹೆಚ್ಚಿನ ಅಧ್ಯಯನಗಳು ನಡೆದಿಲ್ಲ. ಆದರೆ ಸಂಸ್ಕೃತಿಯ ಶೋಧದ ಸಂದರ್ಭದಲ್ಲಿ ಅಲ್ಲಲ್ಲಿ ಉಲ್ಲೇಖಿಸಲಾಗಿದೆ. ಪ್ರೊ. ಕೆ. ಕುಶಾಲಪ್ಪಗೌಡರ ಒಂದು ಪುಸ್ತಕ ಮಾತ್ರ ಈ ಉಪಭಾಷೆಯ ವಿವರಣಾತ್ಮಕ ಅಧ್ಯಯನವನ್ನು ಒಳಗೊಂಡಿದೆ. ಇದು ಅಣ್ಣಾಮಲೈ ವಿಶ್ವವಿದ್ಯಾಲಯದಿಂದ ಪ್ರಕಟವಾಗಿದೆ. ಇಲ್ಲಿ ಗೌಡಕನ್ನಡದ ವಿವರಣಾತ್ಮಕ ಅಧ್ಯಯನ ನಡೆದಿದ್ದರೂ, ಇದು ಕೇವಲ ಒಂದೇ ನೆಲೆಯಲ್ಲಿ ನಿಲ್ಲುತ್ತದೆ. ಇದನ್ನು ಹೊರತುಪಡಿಸಿದರೆ ಈ ಭಾಷೆಯನ್ನು ಪೂರ್ಣವಾಗಿ ಅಧ್ಯಯನಕ್ಕೆ ತೊಡಗಿಸಿಕೊಂಡ ಯಾವ ಕೃತಿಯೂ ಬಂದಿಲ್ಲ. ಹಾಗಾಗಿ ಇಂದು ಇದರ ಅಧ್ಯಯನದ ಅಗತ್ಯವಿದ್ದು ಆ ದೃಷ್ಟಿಯಿಂದ ಈ ಅಧ್ಯಯನ ಕೈಗೊಳ್ಳಲಾಗಿದೆ. ವಿವಿಧ ನೆಲೆಯಲ್ಲಿ ಭಾಷೆಯ ಬಳಕೆಯನ್ನು ಗಮನಿಸಿ ಭಾಷೆಯ ವೈವಿಧ್ಯ ವೈಶಿಷ್ಟ್ಯಗಳನ್ನು ಗುರುತಿಸುವುದು ಇಲ್ಲಿನ ಉದ್ದೇಶವಾಗಿದೆ.

ಅಧ್ಯಯನದ ವ್ಯಾಪ್ತಿ:

ಈ ಅಧ್ಯಯನಕ್ಕಾಗಿ ಒಟ್ಟಾರೆ ಕೊಡಗು ಜಿಲ್ಲೆಯನ್ನು ಮಾತ್ರ ಪರಿಗಣಿಸಲಾಗಿದ್ದು, ಅಲ್ಲಿನ ಗೌಡ ಜನಾಂಗದವರ ಭಾಷೆಯನ್ನು ಇಲ್ಲಿ ವಿವೇಚಿಸಲಾಗಿದೆ. ಭಾಷೆಯಲ್ಲಿನ ಗಾದೆಗಳು, ಒಗಟುಗಳು, ನುಡಿಗಟ್ಟುಗಳು, ಬಂಧುವಾಚಕಗಳು, ಸಂಬೋಧನಾ ರೂಪಗಳು, ವ್ಯಕ್ತಿಯ ಹೆಸರುಗಳು, ಮನೆಹೆಸರುಗಳು, ಬಾಲಭಾಷೆ ಹೀಗೆ ಭಾಷಾ ಬಳಕೆಯ ವಿವಿಧ ನೆಲೆಗಳನ್ನು ಕುರಿತು ಚರ್ಚಿಸಲಾಗಿದೆ.

ಕೆಲವು ಉದಾಹರಣೆಗಳನ್ನು ನೋಡಬಹುದು.

ಗಾದೆಗಳು: "ಕೊತ್ತಿ ತಲೆಲಿ ದೀಪ ಇಟ್ಟಂಗೆ"

"ಕಾಡು ಕೋಳಿಗುಟ್ಟು ಸನಿ ಚಂಗ್ರಾಂದಿ" ಇತ್ಯಾದಿ.

ಒಗಟುಗಳು: "ಕಣ್ಣ್ ಕಾಣದ ಅಜ್ಜ ಪಾಲದಾಟುದು"– ಜಿಗಣೆ(ಉಂಬುಳು)

"ಗಂಟೆವಳಗೆ ನಾಲಗೆ ನಾಲಗೆ ಒಳಗೆ ಕುಸುಮ"–ಚಕ್ಕೋತನಹಣ್ಣು.

ಬಂಧುವಾಚಕಗಳು: 'ದೊಡ್ಡ ಮಾಂವ' – ತಾಯಿಯ ಹಿರಿಯ ಸಹೋದರ.

'ಸಣ್ಣ ಮಾಂವ' – ತಾಯಿಯ ಎರಡನೇ ಸಹೋದರ.

'ಕುಂಞ ಮಾಂವ' – ತಾಯಿಯ ಕಿರಿಯ ಸಹೋದರ.

ಸಂಬೋಧನಾ ರೂಪಗಳು: ಮಜ – ಮಗ

ಮಗ – ಮಗಳು

ಚಾಂಪಾ – ಕುಟುಂಬದ ಹಿರಿಯ ಸದಸ್ಯ ಇತ್ಯಾದಿ.

ಬಾಲಭಾಷೆ:- ಶಿ.ಕ – ಗೌ.ಕ

ಗಾಯ – ಆಯಿ

ಬಟ್ಟೆ – ಕುಪ್ಪ

ದನ – ಬೊಬ್ಬ ಇತ್ಯಾದಿ.

ಹೆಸರುಗಳು ಮತ್ತು ಮನೆ ಹೆಸರುಗಳು:

ಇಲ್ಲಿರುವ ಗೌಡ ಜನಾಂಗದವರ ಹೆಸರುಗಳ ಮೇಲೆ ಕೊಡವ ಹೆಸರುಗಳ ಪ್ರಭಾವ ಹೆಚ್ಚಾಗಿದೆ. ಉದಾ: ಪೂಣಚ್ಚ, ಪೊನ್ನಪ್ಪ, ಕುಶಾಲಪ್ಪ ಇತ್ಯಾದಿ.

ಮನೆಹೆಸರು:

ಕೊಡಗಿನ ಗೌಡ ಜನಾಂಗದ ಮನೆ ಹೆಸರುಗಳು ಉತ್ತರ ಕನ್ನಡದಲ್ಲಿ ಇರುವಂತೆ ಹೆಸರಿನೊಡನೆ ಕಂಡು ಬರುವುದಿಲ್ಲ. ವ್ಯಕ್ತಿಯನ್ನು ಗುರುತಿಸುವಾಗ ಮಾತ್ರ ಮನೆಯ ಹೆಸರನ್ನು ಹೇಳಲಾಗುವುದು.

ಉದಾ: ದಂಡಿನ ಮನೆ – ದಂಡಿನ ಗಿರಿಧರ.

ಗೌಡುಧಾರೆ ಮನೆ – ಗೌಡುಧಾರೆ ರಾಮಯ್ಯ.

ಚೆಟ್ಟಿಮಾಡ – ಚೆಟ್ಟಿಮಾಡ ಚಿನ್ನಪ್ಪ ಇತ್ಯಾದಿ.

ಕೊಡಗು ಹಾಗೂ ದಕ್ಷಿಣ ಕನ್ನಡ ಜಿಲ್ಲೆಗಳು ದ್ವಿಭಾಷಾ, ಬಹುಭಾಷಾ ವಲಯಗಳಾದ್ದರಿಂದ ಇಲ್ಲಿನ ಗೌಡಕನ್ನಡದ ಮೇಲೆ ಇತರ ಭಾಷಾ ಪ್ರಭಾವವನ್ನು ನೋಡಲಾಗಿದೆ.

ಅಡಿ ಟಿಪ್ಪಣಿಗಳು:

೧. ಕೊಡಗಿನ ಇತಿಹಾಸ: ಕೃಷ್ಣಯ್ಯ ಡಿ.ಎನ್ ಪುಟ–೨೦

೨. ಶ್ರೀ ಕಾವೇರಿ ವೈಭವಂ: ಎದುರ್ಕುಳ ಶಂಕರ ನಾರಾಯಣ ಭಟ್ ಪುಟ–೩೮೩

೩. ತುಳು ಸಾಹಿತ್ಯ ಚರಿತ್ರೆ: ವಿವೇಕ ರೈ ಬಿ.ಎ ಪುಟ–೨೯೪

೪. ಗೌಡ ಸಂಸ್ಕೃತಿ : ಕೃಷ್ಣಪ್ಪ ಬಿ. ಕುದುಪಜೆ ಪುಟ–೮

೫. ಅದೇ ಪುಟ–೯

೬. ಸ್ಪಂದನ : ಪೂಜಾರಿ ಮೊಣ್ಣಪ್ಪ ಪುಟ–೧೭

೭. ಜೇನೆರಿ : ಯಶವಂತ ಕುಡೆಕಲ್ಲು ಪುಟ–೬

ಅಧ್ಯಾಯ ೨

ಅಧ್ಯಯನಗಳ ಸಮೀಕ್ಷೆ

ಅಧ್ಯಾಯ ಎರಡು

ಅಧ್ಯಯನಗಳ ಸಮೀಕ್ಷೆ

ಕೊಡಗಿನ ಗೌಡರ ಬಗೆಗೆ ಇದುವರೆವಿಗೂ ಆಗಿರುವ ಅಧ್ಯಯನಗಳು ಕಡಿಮೆ ಎಂದು ಹೇಳಬಹುದು. ೧೯೪೮ ರಲ್ಲಿ ಎಲ್.ಎ. ಕೃಷ್ಣ ಅಯ್ಯರ್ ಅವರು 'The Coorg Tribes and Castes' ಎಂಬ ಕೃತಿಯನ್ನು ಬರೆದಿದ್ದಾರೆ. ಇದರಲ್ಲಿ ಕೊಡಗು ಪ್ರದೇಶ, ಇಲ್ಲಿರುವ ಜಾತಿಗಳು ಹಾಗೂ ಗೌಡ ಜನಾಂಗದವರು ದಕ್ಷಿಣಕನ್ನಡ ಜಿಲ್ಲೆಯಿಂದ ಬಂದು ಕೊಡಗಿನಲ್ಲಿ ನೆಲೆ ನಿಂತಿರುವ ವಿಷಯವನ್ನು ವಿವರಿಸಿದ್ದಾರೆ. ೧೯೬೮ ರಲ್ಲಿ ಗುಡ್ಡೇರ ಪಿ. ಗಣಪತಿ ಇವರು 'ಅಮರ ಸುಳ್ಯದ ಕಾಟಕಾಯಿ', 'ಕೊಡಗು ಗೌಡ ಸಂಸ್ಕೃತಿ' ಎಂಬ ಕೃತಿಗಳಲ್ಲಿ ಸ್ವಾತಂತ್ರ ಹೋರಾಟದಲ್ಲಿ ಗೌಡರ ಪಾತ್ರವನ್ನು ವಿವರಿಸಿದ್ದಾರೆ. ಹಾಗೂ ಕೊಡಗು ಗೌಡರ ಸಂಸ್ಕೃತಿಯ ವಿವರಣೆ ನೀಡಿರುತ್ತಾರೆ. ೧೯೭೪ರಲ್ಲಿ ಪ್ರಕಟಗೊಂಡ ಡಿ.ಎನ್. ಕೃಷ್ಣಯ್ಯ ಅವರ 'ಕೊಡಗಿನ ಇತಿಹಾಸ' ಎಂಬ ಕೃತಿಯಲ್ಲಿ ಕೊಡಗಿನ ಐತಿಹಾಸಿಕ ವಿಷಯಗಳ ಬಗೆಗೆ ತಿಳಿಸಲಾಗಿದೆ. ಟಿಪ್ಪುವಿನ ಯುದ್ಧದ ವಿವರ ಮತ್ತು ಗೌಡರನ್ನು ಶ್ರೀರಂಗಪಟ್ಟಣಕ್ಕೆ ರವಾನಿಸಲ್ಪಟ್ಟ ವಿಷಯ ಹಾಗೂ ಐಗೂರು ಸೀಮೆಯಿಂದ ಗೌಡ ಜನಾಂಗದವರು ದಕ್ಷಿಣಕನ್ನಡ ಜಿಲ್ಲೆಯ ಘಟ್ಟದ ಸರಹದ್ದು ಪ್ರದೇಶಕ್ಕೆ ಬಂದು ನೆಲೆನಿಂತ ವಿವರಗಳನ್ನು ಇದು ಒಳಗೊಂಡಿದೆ. ಇವರ 'ಕೊಡಗಿನಲ್ಲಿ ಜನರು'ಎಂಬುದು ಕೊಡಗಿನಲ್ಲಿರುವ ಗೌಡರನ್ನು ಕುರಿತು ಮಾಹಿತಿಯನ್ನು ನೀಡುವ ಕೃತಿಯಾಗಿದೆ.

ಸೂರ್ಯನಾಥ್ ಕಾಮತ್‌ರವರ 'ಕರ್ನಾಟಕ ರಾಜ್ಯ ಗ್ಯಾಸೆಟಿಯರ್, ಕೊಡಗು ಜಿಲ್ಲೆ' (೧೯೯೨) ಇದರಲ್ಲಿ ಕೊಡಗು ಜಿಲ್ಲೆಯ ಭೌಗೋಳಿಕ ವಿಸ್ತೀರ್ಣ ೧,೯೧,೭೯೧ ಚ.ಕಿ.ಮೀ.ಗಳಾಗಿವೆ, ೧೯೯೧ರ ಜನಗಣತಿಯಂತೆ ಕೊಡಗಿನ ಜನಸಂಖ್ಯೆ ೧೪, ೬೧, ೮೮೮. ಹಾಗೂ ಇದು ಕೊಡಗಿನ ತಾಲ್ಲೂಕುಗಳು, ಗ್ರಾಮಗಳು ಜೊತೆಗೆ ಗೌಡ ಜನಾಂಗ, ಇವರ ಸಾಮಾಜಿಕ ಜೀವನದ ಬಗೆಗೆ ಕಿರು ಮಾಹಿತಿಯನ್ನು ನೀಡುತ್ತದೆ.

೧೯೭೦ರಲ್ಲಿ ಶ್ರೀ ವೀರಪ್ಪಗೌಡರು ಸಂಪಾದಿಸಿರುವ 'ಕೊಡಗು ಮತ್ತು ದಕ್ಷಿಣ ಕನ್ನಡ ಗೌಡ ಸಮಾಜ ಸಂಸ್ಕೃತಿ' ಎಂಬ ಕೃತಿಯು ಗೌಡರ ಇತಿಹಾಸ ಮತ್ತು ಗೌಡರ ಸಂಪ್ರದಾಯಗಳ ಬಗೆಗಿನ ಲೇಖನಗಳನ್ನು ಹೊಂದಿದೆ. ಕೊಡಗು ವಿದ್ಯಾಸಂಘ, ಮಡಿಕೇರಿ ಇವರು ಪ್ರಕಟಿಸಿದ 'ಗೌಡ ಸಂಸ್ಕೃತಿ (೧೯೮೫) ಪುಸ್ತಕದಲ್ಲಿ ಕೊಡಗು ಗೌಡರ ಆಚರಣೆಗಳು, ವಿಚಾರಗಳು, ನಡೆನುಡಿಗಳು ಮತ್ತು ಈ ಸಂದರ್ಭದಲ್ಲಿ ಹಾಡುವ ಸೋಬಾನೆ ಪದ್ಯಗಳು, ಒಕ್ಕಣೆಗಳು ಮುಂತಾದ ವಿಷಯಗಳನ್ನು ವಿವರಿಸಲಾಗಿದೆ. ೧೯೮೭ರಲ್ಲಿ ಕೊಡಗಿನ ಶ್ರೀಮತಿ ತುಳಸೀದೇವಿಯವರು ತಮ್ಮ 'ವೀರಾಜಪೇಟೆ ತಾಲ್ಲೂಕು ದರ್ಶನ' ಎಂಬ ಕೃತಿಯಲ್ಲಿ 'ಕೊಡಗಿನ ಗೌಡರು ಒಂದು ಜಾತಿ' ಎಂದು ಹೇಳಿದ್ದಾರೆ. ಡಾ.ಕೆ. ಚಿನ್ನಪ್ಪಗೌಡರ ಸಂಪಾದಕತ್ವದಲ್ಲಿ 'ಗೌಡ ಜನಾಂಗ ಇತಿಹಾಸ ಮತ್ತು ಸಂಸ್ಕೃತಿ' ಎಂಬ ಪುಸ್ತಕದಲ್ಲಿ ಗೌಡಕನ್ನಡ ಭಾಷೆಯಲ್ಲಿ ಹಲವು ಬರಹಗಳಿವೆ. ಇದರಲ್ಲಿ ಪೂವಪ್ಪ ಕಣಿಯೂರು ಇವರು ಬರೆದಿರುವ 'ದಕ್ಷಿಣ ಕನ್ನಡ ಜಿಲ್ಲಾ ಗೌಡರ ಐನ್ ಮನೆಗಳು' ಎಂಬ ಲೇಖನವಿದ್ದು, ಇದು ದಕ್ಷಿಣಕನ್ನಡ ಜಿಲ್ಲೆಯ ಗೌಡರ ಐನ್‌ಮನೆಯ ವಾಸ್ತುಶೈಲಿಯ ವೈಶಿಷ್ಟ್ಯಗಳ ಬಗ್ಗೆ ತಿಳಿಸುತ್ತದೆ.

೧೯೮೭ರಲ್ಲಿ ರೆವರೆಂಡ್ ಜಿ. ರಿಚ್ಚರ್ ಅವರು 'Castes and Tribes found in Coorg' ಎಂಬ ತಮ್ಮ ಕೃತಿಯಲ್ಲಿ ಕೊಡಗಿನ ಗೌಡ ಜನಾಂಗದವರ ವ್ಯಕ್ತಿನಾಮಗಳನ್ನು ತಿಳಿಸಿದ್ದಾರೆ.

೧೯೯೬ರಲ್ಲಿ ದಕ್ಷಿಣಕನ್ನಡ ಮತ್ತು ಕೊಡಗು ಜಿಲ್ಲಾ ಗೌಡ ಸಮ್ಮೇಳನ ಸಮಿತಿಯಿಂದ ಪ್ರಕಟಗೊಂಡ ಸಮ್ಮೇಳನಾ ಸ್ಮರಣ ಸಂಚಿಕೆ 'ವೀಳ್ಯ'ದಲ್ಲಿ ಸ್ವಾತಂತ್ರ್ಯ ಹೋರಾಟದಲ್ಲಿ ಗೌಡರ ಪಾತ್ರದ ಬಗೆಗಿನ ವಿವರಣೆ ನೀಡುವ ಲೇಖನವಿದೆ ಹಾಗೂ ಗೌಡಕನ್ನಡ ಲೇಖಕರ ಕುರಿತು ತಿಳಿಸಲಾಗಿದೆ. ಈ ಸಂಚಿಕೆಯಲ್ಲಿ ಪ್ರೊ.ಕೆ. ಕುಶಾಲಪ್ಪಗೌಡರು 'ಗೌಡಕನ್ನಡ ಎಂಬ ಕನ್ನಡ ಪ್ರಭೇದ' ಎಂಬ ಲೇಖನವನ್ನು ಬರೆದಿರುತ್ತಾರೆ.

ಬೆಂಗಳೂರಿನ ಗೌಡ ಸಮಾಜ ಉದ್ಘಾಟನಾ ಸಮಾರಂಭದ ಸ್ಮರಣ ಸಂಚಿಕೆ (೧೯೮೮), ಪೂಜಾರಿ ಮೊಣ್ಣಪ್ಪ ಇದರ ಸಂಪಾದಕರು. ಇದು ದಕ್ಷಿಣ ಕನ್ನಡ ಮತ್ತು ಕೊಡಗು ಗೌಡ ಸಮಾಜದಿಂದ ಪ್ರಕಟಗೊಂಡಿದೆ. ಈ ಸಂಚಿಕೆಯಲ್ಲಿ ಗೌಡ ಜನಾಂಗದ ಬಗೆಗೆ ಹಲವು ಲೇಖನಗಳಿವೆ. ಮುಖ್ಯವಾಗಿ ಇದರಲ್ಲಿ ಡಾ. ಪುರುಷೋತ್ತಮ ಬಿಳಿಮಲೆ ಅವರು ಬರೆದ 'ಗೌಡರಲ್ಲಿ ಬಳಿ ಪದ್ಧತಿ ಒಂದು ಪರಿಚಯ' ಎಂಬ ಲೇಖನವಿದೆ. ಇದು ಗೌಡರ ಗೋತ್ರ(ಬಳಿ)ಗಳ ವಿವರ ಮತ್ತು ಅವುಗಳಿಗಿರುವ ಹೆಸರುಗಳನ್ನು ವಿವರಿಸುತ್ತದೆ. ಟಿ.ಜಿ. ಮುಡೂರು ಇವರು ಸಂಪಾದಿಸಿರುವ ಕೊಡಗು ಜಿಲ್ಲಾ ಗೌಡ ಸಮ್ಮೇಳನ-೮೫, ಸ್ಮರಣಸಂಚಿಕೆ 'ಸ್ಪಂದನ'(೧೯೮೫) ದಲ್ಲಿ ಅಂಬೆಕಲ್ ಪಿ.ಜಿ. ಅವರ 'ಗೌಡಕನ್ನಡ', ಪೇರಿಯನ ಎಂ. ಪೂವಯ್ಯ ಅವರ 'ಗೌಡ ಜನರ ಮೂಲ ಒಂದು ಸಮೀಕ್ಷೆ', ಕುದುಪಜೆ ಬಿ.ಕೃಷ್ಣಪ್ಪ ಅವರ 'ಗೌಡರ ಪರಿಚಯ' ಎಂಬ ಲೇಖನಗಳಿವೆ. ಇವು ಗೌಡರು, ಗೌಡರಮೂಲ, ಅವರ ಭಾಷೆಗಳ ಬಗೆಗೆ ಮಾಹಿತಿ ನೀಡುತ್ತವೆ.

ಬೈತಡ್ಕ ಜಾನಕಿ ಬೆಳ್ಯಪ್ಪ ಅವರು ಸಂಪಾದಿಸಿರುವ 'ಹಸೆಮಣೆ' ಕೃತಿಯು ಕೊಡಗು ಗೌಡರ ಸೋಬಾನೆ ಹಾಡುಗಳ ಸಂಗ್ರಹವಾಗಿದೆ. ಈ ಕೃತಿಯು 'ಕೊಡಗಿನ ಗೌರಮ್ಮ' ಪ್ರಶಸ್ತಿ ಪಡೆದುಕೊಂಡಿದೆ. ಕೊಡಗು ಮಹಿಳಾ ಒಕ್ಕೂಟ ಇವರು ೨೦೦೯ರಲ್ಲಿ ಪ್ರಕಟಿಸಿದ ಇವರ ಮತ್ತೊಂದು ಕೃತಿ 'ಅಕ್ಷಯ' ಕೊಡಗು ಗೌಡ ಜನಾಂಗದ ಸಂಸ್ಕೃತಿ ಆಚರಣೆಗಳ ಸಂಗ್ರಹವಾಗಿದೆ. ದಕ್ಷಿಣಕನ್ನಡ ಗೌಡ ಸಮಾಜದ ಸ್ಮರಣ ಸಂಚಿಕೆ 'ಕಲ್ಯಾಣ'ದಲ್ಲಿ ಡಿ.ಜಿ. ನಡ್ಕ ಅವರು 'ಗೌಡಜನಾಂಗ ಒಂದು ಐತಿಹಾಸಿಕ ಅವಲೋಕನ' ಎಂಬ ಲೇಖನವನ್ನು ಬರೆದು ಗೌಡರ ಮೂಲದ ಬಗೆಗೆ ತಿಳಿಸುವ ಪ್ರಯತ್ನ ಮಾಡಿದ್ದಾರೆ.

ಗೌಡ ಕನ್ನಡವನ್ನು ವೈಜ್ಞಾನಿಕವಾಗಿ ಅಧ್ಯಯನಕ್ಕೊಳಪಡಿಸಿದವರು ಪ್ರೊ.ಕೆ. ಕುಶಾಲಪ್ಪಗೌಡರು. ಇದು ೧೯೭೦ರಲ್ಲಿ 'ಗೌಡಕನ್ನಡ' ಎಂಬ ಶೀರ್ಷಿಕೆಯಲ್ಲಿ ಅಣ್ಣಾಮಲೈ ವಿಶ್ವವಿದ್ಯಾಲಯದಿಂದ ಇಂಗ್ಲೀಶ್‌ನಲ್ಲಿ ಪ್ರಕಟಗೊಂಡಿದೆ. ಇದು ಗೌಡಕನ್ನಡವನ್ನು ಕುರಿತಾದ ಅಧಿಕೃತ ಆಕರ ಗ್ರಂಥವಾಗಿದೆ. ಇದರಲ್ಲಿ ಗೌಡಕನ್ನಡದ ವಿವಿಧ ಅಂಶಗಳಾದ ಧ್ವನಿಮಾ, ಸಂಧಿ, ನಾಮಪದ, ಸರ್ವನಾಮಗಳು, ನಾಮವಿಶೇಷಣಗಳು, ಕ್ರಿಯಾವಿಶೇಷಣಗಳು, ಉದ್ಗಾರವಾಚಕಗಳು, ಕ್ರಿಯಾಪದಗಳು ಮುಂತಾದವುಗಳ ಬಗೆಗೆ ಅಧ್ಯಯನ ಮಾಡಲಾಗಿದೆ. ಇದರಲ್ಲಿ ಗೌಡಕನ್ನಡ ಮತ್ತು ಶಿಷ್ಟಕನ್ನಡದ ಪದಗಳನ್ನು ಪಟ್ಟಿಮಾಡಲಾಗಿದೆ. ಜೊತೆಗೆ ಈ ಪದಗಳಿಗೆ ಇಂಗ್ಲೀಶಿನಲ್ಲಿ ಅರ್ಥವನ್ನು ಕೊಡಲಾಗಿದೆ.

೧೯೬೯ರಲ್ಲಿ ಇವರು 'Phonology of Gowda Kannada' ಹಾಗೂ ೧೯೭೮ರಲ್ಲಿ 'Gender Distinction in Gowda Kannada' ಎಂಬ ಲೇಖನಗಳನ್ನು ಬರೆದಿದ್ದಾರೆ. ಇವುಗಳಲ್ಲಿ ಗೌಡಕನ್ನಡದಲ್ಲಿ ವಿಶಿಷ್ಟವಾಗಿರುವ ಲಿಂಗವ್ಯವಸ್ಥೆ ಮತ್ತು ಧ್ವನಿಗಳನ್ನು ವಿವರಿಸಲಾಗಿದೆ.

ಡಾ.ಪುರುಷೋತ್ತಮ ಬಿಳಿಮಲೆ ಅವರ ಪಿ.ಎಚ್.ಡಿ ಅಪ್ರಕಟಿತ ಮಹಾಪ್ರಬಂಧ 'ಸುಳ್ಯ ಪರಿಸರದ ಗೌಡ ಜನಾಂಗದ ಸಾಂಸ್ಕೃತಿಕ ಅಧ್ಯಯನ' (೧೯೮೫). ಇದರಲ್ಲಿ ದಕ್ಷಿಣಕನ್ನಡ ಜಿಲ್ಲೆಯ ಗೌಡರು ಮತ್ತು ಕೊಡಗಿನ ಗೌಡರನ್ನು ಕುರಿತು ತೌಲನಿಕವಾಗಿ ಅಧ್ಯಯನ ಮಾಡಲಾಗಿದೆ. ಡಾ. ಕೋರನ ಸರಸ್ವತಿ ಪ್ರಕಾಶ್‌ರವರ 'ಕೊಡಗು ಗೌಡ ಸಮುದಾಯ' ೨೦೧೦ರಲ್ಲಿ ಪ್ರಕಟಗೊಂಡಿತು. ಈ ಕೃತಿಯಲ್ಲಿ ಕೊಡಗು ಗೌಡ ಸಮುದಾಯದ ಸಾಂಸ್ಕೃತಿಕ ಅನನ್ಯತೆಯನ್ನು ರೂಪಿಸಲಾಗಿದೆ. ಕೊಡಗಿನ ಸಾಮಾಜಿಕ ನೆಲೆ, ಜೀವನಕ್ರಮ, ಜಾನಪದ ಜಗತ್ತು, ಆಚರಣೆಗಳು ಇವುಗಳನ್ನು ತಿಳಿಸಲಾಗಿದೆ. ಈ ಕೃತಿಯು 'ಕೊಡಗಿನ ಗೌರಮ್ಮ' ಪ್ರಶಸ್ತಿಯನ್ನು ಪಡೆದುಕೊಂಡಿದೆ.

ಇವುಗಳಷ್ಟೇ ಅಲ್ಲದೆ ಗೌಡಕನ್ನಡದಲ್ಲಿ ಹಲವಾರು ಸಣ್ಣಕಥೆಗಳು, ಲೇಖನಗಳು ಬಂದಿವೆ. ಹಲವು ಬರಹಗಳಲ್ಲಿ ಗೌಡಕನ್ನಡದ ಉಲ್ಲೇಖಗಳಾಗಿವೆ. ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಯ 'ಕನ್ನಡ ಸಾಹಿತ್ಯ ಚರಿತ್ರೆ' (೧೯೭೮)ಯ ಮೊದಲನೆಯ ಸಂಪುಟದಲ್ಲಿ

ಕನ್ನಡದ ಉಪಭಾಷೆಗಳನ್ನು ಹೇಳುವ ಸಂದರ್ಭದಲ್ಲಿ ಶ್ರೀ ಎಸ್.ಎಸ್.ಯದುರಾಜನ್ ಅವರು ಗೌಡಕನ್ನಡವನ್ನು ಕನ್ನಡದ ಉಪಭಾಷೆ ಎಂದು ಹೇಳಿದ್ದಾರೆ. ಆದರೆ ಈ ಭಾಷೆಯ ಸ್ವರೂಪದ ಬಗ್ಗೆ ತಿಳಿಸಿಲ್ಲ. ೧೯೯೮ರಲ್ಲಿ ಎನ್.ಲಲಿತ ಅವರು 'ಕನ್ನಡದ ಉಪಭಾಷೆ ಗೌಡಕನ್ನಡ' ಎಂಬ ಲೇಖನವನ್ನು ಬರೆದಿದ್ದಾರೆ. ಇದರಲ್ಲಿ ಗೌಡಕನ್ನಡದ ವೈಶಿಷ್ಟ್ಯಗಳನ್ನು ತಿಳಿಸುವ ಪ್ರಯತ್ನ ಮಾಡಿದ್ದಾರೆ. ದಕ್ಷಿಣಕನ್ನಡ ಜಿಲ್ಲೆ ಮತ್ತು ಕೊಡಗು ಜಿಲ್ಲಾ ಗೌಡ ಸಮ್ಮೇಳನದ ಸ್ಮರಣ ಸಂಚಿಕೆ 'ವೀಳ್ಯ'ದಲ್ಲಿ ಡಾ.ಪುರುಷೋತ್ತಮ ಬಿಳಿಮಲೆಯವರ 'ಬೊಜ್ಜ : ಸಾವಿನ ಸಾಂಕೇತಿಕ ಪ್ರತಿನಿಧೀಕರಣ' ಎಂಬ ಲೇಖನದಲ್ಲಿ ಗೌಡರು ಸಾವಿನ ನಂತರ ನಡೆಸುವ ಸಂಸ್ಕಾರದ ವಿವರಗಳಿವೆ. ಇವರು ಬರೆದು ಪ್ರಕಟಿಸಿರುವ 'ಕರಾವಳಿ ಜಾನಪದ' (೧೯೯೦) ಕೃತಿಯಲ್ಲಿ 'ಗೌಡರ–ಹಸಿವು ಕಾಮಗಳ ಸಮನ್ವಯ' ಎಂಬ ಭಾಗದಲ್ಲಿ ಗೌಡರ ವಿವಾಹದ ವಿವರಗಳಿವೆ. ಅಲ್ಲದೆ ಗೌಡಕನ್ನಡ ಭಾಷೆಯ ಹಿನ್ನೆಲೆಯಲ್ಲಿ ಹಲವಾರು ಲೇಖನಗಳು ಬಂದಿವೆ. ಆದರೆ, ಇವುಗಳು ಭಾಷಾಭಿಮಾನದ ತುಡಿತಗಳನ್ನೊಳಗೊಂಡವುಗಳಾಗಿವೆ. ಅಂದರೆ, ಪಟ್ಟಡ ಪ್ರಭಾಕರ ಅವರ 'ಕೊಡಗು ಸಂಗಾತಿ' ಪಾಕ್ಷಿಕ ಪತ್ರಿಕೆ, ಸೂದನ ಈರಪ್ಪ ಅವರ ಸಂಪಾದಕೀಯದಲ್ಲಿ 'ಗೌಡದೊನಿ' ಪತ್ರಿಕೆ, ಇದು ಗೌಡಕನ್ನಡದ ಮೊದಲ ಪತ್ರಿಕೆಯಾಗಿದೆ. ಆದರೆ, ಇವೆರಡೂ ಪತ್ರಿಕೆಗಳು ಹೆಚ್ಚುಕಾಲ ನಡೆಯಲಿಲ್ಲ. ಗೌಡಕನ್ನಡದ ಮೊದಲ ನಾಟಕ 'ಪುರುಷ' ಇದನ್ನು ಎ.ಕೆ.ಹಿಮಕರ ಅವರು ಬರೆದಿದ್ದಾರೆ. ನಂತರದಲ್ಲಿ ಬಾರೆಯಂಡ ಜೋಯಪ್ಪ ಅವರು ಗೌಡಕನ್ನಡದಲ್ಲಿ ಸಣ್ಣಕತೆಗಳನ್ನು 'ಚಾಂಪಾ' ಶೀರ್ಷಿಕೆಯಲ್ಲಿ ಬರೆದಿದ್ದಾರೆ. ಜಯಮ್ಮ ಬ. ಚೆಟ್ಟಿಮಾಡ ಇವರ ಸಂಪಾದಕೀಯದಲ್ಲಿ 'ಹಳಬರ ಜೋಳಿಗೆ' (೧೯೯೮) ಪುಸ್ತಕವು ಬಂದಿತು. ಇದರಲ್ಲಿ ಗೌಡಕನ್ನಡಕ್ಕೆ ಸಂಬಂಧಿಸಿದ ಬರಹಗಳಿವೆ. ಯಶವಂತ ಕುಡೆಕಲ್ಲು ಇವರು 'ತೊಂಬರ' ಎಂಬ ಶೀರ್ಷಿಕೆಯಲ್ಲಿ ಗೌಡಕನ್ನಡದಲ್ಲಿ ಕವನಗಳನ್ನು ಬರೆದಿರುವರು. ಹೊದ್ದೆಟ್ಟಿ ಭವಾನಿಶಂಕರ್ ಅವರು ಗೌಡಕನ್ನಡದಲ್ಲಿ 'ಸಂತೃಪ್ತಿ' ಕವನ ಸಂಕಲನವನ್ನು ಬರೆದು ಪ್ರಕಟಿಸಿರುವರು. ಕೂಡಕಂಡಿರ ಪೊನ್ನಪ್ಪ ಮತ್ತು ಕುಲ್ಲಚನ ಕಾರ್ಯಪ್ಪ ಹಾಗೂ ಹೊದ್ದೆಟ್ಟಿ ಭವಾನಿಶಂಕರ್ ಇವರುಗಳು ಗೌಡಕನ್ನಡದಲ್ಲಿ ಪದ್ಯ ರಚಿಸಿದವರಲ್ಲಿ ಮೊದಲಿಗರು.

೧೯೭೦ರಲ್ಲಿ 'ಕೊಡಗು ಮತ್ತು ದಕ್ಷಿಣಕನ್ನಡ ಗೌಡ ಸಮಾಜದ ಸಂಸ್ಕೃತಿ' ಕೃತಿಯಲ್ಲಿ ಕೊಡಗು ಗೌಡ ಸಂಸ್ಕೃತಿಯ ವಿವಿಧ ಸಂದರ್ಭಗಳಲ್ಲಿ ಹಾಡಲಾಗುವ ಪದ್ಯಗಳು ಮತ್ತು ಜಾನಪದಕ್ಕೆ ಸಂಬಂಧಿಸಿದ ನಂಬಿಕೆ ಮತ್ತು ಆಚರಣೆ ಇತ್ಯಾದಿಗಳನ್ನು ಸಂಗ್ರಹಿಸಲಾಗಿದೆ. ಇದರಲ್ಲಿ ಕೂಡಕಂಡಿರ ಎ.ಪೊನ್ನಪ್ಪ, ಶ್ರೀಮಂಗಲದ ಕುಲ್ಲಚನ ಕಾರ್ಯಪ್ಪ, ತೊತ್ತಿಯನ ಮಂದಣ್ಣ, ಬಲಮುರಿಯ ಡಾ.ಗುಡ್ಡೇರ ಗಣಪತಿ, ವಿರಾಜಪೇಟೆಯ ಕೆಎಸ್. ಕಾರ್ಯಪ್ಪ, ಡಿ.ಎನ್. ಕೃಷ್ಣಯ್ಯ, ಕಾಜೂರಿನ ಮೂಲೆಮಜ್ಲು ಸೋಮಣ್ಣ, ಚೇರಳ ಶ್ರೀಮಂಗಲದ ಪೇರಿಯನ ಪೂವಯ್ಯ, ಸುಂಟಿಕೊಪ್ಪದ ನಾಗರ್ಣಿ ಗ್ರಾಮದ ಯಂಕನ ಉತ್ತಯ್ಯ ಮೊದಲಾದವರು ಕೊಡಗಿನ ಗೌಡ ಜನಾಂಗದ ಹಿನ್ನೆಲೆ,

ಸಂಸ್ಕೃತಿ, ಕೊಡಗಿನ ರಾಜರ ಕಾಲದ ಕಟ್ಟುಕಟ್ಟಳೆಗಳು, ಪದ್ಧತಿಗಳು, ಸತ್ತವರಿಗೆ ನಡೆಸುವ ಸಂಸ್ಕಾರಗಳು, ಹಬ್ಬಗಳು, ವೆಂಕಟರಮಣ ದೇವರ ಹರಿಸೇವೆ ಇವುಗಳ ಬಗೆಗೆ ಬರಹಗಳನ್ನು ಇಲ್ಲಿ ಪ್ರಕಟಿಸಿರುವರು.

ಇವುಗಳ ಹೊರತಾಗಿ ಗಾದೆಗಳು, ಒಗಟುಗಳು ಮುಂತಾದ ಜನಪದ ಸಾಹಿತ್ಯ ಪ್ರಕಾರಗಳೂ ಇವೆ. ಆದರೆ, ಇವುಗಳನ್ನು ಸಂಗ್ರಹಿಸಿ ದಾಖಲಿಸುವ ಪ್ರಯತ್ನ ನಡೆದಿಲ್ಲ. ಹಾಗೆಯೇ ಸೋಬಾನೆ ಹಾಡುಗಳನ್ನು ಸಂಗ್ರಹಿಸಿ ಪ್ರಕಟಿಸಲಾಗಿದೆ.

ಗೌಡಕನ್ನಡದ ಪರಿಸರದಲ್ಲಿ ಕನ್ನಡ ಸಾಹಿತ್ಯದಲ್ಲಿನ ಬರಹಗಾರರಾದ ಕೆ.ಆರ್. ವಿದ್ಯಾಧರ್ ಬಡ್ಡಡ್ಕ, ಕೆ.ಆರ್. ತೇಜುಕುಮಾರ್, ವೆಂಕಟ್ ಮೊಂಟಡ್ಕ, ಜಯಮ್ಮ ಚೆಟ್ಟಿಮಾಡ, ಶೀಲಾವತಿ ಕೊಳಂಬೆ ಮೊದಲಾದವರು ತಮ್ಮ ಬರಹಗಳಲ್ಲಿ ಗೌಡಕನ್ನಡವನ್ನು ಬಳಸುವ ಪ್ರಯತ್ನ ಮಾಡಿದ್ದಾರೆ. ಗೌಡಕನ್ನಡ ಭಾಷೆಯ ವ್ಯಾಕರಣದ ರಚನೆಗಳು ಇನ್ನೂ ಆಗಿಲ್ಲ. ಆದರೆ, ಇದರ ಶಬ್ದಕೋಶದ ಸಿದ್ಧತೆ ನಡೆಯುತ್ತಿದೆ. ಒಟ್ಟಾರೆ ಹೇಳುವುದಾದರೆ ಇದುವರೆವಿಗೂ ನಡೆದಿರುವ ಅಧ್ಯಯನಗಳಿಂದ ಗೌಡಕನ್ನಡವನ್ನು ಸಮಗ್ರವಾಗಿ ತಿಳಿಯಲು ಆಕರ ಸಾಮಗ್ರಿಗಳಿಲ್ಲ ಎಂದು ಹೇಳಬಹುದು.

ಅಧ್ಯಾಯ ೩

ಗೌಡ ಕನ್ನಡದ ಭಾಷಾ ವೈಶಿಷ್ಟ್ಯ

ಅಧ್ಯಾಯ ಮೂರು

ಗೌಡ ಕನ್ನಡದ ಭಾಷಾ ವೈಶಿಷ್ಟ್ಯ

ಭಾಷೆಯ ಚಾರಿತ್ರಿಕ ಬೆಳವಣಿಗೆ:

ಕೊಡಗು ಜಿಲ್ಲೆ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಗೌಡ ಜನಾಂಗದವರು ಬಳಸುವ ಭಾಷೆ ಗೌಡಕನ್ನಡ. ಹಿಂದೆ ಗೌಡಕನ್ನಡ ಭಾಷೆಯು ಕೇವಲ ಆ ಸಮಾಜದ ವ್ಯಕ್ತಿಗಳ ನಡುವೆ ಮಾತ್ರ ಬಳಕೆಯಲ್ಲಿತ್ತು. ಸಾರ್ವಜನಿಕವಾಗಿ ಈ ಭಾಷೆಯನ್ನು ಬಳಸಲು ಗೌಡ ಜನಾಂಗದವರಲ್ಲಿ ಅಂಜಿಕೆಯಿತ್ತು. ಕೆಲವರಿಗೆ ತಮ್ಮ ಮನೆಯ ಮಾತಿನಲ್ಲಿ ಬೇರೆಯವರ ಎದುರಿನಲ್ಲಿ ಮಾತನಾಡುವುದು ಅವಮಾನ ಎಂಬುದು ಅವರ ಭಾವನೆಯಾಗಿತ್ತು. ಇದರಿಂದಾಗಿ ಮನೆಯಲ್ಲಿ ಮಕ್ಕಳೊಡನೆ ಶಿಷ್ಟಕನ್ನಡದಲ್ಲಿ ಮಾತನಾಡುತ್ತಿದ್ದರು. ಆದರೆ ಇಂದು ಈ ಭಾಷೆಯು ಸಾಮಾಜಿಕ ಸ್ಥಾನವನ್ನು ಪಡೆದುಕೊಂಡಿದೆ. ಕೇವಲ ಮನೆಯ ಮತ್ತು ಸಮಾಜದ ವಾತಾವರಣದಲ್ಲಿ ಮಾತ್ರವಲ್ಲದೆ ಸಾರ್ವಜನಿಕ ಸ್ಥಳಗಳಲ್ಲಿ, ಇತರ ಭಾಷಿಕರೊಂದಿಗೆ, ಸಭೆ ಸಮಾರಂಭಗಳಲ್ಲಿ ಮುಂತಾದೆಡೆ ಗೌಡಕನ್ನಡ ಭಾಷೆಯು ಬಳಕೆಯಾಗುತ್ತಿದೆ.

ಗೌಡಕನ್ನಡ ಭಾಷೆಯು ಎರಡು ದಶಕಗಳ ಹಿಂದೆ ಕೇವಲ ಕೌಟುಂಬಿಕ ವಲಯ ಹಾಗೂ ಸಾಮಾಜಿಕ ವಲಯದಲ್ಲಿ ಮಾತ್ರ ಬಳಕೆಯಲ್ಲಿತ್ತು. ಆದರೆ, ಇತ್ತೀಚಿನ ಬೆಳವಣಿಗೆಯಿಂದ ಜನಾಂಗದವರಲ್ಲಿ ಭಾಷಾಭಿಮಾನ ಹೆಚ್ಚಾಗಿರುವುದನ್ನು ಕಾಣಬಹುದು. ಭಾಷೆಯ ಉಳಿವಿಗಾಗಿ ಅನೇಕ ಸಂಘಸಂಸ್ಥೆಗಳನ್ನು ಸ್ಥಾಪಿಸಿ ಅವುಗಳ ಮುಖಾಂತರ ಕಾರ್ಯಕ್ರಮಗಳನ್ನು ಹಮ್ಮಿಕೊಂಡು (ಗೌಡ ಸಮ್ಮೇಳನ ಇತ್ಯಾದಿ) ಗೌಡ ಜನಾಂಗದ ಭಾಷೆ, ಸಂಸ್ಕೃತಿ ಇವುಗಳನ್ನು ಉಳಿಸಿ ಬೆಳೆಸುವ ಕಾರ್ಯದಲ್ಲಿ ತೊಡಗಿ ಯಶಸ್ವಿಯಾಗಿರುವ ಚಿತ್ರಣವನ್ನೂ ಕೊಡಗಿನಲ್ಲಿ ಕಾಣಬಹುದು. ಗೌಡ ಸಮ್ಮೇಳನಗಳಲ್ಲಿ ಹಿಂದೆ 'ಕನ್ನಡ' ಭಾಷೆಯನ್ನೇ ಬಳಸಲಾಗುತ್ತಿತ್ತು. ಇತ್ತೀಚೆಗೆ ಸಮ್ಮೇಳನಗಳಲ್ಲಿ ಸಭೆ ಸಮಾರಂಭಗಳಲ್ಲಿ

ಗೌಡಕನ್ನಡವನ್ನು ಬಳಸಲಾಗುತ್ತಿದೆ. ಅಲ್ಲದೆ ಗೌಡಕನ್ನಡದಲ್ಲಿ ಲೇಖನ, ಬರವಣಿಗೆ, ಸಾಹಿತ್ಯ ರಚನೆಯಾಗುತ್ತಿವೆ. ಬಾನುಲಿ ಕೇಂದ್ರದಿಂದ ಗೌಡಕನ್ನಡ ಭಾಷಾಕಾರ್ಯಕ್ರಮಗಳು ಬಿತ್ತರಗೊಳ್ಳುತ್ತಿವೆ. ಮಡಿಕೇರಿಯ ಬಾನುಲಿ ಕೇಂದ್ರದಿಂದ ಪ್ರತಿದಿನ ಗೌಡಕನ್ನಡದಲ್ಲಿ 'ಸುದ್ದಿಜೊಂಪೆ' ಎಂಬ ವಾರ್ತಾ ಕಾರ್ಯಕ್ರಮ ಪ್ರಸಾರವಾಗುತ್ತಿದೆ.

ಹಳೆಯ ಮಾದರಿಯು ಬಳಕೆಯಾಗುತ್ತಿರುವ ಸಂದರ್ಭಗಳು:

ಕೊಡಗಿನ ಗೌಡ ಜನಾಂಗದಲ್ಲಿ ಭಾಷೆಯ ಬಳಕೆಯಲ್ಲಿ ಕೆಲವೆಡೆ ಮೂಲ ಮಾದರಿಯನ್ನೇ ಉಳಿಸಿಕೊಂಡಿರುವುದು ಕಂಡುಬಂದಿದೆ. ಕೊಡಗು ಜಿಲ್ಲೆಯ ಮಡಿಕೇರಿ ತಾಲೂಕಿನ ಕೆಲವು (ಭಾಗಮಂಡಲ, ಕರಿಕೆ ಮುಂತಾದ) ಸ್ಥಳಗಳಲ್ಲಿ ಗೃಹ ಬಳಕೆಯ ವಸ್ತುಗಳು (ಮಾಯ್ಪು), ಸಂಬೋಧನಾ ರೂಪಗಳು (ಚಾಮೆಪ್ಪ), ಆಹಾರ ಪದಾರ್ಥಗಳನ್ನು ಹೆಸರಿಸುವಾಗ (ಹಿಟ್ಟ್, ಪೊಜ್ಜಿ), ಸಾಮಾನ್ಯವಾಗಿ ಮಾತಿನಲ್ಲಿ ಬಳಸುವ ಶಬ್ದಗಳಲ್ಲಿ (ಹಾಂಟ್) ಹಳೆಯ ಮಾದರಿಯೇ ಇದೆ. ಸಾಂಪ್ರದಾಯಿಕ ಆಚರಣೆಗಳಲ್ಲಿ ದೇವರಲ್ಲಿ ಬಿನ್ನವಿಸಿಕೊಳ್ಳುವ ಪದ್ಧತಿ ಇವರಲ್ಲಿ ಇದೆ. ಸಂಪ್ರದಾಯಬದ್ಧವಾದ ಆಚರಣೆಗಳಾದ್ದರಿಂದ ಬದಲಾವಣೆಗಳಿಲ್ಲದೆ ಮೂಲ ಮಾದರಿಯಲ್ಲಿಯೇ ಬಿನ್ನವಿಸಿಕೊಳ್ಳುವರು.

ಗಾದೆ, ಒಗಟುಗಳನ್ನು ಹೇಳುವ ಸಂದರ್ಭಗಳಲ್ಲಿ ಹಿಂದೆ ಹೇಳುತಿದ್ದ ಗಾದೆ ಒಗಟುಗಳನ್ನೇ ಅದೇ ರೀತಿ ಯಾವುದೇ ಬದಲಾವಣೆಯಿಲ್ಲದೆ ಹೇಳುವರು. ಮಕ್ಕಳಿಗೆ ಕಥೆ, ಹಾಡುಗಳನ್ನು ಹೇಳಿ ಕೊಡುವ ಸಂದರ್ಭದಲ್ಲಿ ತಮ್ಮ ಹಿರಿಯರು ತಮಗೆ ಹೇಳಿರುವ ಕಥೆಗಳು ಮತ್ತು ಹಾಡುಗಳನ್ನು ಹಾಗೆಯೇ ಹೇಳುವರು. ಇಲ್ಲಿ ಅದೇ ಹಳೆಯ ಮೂಲ ಶಬ್ದಗಳನ್ನು ಬಳಸುವರು. ಹೀಗೆ ಇವರು ಕೆಲವು ಸಂದರ್ಭಗಳಲ್ಲಿ ಭಾಷೆಯ ಮೂಲ ಪದಗಳನ್ನು ಈಗಲೂ ಬಳಸುತ್ತಿರುವುದು ಕಂಡುಬರುತ್ತದೆ.

'ಗೌಡಕನ್ನಡ'ವು ಕನ್ನಡದ ಉಪಭಾಷೆಯಾಗಿದೆ. ಈ ಭಾಷೆಯನ್ನು ಶಿಷ್ಟಕನ್ನಡ ಭಾಷೆಯೊಂದಿಗೆ ಹೋಲಿಸುವಾಗ ಶಬ್ದ ಸಮೂಹ, ಉಚ್ಚಾರಣೆ, ವ್ಯಾಕರಣ ಪ್ರಕ್ರಿಯೆಗಳಲ್ಲಿ ಕೆಲವೊಂದು ಭಿನ್ನತೆ ತೋರಿ ಬರುತ್ತದೆ. ಶಬ್ದಸಮೂಹ ಹಾಗೂ ವ್ಯಾಕರಣಕ್ಕೆ ಸಂಬಂಧಿಸಿದಂತೆ ಗೌಡಕನ್ನಡವು ಕನ್ನಡ ಭಾಷೆಯ ಉಪಭಾಷೆ ಎಂದು ಭಾಷಾ ವೈಜ್ಞಾನಿಕ ವಿಶ್ಲೇಷಣೆಯ ಸಂದರ್ಭದಲ್ಲಿ ಗುರುತಿಸಲಾಗಿದೆ. ಜೊತೆಗೆ ಗೌಡಕನ್ನಡವು ಶಿಷ್ಟಕನ್ನಡಕ್ಕಿಂತ ಭಿನ್ನತೆಯನ್ನು ಹೊಂದಿದೆ. ಈ ವಿಚಾರಗಳಿಂದ ಗೌಡಕನ್ನಡವು ಭಿನ್ನತೆ, ವೈವಿಧ್ಯ ಮತ್ತು ತನ್ನ ಆಂತರಿಕ ಸಂರಚನೆಗಳಲ್ಲಿನ ವೈಶಿಷ್ಟ್ಯತೆಗಳಿಂದಾಗಿ ಇತರ ಭಾಷೆಗಳಿಗಿಂತ ಭಿನ್ನವಾದ ಭಾಷೆ ಎನಿಸಿಕೊಂಡಿದೆ.

ಗೌಡಕನ್ನಡದ ಸ್ವರಗಳು:

ಗೌಡ ಕನ್ನಡದ ವರ್ಣಮಾಲೆಯಲ್ಲಿರುವ ಸ್ವರ ಹಾಗೂ ವ್ಯಂಜನಗಳು ಬಹುತೇಕ ಶಿಷ್ಟಕನ್ನಡದ ವರ್ಣಮಾಲೆಯಂತಿರುವಂತೆಯೇ ಕಂಡುಬರುತ್ತದೆ.

ಉಚ್ಚಾರಣಾ ಸ್ಥಾನ

ಉಚ್ಚರಣಾ ರೀತಿ	ಅಗ್ರ	ಮಧ್ಯ	ಪಶ್ವ
ತುಟಿಸ್ಥಿತಿ	ಅಗೋಳ/ಗೋಳ	ಅಗೋಳ/ಗೋಳ	ಅಗೋಳ/ಗೋಳ
ಉನ್ನತ ಹ್ರಸ್ವ	ಇ (i)	(i)(ɨ)	ಉ (u)
ಉನ್ನತ ದೀರ್ಘ	ಈ(iː)	–	ಊ(uː)
ಉನ್ನತ ಮಧ್ಯ ಹ್ರಸ್ವ	ಎ (e)	–	–
ಉನ್ನತ ಮಧ್ಯ ದೀರ್ಘ	ಏ (e:)	–	–
ನಡು ಮಧ್ಯ ಹ್ರಸ್ವ	–	(ə)	ಒ (o)
ನಡು ಮಧ್ಯ ದೀರ್ಘ	–	–	ಓ (oː)
ಅವನತ ಮಧ್ಯ ಹ್ರಸ್ವ	(Σ)		
ಅವನತ ಮಧ್ಯ ದೀರ್ಘ	–	ಅ (a)	
ಅವನತ ಹ್ರಸ್ವ		ಆ(aː)	
ಅವನತ ದೀರ್ಘ			

ವ್ಯಂಜನಗಳು

<u>ಉಚ್ಚಾರಣಾ ಸ್ಥಾನ</u>

ಸ್ವರ ತಂತುವಿನ ಸ್ಥಾನ	ಓಷ್ಠ್ಯ ಅಘೋಷ/ಘೋಷ	ದಂತ್ಯ ಅಘೋಷ/ಘೋಷ	ಮೂರ್ದನ್ಯ ಅಘೋಷ/ಘೋಷ	ತಾಲವ್ಯ ಅಘೋಷ/ಘೋಷ	ಕಂಠ್ಯ ಅಘೋಷ/ಘೋಷ	ಗಲೀಯ ಅಘೋಷ/ಘೋಷ
ಅಲ್ಪಪ್ರಾಣ	ಪ್ ಬ್	ತ್ ದ್	ಟ್ ಡ್	ಚ್ ಜ್	ಕ್ ಗ್	
ಅನುನಾಸಿಕ	ಮ್	ನ್	ಣ್	ಞ್	ಙ್	
ಸಂಘರ್ಷಗಳು		ಸ್				
ಪಾರ್ಶ್ವಿಕಗಳು		ಲ್				
ಕಂಪಿತ		ರ್	ಳ್			
ಅರ್ಧಸ್ವರಗಳು	ವ್			ಯ್		ಹ್

ಗೌಡಜನಾಂಗದವರು ಮಾತನಾಡುವ ಕನ್ನಡದಲ್ಲಿ ೧೪ ಸ್ವರಗಳಿವೆ.

ಹ್ರಸ್ವ		ದೀರ್ಘ	
ಇ	ಉ	ಈ	ಊ
ಎ	ಒ	ಏ	ಓ
ಅ	ɔ	ಆ	
ɨ			
ɛ	ə		

ವ್ಯಂಜನಗಳು:

ಕೊಡಗಿನ ಗೌಡಕನ್ನಡದಲ್ಲಿ ೨೨ ವ್ಯಂಜನಗಳಿವೆ.

ಪ್(p)	ತ್(t)	ಟ್(t)	ಚ್(c)	ಕ್(k)
ಬ್(b)	ದ್(d)	ಡ್(d)	ಜ್(j)	ಗ್(g)
ಮ್(m)	ನ್(n)	ಣ್(n)	ಞ್(n)	ಙ್(n)
ವ್(u)	ಯ್(y)			
ಸ್(s)	ಹ್(h)			
ಲ್(l)	ಳ್(l)			
	ರ್(r)			

* ಗೌಡಕನ್ನಡದಲ್ಲಿ ಶಿಷ್ಟಕನ್ನಡದಲ್ಲಿರುವಂತೆ ಮಹಾಪ್ರಾಣಗಳ ಬಳಕೆ ಇರುವುದಿಲ್ಲ. ಅವುಗಳಿರುವ ಶಿಷ್ಟಕನ್ನಡದ ಪದಗಳು ಗೌಡ ಕನ್ನಡದಲ್ಲಿ ಅಲ್ಪಪ್ರಾಣ ರೂಪದಲ್ಲಿ ಬಳಕೆಯಾಗುತ್ತದೆ.

ಉದಾ:– ಹಠ–ಹಟ, ಪಂಥ–ಪಂತ

ಅರ್ಥ–ಅರ್ತ, ಮಧ್ಯ–ಮದ್ಯ ಇತ್ಯಾದಿ.

* ಗೌಡಕನ್ನಡದ ಅವರ್ಗೀಯ ವ್ಯಂಜನಗಳಲ್ಲಿ ' ಸ, ಶ, ಷ' ಎಂಬ ಪ್ರಭೇದಗಳಲ್ಲಿ ಸಂಘರ್ಷ ದಂತ್ಯ ಅಘೋಷ ಧ್ವನಿಮಾ 'ಸ' ಮಾತ್ರ ಬಳಕೆಯಲ್ಲಿದೆ.

ಉದಾ:– ಬಾಸೆ, ಕುಸಿ, ಆಸೆ ಇತ್ಯಾದಿ.

* ಯ, ರ, ಲ, ವ, ಹ, ಳ ಗಳು ಸಹಜ ಬಳಕೆಯಲ್ಲಿವೆ. ಒಂದು ವೇಳೆ ಇಲ್ಲಿ ಮಹಾಪ್ರಾಣಗಳು ಮತ್ತು 'ಶ, ಷ' ಗಳು ಕಂಡು ಬಂದರೆ ಇವು ಕಲಿತವರ ಮಾತಿನಲ್ಲಿರುವ ಎರವಲು ಪದಗಳೆಂದು ಪರಿಗಣಿಸಬಹುದು.

* ಅನುನಾಸಿಕಗಳು ಧ್ವನಿಮಾಗಳಾಗಿ ದ್ವಿತ್ವರೂಪದಲ್ಲಿ ಸಹಜವಾಗಿ ಬಳಕೆಯಲ್ಲಿದೆ.

ಉದಾ:- ಮಜ (ಮಗ)

ಹಜ್ಜ (ಸ್ವಲ್ಪ)

ನೊಜ (ನೊಗ) ಇತ್ಯಾದಿ.

ಶಿಷ್ಟಕನ್ನಡದಲ್ಲಿರುವ ಎಲ್ಲ ಸ್ವರಗಳೂ ಗೌಡಕನ್ನಡದಲ್ಲಿವೆ. ಜೊತೆಗೆ ಕೆಲವು ವಿಶಿಷ್ಟ ಸ್ವರಗಳೂ ಈ ಉಪಭಾಷೆಯಲ್ಲಿದೆ. ಅವುಗಳೆಂದರೆ,

೧. ಇ ಮತ್ತು ಉ ಸ್ವರಗಳ ಮಧ್ಯೆ ಒಂದು ಸ್ವರ

ಇದನ್ನು ತೋರಿಸಲು ಕನ್ನಡದಲ್ಲಿ ಲಿಪಿಸಂಜ್ಞೆ ಇಲ್ಲ. ಆದುದರಿಂದ ಇದನ್ನು ಅಂತಾರಾಷ್ಟ್ರೀಯ ಧ್ವನಿಲಿಪಿಯ ಸಂಜ್ಞೆಯನ್ನು ಉಪಯೋಗಿಸಿ ತೋರಿಸಲಾಗಿದೆ.

ಇಂಗ್ಲೀಷಿನ i ಅಕ್ಷರದ ನಡುವಿಗೊಂದು ಚಿಕ್ಕ ಅಡ್ಡಗೆರೆಯನ್ನು ಎಳೆದು ɨ ಎಂದು ಇದನ್ನು ತೋರಿಸುವುದು.

ಉದಾ:- ಅಂವ ಬಾತ್ɨ (ಅವನು ಬಂದನು)

ಅಂವ ತಾತ್ɨ (ಅವನು ತಂದನು) ಇತ್ಯಾದಿ.

೨. ಎ ಮತ್ತು ಒ ಸ್ವರಗಳ ಮಧ್ಯೆ ಒಂದು ಸ್ವರ ಗೌಡಕನ್ನಡದಲ್ಲಿ ಬರುತ್ತದೆ. ಇದರ ಉಚ್ಚಾರಣೆ 'ಅ' ಕಾರಕ್ಕೆ ಸಮೀಪವಾಗಿದೆ. ಆದರೆ ಇದು 'ಅ' ಕಾರದೊಡನೆ ಅರ್ಥ ವೈದೃಶ್ಯವನ್ನು ತೋರಿಸುತ್ತದೆ. ಆದ್ದರಿಂದ ಇದನ್ನು 'ಅ' ಕಾರ ಲಿಪಿಯಿಂದ ತೋರಿಸಲು ಸಾಧ್ಯವಿಲ್ಲ. ಹಾಗಾಗಿ ಇದನ್ನೂ ಬೇರೆಯೇ ಧ್ವನಿ ಸಂಜ್ಞೆಯಿಂದ ತೋರಿಸಲಾಗಿದೆ. ಇದನ್ನು ಇಂಗ್ಲೀಷಿನ 'e' ಎಂಬ ಅಕ್ಷರವನ್ನು ತಿರುಗಿಸಿದಂತೆ 'ə' ಎಂದು ಬರೆದು ಗುರುತಿಸಲಾಗುತ್ತಿದೆ. ಇದು 'ಅ' ಕಾರದೊಡನೆ ಅರ್ಥವಿರೋಧವನ್ನು ತೋರಿಸುವ ಕೆಲವು ಉದಾಹರಣೆಗಳು.

ಉದಾ:- ಕರಿ- 'call'	ಕರಿ- 'charcoal'
ಕಡಿ- 'grind'	ಕəಡಿ- 'cut'
ಕಂಡು-'having seen'	ತಕəಂಡ್ɨ -having taken'
ಕಟ್ಟ್ɨ -'bundle'	ಕəಟ್ಟ್ɨ -'bind''pack' ಇತ್ಯಾದಿ.

೩. 'ಎ'ಕಾರಕ್ಕಿಂತ ಕೆಳಗಣ ಒಂದು ಸ್ವರ ಗೌಡಕನ್ನಡದಲ್ಲಿದೆ. ಇದರ ಉಪಯೋಗ ಕಡಿಮೆ ಎಂದು ಹೇಳಬಹುದು. ಆದರೂ ಈ ಸ್ವರವು ಗೌಡಕನ್ನಡದಲ್ಲಿದೆ. ಈ ಸ್ವರವನ್ನು 'ɛ' ಎಂದು ತೋರಿಸಲಾಗಿದೆ. ಇದು 'e' ಯೊಡನೆ ಅರ್ಥವಿರೋಧವನ್ನು ತೋರಿಸುವ ಉದಾಹರಣೆ.

ಉದಾ:   ಹೆರು: 'to give birth'

ಹೆ(ɛ)ರು: 'flux'(ಹಾಲಿಗೆ ಹೆಪ್ಪು ಹಾಕುವುದು.)

೪. 'ಒ' ಕಾರಕ್ಕಿಂತ ಕೆಳಗಣ ಒಂದು ಸ್ವರ. ಈ ಧ್ವನಿಯನ್ನು 'ɔ' ಎಂದು ತೋರಿಸಲಾಗಿದೆ. ಇದು ಇಂಗ್ಲೀಷಿನ 'c' ಅಕ್ಷರವನ್ನು ತಲೆಕೆಳಗು ಮಾಡಿದಂತೆ ಕಾಣುತ್ತದೆ. 'ɔ' ಇದನ್ನು ಪದಾಂತ್ಯದಲ್ಲಿ ಕಾಣಬಹುದು.

ಉದಾ:- ಬಂದೊ(ɔ) – ಬಂದರು.

ಇದ್ದೊ (ɔ) – ಇದ್ದರು.

ಹೋದೊ – ಹೋದರು ಇತ್ಯಾದಿ.

ಭಾಷೆಯ ಉಚ್ಚಾರಣೆಯನ್ನು ಸಾಧ್ಯವಾದ ಮಟ್ಟಿಗೆ ಸರಿಯಾಗಿ ತೋರಿಸುವ ಉದ್ದೇಶದಿಂದ ಇವುಗಳನ್ನು ಗೌಡಕನ್ನಡದಲ್ಲಿ ಬಳಕೆಗೆ ತರಲಾಗಿದೆ.

ಸರ್ವನಾಮಗಳು ಮತ್ತು ಲಿಂಗವ್ಯವಸ್ಥೆ:

ಗೌಡಕನ್ನಡದ ಲಿಂಗ ವ್ಯವಸ್ಥೆಯು ವಿಶಿಷ್ಟವಾದುದಾಗಿದೆ. ಗೌಡಕನ್ನಡದಲ್ಲಿ ಪುಲ್ಲಿಂಗ, ಪುಲ್ಲಿಂಗೇತರ ಸರ್ವನಾಮಗಳಲ್ಲಿ ಸ್ತ್ರೀ ಲಿಂಗಕ್ಕೆ ಪ್ರತ್ಯೇಕ ಪದವಿಲ್ಲ. ಪುಲ್ಲಿಂಗ ಮತ್ತು ಪುಲ್ಲಿಂಗೇತರ ಎಂಬ ಎರಡು ವಿಧಗಳಿವೆ.

ಉದಾ:- ಅಂವ(ಅವನು), ಇಂವ(ಇವನು)

ಅದ್'ɨ (ಅವಳು ಅಥವಾ ಅದು)

ಇದ್'ɨ (ಇವಳು ಅಥವಾ ಇದು)

ಗೌಡಕನ್ನಡದ ಸರ್ವನಾಮಗಳಲ್ಲಿ ಪುಲ್ಲಿಂಗ ಪುಲ್ಲಿಂಗೇತರಗಳಿಗೆ ಸಂವಾದಿಯಾಗಿ ಬರುವ ಕ್ರಿಯಾಪದಗಳಲ್ಲಿ ಯಾವುದೇ ವ್ಯತ್ಯಾಸವಿಲ್ಲದೆ ಏಕ ರೀತಿಯ ನಪುಂಸಕ ಪ್ರತ್ಯಯಾಂತ ರೂಪ ಬರುತ್ತದೆ.

ಉದಾ:- ಅಂವ ಹೋದೆ (ಅವನು ಹೋಗುತ್ತದೆ)

ಅದ್'ɨ ಹೋದೆ (ಅವಳು/ಅದು ಹೋಗುತ್ತದೆ)

ಇಂವ ಹೋತ್'ɨ (ಇವನು ಹೋಯಿತು)

ಇದ್'ɨ ಹೋತ್'ɨ (ಇವಳು/ಇದು ಹೋಯಿತು) ಇತ್ಯಾದಿ.

ಕೊಡಗಿನ ಗೌಡಕನ್ನಡದಲ್ಲಿ ಪುಲ್ಲಿಂಗ ಮತ್ತು ಪುಲ್ಲಿಂಗೇತರ ಭೇದವಿದ್ದರೂ ಬಹುವಚನದಲ್ಲಿ ಈ ವ್ಯತ್ಯಾಸ ಕಂಡುಬರುವುದಿಲ್ಲ.

ಉದಾ:- ಗೌ.ಕ- ಅವು ಬಂದೊ(ಎ), ಇವು ಬಂದೊ(ಎ) (ಮನುಷ್ಯರು/ ಪ್ರಾಣಿಗಳು)

ಶಿ.ಕ- ಅವರು ಬಂದರು, ಇವು ಬಂದವು (ಗಂಡಸರು/ಹೆಂಗಸರು)

ಗೌಡಕನ್ನಡದ ಸರ್ವನಾಮಗಳಲ್ಲಿ ಸ್ತ್ರೀ ಲಿಂಗಕ್ಕೆ ಸ್ಥಾನವಿಲ್ಲ. ಆದರೆ ತದ್ಧಿತಾಂತಗಳಲ್ಲಿ ಸ್ತ್ರೀಲಿಂಗ ಪ್ರತ್ಯಯಗಳಿರುವುದು ಕಂಡು ಬಂದಿದೆ.

ಉದಾ:- ಪ್ರತ್ಯಯಗಳು.

ಇ(i) ಕುರುಡಿ- kurd-i

ಪೊಟ್ಟಿ- pott-i (ಕಿವುಡಿ)

ಎ(e) ಜಾಣೆ – ja:n-e

ಕಳ್ಳೆ – kall-e (ಕಳ್ಳಿ)

ತಿ(ti) ನಂಟತಿ- nanta-ti

ಮೊಡ್ಡೋಳ್ತಿ- moddol-ti (ಮಡಿವಾಳತಿ) ಇತ್ಯಾದಿ.

ನಾಮಪದಕ್ಕೆ ಬದಲಾಗಿ ಬಳಸುವ ರೂಪಗಳನ್ನು ಸರ್ವನಾಮಗಳೆಂದು ಕರೆಯುವರು. ಗೌಡಕನ್ನಡದಲ್ಲಿಯೂ ಉತ್ತಮ, ಮಧ್ಯಮ ಹಾಗೂ ಪ್ರಥಮ ಎಂಬ ಮೂರು ವಿಧವಾದ ಪುರುಷವಾಚಕಗಳನ್ನು ಮತ್ತು ಏಕವಚನ, ಬಹುವಚನ ಎಂಬ ಭೇದವನ್ನು ಗುರುತಿಸಬಹುದು.

ಗೌಡಕನ್ನಡದಲ್ಲಿ ಪ್ರಥಮ ಪುರುಷ ಏಕವಚನದಲ್ಲಿ ಪುಲ್ಲಿಂಗ ಪುಲ್ಲಿಂಗೇತ ಭೇದವಿದೆ ಇಲ್ಲಿ ಸ್ತ್ರೀ ಲಿಂಗಕ್ಕೆ ಸ್ಥಾನವಿಲ್ಲ.

		ಶಿಷ್ಟ ಕನ್ನಡ		**ಗೌಡಕನ್ನಡ**	
		ಏಕ	**ಬಹು**	**ಏಕ**	**ಬಹು**
ಉತ್ತಮ ಪುರುಷ		ನಾನು/ನಾ	ನಾವು	ನಾನ್/ನಾ	ನಾವ್
ಮಧ್ಯಮ ಪುರುಷ		ನೀನು/ನೀ	ನೀವು	ನೀನ್/ನೀ	ನೀವ್
ಪ್ರಥಮ ಪುರುಷ	(ಪು)	ಅವನು	ಅವರು	ಅಂವ	ಅವು
	(ಸ್ತ್ರೀ)	ಅವಳು	ಅವರು	ಅದ್	ಅವು
	(ನಪುಂ)	ಅದು	ಅವು	ಅದ್	ಅವು

ವಚನಗಳು:

ಶಿಷ್ಟಕನ್ನಡದಲ್ಲಿರುವ ವಚನ ವ್ಯವಸ್ಥೆಯು ಕೊಡಗಿನ ಗೌಡಕನ್ನಡದಲ್ಲಿಯೂ ಕಂಡುಬರುತ್ತದೆ. ಅಂತೆಯೇ ಯಾವುದೇ ವಸ್ತು, ಪ್ರಾಣಿ, ವ್ಯಕ್ತಿ ಇವುಗಳ ಸಂಖ್ಯೆಯು ಒಂದು ಆಗಿದ್ದಲ್ಲಿ ಅದನ್ನು 'ಏಕವಚನ' ಎಂದು ಸೂಚಿಸುವರು. ಇವುಗಳು ಒಂದಕ್ಕಿಂತ ಹೆಚ್ಚಿರುವಾಗ ಅವುಗಳನ್ನು ಪ್ರತ್ಯಯಗಳ ಮೂಲಕ ಸೂಚಿಸಲಾಗುತ್ತದೆ. ಇವುಗಳನ್ನು 'ಬಹುವಚನ' ಎಂದು ಸೂಚಿಸುವರು.

ಗೌಡಕನ್ನಡದಲ್ಲಿ ಇರುವ ಬಹುವಚನ ಪ್ರತ್ಯಯಗಳು

'ಅಂದ್‌ರ್' 'ಗ' ಮತ್ತು 'ಕ'

ಪ್ರತ್ಯಯ– 'ಅಂದ್‌ರ್'

ಅಕ್ಕಂದ್‌ರ್ (ಅಕ್ಕಂದಿರು)

ಮಾವಂದ್‌ರ್ (ಮಾವಂದಿರು)

ತಮ್ಮಂದ್‌ರ್ (ತಮ್ಮಂದಿರು)

ಬಾವಂದ್‌ರ್ (ಬಾವಂದಿರು)

ಅಂದ್‌ರ್ ಪ್ರತ್ಯಯವು ಸಂಬಂಧವಾಚಿಗಳಿಗೆ ಹತ್ತುತ್ತದೆ.

ಪ್ರತ್ಯಯ– 'ಗ' ಮರಗ (ಮರಗಳು)

ದನಗ (ದನಗಳು)

ದೆವ್ವಗ (ದೆವ್ವಗಳು)

'ಗ' ಪ್ರತ್ಯಯವು ಸಾಮಾನ್ಯವಾಗಿ ಮಾನವೇತರಗಳಿಗೆ ಅನ್ವಯಿಸುತ್ತದೆ.

ಪ್ರತ್ಯಯ– 'ಕ' ಮಕ್ಕ (ಮಕ್ಕಳು)

ಅಯ್ಯೆಕ (ತಾಯಿಯಂದಿರು)

ಸೊಸೆಕ (ಸೊಸೆಯರು) ಇತ್ಯಾದಿ.

•ಗೌಡಕನ್ನಡದಲ್ಲಿ ಕೆಲವು ರೂಪಗಳು ಬಹುವಚನವಿದ್ದಾಗಲೂ ಅವು ಏಕವಚನ ರೂಪದಲ್ಲಿ ಕಾಣಿಸಿಕೊಳ್ಳುತ್ತದೆ.

ಉದಾ:– ಪುಸ್ತಕಗಳು.

ಗೌ.ಕ – ಅಲ್ಲಿ ಸುಮಾರ್ ಪುಸ್ತಕ ಉಟ್ಟು.

ಶಿ.ಕ – ಅಲ್ಲಿ ಬಹಳ ಪುಸ್ತಕಗಳಿವೆ.

ಗೌ.ಕ – ಮಕ್ಕ ಎಸ್ಟೋ ಪುಸ್ತಕ ಹರ್ದ್ದೊಳೊ.

ಶಿ.ಕ – ಮಕ್ಕಳು ಬಹಳಷ್ಟು ಪುಸ್ತಕಗಳನ್ನು ಹರಿದಿದ್ದಾರೆ

ವಿಭಕ್ತಿ ಪ್ರತ್ಯಯಗಳು:

ಒಂದು ಪದವನ್ನು ಎಷ್ಟು ಬಗೆಯ ವಾಕ್ಯಗಳಲ್ಲಿ ಬಳಸಬಹುದು ಎಂಬುದನ್ನು ತಿಳಿಸುವುದಕ್ಕೆ ವಿಭಕ್ತಿ ಪ್ರತ್ಯಯ ಎನ್ನುವರು. ನಾಮ ಪ್ರಕೃತಿಗೆ ವಿಭಕ್ತಿ ಪ್ರತ್ಯಯವು ಸೇರಿದ ಬಳಿಕ ಅದು ವಾಕ್ಯ ರಚನೆಯಲ್ಲಿ ಬಳಸಲು ಅರ್ಹತೆಯನ್ನು ಪಡೆಯುತ್ತದೆ. ನಮ್ಮ ವೈಯಾಕರಣರು ಸಂಸ್ಕೃತದ ಕ್ರಮವನ್ನೇ ಅನುಸರಿಸಿ ಶಿಷ್ಟಕನ್ನಡದಲ್ಲಿ ಒಟ್ಟು ಎಂಟು ವಿಭಕ್ತಿಗಳೆಂದು ಪರಿಗಣಿಸಿರುವರು. ಅವು ಪ್ರಥಮ, ದ್ವಿತೀಯ, ತೃತೀಯ, ಚತುರ್ಥಿ, ಪಂಚಮಿ, ಷಷ್ಟಿ, ಸಪ್ತಮಿ ಮತ್ತು ಸಂಬೋಧನಾ ವಿಭಕ್ತಿಗಳು. ಇವು ಕ್ರಮವಾಗಿ ಕರ್ತೃ, ಕರ್ಮ, ಕರಣ, ಸಂಪ್ರದಾನ, ಅಪಾದಾನ, ಅಧಿಕರಣ ಮತ್ತು ಅಭಿಮುಖೀಕರಣ. ಒಂದೊಂದು ವಿಭಕ್ತಿಯು ಒಂದೊಂದು ಕಾರಕ ಸಂಬಂಧವನ್ನು ಸೂಚಿಸುತ್ತದೆ.

ಪ್ರಥಮಾ ವಿಭಕ್ತಿಗೆ ಪ್ರತ್ಯೇಕವಾದ ಪ್ರತ್ಯಯದ ಅಗತ್ಯವಿಲ್ಲವೆನ್ನುವುದು ಸುಸ್ಪಷ್ಟವಾದ ಸಂಗತಿ. ಗೌಡಕನ್ನಡದಲ್ಲಿಯೂ ಪ್ರಥಮಾ ವಿಭಕ್ತ್ಯರ್ಥವನ್ನು ನಾಮಪ್ರಕೃತಿಯೇ ಸೂಚಿಸುತ್ತದೆ. ಆದ್ದರಿಂದ ಶಿಷ್ಟಕನ್ನಡದಂತೆ ಗೌಡಕನ್ನಡದ ಪ್ರಥಮಾ ವಿಭಕ್ತಿಗೆ ಪ್ರತ್ಯೇಕವಾದ ವಿಭಕ್ತಿ ಪ್ರತ್ಯಯವಿಲ್ಲ.

ಉದಾ:– ರಾಜ, ಮರ, ಮಜ ಇತ್ಯಾದಿ.

ಶಿಷ್ಟ ಕನ್ನಡದ 'ಅನ್ನು' ದ್ವಿತೀಯ ವಿಭಕ್ತಿ ಪ್ರತ್ಯಯ ಗೌಡಕನ್ನಡದಲ್ಲಿ 'ನ' ಆಗಿದೆ

ಉದಾ:– ಅಕ್ಕನ– akka-na

ಮರನ– mara-na

ಏಣಿನ – e:ni-na

ಗೌಡಕನ್ನಡದಲ್ಲಿ '–ಂದ' ತೃತೀಯಾ ವಿಭಕ್ತಿ ಪ್ರತ್ಯಯವಾಗಿದೆ. ಶಿಷ್ಟಕನ್ನಡದ ತೃತೀಯಾ ವಿಭಕ್ತಿ ಪ್ರತ್ಯಯ ಮತ್ತು ಪಂಚಮಿ ವಿಭಕ್ತಿ ಪ್ರತ್ಯಯವು ಸಮಾವೇಶವಾದಂತೆ, ಗೌಡಕನ್ನಡದಲ್ಲೂ ತೃತೀಯಾ ಮತ್ತು ಪಂಚಮಿ ವಿಭಕ್ತಿಗಳಲ್ಲಿ '–ಂದ' ಎಂಬ ಪ್ರತ್ಯಯ ಸಮಾನವಾಗಿ ಕಂಡುಬಂದಿದೆ.

ಪ್ರತ್ಯಯ '–ಂದ' – ಕೋಂಬರೆಂದ (ಕೋಣೆಯಿಂದ)

– ಚೊಂಬುಂದ (ಚೊಂಬಿನಿಂದ)

– ಮರಂದ (ಮರದಿಂದ) ಇತ್ಯಾದಿ.

ಕನ್ನಡದಲ್ಲಿ ಗೆ, ಅಗೆ, ಇಗೆ, ಕೆ, ಅಕ್ಕೆ ಹೀಗೆ ಹಲವು ರೂಪಗಳು ಚತುರ್ಥಿ ವಿಭಕ್ತಿ

ಪ್ರತ್ಯಯವಾಗಿದೆ. ಅಂತೆಯೇ ಗೌಡಕನ್ನಡದಲ್ಲಿ ಚತುರ್ಥಿ ವಿಭಕ್ತಿಗೆ– ಕೆ, ಗೆ, –ಂಗೆ ಎಂಬ ಪ್ರತ್ಯಯಗಳು ಇವೆ.

ಗೌಡಕನ್ನಡದ 'ಅ' ಕಾರಾಂತ ನಪುಂಸಕ ಲಿಂಗದ ಪದಗಳಿಗೆ 'ಕೆ' ಪ್ರತ್ಯಯ ಹತ್ತುತ್ತದೆ.

ಉದಾ:–ಮರಕೆ (ಮರಕ್ಕೆ), ಜನಕೆ (ಜನಕ್ಕೆ), ಅವ್‌ಕೆ (ಅವುಗಳಿಗೆ), ಇದ್‌ಕೆ (ಇದಕ್ಕೆ) ಇತ್ಯಾದಿ.

'ಇ' ಕಾರಾಂತ ಮತ್ತು 'ಎ' ಕಾರಾಂತ ಪದಗಳಿಗೆ 'ಗೆ' ಪ್ರತ್ಯಯ ಹತ್ತುತ್ತದೆ.

ಉದಾ:– ತಂಗೆಗೆ (ತಂಗಿಗೆ), ಕೊತ್ತಿಗೆ (ಬೆಕ್ಕಿಗೆ) ಇತ್ಯಾದಿ.

ಸಂಬಂಧಗಳೊಡನೆ '–ಂಗೆ' ಪ್ರತ್ಯಯ ಬಳಕೆಯಾಗುತ್ತದೆ.

ಉದಾ:– ಅಪ್ಪಂಗೆ, ಅಣ್ಣಂಗೆ, ಅವ್ವಂಗೆ ಇತ್ಯಾದಿ.

ಪಂಚಮಿ ವಿಭಕ್ತಿ ಪ್ರತ್ಯಯ '–ಂದ'

ಉದಾ: ಅಪ್ಪಂದ – ಅಪ್ಪನಿಂದ

ಅದ್‌ರ್‌ಂದ– ಅವಳಿಂದ ಇತ್ಯಾದಿ.

ಇಲ್ಲಿ ಷಷ್ಠಿ ವಿಭಕ್ತಿ ಪ್ರತ್ಯಯ ಮತ್ತು ದ್ವಿತೀಯಾ ವಿಭಕ್ತಿ ಪ್ರತ್ಯಯ ಒಂದೇ ರೂಪದಲ್ಲಿದೆ. '–ನ'

ಉದಾ:– ಅವ್ವನ, ಅಜ್ಜನ ಇತ್ಯಾದಿ.

ಶಿಷ್ಟ ಕನ್ನಡದಲ್ಲಿನ ಸಪ್ತಮಿ ವಿಭಕ್ತಿ ಪ್ರತ್ಯಯ 'ಅಲ್ಲಿ' ಎಂಬುದು ಗೌಡಕನ್ನಡದಲ್ಲಿ '–ಲಿ' ಹಾಗೂ '–ಹಕ್ಕಲೆ' ಎಂಬ ರೂಪಗಳಲ್ಲಿದೆ.

ಉದಾ: ಮಾತ್‌ಲಿ, ಅದರ್‌ಲಿ,

ಅದರಹಕ್ಕಲೆ, ಅವನಹಕ್ಕಲೆ ಇತ್ಯಾದಿ.

ಶಿಷ್ಟಕನ್ನಡದಲ್ಲಿ 'ಆ', 'ಏ' ಎಂಬುದು ಸಂಬೋಧನಾ ವಿಭಕ್ತಿ ಪ್ರತ್ಯಯವಾಗಿದೆ. ಗೌಡಕನ್ನಡದಲ್ಲಿ 'ಆ' ಸಂಬೋಧನಾ ವಿಭಕ್ತಿ ಪ್ರತ್ಯಯವಾಗಿ ಕಂಡುಬಂದಿದೆ.

ಉದಾ:– ದೇವಾ – ದೇವ – ಆ

ಅವ್ವಾ – ಅವ್ವ – ಆ

ರಾಮಾ – ರಾಮ – ಆ ಇತ್ಯಾದಿ.

ಗೌಡಕನ್ನಡದಲ್ಲಿ ವಿಭಕ್ತಿ ಪ್ರತ್ಯಯಗಳ ಪಟ್ಟಿ.

ವಿಭಕ್ತಿಗಳು ಪ್ರತ್ಯಯಗಳು	**ಪದಗಳು**
ಪ್ರಥಮಾ –	ಅವ್ವ
ದ್ವಿತೀಯಾ – ನ	ಅವ್ವನ
ತೃತೀಯಾ – ಂದ	ಅವ್ವಂದ
ಚತುರ್ಥಿ – ಕೆ, ಗೆ, ಂಗೆ	ಅವ್ವಂಗೆ
ಪಂಚಮಿ – ಂದ	ಅವ್ವಂದ
ಷಷ್ಠಿ – ನ	ಅವ್ವನ
ಸಪ್ತಮಿ – ಲಿ/ಹಕ್ಕಲೆ	ಅವ್ವನಹಕ್ಕಲೆ
ಸಂಬೋಧನಾ – ಆ	ಅವ್ವಾ

ಗೌಡ ಕನ್ನಡದಲ್ಲಿ ಆಯಾ ವಿಭಕ್ತಿಯ ಪ್ರತ್ಯಯ ಮತ್ತು ಅದರ ಅರ್ಥವು ಈ ಮೇಲಿನಂತಿದೆ. ಇಲ್ಲಿ ದ್ವಿತೀಯಾ ಮತ್ತು ಷಷ್ಠಿ ವಿಭಕ್ತಿ ಪ್ರತ್ಯಯಗಳು ಏಕರೂಪದಲ್ಲಿರುವುದನ್ನು ಕಾಣಬಹುದು. ಇಲ್ಲಿ ಶಿಷ್ಟ ಕನ್ನಡಕ್ಕೆ ಹೋಲಿಸಿದರೆ ಗೌಡಕನ್ನಡದಲ್ಲಿ ಸಂಕ್ಷೇಪಗೊಂಡಿರುವುದನ್ನು ಗಮನಿಸಬಹುದು.

ಉದಾ:– ಅಂವನ (ಅವನನ್ನು)

ಅಂವಂದ (ಅವನಿಂದ) ಇತ್ಯಾದಿ.

ವಿಶೇಷಣಗಳು:

ಗೌಡ ಕನ್ನಡದಲ್ಲಿನ ವಿಶೇಷಣಗಳನ್ನು ಈ ಕೆಳಗಿನಂತೆ ವಿಂಗಡಿಸಬಹುದು.

ಗುಣವಿಶೇಷಣಗಳು:– ಹೊಸ್‌ದ್, ಹಳೇದ್, ಬಿಸಿ, ತುಂಟ, ಮೆತ್ತಂಗೆ, ರಬಸ, ಕೇಢ್, ಹುಸಾರ್, ಚುರ್‌ಕ್ ಇತ್ಯಾದಿ.

ವರ್ಣ ವಾಚಕ ವಿಶೇಷಣಗಳು:– ಕಠ್ರಂಗೆ, ಬೆಳ್ಳಂಗೆ, ಹಸ್‌ರ್, ಅರ್‌ಸಣ, ಬೆಳಿ, ಕರಿ, ನೀಲಿ, ಕೆಂಪು ಇತ್ಯಾದಿ.

ಪ್ರಮಾಣವಾಚಕ ವಿಶೇಷಣಗಳು:– ತುಂಬ, ಬಾಳ, ಸೊಲ್ಪ, ಹಙ, ಸುಮಾರ್, ಹತ್ತರಸ್ಟ್, ನೂರರಸ್ಟ್ ಇತ್ಯಾದಿ.

ಸಂಖ್ಯಾವಾಚಕ ವಿಶೇಷಣಗಳು:– ಒಂದನೆ, ಎರ್‌ಡನೆ, ಹತ್ತನೆ ಇತ್ಯಾದಿ.

ರುಚಿ ಸೂಚಕ ವಿಶೇಷಣಗಳು:– ಕಂಯಿ, ಹುಳ್ಳಂಗೆ, ಸಿಂಯಿ, ಒಗ್‌ರ್ ಇತ್ಯಾದಿ.

ಆಕಾರ ಸೂಚಕ ವಿಶೇಷಣಗಳು:– ದೊಡ್ಡ, ಸಣ್ಣ, ಚಿಕ್ಕ, ಉದ್ದ, ಗಿಡ್ಡ, ಅಗಲ, ಲಾಚಾರ್, ತೆಳ್ಳಂಗೆ, ತೋರ, ನೆಟ್ಟಂಗೆ, ಕುಳ್ಳು ಇತ್ಯಾದಿ.

ನಿರ್ದೇಶನಾ ಸೂಚಕ ವಿಶೇಷಣಗಳು:– ಓ... ಅಲ್ಲಿ, ಓ... ಇಲ್ಲಿ.

ಅಂತರ ಸೂಚಕ ವಿಶೇಷಣಗಳು:– ದೂರ, ಹತ್ರ, ನಡು, ಕರೆ, ಮೂಲೆ.

ಕ್ರಿಯಾಪದಗಳು:

ಭಾಷೆಯಲ್ಲಿ ನಾಮಪದದಷ್ಟೇ ಪ್ರಧಾನವಾದದ್ದು ಕ್ರಿಯಾಪದ. ಕ್ರಿಯೆಯನ್ನು ಸೂಚಿಸುವ ಪದಗಳೆಲ್ಲವೂ ಕ್ರಿಯಾಪದಗಳೇ ಆಗಿವೆ. ಕ್ರಿಯೆಯನ್ನು ಸೂಚಿಸುವ ಮೂಲ ಪ್ರಕೃತಿ ಅಥವಾ ಧಾತುವಿಗೆ ಆಖ್ಯಾತ ಪ್ರತ್ಯಯಗಳು ಸೇರಿ ಕ್ರಿಯಾಪದವಾಗುತ್ತದೆ. ವಾಕ್ಯದಲ್ಲಿ ಕ್ರಿಯಾಪದವು ಬಹುಮುಖ್ಯವಾದ ಘಟಕವಾಗಿದೆ. ಗೌಡಕನ್ನಡದ ಕ್ರಿಯಾರಚನೆಗಳು ಶಿಷ್ಟ ಕನ್ನಡಕ್ಕಿಂತ ಭಿನ್ನವಾಗಿರುವುದನ್ನು ಕಾಣಬಹುದು.

ಕ್ರಿಯಾಪದದ ಮೂಲ ರೂಪವನ್ನು 'ಕ್ರಿಯಾಪ್ರಕೃತಿ' ಅಥವಾ 'ಧಾತು' ಎಂದು ಕರೆಯುತ್ತೇವೆ. ಶಿಷ್ಟಕನ್ನಡ ಮತ್ತು ಗೌಡಕನ್ನಡದಲ್ಲಿರುವ ಧಾತುಗಳು ಕೆಳಗಿನಂತಿವೆ.

ಶಿಷ್ಟಕನ್ನಡ	ಗೌಡಕನ್ನಡ	
ನೋಡು	ನೋಡ್	
ಮಾಡು	ಮಾಡ್	
ಕೋಡು	ಕೊಡ್	
ಮಲಗು	ಮಲ್‌ಗ್	
ಬಿಡು	ಬುಡು	
ಒರಗು	ತಾಂಗ್	
ಇಡು	ಇಸ್	
ಚಾಚು	ನೀಂಡ್	ಇತ್ಯಾದಿ.

ಶಿಷ್ಟಕನ್ನಡದಂತೆ ಗೌಡಕನ್ನಡದಲ್ಲಿಯೂ ಕಾಲಾರ್ಥಕ, ವಿಧ್ಯರ್ಥಕ, ಸಂಭಾವನಾರ್ಥಕ ಹಾಗೂ ನಿಷೇಧಾರ್ಥಕ ಕ್ರಿಯಾಪದಗಳಿವೆ.

ಆಖ್ಯಾತ ಪ್ರತ್ಯಯಗಳು ವರ್ತಮಾನ, ಭೂತ ಮತ್ತು ಭವಿಷ್ಯತ್ ಕಾಲಗಳಲ್ಲಿ ಧಾತುವಿನೊಂದಿಗೆ ಸೇರಿ ಕಾಲಸೂಚಕ ಪ್ರತ್ಯಯಗಳಾಗಿ ಬಳಕೆಯಾಗುತ್ತದೆ. ಗೌಡಕನ್ನಡದಲ್ಲಿ ವರ್ತಮಾನಕಾಲ ಮತ್ತು ಭೂತ ಕಾಲಗಳಿಗೆ ಏಕರೀತಿಯ ಆಖ್ಯಾತ ಪ್ರತ್ಯಯಗಳಿವೆ. ಇವು ಶಿಷ್ಟ ಕನ್ನಡಕ್ಕಿಂತ ಭಿನ್ನವಾಗಿವೆ.

	ಏಕ	ಬಹು
ಉತ್ತಮ	–ನೆ	ವೆ/ಇವೆ
ಮಧ್ಯಮ	–ಇಯ	–ಅರಿ
ಪ್ರಥಮ(ಪು)	–ದೆ	–ವೆ
(ಸ್ತ್ರೀ)	–ದೆ	–ವೆ
(ನಪುಂ)	–ದೆ	–ವೆ

	ಶಿಷ್ಟಕನ್ನಡ		**ಗೌಡಕನ್ನಡ**	
ಧಾತು	**ಮಾಡು**		**ಮಾಡ್**	
	ಏಕ	**ಬಹು**	**ಏಕ**	**ಬಹು**
ಉತ್ತಮ	ಮಾಡುತ್ತೇನೆ	ಮಾಡುತ್ತೇವೆ	ನಾನ್‌ಮಾಡ್‌ನೆ	ಮಾಡ್‌ವೆ
ಮಧ್ಯಮ	ಮಾಡುತ್ತೀಯ	ಮಾಡುತ್ತೀರಿ	ಮಾಡಿಯ	ಮಾಡ್‌ವರಿ
ಪ್ರಥಮ(ಪು)	ಮಾಡುತ್ತಾನೆ	ಮಾಡುತ್ತಾರೆ	ಮಾಡ್‌ದೆ	ಮಾಡ್‌ವೆ
(ಸ್ತ್ರೀ)	ಮಾಡುತ್ತಾಳೆ	ಮಾಡುತ್ತಾರೆ	ಮಾಡ್‌ದೆ	ಮಾಡ್‌ವೆ
(ನಪುಂ)	ಮಾಡುತ್ತದೆ	ಮಾಡುತ್ತವೆ.	ಮಾಡ್‌ದೆ	ಮಾಡ್‌ವೆ.

ಭೂತಕಾಲ:

	ಏಕ	**ಬಹು**
ಉತ್ತಮ	–ದೆ	–ದೊ
ಮಧ್ಯಮ	–ದೆ	–ದರಿ
ಪ್ರಥಮ (ಪು)	–ತ್	–ದೊ
(ಸ್ತ್ರೀ)	–ತ್	–ದೊ
(ನಪುಂ)	–ತ್	–ದೊ

ಧಾತು: ಮಾಡ್

ಉತ್ತಮ	ಮಾಡ್‌ದೆ	ಮಾಡ್‌ದೊ
ಮಧ್ಯಮ	ಮಾಡ್‌ದೆ	ಮಾಡ್‌ದರಿ
ಪ್ರಥಮ (ಪು)	ಮಾಡ್‌ತ್	ಮಾಡ್‌ದೊ

(ಸ್ತ್ರೀ)	ಮಾಡ್‌ತ್	ಮಾಡ್‌ದೊ
(ನಪುಂ)	ಮಾಡ್‌ತ್	ಮಾಡ್‌ದೊ

ವಿಧ್ಯರ್ಥಕ ಕ್ರಿಯಾಪದಗಳು:

ಪ್ರಾರ್ಥನೆ, ಆಶೀರ್ವಾದ, ಆಶಯ, ಹಾರೈಕೆ, ಆಜ್ಞೆ ಮುಂತಾದ ಭಾವಗಳನ್ನು ಸೂಚಿಸುವ ಕ್ರಿಯಾಪದಗಳನ್ನು ವಿಧ್ಯರ್ಥಕಗಳೆನ್ನುವರು.

ಗೌಡಕನ್ನಡ

	ಏಕ	**ಬಹು**
ಉತ್ತಮ	ಮಾಡ್‌ನೆ	ಮಾಡನೊ
ಮಧ್ಯಮ	ಮಾಡ್	ಮಾಡಿ
ಪ್ರಥಮ (ಪು)	ಮಾಡ್‌ಲಿ	ಮಾಡ್‌ಲಿ
(ಸ್ತ್ರೀ)	ಮಾಡ್‌ಲಿ	ಮಾಡ್‌ಲಿ
(ನಪುಂ)	ಮಾಡ್‌ಲಿ	ಮಾಡ್‌ಲಿ

ಇಲ್ಲಿ ವಿಧ್ಯರ್ಥಕ ರೂಪ ಉತ್ತಮ ಪುರುಷ ಏಕವಚನದಲ್ಲಿ '–ನೆ' ಮತ್ತು ಬಹುವಚನದಲ್ಲಿ '–ನೊ' ಪ್ರತ್ಯಯ ಗೌಡಕನ್ನಡದಲ್ಲಿ ಶಿಷ್ಟಕನ್ನಡಕ್ಕಿಂತ ಭಿನ್ನವಾಗಿದೆ. ಗೌಡಕನ್ನಡದಲ್ಲಿ ಹಾರೈಕೆ, ಕೋರಿಕೆ, ಅನುಮತಿ, ಆಜ್ಞೆ, ಉದ್ದೇಶ. ಮೊದಲಾದ ಅರ್ಥಗಳನ್ನು ತೋರಿಸುವ ವಿಧ್ಯರ್ಥಕ ಕ್ರಿಯಾಪದಗಳು ಕೆಳಗಿನಂತಿವೆ.

ಹಾರೈಕೆ: ಹೋದ ಕಾರ್ಯ ಲಾಯ್‌ಕ ನಡಿಯಲಿ.

(ಹೋದ ಕೆಲಸ ಚೆನ್ನಾಗಿ ನಡೆಯಲಿ)

ಅನುಮತಿ: ನೀವ್ ಹೊರಡಿ. (ನೀವು ಹೊರಡಿ)

ಉದ್ದೇಶ: ಇನ್ನ್ ನಿಲ್‌ಗೊನೊ. (ಇನ್ನು ಮಲಗೋಣ)

ಆಜ್ಞೆ : ನಾಳೆ ಎಲ್ಲವೂ ಕೆಲ್ಸಕೆ ಬರೋಕು.

(ನಾಳೆ ಎಲ್ಲರೂ ಕೆಲಸಕ್ಕೆ ಬರಬೇಕು)

ಕೋರಿಕೆ/ಆಶಯ: ನೀವ್ ಬಂದ್ ಕಾರ್ಯ ನಡ್‌ಸಿ ಕೊಡೋಕು

(ನೀವು ಬಂದು ಕಾರ್ಯವನ್ನು ನಡೆಸಿ ಕೊಡಬೇಕು)

ನಿಷೇದಾರ್ಥ ಕ್ರಿಯಾರೂಪಗಳು:

ಕ್ರಿಯೆಯು ನಡೆಯಲಿಲ್ಲ ಅಥವಾ ನಡೆಯುವುದಿಲ್ಲ ಎಂಬ ಅರ್ಥವನ್ನು ತಿಳಿಸುವ ಕ್ರಿಯಾಪದಗಳಿಗೆ ನಿಷೇದಾರ್ಥಕ ಕ್ರಿಯಾಪದಗಳು ಎನ್ನುವರು. ಗೌಡಕನ್ನಡದಲ್ಲಿ ನಿಷೇದಾರ್ಥ ಸೂಚಿಸುವಾಗ ಧಾತುವಿಗೆ '-ಲೆ', '-ಇಲೆ' ಅಥವಾ '-ಉಲೆ' ಪ್ರತ್ಯಯ ಮಾತ್ರ ಹತ್ತುತ್ತವೆ.

	ಗೌಡಕನ್ನಡ		ಶಿಷ್ಟಕನ್ನಡ	
	ಏಕ	ಬಹು	ಏಕ	ಬಹು
ಉತ್ತಮ	ಮಾಡ್‌ಲೆ	ಮಾಡಿಕಿಲೆ	ಮಾಡುವುದಿಲ್ಲ	ಮಾಡುವುದಿಲ್ಲ.
ಮಧ್ಯಮ	ಮಾಡ್‌ದುಲೆ	ಮಾಡಿಕಿಲೆ	ಮಾಡುವುದಿಲ್ಲ	ಮಾಡುವುದಿಲ್ಲ.
ಪ್ರಥಮ(ಪು)	ಮಾಡ್‌ಲೆ	ಮಾಡ್‌ಲೆ	ಮಾಡುವುದಿಲ್ಲ	ಮಾಡುವುದಿಲ್ಲ.
(ಸ್ತ್ರೀ)	ಮಾಡ್‌ದುಲೆ	ಮಾಡಿಕಿಲೆ	ಮಾಡುವುದಿಲ್ಲ	ಮಾಡುವುದಿಲ್ಲ.
(ನಪುಂ)	ಮಾಡ್‌ದುಲೆ	ಮಾಡಿಕಿಲೆ	ಮಾಡುವುದಿಲ್ಲ	ಮಾಡುವುದಿಲ್ಲ.

ಗೌಡಕನ್ನಡದ ಕೆಲವು ಧಾತುಗಳ ನಿಷೇದಾರ್ಥ ರೂಪಗಳು:

ಧಾತು	ನಿಷೇದಾರ್ಥಕ ರೂಪ
ಸಿಕ್ಕ್ (ಸಿಗು)	ಸಿಕ್ಕುಲೆ (ಸಿಗುವುದಿಲ್ಲ)
ನೋಡ್ (ನೋಡು)	ನೋಡ್‌ದುಲೆ (ನೋಡುವುದಿಲ್ಲ)
ಕೊಡ್ (ಕೊಡು)	ಕೊಡ್‌ದುಲೆ (ಕೊಡುವುದಿಲ್ಲ)
ಹೋಗ್ (ಹೋಗು)	ಹೋದುಲೆ/ಹೋಲೆ/ಹೋತ್‌ಲೆ(ಹೋಗುವುದಿಲ್ಲ)
ತಪ್ಪು (ತಪ್ಪು)	ತಪ್ಪುಲೆ/ತಪ್ಪುದುಲೆ (ತಪ್ಪುವುದಿಲ್ಲ)
ಕೇಳ್ (ಕೇಳು)	ಕೇಳ್‌ತ್‌ಲೆ/ಕೇಳ್‌ದುಲೆ (ಕೇಳುವುದಿಲ್ಲ)
ಹೇಳ್ (ಹೇಳು)	ಹೇಳ್‌ತ್‌ಲೆ/ಹೇಳ್‌ದುಲೆ (ಹೇಳುವುದಿಲ್ಲ)
ಬಾ (ಬರು)	ಬಾತ್‌ಲೆ/ಬಾದುಲೆ
ಸೋರ್ (ಸೋರು)	ಸೋರುಲೆ/ಸೋರ್‌ದುಲೆ (ಸೋರುವುದಿಲ್ಲ) ಇತ್ಯಾದಿ.

ಗೌಡಕನ್ನಡದಲ್ಲಿ ನಿಷೇದಾರ್ಥ ಪ್ರತ್ಯಯಗಳು ಹತ್ತುವಾಗ 'ತರು' 'ಬರು' ಎಂಬ ಧಾತುಗಳ ಪದಾದಿಯ ಸ್ವರ ದೀರ್ಘವಾಗುತ್ತದೆ.

ಉದಾ:

ಬಾಕಿಲೆ (ಬರುವುದಿಲ್ಲ / ಬರಲಿಕ್ಕಿಲ್ಲ)

ತಾಕಿಲೆ (ತರುವುದಿಲ್ಲ / ತರಲಿಕ್ಕಿಲ್ಲ)

ಬಾದುಲೆ (ಬರುವುದಿಲ್ಲ /ಬರಲಿಕ್ಕಿಲ್ಲ)

ತಾದುಲೆ (ತರುವುದಿಲ್ಲ / ತರಲಿಕ್ಕಿಲ್ಲ)

ಇಲ್ಲಿನ ರೂಪಗಳಲ್ಲಿ ಕ್ರಿಯೆಯು ನಡೆದಿಲ್ಲ ಅಥವಾ ನಡೆಯುತ್ತಿಲ್ಲ ಎಂದು ತೋರಿದರೂ ಮುಂದೆ ನಡೆಯಬಹುದು ಎಂದೂ ಇವು ಸೂಚಿಸುತ್ತವೆ.

ಸಂಭಾವನಾರ್ಥಕ ಕ್ರಿಯಾಪದ:

ಕ್ರಿಯೆಯು ನಡೆಯುವಲ್ಲಿ ಸಂಶಯವನ್ನು ಅಥವಾ ನಡೆಯಬಹುದೆಂಬ ಊಹೆಯನ್ನು ಸೂಚಿಸುವ ಕ್ರಿಯಾಪದಗಳು ಸಂಭಾವನಾರ್ಥಕ ಕ್ರಿಯಾಪದಗಳು. ಶಿಷ್ಟಕನ್ನಡದಲ್ಲಿ 'ಆನು, ಏನು, ಏವು, ಆರು, ಈಯೆ', ಮೊದಲಾದ ಆಖ್ಯಾತ ಪ್ರತ್ಯಯಗಳು ಧಾತುವಿಗೆ ಸೇರಿ ಸಂಭಾವನಾರ್ಥಕ ಕ್ರಿಯಾಪದಗಳಾಗಿವೆ.

ಗೌಡಕನ್ನಡದಲ್ಲಿ 'ಅಮೊ' 'ಉದು' 'ಉವೊ' ಎಂಬ ಪ್ರತ್ಯಯಗಳು ಧಾತುವಿಗೆ ಸೇರಿ ಸಂಭಾವನಾರ್ಥಕ ಕ್ರಿಯಾಪದಗಳಾಗುತ್ತವೆ.

ಉವೊ– ಎತ್ತಿರ್‌ವೊ (ಎತ್+ಇರ್+ಉವೊ)–ತಲುಪಿರಬಹುದು.

ಬರ್‌ವೊ (ಬರ್+ಉವೊ)–ಬರಬಹುದು.

ಉದು– ಒಪ್ಪುದು (ಒಪ್ಪ್+ಉದು)–ಒಪ್ಪಬಹುದು.

ಬಾದು (ಬಾ+ಉದು)–ಬರಬಹುದು

ಮಾಡುದು (ಮಾಡ್+ಉದು)–ಮಾಡಬಹುದು.

ಅಮೊ– ಮಾಡಮೊ (ಮಾಡ್+ಅಮೊ)–ಮಾಡೋಣ.

ಕೇಳಮೊ (ಕೇಳ್+ಅಮೊ)–ಕೇಳೋಣ. ಇತ್ಯಾದಿ.

ಗೌಡಕನ್ನಡದ ಕ್ರಿಯಾರಚನೆಗಳ ವೈಶಿಷ್ಟ್ಯ:

ಗೌಡಕನ್ನಡದ ಕ್ರಿಯಾರಚನೆಗಳು ಶಿಷ್ಟಕನ್ನಡಕ್ಕಿಂತ ಭಿನ್ನವಾಗಿವೆ. ಅವುಗಳನ್ನು ಈ ಕೆಳಗಿನಂತೆ ವರ್ಗೀಕರಿಸಲಾಗಿದೆ.

೧. ಶಿಷ್ಟಕನ್ನಡದ ಕ್ರಿಯಾರಚನೆಗಳಲ್ಲಿ 'ಉ'ಕಾರಾಂತ ಕ್ರಿಯಾರಚನೆಗಳು ಗೌಡಕನ್ನಡದಲ್ಲಿ

ವ್ಯಂಜನಾಂತದಂತೆ ಗೋಚರಿಸಿದರೂ ಅಂತ್ಯದಲ್ಲಿ 'ಇ' ಧ್ವನಿಯ ಉಪಧ್ವನಿಯಂತೆ ಬಳಕೆಯಾಗುತ್ತದೆ. ಇದನ್ನು ಗೌಡಕನ್ನಡದಲ್ಲಿ ɨ ಸಂಜ್ಞೆಯಿಂದ ತೋರಿಸಲಾಗುತ್ತದೆ.

ಉದಾ:– u > ɨ

ಶಿಷ್ಟಕನ್ನಡ	ಗೌಡಕನ್ನಡ
ಕೆತ್ತು	ಕೆತ್ɨ
ಬಾಚು	ಬಾಚ್ɨ
ಮೆತ್ತು	ಮೆತ್ತ್ɨ
ಕೇಳು	ಕೇಳ್ɨ
ನುಂಗು	ನುಂಗ್ɨ
ಕಟ್ಟು	ಕಟ್ಟ್ɨ
ಮಾಡು	ಮಾಡ್ɨ

೨. ಶಿಷ್ಟಕನ್ನಡದ 'ಎ' ಕಾರಾಂತ ಕ್ರಿಯಾರಚನೆಗಳು ಗೌಡಕನ್ನಡದಲ್ಲಿ 'ಇ' ಕಾರಾಂತಗೊಂಡು ಬಳಕೆಯಾಗುತ್ತವೆ. ಈ ಪ್ರಕ್ರಿಯೆಯು ಶಿಷ್ಟ ಕನ್ನಡದ ಆಡು ಮಾತಿನಲ್ಲಿರುವುದನ್ನು ಗಮನಿಸಬಹುದು.

ಉದಾ:– e > i ಎ>ಇ

ಶಿಷ್ಟಕನ್ನಡ	ಗೌಡಕನ್ನಡ
ಕಡೆ	ಕಡಿ
ತಡೆ	ತಡಿ
ಬೆಳೆ	ಬೆಳಿ
ಹೊಳೆ	ಹೊಳಿ
ಕೆರೆ	ಕೆರಿ
ತೊಳೆ	ತೊಳಿ
ಮಸೆ	ಮೊಸಿ ಇತ್ಯಾದಿ.

೩. ಶಿಷ್ಟಕನ್ನಡದ ಕ್ರಿಯಾರಚನೆಗಳ ಪದಾದಿಯ ಸ್ವರ 'ಅ' ಗೌಡಕನ್ನಡದಲ್ಲಿ 'ಒ' ಆಗುತ್ತದೆ. ಇದು ಕ್ರಿಯಾಪದಗಳಲ್ಲಿ ಮಾತ್ರವಲ್ಲದೆ ಇತರ ಪದಗಳಲ್ಲೂ ಕಾಣಿಸಿಕೊಳ್ಳುತ್ತದೆ.

ಉದಾ: **a > o** **ಅ>ಒ**

ಶಿಷ್ಟಕನ್ನಡ	ಗೌಡಕನ್ನಡ
ತಬ್ಬು	ತೊಬ್ಬು

ಬದುಕು	ಬೊದುಕ್	
ಮಡಗು	ಮೊಡ್ಗ್	
ಬಗ್ಗು	ಬೊಗ್ಗು	
ಬಯ್ಯು	ಬೊಯಿ	
ಬಡಿ	ಬೊಡಿ	
ಮಗಚು	ಮೊಗ್ಚ್	ಇತ್ಯಾದಿ.

೪. ಶಿಷ್ಟಕನ್ನಡದ ಕ್ರಿಯಾರಚನೆಗಳ ಪದಾದಿಯ ಸ್ವರ 'ಉ' ಇರುವುದು ಗೌಡಕನ್ನಡದಲ್ಲಿ 'ಒ' ಆಗುತ್ತದೆ.

ಉದಾ: **u>o ಉ>ಒ**

ಶಿಷ್ಟಕನ್ನಡ	**ಗೌಡಕನ್ನಡ**	
ಸುರಿ	ಸೊರಿ	
ಕುದಿ	ಕೊದಿ	
ಕುಣಿ	ಕೊಣಿ	
ಉಳಿ	ಒಳಿ	ಇತ್ಯಾದಿ.

೫. ಶಿಷ್ಟ ಕನ್ನಡದ 'ಉ' ಕಾರಂತ ಕ್ರಿಯಾರಚನೆಗಳು ಗೌಡಕನ್ನಡದಲ್ಲಿ 'ಇ' ಕಾರಂತವಾಗಿ ಕಾಣಿಸಿಕೊಳ್ಳುತ್ತದೆ.

ಉದಾ: **u>i** **ಉ>ಇ**

ಶಿಷ್ಟಕನ್ನಡ	**ಗೌಡಕನ್ನಡ**	
ಉಗುಳು	ಉಗಿ	
ಹೊಯ್ಯು	ಹೊಯಿ	
ನೇಯು	ನೇಯಿ	ಇತ್ಯಾದಿ.

೬. ಶಿಷ್ಟಕನ್ನಡದ ಪದಾದಿಯ ದೀರ್ಘಾಕ್ಷರ ಕ್ರಿಯಾಪದಗಳಿಗೆ ಗೌಡಕನ್ನಡದಲ್ಲಿ ಬಿಂದು/ಅನುಸ್ವರ ಬರುತ್ತದೆ. ಇಲ್ಲಿ ಹಳಗನ್ನಡ ಕ್ರಿಯಾರಚನೆಗಳ ಮಾದರಿಯು ಗೌಡಕನ್ನಡದಲ್ಲಿ ಇನ್ನೂ ಉಳಿದಿರುವುದನ್ನು ಕಾಣಬಹುದು.

ಉದಾ:

ಶಿಷ್ಟಕನ್ನಡ	**ಗೌಡಕನ್ನಡ**
ನೀಡು	ನೀಂಡ್
ಸಾಕು	ಸಾಂಕ್
ತೋಡು	ತೋಂಡ್

ತಾಗು	ತಾಂಗ್	
ಸೋಕು	ಸೋಂಕ್	ಇತ್ಯಾದಿ.

೭. ಶಿಷ್ಟ ಕನ್ನಡದ ಕ್ರಿಯಾರಚನೆಗೆ ಪ್ರತಿಯಾಗಿ ಗೌಡಕನ್ನಡದಲ್ಲಿ ಭಿನ್ನವಾದ ಕ್ರಿಯಾರಚನೆಗಳನ್ನು ಕಾಣಬಹುದು.

ಉದಾ:	**ಶಿಷ್ಟಕನ್ನಡ**	**ಗೌಡಕನ್ನಡ**	
	ಅದ್ದು	ಕಂತ್‌ಸ್	
	ಉರುಳು	ಹೊಣ್ಕ್	
	ಎರಚು	ಚೋಂಪ್	
	ಉಮ್ಮಳ	ದುಕ್ಕುಡ್ಸು	
	ತಣಿ	ಚೆಣಿ	
	ಮದುಡು	ಮುರುಂಟು	
	ನರಳು	ನರ್ಕ್	
	ತೇಗು	ಹುಳಿಯಾರಿಕೆ	
	ಎತ್ತು	ನೇಚ್	
	ಎಣಿಸು	ಲೆಕ್ಕಮಾಡ್	
	ಕಿವಿಚು	ಹಿಂಚ್	
	ಚಿಮುಕಿಸು	ಹನ್‌ಕ್ಸ್	ಇತ್ಯಾದಿ.

೮. ಗೌಡಕನ್ನಡದ ಕೆಲವು ಕ್ರಿಯಾರಚನೆಗಳು ಯಾವುದೇ ಬದಲಾವಣೆಯಿಲ್ಲದೆ ಶಿಷ್ಟಕನ್ನಡದ ರೂಪವನ್ನೇ ಹೊಂದಿರುವುದನ್ನು ಕಾಣಬಹುದು.

ಉದಾ:	**ಶಿಷ್ಟಕನ್ನಡ**	**ಗೌಡಕನ್ನಡ**
	ಉಣು	ಉಣು
	ಊದು	ಊದು
	ಗೋರು	ಗೋರು
	ಬಿರಿ	ಬಿರಿ
	ಮುಡಿ	ಮುಡಿ
	ಸುಳಿ	ಸುಳಿ
	ನೂಕು	ನೂಕು
	ಮುಕ್ಕು	ಮುಕ್ಕು

ಓದು	ಓದು
ಗುದ್ದು	ಗುದ್ದು ಇತ್ಯಾದಿ.

ಇವುಗಳಲ್ಲಿ ಕೆಲವು 'ಉ' ಕಾರಾಂತವಾದರೆ, ಕೆಲವು 'ಇ' ಕಾರಂತ ಕ್ರಿಯಾರಚನೆಗಳೂ ಇವೆ.

೯. ಶಿಷ್ಟ ಕನ್ನಡದಲ್ಲಿ ಇಲ್ಲದ ಗೌಡಕನ್ನಡದಲ್ಲಿ ಮಾತ್ರ ಬಳಕೆಯಾಗುವ ಅನೇಕ ಕ್ರಿಯಾರಚನೆಗಳು ಗೌಡಕನ್ನಡದಲ್ಲಿವೆ. ಹಾಗೂ ಇವು ವಿಶಿಷ್ಟವಾದುದಾಗಿವೆ.

ಉದಾ:–	**ಶಿಷ್ಟಕನ್ನಡ**	**ಗೌಡಕನ್ನಡ**
	ಕುಳಿತುಕೊ	ಕುದ್ದರ್
	ಕುಣಿದಾಡು	ಚುಳ್ಳ್
	ಎರಚು	ಚೋಂಪ್
	ಡಿಕ್ಕಿಹೊಡೆ	ಹಾಂಟ್
	ತಗಲು/ತಾಕು	ಹೆಟ್ಟ್
	ಉರುಳು	ಹೊಣ್ಕ್
	ಕೇರು	ಹೊಡ್ಕ್ ಇತ್ಯಾದಿ.

ಇತರೆ ಹಳಗನ್ನಡದ ಸಬಿಂದುಕ ಪದಗಳು ಗೌಡಕನ್ನಡದಲ್ಲಿ ಅಬಿಂದುಕಗಳಾಗಿವೆ. ಗೌಡ ಕನ್ನಡದಲ್ಲಿ ಇಂದು ಈ ಕೆಳಗಿನ ಎರಡೂ ರೂಪಗಳು ಬಳಕೆಯಲ್ಲಿವೆ.

ಉದಾ:	**ಹಳಗನ್ನಡ**	**ನಡುಗನ್ನಡ**	**ಗೌಡಕನ್ನಡ**
	ಅಡಂಗು	ಅಡಗು	ಅಡ್‌ಗ್/ಅಡ್ಂಗ್
	ಕಲಂಕು	ಕಲಕು	ಕಲ್‌ಕ್/ಕಲ್ಂಕ್

• ಕೆಲವು ಹಳಗನ್ನಡ ಪದಗಳು ಗೌಡಕನ್ನಡದಲ್ಲಿ ಯಾವುದೇ ಬದಲಾವಣೆಯಿಲ್ಲದೆ ಅದೇ ರೂಪದಲ್ಲಿ ಬಳಕೆಯಾಗುತ್ತವೆ.

ಉದಾಹರಣೆಗೆ : ಕೊತ್ತಿ, ಕೂಸು, ಗಡ, ಹೈದ ಇತ್ಯಾದಿ.

• ಕೆಲವು ಹಳಗನ್ನಡ ಪದಗಳ ಕೊನೆಯ ಅಕ್ಷರಗಳು ಲೋಪವಾಗಿ ಗೌಡಕನ್ನಡದಲ್ಲಿ ಬಳಕೆಯಾಗುತ್ತದೆ. ಇದು ಉಚ್ಚಾರಣೆಯ ಸೌಲಭ್ಯಕ್ಕಾಗಿ ಆಗಿರಬಹುದೆಂದು ಊಹಿಸಲಾಗಿದೆ. ಉದಾಹರಣೆಗೆ

ಹಳಗನ್ನಡ	**ಗೌಡಕನ್ನಡ**
ಮಗಳ್	ಮಗ

ಮಕ್ಕಳ್	ಮಕ್ಕ
ಅವನ್	ಅಂವ
ಮರಗಳ್	ಮರಗ ಇತ್ಯಾದಿ.

• ಶಿಷ್ಟ ಕನ್ನಡದ ವರ್ತಮಾನ ಕಾಲದ ಕ್ರಿಯಾಪದಗಳು ಗೌಡಕನ್ನಡದಲ್ಲಿ ಸಂಕ್ಷೇಪಗೊಳ್ಳುತ್ತದೆ. ಉದಾಹರಣೆಗೆ

ಶಿಷ್ಟಕನ್ನಡ	**ಗೌಡಕನ್ನಡ**
ಬರಬೇಕು	ಬಾಕು
ಹೋಗಬೇಕು	ಹೋಕು
ತರುತ್ತೇನೆ	ತನ್ನೆ
ಹೋಗುತ್ತೇನೆ	ಹೋನೆ
ಬರುತ್ತೇನೆ	ಬನ್ನೆ ಇತ್ಯಾದಿ.

• ಶಿಷ್ಟಕನ್ನಡದ ಕೆಲವು ಪದಗಳು ಗೌಡಕನ್ನಡದಲ್ಲಿ ಸ್ವಲ್ಪ ಬದಲಾವಣೆಗಳೊಂದಿಗೆ ಅಥವಾ ಅದೇ ರೂಪಾರ್ಥಗಳೊಂದಿಗೆ ಬಳಕೆಯಲ್ಲಿದೆ.

ಉದಾ:	**ಶಿಷ್ಟಕನ್ನಡ**	**ಗೌಡಕನ್ನಡ**
	ಹುರಿ	ಹೊರಿ
	ಹನಿ	ಹನಿ
	ಬಗ್ಗು	ಬೊಗ್ಗು ಇತ್ಯಾದಿ.

• ಹವ್ಯಕ ಭಾಷೆಯ ಕೆಲವು ಪದಗಳಾದ 'ಹೋತ್, ಹೆರ್ಕ್, ಕೂಸು' ಇತ್ಯಾದಿ ಪದಗಳು ಗೌಡಕನ್ನಡದಲ್ಲಿ ಬಳಕೆಯಲ್ಲಿದೆ.

ಮಡಿಕೇರಿಯ ಕನ್ನಡವು ಕರಾವಳಿ ಕನ್ನಡಕ್ಕೆ ಸೇರಿದುದಾಗಿದೆ. ಇಲ್ಲಿ 'ಇ' ಮತ್ತು 'ಉ' ಸ್ವರಗಳು 'ಎ' ಮತ್ತು 'ಒ' ಸ್ವರಗಳಾಗಿ ಬಳಕೆಗೊಳ್ಳುವುದು 'ಕರಾವಳಿ ಕನ್ನಡದ' ವೈಶಿಷ್ಟ್ಯವಾಗಿದೆ.

ಕೊಡಗಿನ ಗೌಡಕನ್ನಡದಲ್ಲಿ ಈ ರೂಪಗಳನ್ನು ಕಾಣಬಹುದು.

ಉದಾ:–

ಶಿಷ್ಟಕನ್ನಡ	**ಕರಾವಳಿ ಕನ್ನಡ**	**ಗೌಡಕನ್ನಡ**
ಕಿವಿ	ಕೆಮಿ	ಕೆಮಿ
ಬಿಳಿ	ಬೆಳಿ	ಬೆಳಿ

ಇಲಿ	ಎಲಿ	ಎಲಿ
ತುರಿಸು	ತೊರ್ಸು	ತೊರ್ಸು
ಸುರಿ	ಸೊರಿ	ಸೊರಿ
ಕುಣಿ	ಕೊಣಿ	ಕೊಣಿ
ಹುರಿ	ಹೊರಿ	ಹೊರಿ ಇತ್ಯಾದಿ.

ಇವಲ್ಲದೇ ಕರಾವಳಿ ಕನ್ನಡದ ವಿಶಿಷ್ಟ ಪ್ರಯೋಗಗಳ ರೂಪವು ಗೌಡಕನ್ನಡದಲ್ಲಿ ಸಾಕಷ್ಟು ಕಂಡು ಬಂದಿದೆ. ಉದಾಹರಣೆಗೆ

ಕರಾವಳಿ ಕನ್ನಡ	**ಗೌಡಕನ್ನಡ**	**ಶಿಷ್ಟಕನ್ನಡ**
ಕೊಡುದುಲೆ	ಕೊಡ್‌ದುಲೆ	ಕೊಡುವುದಿಲ್ಲ
ಹೋವೋನೋ	ಹೋವೋನೋ	ಹೋಗೋಣ
ಕೊಡುಕುಲೆ	ಕೊಡಿಕಿಲೆ	ಕೊಡಲಿಕ್ಕಿಲ್ಲ
ತಡಿನಿ	ತಡಿನಿ	ತಡೆಯಿರಿ
ಕುಡಿನಿ	ಕುಡಿನಿ	ಕುಡಿಯಿರಿ
ಎಳಿನಿ	ಎಳಿನಿ	ಎಳೆಯಿರಿ
ಮಾಡ್ಕು	ಮಾಡೋಕು	ಮಾಡಬೇಕು
ಇರೆಕ್ಕು	ಇರೋಕು	ಇರಬೇಕು
ಹೋಕು	ಹೋಕು	ಹೋಗಬೇಕು
ಕೊಟ್ಟುತುಲೆ	ಕೊಟ್ಟತ್‌ಲೆ	ಕೊಡಲಿಲ್ಲ ಇತ್ಯಾದಿ

ಈ ರೀತಿಯಲ್ಲಿ ಕೊಡಗಿನ ಜನಾಂಗೀಯ ನೆಲೆಯಲ್ಲಿ ಮತ್ತು ಕೌಟುಂಬಿಕ ನೆಲೆಯಲ್ಲಿ ಬಳಕೆಯಾಗುತ್ತಿರುವ ಹಾಗೂ ಕನ್ನಡವನ್ನು ತನ್ನ ಲಿಪಿಯಾಗಿ ಹೊಂದಿರುವ ಗೌಡಕನ್ನಡವು ಶಿಷ್ಟಕನ್ನಡಕ್ಕಿಂತ ಅನೇಕ ರೀತಿಯಲ್ಲಿ ಭಿನ್ನತೆಯನ್ನು ಹೊಂದಿದ್ದು ಕನ್ನಡದ ಒಂದು ಪ್ರಭೇದವೆನಿಸಿಕೊಂಡಿದೆ.

ಅಡಿಟಿಪ್ಪಣಿಗಳು

೧. Kushalappa Gowda K., Gowda Kannada.

೨. ವೀಳ್ಯ : ಗೌಡಕನ್ನಡ ಎಂಬ ಕನ್ನಡ ಪ್ರಭೇದ : ದ.ಕ ಮತ್ತು ಕೊಡಗು ಜಿಲ್ಲಾ ಸಮ್ಮೇಳನಾ ಸ್ಮರಣ ಸಂಚಿಕೆ.

೩. ಕೊಡಗು ಗೌಡ ಸಮುದಾಯ, ಸಾಂಸ್ಕೃತಿಕ ಅನನ್ಯತೆ ಮತ್ತು ಚಲನಶೀಲತೆ : ಸರಸ್ವತಿ ಪ್ರಕಾಶ್ ಕೋರನ.

೪. ಕನ್ನಡ ಮಧ್ಯಮ ವ್ಯಾಕರಣ : ಶ್ರೀ ಕಂಠಯ್ಯ ತೀ.ನಂ.

೫. ಕನ್ನಡದಲ್ಲಿ ಪ್ರತ್ಯಯಗಳು, ಸಾಂಬಮೂರ್ತಿ : ೨೦೦೬

೬. ಗೌಡಕನ್ನಡದ ಕ್ರಿಯಾರಚನೆಗಳು : ಲಾವಣ್ಯ ಸಿ.ಪಿ. (ಎಂ.ಫಿಲ್. ನಿಬಂಧ)

೭. ಭಾಷೆ ವಿಶ್ವಕೋಶ : ಕೆ.ವಿ ನಾರಾಯಣ. ೦

ಅಧ್ಯಾಯ-೪

ಗೌಡ ಕನ್ನಡದ ಭಾಷಿಕ ನೆಲೆಗಳು

ಅಧ್ಯಾಯ ನಾಲ್ಕು

ಗೌಡ ಕನ್ನಡದ ಭಾಷಿಕ ನೆಲೆಗಳು

೪.೧. ಪೀಠಿಕೆ

ಭಾಷಾವಿಜ್ಞಾನಿಗಳು, ಸಮಾಜಶಾಸ್ತ್ರಜ್ಞರು, ಮಾನವಶಾಸ್ತ್ರಜ್ಞರು ಮತ್ತು ಉಪಭಾಷಾ ವಿಜ್ಞಾನಿಗಳು ಸಮಾಜ ಮತ್ತು ಸಂಸ್ಕೃತಿಯಲ್ಲಿ ಅಡಕಗೊಂಡಿರುವ ಭಾಷೆಯ ಅನನ್ಯತೆಯನ್ನು ಕಂಡುಹಿಡಿಯಲು ಮಾಡಿದ ಪ್ರಯತ್ನಗಳ ಫಲವಾಗಿ 'ಸಾಮಾಜಿಕ ಭಾಷಾವಿಜ್ಞಾನ' (sociolinguistics) ಎಂಬ ಹೊಸಶಾಖೆ ಭಾಷಾವಿಜ್ಞಾನದಲ್ಲಿ ತಲೆಯೆತ್ತಿತು. 'sociolinguistics' ಎಂಬ ಹೆಸರನ್ನು ಮೊದಲು ಬಳಸಿದ ಕೀರ್ತಿ ಹ್ಯಾವರ್ ಸಿ. ಕ್ಯೂರಿ ಅವರಿಗೆ ಸಲ್ಲುತ್ತದೆ. ಅವರು ೧೯೫೨ರಲ್ಲಿ 'South speech journal'ಗೆ ಬರೆದ 'A projection of sociolinguistics; the relationship of speech to social status' ಎಂಬ ಲೇಖನದಲ್ಲಿ ಮೊದಲಬಾರಿಗೆ 'sociolinguistics' ಎಂಬ ಹೆಸರನ್ನು ದಾಖಲಿಸಿದ್ದಾರೆ[೧].

ಸಮಾಜ ಮತ್ತು ಸಂಸ್ಕೃತಿಯಲ್ಲಿ ಅಡಕಗೊಂಡಿರುವ ಭಾಷಾ ನಮೂನೆಯ ವಿಶ್ಲೇಷಣೆಯೇ ಸಾಮಾಜಿಕ ಭಾಷಾ ವಿಜ್ಞಾನದ ಅಧ್ಯಯನದ ವಿಷಯ. ಸಮಾಜ ಎನ್ನುವುದು ಸಾಮಾಜಿಕ ಸಂಬಂಧಗಳಿಂದ ನೇಯ್ದ ಬಲೆ. ಈ ಸಾಮಾಜಿಕ ಸಂಬಂಧವನ್ನು ನೇಯ್ದಿರುವ ಮುಖ್ಯ ಅಂಶ ಭಾಷೆ. ಹೀಗಾಗಿ ಭಾಷೆ ಎನ್ನುವುದು ಸಮಾಜದ ಅನಿವಾರ್ಯ ಅಂಗ. ಆದುದರಿಂದ ಭಾಷೆಯ ಹೊರತಾದ ಸಮಾಜವನ್ನಾಗಲೀ ಸಮಾಜದಿಂದ ಹೊರತಾದ ಭಾಷೆಯನ್ನಾಗಲೀ ಕಲ್ಪಿಸಿಕೊಳ್ಳುವುದು ಸಾಧ್ಯವಿಲ್ಲ.

ಒಂದು ಸಮಾಜ ಏನು ಮಾಡುತ್ತದೆ, ಯಾವ ಬಗೆಯಲ್ಲಿ ಆಲೋಚಿಸುತ್ತದೆ, ಯಾವ ಯಾವ ಚಟುವಟಿಕೆಗಳಲ್ಲಿ ತನ್ಮಯವಾಗಿರುತ್ತದೆ, ಎನ್ನುವುದು ಆ ಸಮಾಜಕ್ಕೆ ಸಂಬಂಧಿಸಿದ

ವಿಷಯ. ಮಾನವಶಾಸ್ತ್ರಜ್ಞರು ಸಂಸ್ಕೃತಿಯನ್ನು ಭೌತಿಕ ಸಂಸ್ಕೃತಿ ಮತ್ತು ಅಭೌತಿಕ ಸಂಸ್ಕೃತಿ ಎಂದು ಎರಡು ಭಾಗಗಳಾಗಿ ವಿಂಗಡಿಸಿದ್ದಾರೆ. ಆಹಾರ, ವಸತಿ, ಬಟ್ಟೆಬರೆ, ಅಲಂಕಾರ ಇತ್ಯಾದಿಗಳೆಲ್ಲಾ ಭೌತಿಕ ಸಂಸ್ಕೃತಿಯ ಪರಿಕರಗಳು. ಇವನ್ನು ಸ್ಪರ್ಶಿಸಬಹುದು, ಅನುಭವಿಸಬಹುದು, ಪಂಚೇಂದ್ರಿಯಗಳ ಸುಖಕ್ಕೆ ಅನುವುಮಾಡಿಕೊಡಬಹುದು. ಆದರೆ ಅಭೌತಿಕ ಸಂಸ್ಕೃತಿಯ ವಿಷಯ ಆಚಾರ, ವಿಚಾರ, ಭಾವನೆ, ನಂಬಿಕೆ, ದೇವರು, ಧರ್ಮ, ಭಾಷೆ ಮುಂತಾದವುಗಳಿಗೆ ಸಂಬಂಧಿಸಿದ್ದು.

ಒಂದು ಭಾಷೆಯ ಪದಗಳ ಅರ್ಥಕ್ಕೂ ಸಂಸ್ಕೃತಿಗೂ ಬಿಡಿಸಲಾರದ ನಂಟು. ಹೀಗಾಗಿ ಒಂದು ಭಾಷೆಯ ಪದಕೋಶ ಆ ಭಾಷೆಯ ಸಂಸ್ಕೃತಿಯ ನೈಜ ಪ್ರತಿಬಿಂಬ. ಆದುದರಿಂದ ಒಂದು ಭಾಷೆಯ ಇತಿಹಾಸಕ್ಕೂ ಅದರ ಸಂಸ್ಕೃತಿಯ ಇತಿಹಾಸಕ್ಕೂ ನೇರ ಸಂಬಂಧವಿದೆ. ಹೀಗೆ ಸಮಾಜ–ಸಂಸ್ಕೃತಿ–ಭಾಷೆಗಳು ತಳುಕುಹಾಕಿಕೊಂಡಿರುತ್ತವೆ. ಇವುಗಳಲ್ಲಿ ಒಂದನ್ನು ಇನ್ನೊಂದರಿಂದ ಬೇರ್ಪಡಿಸುವುದು ಕಷ್ಟ. ಇದನ್ನರಿತೇ ಸಾಮಾಜಿಕ ಭಾಷಾವಿಜ್ಞಾನಿಗಳು ಇವುಗಳ ಸಂಬಂಧದ ಅನನ್ಯತೆಯ ಅಧ್ಯಯನಕ್ಕೆ ತೊಡಗಿದ್ದಾರೆ. ಹೀಗಾಗಿ ಸಾಮಾಜಿಕ ಭಾಷಾವಿಜ್ಞಾನದ ಅಧ್ಯಯನದ ವಸ್ತು ವಿಷಯ ಸಮಾಜ ಮತ್ತು ಸಂಸ್ಕೃತಿಯಲ್ಲಿ ಅನಾವರಣಗೊಂಡಿರುವ ಭಾಷೆಯ ವಿವರಣೆಯೇ ಆಗಿದೆ. ಸಾಮಾಜಿಕ ಭಾಷಾವಿಜ್ಞಾನವು ಭಾಷೆ–ಸಮಾಜ, ಭಾಷೆ–ಸಾಮಾಜಿಕ ವರ್ಗ, ಭಾಷೆ–ಸಂದರ್ಭ, ಭಾಷೆ–ಪರಸ್ಪರ ವರ್ತನೆ ಮೊದಲಾದ ವಿಷಯಗಳ ಬಗೆಗೆ ಬೆಳಕು ಚೆಲ್ಲುತ್ತದೆ. ಒಂದು ಗೊತ್ತಾದ ಸಮಾಜ ಅಥವಾ ಸಂಸ್ಕೃತಿಯಲ್ಲಿ ಸಂದರ್ಭ ವ್ಯತ್ಯಯ, ಆಡುಗ–ಕೇಳುಗರ ಸಂಬಂಧ, ಸಾಮಾಜಿಕ ವರ್ಗ ಮುಂತಾದವುಗಳಿಗೆ ಸಂಬಂಧಿಸಿದಂತೆ ಉಂಟಾಗುವ ಭಾಷಿಕ ವ್ಯತ್ಯಯಗಳನ್ನು ಇಲ್ಲಿ ಕಂಡುಕೊಳ್ಳಬಹುದು. ಇಂತಹ ಭಾಷಿಕ ಭಿನ್ನತೆಯ ವ್ಯಾಪಕ ಸ್ವರೂಪವನ್ನು ಜಾತಿ (ಸಾಮಾಜಿಕ) ಉಪಭಾಷೆಗಳಲ್ಲಿ ಕಾಣಬಹುದು. ಈ ಆಯಾಮದ ಚೌಕಟ್ಟಿನೊಳಗೆ ಪುರುಷ ಮತ್ತು ಸ್ತ್ರೀಯರ ನಡುವಣ ಭಾಷಿಕ ವ್ಯತ್ಯಾಸಗಳನ್ನು ಕಾಣಬಹುದು. ಜನರ ಸಾಮಾಜಿಕ ಅನನ್ಯತೆಗನುಗುಣವಾಗಿ ಭಾಷೆಯ ಬಳಕೆಯಲ್ಲಿ ವ್ಯತ್ಯಯಗಳು, ಸಮಾಜದ ಗಣ್ಯರನ್ನು ಗುರುಹಿರಿಯರನ್ನು ಸಂಬೋಧಿಸುವಾಗ ಬಳಸುವಂತಹ ಗೌರವದ ನುಡಿಗಳು, ಮಕ್ಕಳನ್ನು ರಮಿಸುವ, ಸಂತೈಸುವ ಸಂದರ್ಭದಲ್ಲಿ ಹಿರಿಯರು ಮಕ್ಕಳೊಂದಿಗೆ ಆಡುವ ಮಾತಿನ ಶೈಲಿ, ಹಿರಿಯರು, ಮಕ್ಕಳು, ಕಿರಿಯರು, ಸ್ತ್ರೀ ಪುರುಷರನ್ನು ಸಂಬೋಧಿಸುವಂತಹ ವಿಶೇಷ ರೂಪಗಳನ್ನು ಗಮನಿಸಬಹುದು.

ಈ ನಿಟ್ಟಿನಲ್ಲಿ ಕೊಡಗಿನಲ್ಲಿ 'ಗೌಡಕನ್ನಡ' ಭಾಷೆಯನ್ನಾಡುವ ಜನರ ಸಾಮಾಜಿಕ ಲಕ್ಷಣ, ಸಾಂಸ್ಕೃತಿಕ ಹಿನ್ನೆಲೆ ಹಾಗೂ ಬದುಕಿನ ಪರಿಸರದಲ್ಲಿ ಅವರು ನಡೆಸುವ ಚಟುವಟಿಕೆಗಳಲ್ಲಿ ಇರುವ ಭಾಷಿಕ ವೈವಿಧ್ಯಗಳನ್ನು ಭಾಷಿಕ ನೆಲೆಗಳಾದ ಗಾದೆಗಳು, ಒಗಟುಗಳು, ಸಂಬಂಧವಾಚಕಗಳು, ಸಂಬೋಧನಾರೂಪಗಳು, ಬಾಲಭಾಷೆ, ವ್ಯಕ್ತಿನಾಮಗಳು ಹಾಗೂ ಕುಟುಂಬನಾಮಗಳು ಇವುಗಳ ಅಧ್ಯಯನದ ಮೂಲಕ ಕೊಡಗಿನ ಗೌಡ ಜನಾಂಗದವರ ಸಮಾಜ, ಸಂಸ್ಕೃತಿ ಮತ್ತು ಭಾಷೆಯ ಸಂಬಂಧವನ್ನು ಕುರಿತು ಅಧ್ಯಯನ ನಡೆಸಲಾಗಿದೆ.

೪.೧.೧. ಗಾದೆಗಳು:

ಜನಸಾಮಾನ್ಯರ ಬದುಕು ಮತ್ತು ಭಾಷೆಯೊಡನೆ ಅವಿನಾಸಂಬಂಧವನ್ನು ಹೊಂದಿರುವ ಗಾದೆಗಳು ಸಾಂಸ್ಕೃತಿಕ ಪರಂಪರೆಯ ಅನನ್ಯ ಅಭಿವ್ಯಕ್ತಿಗಳಾಗಿ ಕಾಣಿಸಿಕೊಂಡಿದೆ. ಸಮುದಾಯವೊಂದರ ಅನುಭವ, ಭಾವನೆ ಮತ್ತು ಆಲೋಚನೆಗಳು ಅವುಗಳ ವಸ್ತು ಮತ್ತು ಆಶಯವನ್ನು ರೂಪಿಸಿವೆ. ಗಾದೆಗಳ ಹುಟ್ಟು ವಿಕಾಸದೊಡನೆ ಅವುಗಳ ಬಳಕೆಯ ಸಂದರ್ಭಗಳೂ ಪರಂಪರೆಯಿಂದ ಪ್ರಾಪ್ತವಾಗಿವೆ. ಕಾಲಕಾಲಕ್ಕೆ ಸಮಾಜ ತೆಗೆದುಕೊಂಡ ನಿಲುವುಗಳೂ ನೀತಿ ನಿರ್ಣಯಗಳೂ ಅಲಿಖಿತ ಕಟ್ಟಳೆಗಳಂತೆ ದಾಖಲೆಯಾಗಿವೆ. ಒಂದು ಸಮಾಜದಲ್ಲಿ ಒಬ್ಬ ವ್ಯಕ್ತಿ ತಾನು ಜೀವನದಲ್ಲಿ ಕಂಡುಂಡ ಸತ್ಯವನ್ನೋ, ತನಗೆ ಸರಿ ಅಥವಾ ತಪ್ಪು ಎನ್ನಿಸಿದನ್ನೋ ಮಾನವ ಸ್ವಭಾವ ಸಹಜವಾಗಿ ತನ್ನ ಮಕ್ಕಳಿಗೋ ಅಥವಾ ಇತರರಿಗೋ ಅಥವಾ ಮುಂದಿನವರಿಗೋ ಮಾರ್ಗದರ್ಶಿಯಾಗಲೆಂದು ಹೇಳಲು ಪ್ರಯತ್ನಿಸಿರಬೇಕು. ಅದು ಹೇಗೆ ಹೇಳಿದರೆ ಮನಸ್ಸಿಗೆ ನಾಟುತ್ತದೆ, ನೆನಪಿನಲ್ಲಿ ಉಳಿಯುತ್ತದೆ, ಒಬ್ಬರಿಂದ ಮತ್ತೊಬ್ಬರಿಗೆ, ತಲೆಮಾರಿನಿಂದ ತಲೆಮಾರಿಗೆ ಮುನ್ನಡೆಯುತ್ತದೆ ಎಂದೆಲ್ಲಾ ಯೋಚಿಸಿ ತನ್ನ ಅನುಭವಕ್ಕೆ ಅಭಿವ್ಯಕ್ತಿ ಕೊಡಲು ಯತ್ನಿಸಿದ್ದಾನೆ. ಆ ಪ್ರಯತ್ನದ ಫಲವೇ ಸೂತ್ರಪ್ರಾಯವಾದ, ಪ್ರಾಸಬದ್ಧವಾದ, ಅಲಂಕಾರಯುಕ್ತವಾದ ಗಾದೆಗಳು ಎನ್ನಬಹುದು.

ಜನಪದ ಸಾಹಿತ್ಯದ ಜನಪ್ರಿಯ ಪ್ರಕಾರವಾದ ಗಾದೆಗಳು ಬುದ್ಧಿ ಪ್ರಧಾನವಾದವುಗಳಾಗಿವೆ. ಗಾದೆಗಳು ಜನ ಜೀವನದ ಅನುಭವದ ವಾಕ್ಯಗಳಾಗಿವೆ. ಜನಪದ ಸಾಹಿತ್ಯದ ಹಲವು ಪ್ರಕಾರಗಳಾದ ಲಾವಣಿ, ಜನಪದ ಗೀತೆ, ಕಥೆ, ಒಗಟುಗಳಂತೆ ಗಾದೆಗಳೂ ಅದರದ್ದೇ ಆದ ಪ್ರಮುಖ ಸ್ಥಾನವನ್ನು ಪಡೆದಿವೆ. ಇವುಗಳಲ್ಲಿ ಜೀವನದ ನೈಜ ಚಿತ್ರವಿದೆ ಮತ್ತು ಬದುಕನ್ನು ತಿದ್ದಿ ಸರಿಮಾಡಬಲ್ಲ ಶಕ್ತಿಯಿದೆ. ಇವು ಒಂದು ಪ್ರದೇಶದ ಸಾಮಾಜಿಕ, ಸಾಂಸ್ಕೃತಿಕ ಜೀವನ ಚಿತ್ರವನ್ನೊಳಗೊಂಡ ಅಲಿಖಿತ ಇತಿಹಾಸವಾದರೆ, ಇನ್ನೊಂದು ದೃಷ್ಟಿಯಲ್ಲಿ ಜನಸಾಮಾನ್ಯರ ಬಾಳನ್ನು ರೂಪಿಸುವ ನಿಯಂತ್ರಿಸುವ ವಿಧಿ; ಶಿಕ್ಷಿಸುವ, ರಕ್ಷಿಸುವ, ಧೈರ್ಯ ತುಂಬುವ, ದಾರಿ ತೋರಿಸುವ, ಕೊನೆಗೆ ಕೈ ಹಿಡಿದು ನಡೆಸುವ ಗುರು; ತೊಂದರೆಗೆ ಸಿಲುಕಿದಾಗ ಸಮಾಧಾನ ಹೇಳುವ, ಸಾಂತ್ವನಗೊಳಿಸುವ ವಾತ್ಸಲ್ಯಮಯಿ ತಾಯಿ; ಮನಸ್ಸಿನ ಮ್ಲಾನತೆ ಕಳೆಯುವ, ತೊಳೆಯುವ, ನೋವಿನ ಗಾಯವನ್ನು ಮಾಯಿಸುವ ಮದ್ದು.

ಪ್ರತಿಯೊಂದು ದೇಶದಲ್ಲಿಯೂ ಗಾದೆಮಾತುಗಳಿವೆ. ಗಾದೆಗಳಿಲ್ಲದ ದೇಶ ಭಾಷೆ ಯಾವುದೂ ಇಲ್ಲ. ಭಾಷೆಗಳು ಬೇರೆಯಾದರೂ ಅದು ನೀಡುವ ಸಂದೇಶ ಒಂದೇ ಆಗಿರುತ್ತದೆ. ಗಾದೆಯೆಂದರೆ ಹಲವು ವಿಷಯದ ಹಲವು ಭಾವದ ಹಲವು ಅಭಿವ್ಯಕ್ತಿಯಾಗಿದೆ. ಇವು ಸೂಕ್ತ ಸಂದರ್ಭದಲ್ಲಿ ತಾಳಿದ ಯೋಗ್ಯ ನಿರ್ಣಯಗಳು. ಆದರೆ, ಇವಕ್ಕೆ ಅನುಭವದ ಪರಿಮಿತಿ ಪ್ರೀತಿ ಇದೆ. ಒಮ್ಮೆ ಇವು ಮನುಷ್ಯನ ಬುದ್ಧಿ ಮತ್ತೆಗಳಾದರೆ ಮತ್ತೊಂದು ಕಡೆ ಆಲೋಚನಾ ದೀಪಿಕೆಗಳಾಗಿವೆ.

ನಾಟಕೀಯತೆ, ಉಪಮಾನ, ಕಲ್ಪನೆ, ಸಾದೃಶ್ಯ–ವೈದೃಶ್ಯ, ಪ್ರಾಸ–ಅನುಪ್ರಾಸ, ವ್ಯಂಗ್ಯ, ಹಾಸ್ಯಗಳಿಂದ ಕೂಡಿದುದಾಗಿದೆ. ಇವುಗಳ ಗಾತ್ರ ಚಿಕ್ಕದಾದರೂ ಹಿರಿದಾದ ಅರ್ಥವನ್ನೇ ಹೊಂದಿರುತ್ತವೆ. ಇವುಗಳು ಸುಲಭವಾಗಿ ಜ್ಞಾಪಕದಲ್ಲಿಟ್ಟುಕೊಳ್ಳುವಂತದ್ದು. ಗಾದೆಗಳು ಜನಜೀವನವನ್ನು ನಿರೂಪಿಸುವ ಒಂದು ಸಾಧನ. ವೈವಾಹಿಕ ವ್ಯವಸ್ಥೆ, ಕೌಟುಂಬಿಕ ರಚನೆ, ಬಂಧುತ್ವದ ಬಗೆ, ಧರ್ಮ ಮತ್ತು ದೇವರ ಕಲ್ಪನೆ, ಹೆಣ್ಣು ಗಂಡಿನ ಸಂಬಂಧ, ಅಸಹಾಯಕತೆ, ಮೌಢ್ಯ ಮತ್ತು ವಿರೋಧ, ಪ್ರತಿಭಟನೆಯ ಸಣ್ಣ ದನಿಗಳು, ಆರ್ಥಿಕ ಅಸಮಾನತೆ, ಜಾತಿ ಮತ್ತು ವರ್ಗವಿಚಾರ, ನಂಬಿಕೆ ಮತ್ತು ಸಂಪ್ರದಾಯ, ವಿಧಿ ನಿಷೇಧ, ಸ್ವೀಕೃತ ಮೌಲ್ಯಗಳು, ಮೇಲು–ಕೀಳು, ಸಾಮಾಜಿಕ ಉಲ್ಲಂಘನೆಗಳು, ಮಳೆಬೆಳೆ, ಆಹಾರ ಪಾನೀಯ, ವೃತ್ತಿ ಸಂಸ್ಕೃತಿ ಹೀಗೆ ಗಾದೆಗಳು ಅವರ ಸಂಸ್ಕೃತಿ ಮತ್ತು ನಾಗರಿಕತೆಗಳ ಪ್ರತಿಫಲನಗಳು. ಅವರ ಬದುಕನ್ನು ವಾಸ್ತವವಾಗಿ ಚಿತ್ರಿಸುವುದು ಮಾತ್ರವಲ್ಲದೆ, ತಿದ್ದಿ ಎತ್ತಿ ಉದ್ಧರಿಸುತ್ತವೆ. ಯಾವುದೇ ಒಂದು ಸಮಾಜದ ಜನಜೀವನದಲ್ಲಿ ಗಾದೆಗಳು ವಹಿಸುವ ಪಾತ್ರ ಮಹತ್ವಪೂರ್ಣವಾದದ್ದು. ಇದಕ್ಕೆ ಕೊಡಗಿನ ಗೌಡ ಜನಾಂಗದವರು ಹೊರತಲ್ಲ.

ಪ್ರತಿ ಗಾದೆಯ ಮೇಲೂ ತನ್ನ ಪರಿಸರದ ಪ್ರಭಾವ ಸನ್ನಿವೇಶಗಳ ಬೆಳಕು ಇದ್ದೇ ಇರುತ್ತದೆ. ಅಂತೆಯೇ, ಕೊಡಗಿನ ಗೌಡ ಕನ್ನಡದಲ್ಲಿರುವ ಗಾದೆಗಳೂ ಕೂಡ ಅದು ಆ ಭಾಷೆಯ, ಪ್ರದೇಶದ ಅವಯವ ಸಾಂಗತ್ಯ ವಿಶೇಷಗಳನ್ನು ಪಡೆದುಕೊಂಡಿದೆ. ಇತರ ಭಾಷೆಗಳಲ್ಲಿರುವ ಗಾದೆಗಳಿಗೆ ಸಮಾನ ಗಾದೆಗಳು ಗೌಡಕನ್ನಡದಲ್ಲೂ ಕಂಡು ಬರುತ್ತವೆ. ಇದಕ್ಕೆ ಮಾನವನ ಮೂಲ ಗುಣ ಪ್ರವೃತ್ತಿಗಳೇ ಕಾರಣವಾಗಿದೆ. ಗಾದೆಗಳು ಕೊಡಗಿನ ಹೆಂಗಸರು ಗಂಡಸರೆನ್ನದೆ ಎಲ್ಲರಲ್ಲಿಯೂ ಪ್ರಚಲಿತದಲ್ಲಿದ್ದು ಲಿಖಿತ ರೂಪದಲ್ಲಿಲ್ಲ. ಆಬಾಲ ವೃದ್ಧರಾದಿಯಾಗಿ ಗಾದೆಗಳನ್ನು ಇಲ್ಲಿನ ಸರ್ವರೂ ಮಾತಿನ ಸಂದರ್ಭದಲ್ಲಿ ಉಪಯೋಗಿಸುತ್ತಾರೆ. ಇದು ಇವರ ಬಾಳಿನ ಒಂದು ಅವಿಭಾಜ್ಯ ಅಂಗವಾಗಿದ್ದು, ಇವರ ಸಂಸ್ಕೃತಿ ಮತ್ತು ಸಂಪ್ರದಾಯಗಳ ಅಖಂಡ ಭಾಗಗಳಾಗಿ ಉಳಿದಿದೆ. ಆದರೆ ಇಲ್ಲಿನ ಹಳೆಯ ತಲೆಮಾರಿನವರಲ್ಲಿ ಇಂದಿಗೂ ಗಾದೆಗಳು ಅವರ ನಿತ್ಯ ಜೀವನದಲ್ಲಿ ಅಡಕವಾಗಿರುವುದು ಕಂಡುಬಂದರೆ, ಇಂದಿನ ಪೀಳಿಗೆಯವರಲ್ಲಿ ಗಾದೆಗಳು ಅಷ್ಟಾಗಿ ಪ್ರಚಲಿತವಿಲ್ಲದೇ ಇರುವುದು ಕಂಡುಬಂದಿದೆ. ಇವರು 'ಅದೇನೋ ಗಾದೆ ಹೇಳಿದ ಹಾಗೆ' ಎಂದು ಮಾತಿನ ಮಧ್ಯದಲ್ಲಿ ಹೇಳುತ್ತಾರೆಯೇ ಹೊರತು ಸ್ಪಷ್ಟವಾಗಿ ಗಾದೆಗಳನ್ನು ಹೇಳುವವರು ಇಂದಿನ ಪೀಳಿಗೆಯಲ್ಲಿ ವಿರಳ.

ಸಾಮಾನ್ಯವಾಗಿ ಇತರ ಭಾಷಿಕರು ಬಳಸುವ ಗಾದೆಗಳು ಗೌಡಕನ್ನಡದಲ್ಲಿದೆ. ಅಲ್ಲಿ ಕಂಡುಬರುವ ಗಾದೆಗಳ ಲಕ್ಷಣಗಳು ಇಲ್ಲಿಯೂ ಇವೆ. ಇವುಗಳ ರಚನೆಯನ್ನು ಗಮನಿಸಿದರೆ ಪ್ರಾಸ ಅನುಪ್ರಾಸ ಇಲ್ಲಿಯೂ ಇದೆ. ಆದರೂ ಇಲ್ಲಿರುವ ಗಾದೆಗಳು ಇಲ್ಲಿನ ಭೌಗೋಳಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಲಕ್ಷಣಗಳನ್ನು ಒಳಗೊಂಡಿರುವಂತವುಗಳಾಗಿವೆ.

೪.೧.೨. ಭೌಗೋಳಿಕ ಹಿನ್ನೆಲೆ:

ಕೊಡಗು ಜಿಲ್ಲೆಯ ಮೇಲ್ಮೈ ಆಕಾರ, ಪ್ರಕೃತಿ ಲಕ್ಷಣಗಳು, ವಾಯುಗುಣ, ಉತ್ಪನ್ನಗಳು, ಜನಸಂಖ್ಯೆ ಮೊದಲಾದ ಭೌಗೋಳಿಕ ಲಕ್ಷಣಗಳ ಹಿನ್ನೆಲೆಯನ್ನು ಹೊಂದಿರುವ ಗೌಡಕನ್ನಡದ ಕೆಲವು ಗಾದೆಗಳು ಹೀಗಿವೆ.

ಬಾಣೆಲಿ ಗೋಲಿ ಆಡ್ದಂಗೆ ಈ ಗಾದೆಯಲ್ಲಿ ಅಲ್ಲಿನ ಭೌಗೋಳಿಕ ಲಕ್ಷಣವನ್ನು ಕಾಣಬಹುದು. ಕೊಡಗಿನಲ್ಲಿ ದನಗಳನ್ನು ಮೇಯಿಸಲು ಇರುವ ಬಯಲನ್ನು 'ಬಾಣೆ' ಎನ್ನುವರು. ಸಾಮಾನ್ಯವಾಗಿ ಇಲ್ಲಿರುವ ಕುಟುಂಬದವರೆಲ್ಲರಲ್ಲಿಯೂ ಈ 'ಬಾಣೆ' ಇರುತ್ತದೆ. ಇಲ್ಲಿ ಬಾಣೆಯು ಸಮತಟ್ಟಾಗಿರುವುದಿಲ್ಲ. ದಿಬ್ಬಗಳು ಹಾಗೂ ಇಳಿಜಾರಿನಿಂದ ಕೂಡಿರುತ್ತದೆ. ಅಲ್ಲಿ ಗೋಲಿ ಆಡಿದರೆ ಅದು ಉರುಳಿ ಹೋಗುತ್ತದೆ. ಎಷ್ಟೇ ಪ್ರಯತ್ನಿಸಿದರೂ ಅದು ನಿಲ್ಲುವುದಿಲ್ಲ. ವೃಥಾ ಸಮಯ ಹಾಳು. ಹಾಗಾಗಿ ಅಲ್ಲಿ ಆಟ ಆಡದಿರುವುದೇ ಒಳಿತು. ಅಂದರೆ ಆಗದಿರುವ ಕೆಲಸವನ್ನು ಮಾಡದಿರುವುದೇ ಒಳಿತು. ಇಲ್ಲವಾದಲ್ಲಿ ಸಮಯ, ಶ್ರಮ ವ್ಯರ್ಥವಾಗುತ್ತದೆ ಎಂಬ ಸಂದೇಶವನ್ನು ಅಲ್ಲಿನವರಿಗೆ ಅಲ್ಲಿನ ಭೌಗೋಳಿಕ ಲಕ್ಷಣದ ಹಿನ್ನೆಲೆಯಲ್ಲಿ ತಿಳಿಯಪಡಿಸುವ ಗಾದೆ ಇದಾಗಿದೆ.

ಉದಾ: ಗೌ.ಕ.: ಅದ್ ಆಕೆ ಇರುವ ಕೆಲ್ಸನಾ? ಅದ್ ಬಾಣೆಲಿ ಗೋಲಿ ಆಡ್ದಂಗೆ ಆದೆ.

ಶಿ.ಕ.: ಅದು ಆಗಲಿರುವ ಕೆಲಸವೇ? ಅದು ಇಳಿಜಾರಿನ ಬಯಲಿನಲ್ಲಿ ಗೋಲಿ ಆಡಿದ ಹಾಗಾಗುತ್ತದೆ.

ಕಣ್ಣ್ ಮರೆಯಾದರೆ ಕುಂದ್ ಮರೆಯಾದಂಗೆ ಆಡ್‌ದು:

ಕೊಡಗು ಬೆಟ್ಟಗುಡ್ಡಗಳಿಂದ ಕೂಡಿದ ಪ್ರದೇಶ. ಎಲ್ಲಿ ನೊಡಿದರೂ ಬೆಟ್ಟಗಳ ಸಾಲು ಕಣ್ಣಿಗೆ ಗೋಚರಿಸುತ್ತದೆ. ನಯನಮನೋಹರವಾದ ಈ ಪ್ರದೇಶದ ಹಿನ್ನೆಲೆಯಲ್ಲಿ ಈ ಮೇಲಿನ ಗಾದೆ ಮಾತಿದೆ. ಕೊಡಗಿನ ಗೌಡ ಕನ್ನಡದಲ್ಲಿ ಬೆಟ್ಟ ಎಂಬುದಕ್ಕೆ 'ಕುಂದ್' ಎಂಬ ಪದವಿದೆ. ಈ ಪದವು ಅಲ್ಲಿನ ಕೊಡವ ಭಾಷೆಯಿಂದ ಪಡೆದುದಾಗಿದೆ. ಕೊಡವ ಭಾಷೆಯ 'ಕುಂದ್' ಪದವು ಅದೇ ಅರ್ಥದಲ್ಲಿ ಅಲ್ಲಿನ ಗೌಡಕನ್ನಡದಲ್ಲಿ ಬಳಕೆಯಲ್ಲಿದೆ. ಸಾಮಾನ್ಯವಾಗಿ ಕುಂದ್ (ಬೆಟ್ಟ) ದೂರದಲ್ಲಿರುತ್ತದೆ ಮತ್ತು ಬಹಳ ಎತ್ತರದಲ್ಲಿರುತ್ತದೆ. ಅದರ ಆಚೆಗೆ ಹೋದರೆ ಇನ್ನೊಂದು ಭಾಗ ಏನೂ ಕಾಣುವುದಿಲ್ಲ. ಹಾಗಾಗಿ ಇಲ್ಲಿ ಹೇಳಲು ಹೊರಟಿರುವುದು ಏನೆಂದರೆ ನಾವು ಏನನ್ನಾದರೂ ಬಹಳ ನಿಗಾ ಇಟ್ಟು ಗಮನಿಸುತ್ತಿದ್ದು, ಉದಾಹರಣೆಗೆ: ಕೆಲಸಮಾಡುವ ಆಳುಗಳನ್ನು/ ಮಕ್ಕಳನ್ನು/ ದನಗಳನ್ನು ಇತ್ಯಾದಿ. ನಮ್ಮ ಗಮನವು ಆಚೀಚೆಯಾದರೆ ಅವರು ತಮ್ಮ ಕೆಲಸವನ್ನು ಬಿಟ್ಟು ಬೇರೆ ಏನೋ ಮಾಡುವರು. ಆ ಸಂದರ್ಭಕ್ಕೆ ಸರಿಹೊಂದುವಂತೆ ಈ ಗಾದೆಯನ್ನು ಬಳಸಲಾಗಿದೆ. ಸ್ವಲ್ಪ ನಮ್ಮ ನೋಟ ತಪ್ಪಿದರೆ ಸಾಕು ನಾವು ಅಲ್ಲಿ ಇಲ್ಲವೇ ಇಲ್ಲ ಎಂಬಂತೆ ಆಡುವರು ಎಂಬ ಅರ್ಥದಲ್ಲಿದೆ.

ಹೂಡುದು ಬುಟ್ಟು ಎಸಂಡ್ ಹಿಡ್ದಂಗೆ:

ಈ ಗಾದೆ ಮಾತಿನಲ್ಲಿ ಅಲ್ಲಿನ ಭೌಗೋಳಿಕ ಲಕ್ಷಣದೊಂದಿಗೆ ಗ್ರಾಮೀಣತೆಯ ಸೊಗಡಿದೆ. ಕೊಡಗಿನ ಗೌಡರು ಕೃಷಿಕರು. ಕೊಡಗಿನ ಮುಖ್ಯ ಬೆಳೆಗಳಲ್ಲಿ ಭತ್ತವೂ ಒಂದು. ಕೊಡಗಿನ ಯಾವುದೇ ಭಾಗದಲ್ಲಿ ನೋಡಿದರೂ ಅಕ್ಕಪಕ್ಕದಲ್ಲಿ ಭತ್ತದ ಗದ್ದೆಗಳನ್ನು ಕಾಣಬಹುದು. ಇವರು ಮುಂಗಾರು ಮಳೆ ಬಿದ್ದ ಕೂಡಲೇ ಮುಂಜಾನೆ ಗದ್ದೆಗಳಲ್ಲಿ ಉಳುಮೆ ಕೆಲಸದಲ್ಲಿ ತೊಡಗುತ್ತಾರೆ. ಸುಮಾರು ಎರಡರಿಂದ ಮೂರು ತಿಂಗಳುಗಳ ಕಾಲ ಉಳುಮೆ, ಬಿತ್ತನೆ, ನಾಟಿ ಮುಂತಾದ ಕೆಲಸಗಳಲ್ಲಿ ತೊಡಗಿರುತ್ತಾರೆ. ಈ ಗಾದೆಯು ಅದರ ಪ್ರಾದೇಶಿಕ ಬಣ್ಣ ಮತ್ತು ಸ್ವರೂಪಗಳಿಂದಲೂ ಭಿನ್ನವಾಗಿಲ್ಲ. ಮಾಂಸಾಹಾರಿಗಳಾದ ಇವರು ಗದ್ದೆಯ ಬದುವಿನಲ್ಲಿ ಇರುವ ಏಡಿಗಳನ್ನು ಹಿಡಿದು ಅದರಿಂದ ಆಹಾರ ತಯಾರಿಸಿಕೊಂಡು ತಿನ್ನುತ್ತಾರೆ. ಏಡಿಗಳು ಮಳೆಗಾಲದಲ್ಲಿಯೇ ಹೆಚ್ಚಾಗಿ ಇರುತ್ತವೆ. ಕೆಲಸ ಮುಗಿದು ಎತ್ತುಗಳನ್ನು ಬಿಟ್ಟು ನಂತರ ಮನೆಗೆ ಹೋಗುವಾಗ ಕೆಲವು ಏಡಿಗಳನ್ನು ಹಿಡಿದುಕೊಂಡು ಹೋಗುತ್ತಾರೆ. ಆದರೆ ಉಳುವಾಗ ಎತ್ತುಗಳನ್ನು ನಿಲ್ಲಿಸಿ ಹೋಗಿ ಏಡಿ ಹಿಡಿಯುವುದಿಲ್ಲ. ಇದರ ಒಳ ಅರ್ಥ ಏನೆಂದರೆ, ಒಂದು ಕಾರ್ಯವು ಮುಖ್ಯವಾಗಿರುವ ಸಂಧರ್ಭದಲ್ಲಿ ಆ ಕಾರ್ಯ ನಡೆಸದೆ ಇನ್ನೇನೋ ಕಾರ್ಯದಲ್ಲಿ ಮಗ್ನನಾಗಿ ಕಾಲಹರಣವಾಗಿ ಕೊನೆಗೆ ಪ್ರಮುಖವಾದ ಕೆಲಸವು ಬಾಕಿ ಉಳಿದುಬಿಡುವ ಸಂದರ್ಭದಲ್ಲಿ ಈ ಗಾದೆ ಮಾತು ಬಳಕೆಯಾಗುತ್ತದೆ.

ಉದಾ: "ನೀ ಮುಂದೆ ಈ ಕೆಲ್ಸನ ಮಾಡ್ ಮತ್ತೆ ಬ್ಯಾರೆ ನೋಡ್, ಹೂಡ್ದು ಬುಟ್ಟ್ ಎಸಂಡ್ ಹಿಡ್ದಂಗಾಕಾಗದ್ (ನೀ ಮೊದಲು ಈ ಕೆಲಸವನ್ನು ಮಾಡು ನಂತರ ಬೇರೆಯದ್ದನ್ನು ನೋಡು, ಉಳುವುದನ್ನು ಬಿಟ್ಟು ಏಡಿ ಹಿಡಿದಂತೆ ಆಗಬಾರದು).

ಬರೆಕರೆ ಭೂಮಿ ನೆರೆಕರೆ ಗೂಡೆ ಎರ್‌ಡೂ ಬ್ಯಾಡ (ಗೂಡೆ-ಹುಡುಗಿ)

ಕೊಡಗು ಜಿಲ್ಲೆಯ ಕಣಿವೆಗಳಲ್ಲಿ ಭತ್ತದ ಗದ್ದೆಗಳಿವೆ. ಎತ್ತರದ ಗುಡ್ಡಗಳನ್ನು ಕಡಿದು ಗದ್ದೆಗಳನ್ನು ಮಾಡಿಕೊಂಡಿರುತ್ತಾರೆ. ಈ ಗದ್ದೆ ಬದಿಯ ಎತ್ತರದ ಗೋಡೆಯಂತಿರುವ ಗುಡ್ಡವನ್ನು ಬರೆ ಎಂದು ಕರೆಯುವರು. ಈ ಬರೆಯ ಮೇಲಿನ ಸ್ಥಳಗಳಲ್ಲಿ ತೋಟಗಳು, ಮನೆಗಳು ಇತ್ಯಾದಿಗಳಿರುತ್ತವೆ. ಈ ಬರೆಗಳು ಹಲವು ಕಡೆ ಮಳೆಗಾಲದಲ್ಲಿ ಕುಸಿಯುತ್ತವೆ. ಗದ್ದೆಯ ಬದಿಯ ಬರೆಗಳು ಕುಸಿದಾಗ ಬೆಳೆಗೆ ಹಾನಿಯಾಗುತ್ತದೆ. ಇಂತಹವುಗಳು ಇಲ್ಲಿ ಹೆಚ್ಚಾಗಿ ಸಂಭವಿಸುತ್ತವೆ. ಆದ್ದರಿಂದ ಈ ಬರೆಯ ಪಕ್ಕದಲ್ಲಿರುವ ಭೂಮಿಯಿಂದ ನಷ್ಟವಾಗುತ್ತದೆ ಎಂದು ಈ ಗಾದೆ ತಿಳಿಸುತ್ತದೆ. ಇದರೊಂದಿಗೆ ನಮಗೆ ಮತ್ತೆ ಮತ್ತೆ ತೊಂದರೆ ಕೊಡುವ ಮತ್ತೊಂದು ವಿಷಯವನ್ನೂ ಈ ಗಾದೆಯಲ್ಲಿ ಹೇಳಲಾಗಿದೆ. ನೆರೆಕರೆ(ಪಕ್ಕದ ಮನೆ)ಯ ಹುಡುಗಿಯನ್ನು ಮದುವೆಯಾದರೆ ಇದರಿಂದಲೂ ನಮಗೆ ತೊಂದರೆ ತಪ್ಪಿದ್ದಲ್ಲ. ಆಕೆ ಸಣ್ಣಪುಟ್ಟ ವಿಷಯಗಳಿಗೂ ತವರಿಗೆ ಹೋಗುವುದು,

ಪ್ರತಿಯೊಂದರಲ್ಲೂ ಆಕೆಯ ತವರಿನವರ ಮಧ್ಯಪ್ರವೇಶ ಇದರಿಂದ ನೆಮ್ಮದಿ ಇಲ್ಲದಂತಾಗುತ್ತದೆ. ಈ ಗಾದೆಯ ಎರಡೂ ಭಾಗಗಳು ನಾವು ನಮಗೆ ತೊಂದರೆ ಕೊಡುವ ವಿಷಯಗಳಿಂದ ದೂರವಿರಬೇಕೆಂದು ತಿಳಿಸುತ್ತದೆ.

೪.೧.೩. ಸಾಮಾಜಿಕ ಹಿನ್ನೆಲೆ:

ಒಂದು ಸಮಾಜಕ್ಕೆ ಸಂಬಂಧಿಸಿದ ವ್ಯಕ್ತಿಗಳು, ಅವರ ಬದುಕು, ಸ್ವಭಾವ, ಕಟ್ಟಳೆ, ನಿಯಮ ಮುಂತಾದವುಗಳು ಆ ಸಮಾಜದ ಸಾಮಾಜಿಕ ಅಂಶಗಳಾಗಿವೆ. ಈ ರೀತಿಯ ಸಾಮಾಜಿಕ ಅಂಶಗಳ ಹಿನ್ನೆಲೆಯಲ್ಲಿ ಕೊಡಗು ಜಿಲ್ಲೆಯ ಗೌಡ ಸಮಾಜದಲ್ಲಿ ಬಳಕೆಯಲ್ಲಿರುವ ಕೆಲವು ಗಾದೆಗಳು ಹೀಗಿವೆ.

ಕಿಚ್ಚಿತ ಹೇಳ್‌ರೆ ಬಾಯಿ ಬೆಂದೋಲೆ: ಈ ಗಾದೆ ಮಾತು ಗೌಡ ಜನಾಂಗದವರ ಸಾಮಾಜಿಕ ಪರಿಸ್ಥಿತಿಯನ್ನು, ಮಾನಸಿಕ ವ್ಯವಸ್ಥೆಯನ್ನು ತಿಳಿಸುತ್ತದೆ. ಇಲ್ಲಿ ಕೆಲವು ವಿಚಾರಗಳಿಗೆ ಸಂಬಂಧಿಸಿದ ವಿಚಾರಗಳನ್ನು ಪದಗಳನ್ನು ನೇರವಾಗಿ ಹೇಳುವಂತಿಲ್ಲ. ಆದರೆ, ಇತ್ತೀಚಿನ ತಲೆಮಾರುಗಳಲ್ಲಿ ಅದಕ್ಕೆ ವಿರೋಧವಿದೆ. ಇಲ್ಲಿ ಸಂಪ್ರದಾಯವನ್ನು ವಿರೋಧಿಸಿ ಕ್ರಾಂತಿ ಭಾವನೆಯನ್ನು ಹೊಂದಿರುವುದು ಕಂಡುಬರುತ್ತದೆ. ಮೂಢನಂಬಿಕೆ, ಧಾಂಬಿಕತೆ ಇವುಗಳ ಬದಲಿಗೆ ಇಲ್ಲಿ ಸಾಮಾಜಿಕ ಪ್ರಜ್ಞೆ ಅಡಗಿದೆ. ಒಂದು ವಿಷಯ, ಆಚರಣೆ, ಜಾತಿ ಇವುಗಳನ್ನು ನೋಡಬಾರದು, ಆಡಬಾರದು ಮುಂತಾದ ಮೂಢನಂಬಿಕೆಗಳನ್ನು ಪ್ರಶ್ನಿಸುವುದು ಇಲ್ಲಿದೆ. ಕೊಡಗಿನ ಗೌಡ ಕನ್ನಡದಲ್ಲಿ ಬೆಂಕಿ ಎಂಬುದಕ್ಕೆ ಕಿಚ್ಚಿ ಎಂಬ ಪದವಿದೆ. ನಾವು ಬೆಂಕಿ ಎಂದು ಹೇಳಿದರೆ ಬಾಯಿ ಬೇಯುವುದಿಲ್ಲ ಎಂಬ ಮಾತಿನಲ್ಲಿ ತೋರಿಸಿದೆ. ಇಂತಹದ್ದೇ ಬೆಂಕಿಯ ಪ್ರಖರತೆಗೆ ಮತ್ತೊಂದು ಗಾದೆ ಇಲ್ಲಿದೆ.

ಕಿಚ್ಚಿ ಮನೆದ್‌ತೇಳಿ ಮುಟ್ಟಿಕಾದೆನಾ?: ಪ್ರತಿಯೊಂದು ಸಮಾಜದಲ್ಲೂ ಇರುವಂತೆ ತನಗೊಂದು ನೀತಿ ಇತರರಿಗೆ ಒಂದು ನೀತಿ ಎಂಬುದು ಕೊಡಗಿನ ಗೌಡ ಜನಾಂಗದಲ್ಲೂ ಕಂಡುಬರುತ್ತದೆ. ಪ್ರತಿ ಜನಸಾಮಾನ್ಯರೂ ಕೆಲವೊಮ್ಮೆ ಈ ರೀತಿಯಲ್ಲಿ ನಡೆದದ್ದುಂಟು. ತನ್ನಿಂದ ಅಥವಾ ತನ್ನವರಿಂದ ಏನಾದರೂ ತಪ್ಪಾದಲ್ಲಿ ಅದಕ್ಕೆ ಕ್ಷಮೆ, ಮತ್ತೊಂದು ಅವಕಾಶ ಇತ್ಯಾದಿ. ಅದೇ ಮತ್ತೊಬ್ಬರಿಂದ ಆದಲ್ಲಿ ಅದಕ್ಕೆ ಶಿಕ್ಷೆ ಕೊಡುವುದು. ಈ ರೀತಿಯಲ್ಲಿ ನಡೆದುಕೊಳ್ಳುವವರನ್ನು ಉದ್ದೇಶಿಸಿ ಈ ಗಾದೆ ಮಾತನ್ನು ಹೇಳಲಾಗಿದೆ. ತಪ್ಪು ಯಾರಿಂದಲೇ ಆಗಿದ್ದರೂ ಅದು ತಪ್ಪೇ. ಅದನ್ನು ಮುಚ್ಚಿಡುವ ಕೆಲಸ ಮಾಡಿದರೆ ತೊಂದರೆಯಾಗುತ್ತದೆ. ಬೆಂಕಿ ನಮ್ಮ ಮನೆಯದ್ದು ಎಂದು ಅದನ್ನು ಮುಟ್ಟಲು ಹೋದರೆ ಅದು ಸುಡುತ್ತದೆ. ಅಂದರೆ ನಮ್ಮ ನಮ್ಮಲ್ಲಿ ಏನು ಮಾಡಿದರೂ ನಡೆಯುತ್ತದೆ ಎಂದು ತಿಳಿಯುವುದು ತಪ್ಪು ಎಂಬ ಕಿವಿಮಾತು ಈ ಗಾದೆಯಲ್ಲಿದೆ.

ಗಂಡ್ ದಂಡ್‌ಲಿ ಸಾಯೋಕು ಹೆಣ್ಣ್ ಹೆತ್ತ್ ಸಾಯೋಕು: ಕೊಡಗಿನ ಗೌಡ ಸಮಾಜದವರು ನಂಬಿಕೆಗಳಲ್ಲಿ ಹೆಚ್ಚು ವಿಶ್ವಾಸವಿಟ್ಟಿರುವರು. ಇವರು ಮರಣದ ನಂತರ ಸ್ವರ್ಗಪ್ರಾಪ್ತಿ ಮಾಡಿಕೊಳ್ಳುವಲ್ಲಿಯೂ

ಕೆಲವು ನಂಬಿಕೆಗಳನ್ನು ಹೊಂದಿದ್ದರು. ಅದರಲ್ಲೂ ಈ ಮೇಲಿನ ಗಾದೆಯಲ್ಲಿರುವ ಮಾತು ಪ್ರಮುಖವಾದುದು. ಕೊಡಗಿನ ಬಹುತೇಕ ಪುರುಷರು ಹಿಂದಿನಿಂದಲೂ ಸೇನೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಇವರು ಕ್ಷತ್ರಿಯರು. ಯುದ್ಧದಲ್ಲಿ ಹೋರಾಡಿ ವೀರ ಮರಣವನ್ನಪ್ಪಿದರೆ ಅವರಿಗೆ ಸ್ವರ್ಗ ಪ್ರಾಪ್ತಿಯಾಗುತ್ತದೆ. ಹಾಗೆಯೇ ಕೊಡಗಿನ ಮಹಿಳೆಯು ತಾಯಿಯಾದರೆ ಆಕೆಗೆ ಸ್ವರ್ಗದಲ್ಲಿ ಸ್ಥಾನವಿದೆ ಎಂಬ ನಂಬಿಕೆಗಳು ಇವರಲ್ಲಿದೆ. ಇವೆರಡೂ ಪುಣ್ಯದ ಕೆಲಸವೆಂದು ಇವರು ನಂಬಿದ್ದಾರೆ. ಅದನ್ನು ಈ ಗಾದೆಮಾತಿನಲ್ಲಿ ಅಲ್ಲಿನ ಯುವಜನರಿಗೆ ಅವರ ಕರ್ತವ್ಯವನ್ನು ತಿಳಿಹೇಳುತ್ತಾರೆ.

೪.೧.೪. ಪ್ರಾದೇಶಿಕ ಹಿನ್ನೆಲೆ:

ಚಪ್ಪೆ ಅನ್ನಕಿಂತ ಉಪ್ಪಾಕಿದ ಗಂಜಿ ಒಳ್ಳೆದ್: ಈ ಗಾದೆಯು ಕೊಡಗಿನ ಪ್ರಾದೇಶಿಕ ಅಂಶವನ್ನೊಳಗೊಂಡಿದೆ. ಕೊಡಗಿನಲ್ಲಿ ಭತ್ತ ಹೇಗೆ ಮುಖ್ಯವಾದ ಬೆಳೆಯೋ ಹಾಗೆಯೇ ಅಕ್ಕಿಯನ್ನು ಬೇಯಿಸಿ ಮಾಡಿದ 'ಗಂಜಿ'ಯೂ ಅಷ್ಟೇ ಮುಖ್ಯವಾದ ಆಹಾರಗಳಲ್ಲಿ ಒಂದು. ಬೇಸಿಗೆಯಲ್ಲಿ ಮಧ್ಯಾಹ್ನದ ಊಟಕ್ಕೆ ಹೆಚ್ಚಿನವರು ಗಂಜಿಯನ್ನು ಮಾಡಿ ತಿನ್ನುತ್ತಾರೆ. ಇದು ದೇಹಕ್ಕೆ ತಂಪನ್ನು ನೀಡುತ್ತದೆ. ಕೊಡಗಿನ ಗೌಡರು ಅನ್ನ ಸಾಂಬಾರು ಇತ್ಯಾದಿ ಅಡುಗೆಗಳು ಇದ್ದರೂ ಗಂಜಿಯನ್ನೇ ಸೇವಿಸಲು ಇಷ್ಟ ಪಡುತ್ತಾರೆ. ಈ ಗಾದೆಯ ಮೂಲಕ ಇವರು ತಮಗೆ ಅಹಿತವಾದುದನ್ನು ಪಡೆಯುವುದಕ್ಕಿಂತ ಹಿತವಾದುದನ್ನು ಪಡೆಯುವುದೇ ಜಾಣತನ ಎಂಬ ಹಿತವಚನವನ್ನು ಹೇಳಿರುವರು.

ನೆಂಟರಿಗಿಲ್ಲದ ಉಪ್ಪಣ ಯಾಕೆ? ಶಿಷ್ಟ ಕನ್ನಡದ 'ಊಟಕ್ಕಿರದ ಉಪ್ಪಿನಕಾಯಿ ಈಗೇಕೆ?' ಎಂಬ ಅರ್ಥದಲ್ಲಿ ಕೊಡಗಿನ ಗೌಡಜನಾಂಗದ ಪರಿಸರದಲ್ಲಿ ಈ ಗಾದೆಯನ್ನು ಬಳಸುತ್ತಾರೆ. ಇದು ಹುಟ್ಟಿಕೊಂಡ ಹಿನ್ನೆಲೆ ಏನೆಂದರೆ, ಕೊಡಗಿನ ಗೌಡರು ಮೊದಲಿನಿಂದಲೂ ಬೇಟೆಯಾಡುವುದರಲ್ಲಿ ಹೆಚ್ಚಿನ ಆಸಕ್ತಿಯನ್ನು ಹೊಂದಿದವರಾಗಿದ್ದಾರೆ. ಇದು ಇವರ ಹವ್ಯಾಸಗಳಲ್ಲೊಂದು. ಕಾಡು ಪ್ರಾಣಿಗಳನ್ನು ಬೇಟೆಯಾಡಿ ಅದರ ಮಾಂಸವನ್ನು ಒಣಗಿಸಿ, ಶೇಖರಿಸಿ ಇಟ್ಟುಕೊಳ್ಳುತಿದ್ದರು. ಈ ಒಣಗಿಸಿದ ಮಾಂಸವು ಇವರ ಅತ್ಯಂತ ವಿಶೇಷ ಹಾಗೂ ಅತೀ ಸ್ವಾದಿಷ್ಟವಾದ, ರುಚಿಕರವಾದ ಆಹಾರ. ಬೇರೆಲ್ಲಾ ಔತಣವು ಈ ಒಣಗಿಸಿದ ಮಾಂಸದಿಂದ ತಯಾರಿಸಿದ ಆಹಾರದ ಎದುರು ಗೌಣವಾದುದು. ಈ ರೀತಿಯ ಕೊಬ್ಬಿದ ಮಾಂಸವನ್ನು ಬೆಂಕಿಯ ಕಾವಿನಲ್ಲಿ ಒಣಗಿಸಿ ಉಪ್ಪು ಬೆರೆಸಿ ಬಹುಕಾಲದವರೆವಿಗೂ ಇಟ್ಟುಕೊಂಡಿರುತ್ತಾರೆ. ಬೇಟೆಯಾಡಿದವನಿಗೆ ಆತನ ಬೇಟೆ ಆತನಿಗೆ ಹೆಮ್ಮೆಯ ವಿಷಯ. ಇದಕ್ಕೆ 'ಉಪ್ಪಣ' ಎಂದು ಕರೆಯುವರು. ಮನೆಯಲ್ಲಿ ಉಪ್ಪಣ ಇದ್ದರೆ ಅಥಿತಿಗಳು ಬಂದಾಗ ಇದರ ಖಾದ್ಯ ತಯಾರಿಸುತ್ತಾರೆ. ಉಪ್ಪಣ ಮನೆಯಲ್ಲಿ ಇದ್ದೂ ಅಥಿತಿಗಳಿಗೆ ಅದರ ಅಡಿಗೆ ಮಾಡದಿದ್ದರೆ ಬೇಟೆಯಾಡಿದವನಿಗೆ ಅವಮಾನವಾದಂತೆ ಎಂಬುದು ಇವರ ಭಾವನೆ. ನೆಂಟರುಗಳಿಗೆ ಮಾಡಿ ಬಡಿಸದ ಉಪ್ಪಣವನ್ನು ಬೇರೆ ಎಂದಾದರೂ ಮಾಡಿದರೆ

ಏನು ಉಪಯೋಗ?. ಹಾಗೆಯೇ ನಮಗೆ ಬೇಕಾಗಿರುವುದು ಅಗತ್ಯವಿದ್ದಾಗ ದೊರಕದೆ, ನಂತರ ದೊರಕಿದರೆ ಏನೂ ಪ್ರಯೋಜನವಿಲ್ಲ ಎಂಬುದನ್ನು ತಿಳಿಸುವ ಗಾದೆಮಾತು ಈ ಪ್ರದೇಶದ ವಿಶೇಷ ಆಹಾರದ ಹಿನ್ನೆಲೆಯಲ್ಲಿ ಬಳಕೆಯಾಗುತ್ತದೆ.

ಜೇನ್ ಕೊಯ್ದಂವ ಕೈ ನೆಕ್ಕದಿರುದಾ?: ಶಿಷ್ಟ ಕನ್ನಡದ 'ಜೇನು ಅಳಿದವನು ಕೈ ನೆಕ್ಕದಿರುವನೇ' ಎಂಬ ಗಾದೆಯು ಕೊಡಗಿನ ಗೌಡ ಕನ್ನಡದಲ್ಲಿ ಹೀಗಿದೆ. ಆದರೆ, ಜೇನುತುಪ್ಪದ ಕೃಷಿಯಲ್ಲಿ ಹಾಗೂ ಉತ್ಪಾದನೆಯಲ್ಲಿ ಕೊಡಗು ಹೆಸರುವಾಸಿಯಾಗಿದೆ. ಇಲ್ಲಿ ದೊರೆಯುವ ಜೇನುತುಪ್ಪ ಶುದ್ಧ ಹಾಗು ನೈಸರ್ಗಿಕವಾದುದು. ಇವರು ಜೇನು ಹುಳುಗಳನ್ನು ಸಾಕಲು ಅವುಗಳಿಗೆ ಜೇನು ಗೂಡುಗಳನ್ನು ಕಟ್ಟಲು ಅನುಕೂಲವಾಗುವಂತೆ ಮರದ ಪೆಟ್ಟಿಗೆಗಳನ್ನು ತಯಾರಿಸಿ ತೋಟಗಳಲ್ಲಿ ಇಡುತ್ತಾರೆ. ಈ ಪೆಟ್ಟಿಗೆಗಳಲ್ಲಿ ಜೇನು ಹುಳುಗಳು ಬಂದು ಸೇರಿಕೊಂಡು ಜೇನು ಉತ್ಪಾದಿಸುತ್ತವೆ. ನಂತರ ಅವುಗಳನ್ನು ಕುಯಿದು ಹಿಂಡಿ ಸೋಸಿ ಜೇನುತುಪ್ಪವನ್ನು ಪಡೆಯುತ್ತಾರೆ. ಈ ಪ್ರಾದೇಶಿಕ ಅಂಶವನ್ನು ಬಳಸಿಕೊಂಡು ಇಲ್ಲಿನ ಗೌಡ ಜನಾಂಗದಲ್ಲಿ ಈ ಮೇಲಿನ ಗಾದೆ ಮಾತನ್ನು ಬಳಸುವರು. ತಪ್ಪು ಮಾಡಿದವರು ಖಂಡಿತ ಸಿಕ್ಕಿಹಾಕಿಕೊಳ್ಳುತ್ತಾರೆ ಎಂಬುದು ಈ ಗಾದೆಯ ಲಕ್ಷ್ಯಾರ್ಥ.

ಮಾಪ್ಳೆ ಸಾಂಕಿದ ನಾಯಿ ತೊಪ್ಪಿ ಹಾಕಂಡವನೊಟ್ಟಿಗೆ ಹೋದೆ: ಕೊಡಗು ಪ್ರದೇಶದಲ್ಲಿ ಮುಸ್ಲಿಂ ಜನಾಂಗದ ಮಾಪಿಳ್ಳೆಯರು ಹೆಚ್ಚಿನ ಸಂಖ್ಯೆಯಲ್ಲಿ ವಾಸಿಸುತ್ತಾರೆ. ಇವರು ಕೊಡಗಿನಲ್ಲಿ ವ್ಯಾಪಾರ ವ್ಯವಹಾರಗಳನ್ನು ಮಾಡಿಕೊಂಡು ಇಲ್ಲಿಯೇ ನೆಲೆಸಿದ್ದಾರೆ. ಹಿಂದೆ ಟಿಪ್ಪು ಸುಲ್ತಾನನಿಂದ ಮುಸ್ಲಿಂ ಜನಾಂಗಕ್ಕೆ ಮತಾಂತರಗೊಡವರು ಇಲ್ಲಿ ಖಾಯಂ ನಿವಾಸಿಗಳಾಗಿರುವರು. ಕೊಡಗಿನ ಹಲವು ಸ್ಥಳಗಳಲ್ಲಿ ವಾಸವಾಗಿರುವ ಇವರನ್ನು ಬಳಸಿಕೊಂಡು ಗೌಡ ಜನಾಂಗದವರು ಈ ಮೇಲಿನ ಗಾದೆ ಮಾತನ್ನು ಬಳಸುತ್ತಾರೆ. ಒಬ್ಬ ವ್ಯಕ್ತಿ ಸ್ವಲ್ಪವೂ ಯೋಚಿಸದೆ ಯಾರೆಂದರೆ ಅವರ ಜೊತೆಯಲ್ಲಿ ಸ್ನೇಹ ಮಾಡುವುದು, ಅವರೊಂದಿಗೆ ಓಡಾಡುವುದು, ಬೆರೆಯುವುದು, ತೀರಾ ಆತ್ಮೀಯರಾಗುವುದು ಇವೇ ಮುಂತಾದ ಗುಣಗಳಿರುವ ವ್ಯಕ್ತಿಗಳನ್ನು ಈ ಗಾದೆಯ ಮೂಲಕ ಸೂಚಿಸುತ್ತಾರೆ. ಈ ಗಾದೆಯಲ್ಲಿರುವ 'ತೊಪ್ಪಿ' ಎಂಬ ಪದವು ಗೌಡಕನ್ನಡದಲ್ಲಿ 'ಟೋಪಿ' ಎಂಬ ಅರ್ಥದಲ್ಲಿದೆ. ಮಾಪಿಳ್ಳೆಯು ಸಾಕಿರುವ ನಾಯಿಗೆ ಯಾರಾದರೂ ಅವರಂತೆ ಟೋಪಿ ಹಾಕಿಕೊಂಡಿದ್ದರೆ ಸಾಕು ಅವರೊಂದಿಗೆ ಬಾಲ ಆಡಿಸುತ್ತಾ ಹೊರಟುಬಿಡುತ್ತದಂತೆ. ಅದೇ ರೀತಿ ನಾವು ಬೆರೆಯುವ ವ್ಯಕ್ತಿ ಯಾರು, ಎಂತವರು, ಒಳ್ಳೆಯವರೇ, ಸಭ್ಯರೇ ಮುಂತಾದುದನ್ನು ತಿಳಿದುಕೊಳ್ಳದೇ ವ್ಯವಹರಿಸಬಾರದು ಎಂಬ ಎಚ್ಚರಿಕೆಯ ಮಾತು ಈ ಗಾದೆಯಲ್ಲಿದೆ.

ಚಂಡೆಗೆ ಗುದ್ದು ಮೇದಂಗೆ ದುಡ್ಡು: ಕೊಡಗಿನ ಗೌಡರು ಡೋಲು ಎಂಬುದಕ್ಕೆ 'ಚಂಡೆ' ಎಂಬ ಪದವನ್ನು ಬಳಸುವರು. ಕೊಡಗಿನಲ್ಲಿ ಮೇದರ ಜಾತಿಯವರೂ ಪ್ರಮುಖರಾಗಿದ್ದಾರೆ. ಇಲ್ಲಿ

ಇವರು ಡೋಲು, ಓಲಗ, ಕಹಳೆ ಮುಂತಾದ ವಾದ್ಯಗಳನ್ನು ನುಡಿಸುವವರಾಗಿದ್ದಾರೆ. ಕೊಡಗಿನ ಕೊಡವ, ಗೌಡ, ಅಮ್ಮ ಕೊಡವ, ಹೆಗ್ಗಡೆ, ಕುಡಿಯ ಮುಂತಾದವರ ವಿವಾಹಗಳಲ್ಲಿ, ದೇವರ ಕಾರ್ಯಗಳಲ್ಲಿ, ಹಬ್ಬಗಳ ಆಚರಣೆಯಲ್ಲಿ, ಹಾಗೂ ಸಾವಿನ ಸಂದರ್ಭಗಳಲ್ಲಿ ಈ ಮೇದರು ವಾದ್ಯಗಾರರಾಗಿರುತ್ತಾರೆ. ಇವರಿಗೆ ಬಹಳಷ್ಟು ಬೇಡಿಕೆಯೂ ಇಲ್ಲಿದೆ. ಈ ಪ್ರದೇಶದಲ್ಲಿರುವ ಇವರನ್ನಿಟ್ಟುಕೊಂಡು ಗೌಡರು ಸೋಂಬೇರಿಗಳಾದವರಿಗೆ ಕೆಲಸ ಮಾಡದೆ ಇದ್ದರೆ ಏನೂ ಸಿಗುವುದಿಲ್ಲ, ವ್ಯಕ್ತಿಯು ದುಡಿದರೆ ಮಾತ್ರ ಅದರ ಫಲ ಸಿಗುವುದು ಎಂಬುದನ್ನು ಮೇದನು ಚಂಡೆ(ಡೋಲು) ಬಾರಿಸಿದರೆ ಮಾತ್ರ ಆತನಿಗೆ ಹಣ ಸಿಗುತ್ತದೆ ಇಲ್ಲವಾದಲ್ಲಿ ಇಲ್ಲ ಎಂಬುದರ ಮೂಲಕ ತಿಳಿಸುತ್ತಾರೆ.

ಒಂದು ಮಳೆಗೆ ಒಂದು ಕೊಡೆ ಹರ್ದಂಗೆ: ಕೊಡಗು ಜಿಲ್ಲೆಯು ಅಲ್ಲಿ ಬೀಳುವ ಮಳೆಯಿಂದಲೂ ಹೆಸರುವಾಸಿಯಾಗಿದೆ. ಮಳೆಗಾಲದಲ್ಲಿ ಇಲ್ಲಿ ಭಯಂಕರವಾಗಿ ಬಹಳ ರಭಸವಾಗಿ ಮಳೆ ಸುರಿಯುತ್ತದೆ. ಅತಿಯಾದ ಮಳೆಯಿಂದಾಗಿ ಹೊಳೆ, ಕೆರೆಗಳು ತುಂಬಿಕೊಂಡು ಗದ್ದೆ, ತೋಟ, ರಸ್ತೆಗಳೆಲ್ಲಾ ಮುಳುಗಿ ಸಂಚಾರ ಮಾಡುವುದಕ್ಕೆ ತೊಂದರೆಯಾಗುತ್ತದೆ. ಇಲ್ಲಿ ಜನರು ಕೊಡೆ(ಚತ್ರಿ)ಯನ್ನು ಹಿಡಿದುಕೊಂಡು ಓಡಾಡುತ್ತಾರೆ. ಮಳೆಯ ರಭಸಕ್ಕೆ ಕೊಡೆಗಳು ಮುರಿದು ಕಿತ್ತು ಹೋಗುತ್ತವೆ. ಪ್ರತಿ ವರ್ಷ ಹೊಸ ಕೊಡೆ ತೆಗೆಯಬೇಕಾದ ಪರಿಸ್ಥಿತಿ ಇರುತ್ತದೆ. ಒಂದು ಮಳೆ ಅಂದರೆ ಒಂದು ಮಳೆಗಾಲ ಎಂದರ್ಥ. ಒಂದು ಮಳೆಗಾಲಕ್ಕೆ ಒಂದು ಕೊಡೆ ಹರಿದುಕೊಂಡಂತೆ ಎಂಬುದು ಇದರ ಅರ್ಥವಾಗಿದೆ.

ಇಲ್ಲಿ ಏನಾದರೂ ಒಂದು ವಸ್ತು ಕೊಂಡರೆ ಅದನ್ನು ಒಂದೇ ಬಾರಿಗೆ ಹಾಳುಮಾಡುವವರ ಕುರಿತು ಈ ಗಾದೆಯನ್ನು ಬಳಸುವರು.

ಉದಾಹರಣೆಗೆ: ಅಂವಂಗೆ ಎಂತೇ ತಂಬಾ, ಅದ್ ಒಂದ್ ಮಳೆಗೆ ಒಂದ್ ಕೊಡೆ ಹರ್ದಂಗೆ. (ಅವನಿಗೆ ಏನೇ ತೆಗೆದುಕೊಡು ಬಾ ಅದು ಒಂದು ಮಳೆಗೆ ಒಂದು ಕೊಡೆ ಹರಿದಂತೆ)

ಅತ್ತೆಗೆ ಹೊಟ್ಟೆ ಮ್ಯಾಲೆ ಗ್ಯಾನ ಸೊಸೆಗೆ ಮೊಟ್ಟೆ ಮ್ಯಾಲೆ ಗ್ಯಾನ: ಕೊಡಗಿನ ಗೌಡ ಜನಾಂಗದವರ ಸ್ತ್ರೀಯರು ಕೊಡವ ಸ್ತ್ರೀಯರು ತೊಡುವಂತೆ ಸೀರೆಯ ಸೆರಗನ್ನು ಗಂಟು ಕಟ್ಟಿ ಉಡುವರು. ಗಾದೆಯಲ್ಲಿರುವ 'ಮೊಟ್ಟೆ' ಎಂಬ ಪದವು ಈ ಸೀರೆಯ ಸೆರಗನ್ನು ಸೊಂಟಕ್ಕೆ ಕಟ್ಟಿ ಬುಟ್ಟಿಯ ಆಕಾರದಲ್ಲಿ ಮಾಡಿಕೊಳ್ಳುವುದೇ ಆಗಿದೆ. ಇದಕ್ಕೆ 'ಮೊಟ್ಟೆ' ಎನ್ನುವರು. ಇದರಲ್ಲಿ ಗೌಡ ಮಹಿಳೆಯರು ತೋಟದಿಂದ ಹಣ್ಣು ಅಥವಾ ತರಕಾರಿ ಇತ್ಯಾದಿಗಳನ್ನು ಇಟ್ಟುಕೊಂಡು ಬರುವರು. ಇದು ಮಡಿಲು ಎಂಬರ್ಥದಲ್ಲಿದೆ. ಶಿಷ್ಟ ಕನ್ನಡದ 'ಅಜ್ಜಿಗೆ ಅರಿವೆ ಚಿಂತೆ ಮೊಮ್ಮಗಳಿಗೆ ಮಿಂಡನ ಚಿಂತೆ' ಎಂಬ ಗಾದೆಯನ್ನು ಕೊಡಗಿನ ಪ್ರಾದೇಶಿಕತೆಯ ಹಿನ್ನೆಲೆಯಲ್ಲಿ ಬಳಸಿಕೊಳ್ಳಲಾಗಿದೆ. ಸೊಸೆಯು ಅತ್ತೆಗೆ ತಿಳಿಯದೆ ಏನನ್ನಾದರೂ ಆಕೆಯ ಮಡಿಲಿನಲ್ಲಿ ಕಟ್ಟಿಕೊಂಡಿರುತ್ತಾಳೆ, ಆಕೆಗೆ ಅತ್ತೆಗೆ ತಿಳಿದರೆ ಏನು ಗತಿ ಎಂಬ ಚಿಂತೆ ಯಾವಾಗಲೂ ಇರುತ್ತದೆ. ಆದರೆ ಅತ್ತೆಗೆ ತನ್ನದೇ ಚಿಂತೆ. ತನ್ನ

ಮುಂದಿನ ಬದುಕಿನದೇ ಚಿಂತೆಯಾಗಿರುತ್ತದೆ. ಅಂದರೆ ಒಬ್ಬೊಬ್ಬರದೂ ಒಂದೊಂದು ಚಿಂತೆ ಇದರ ಮಧ್ಯೆಯೂ ಪರ ಚಿಂತನೆ ಮಾಡುವುದು, ಪರಹಿತ ಬಯಸುವುದು ಜೀವನದ ಧ್ಯೇಯವಾಗಬೇಕು ಎಂಬ ತಿಳುವಳಿಕೆ ಈ ಗಾದೆಯಲ್ಲಿದೆ.

೪.೧.೫. ಸಾಂಸ್ಕೃತಿಕ ಹಿನ್ನೆಲೆ:

ಸಾಂಸ್ಕೃತಿಕ ಎಂದರೆ ಒಂದು ಪ್ರದೇಶದ ಸಂಸ್ಕೃತಿಗೆ ಸಂಬಂಧಿಸಿದ ವಿಷಯಗಳಾಗಿವೆ. ಒಂದು ಪ್ರದೇಶದ ನಾಗರೀಕತೆ, ಬುದ್ಧಿ ಹಾಗೂ ಮನೋವಿಕಾಸಗಳಿಗೆ ಸಂಬಂಧಿಸಿದ ಅಂಶಗಳು ಇದಕ್ಕೆ ಒಳಪಡುತ್ತದೆ. ಕೊಡಗು ಜಿಲ್ಲೆಯ ಗೌಡ ಜನಾಂಗದವರ ಸಾಂಸ್ಕೃತಿಕ ಅಂಶಗಳ ಮೇಲೆ ಬೆಳಕು ಚೆಲ್ಲುವ ಕೆಲವು ಗಾದೆಗಳು ಕೆಳಗಿನಂತಿವೆ.

ತಾನ್ ತಿಂಬೊದೇ ತೌಡ್ ಪಾಲಿಗೆ ಹಂದಿ ಸಾಂಕಿಕಾದೆನಾ?: ಈ ಗಾದೆಯಿಂದ ಕೊಡಗಿನಲ್ಲಿರುವ ಒಂದು ವಿಶಿಷ್ಟ ಆಚರಣೆಯ ಬಗ್ಗೆ ನಮಗೆ ಮಾಹಿತಿ ಸಿಗುತ್ತದೆ. ಕೊಡಗಿನ ಪ್ರಮುಖ ಹಬ್ಬಗಳಲ್ಲಿ ಹುತ್ತರಿ ಹಬ್ಬವೂ ಒಂದು. ಈ ಹಬ್ಬವು ಕಳೆದ ನಂತರ ಒಂದು ನಿಗದಿತ ದಿನದಂದು 'ಊರೊರ್ಮೆ' ಎಂಬ ಸಂತೋಷಕೂಟವನ್ನು ನಡೆಸುವರು. ಇತ್ತೀಚೆಗೆ ಜಿಲ್ಲಾಮಟ್ಟದಲ್ಲಿ ಈ ಸಂತೋಷಕೂಟವನ್ನು ಆಚರಿಸುವರು. ಹಾಗೆಯೇ ಗ್ರಾಮಗಳಲ್ಲಿ ಆಯಾ ಗ್ರಾಮದ ಗೌಡರು ಒಟ್ಟಾಗಿ ಸೇರಿ ಸಂತೋಷಕೂಟ ನಡೆಸುವರು. ಅಲ್ಲಿ ಕೋಳಿ ಮತ್ತು ಹಂದಿಯ ಮಾಂಸಗಳ ಖಾದ್ಯಗಳನ್ನು ತಯಾರಿಸಿ, ತಾವು ಮನೆಯಿಂದ ತಯಾರಿಸಿ ತಂದಿರುವ ರೊಟ್ಟಿ, ಕಡುಬು ಇತ್ಯಾದಿಗಳೊಂದಿಗೆ ಸೇವಿಸುವರು. ಈ ಕೂಟದಲ್ಲಿ ಒಂದು ಕುಟುಂಬದಿಂದ ಇಂತಿಷ್ಟು ಎಂಬಂತೆ ಹಣವನ್ನು ಸಂಗ್ರಹ ಮಾಡಲಾಗಿರುತ್ತದೆ. ಈ ಹಣದಿಂದ ಒಂದು ಹಂದಿಯ ಮರಿಯನ್ನು ಖರೀದಿಸಿ ಮುಂದಿನ ಔತಣ ಕೂಟಕ್ಕೆ ಬಳಸಲು ಯಾರಾದರೂ ಒಬ್ಬರಿಗೆ ಅದನ್ನು ಸಾಕಲು ನೀಡಲಾಗುತ್ತದೆ. ಇದು ಆತನ ಪಾಲಿಗೆ ಬಂದಿರುವ ಹಂದಿಯಾಗುತ್ತದೆ. ಇವರು ಹಂದಿಗಳಿಗೆ ಆಹಾರವಾಗಿ ಭತ್ತದ ಹೊಟ್ಟನ್ನು (ಗೌ.ಕ.: ತೌಡು, ಉಮಿ) ಬೇಯಿಸಿ ತಿನ್ನಿಸುವರು. ಆದರೆ ಬಡವರು ಈ ಹಂದಿ ಸಾಕುವ ಜವಾಬ್ದಾರಿ ಹೊತ್ತು ಕೊಂಡರೆ ಅದನ್ನು ಸಾಕುವುದು ಕಷ್ಟವಾಗುತ್ತದೆ. ಅವರಿಗೇ ಬದುಕುವುದು ಕಷ್ಟ ಅದರಲ್ಲಿ ಹಂದಿಗೆ ಏನು ತಿನ್ನಿಸುತ್ತಾರೆ?. ಅಂದರೆ ನಮ್ಮಲ್ಲಿ ಜವಾಬ್ದಾರಿಯನ್ನು ನಿಭಾಯಿಸುವ ಶಕ್ತಿ ಇಲ್ಲದಿರುವಾಗ ಅದನ್ನು ಒಪ್ಪಿಕೊಳ್ಳಬಾರದು ಎಂದು ಈ ಗಾದೆಯು ಇಲ್ಲಿನ ವಿಶಿಷ್ಟ ಆಚರಣೆಯ ಹಿನ್ನೆಲೆಯಲ್ಲಿ ಇದೆ.

ಕಳ್‌ದ ಹುತ್ತರಿನ ಹಾಡಿ ಏನ್ ಸುಕ: ಈ ಗಾದೆ ಮಾತಿನಲ್ಲಿಯೂ ಕೊಡಗಿನ ಪ್ರಮುಖ ಹಬ್ಬವಾದ 'ಹುತ್ತರಿ' ಹಬ್ಬದ ಬಗ್ಗೆ ತಿಳಿಸಲಾಗಿದೆ. ಕೊಡಗಿನ ಶ್ರೀ ಇಗ್ಗುತ್ತಪ್ಪ ದೇವಾಲಯದಲ್ಲಿ ನಿರ್ಣಯಿಸಲಾದ ವೃಶ್ಚಿಕ ಮಾಸದ ಹನ್ನೊಂದನೇ ದಿನ ರೋಹಿಣಿ ನಕ್ಷತ್ರದಲ್ಲಿ ಈ ಹಬ್ಬವು ಆಚರಿಸಲ್ಪಡುತ್ತದೆ. ಇದು ಸುಗ್ಗಿ ಹಬ್ಬವೂ ಹೌದು. ಈ ಹಬ್ಬದಲ್ಲಿ ಕುಟುಂಬದ ಸದಸ್ಯರೆಲ್ಲರೂ

ದೊಡ್ಡಮನೆ(ಐನ್‌ಮನೆ)ಯಲ್ಲಿ ಸೇರಿ ವಿಧಿವಿಧಾನಗಳಿಂದ ಭತ್ತದ ತೆನೆಯನ್ನು ಗದ್ದೆಯಿಂದ ಮನೆಗೆ ತಂದು ಪೂಜಿಸಿ, ಹೊಸ ಬೆಳೆಯ ಆಗಮನದ ಸಂತೋಷವನ್ನು ಆಚರಿಸುವರು. ಬಗೆ ಬಗೆಯ ಆಹಾರಗಳನ್ನು ತಯಾರಿಸಿ ಸೇವಿಸುವರು. ಭತ್ತದ ಕದಿರನ್ನು(ತೆನೆ) ಐದು ಬಗೆಯ (ಆಲ, ಗೇರು, ಕುಂಬಳಿ, ಹಲಸು, ಮಾವು, ನೆಇೋಳಿ) ಎಲೆಗಳಲಿ ಸುತ್ತಿ ಅಚ್ಚೆ ನಾರುವಿನಲ್ಲಿ ಕಟ್ಟಿ ಮನೆಯ ಭತ್ತದ ಪತ್ತಾಯ (ಕಣಜ), ದನದ ಕೊಟ್ಟಿಗೆ ಮುಂತಾದೆಡೆ ಸಮೃದ್ಧಿಯಾಗಲೆಂದು ಕಟ್ಟುವರು. ಹೀಗೆ ಸುಮಾರು ಐದು ದಿನಗಳು ಈ ಹಬ್ಬವನ್ನು ಕೋಲಾಟ, ಪಿರಿಯಕಳಿ (ಯುದ್ಧ ನೃತ್ಯ)ಗಳ ಮೂಲಕ ಆಚರಿಸುತ್ತಾರೆ. ಹಬ್ಬದ ದಿನ ಕಳೆದ ಹುತ್ತರಿ ಹಬ್ಬದ ಬಗ್ಗೆ ಮಾತನಾಡಿ ಸಮಯ ಹಾಳುಮಾಡುವುದಕ್ಕಿಂತ ಈ ಹಬ್ಬದ ತಯಾರಿಯತ್ತ ಗಮನ ಹರಿಸುವುದು ಒಳ್ಳೆಯದು ಎಂಬ ಅರ್ಥ ಇಲ್ಲಿದೆ. ಅಂದರೆ ಹಿಂದೆ ನಡೆದ ವಿಷಯಗಳನ್ನು ಮತ್ತೆ ಮತ್ತೆ ಅದರ ಬಗ್ಗೆ ಪ್ರಸ್ತಾಪಿಸುತ್ತಿರುವುದರಿಂದ ಏನೂ ಪ್ರಯೋಜನವಿಲ್ಲ, ಸುಖವಿಲ್ಲ. ವ್ಯಥಾ ಸಮಯ ಹಾಳು ಎಂಬ ಹಿತನುಡಿ ಈ ಗಾದೆಮಾತಿನಲ್ಲಿದೆ.

ಕೊಡಗಿನ ಗೌಡ ಕನ್ನಡದ ಪರಿಸರದಲ್ಲಿ ಇರುವ ಅತ್ಯಮೂಲ್ಯವಾದ ಗಾದೆಗಳನ್ನು ಸಂಗ್ರಹ ಮಾಡಿಕೊಂಡು ಅವುಗಳ ವಿಷಯ ವಸ್ತುಗಳಿಗೆ ಅನುಗುಣವಾಗಿ ಈ ಕೆಳಗಿನಂತೆ ವಿಂಗಡಿಸಿಕೊಳ್ಳಲಾಗಿದೆ. ಈ ಗಾದೆಗಳು ಶಿಷ್ಟಕನ್ನಡದಲ್ಲಿಯೂ ಇವೆ. ಆದರೆ ಕೆಲವೊಂದು ಕಡೆ ಗೌಡಕನ್ನಡಕ್ಕೆ ರೂಪಾಂತರಗೋಡಿದೆ.

೪.೧.೬. ಗಿಡ-ಮರಗಳಿಗೆ ಸಂಬಂಧಿಸಿದ ಗಾದೆಗಳು:

ಚಾಳೆನ ಕೊಡಿ ಕಾಂಬಕಿಲೆ ಬಾಳೆನ ಕಂದ್ ಕಾಂಬಕಿಲೆ
(ತೆಂಗಿನ ಮರದ ತುದಿ ಕಾಣುವುದಿಲ್ಲ ಬಾಳೆಮರದ ಮರಿ ಕಾಣುವುದಿಲ್ಲ)
ಮರದ ಕಾವು ಮರಕೇ ಕೇಡ್
(ಮರದ (ಕೊಡಲಿ) ಕಾವು ಮರಕ್ಕೇ ಕುತ್ತು)
ನಿನ್ನೆನ ಮಳೆಗೆ ಇಂದ್ ಹುಟ್ಟಿದ ಚಗ್‌ತೆ
(ನಿನ್ನೆಯ ಮಳೆಗೆ ಇಂದು ಹುಟ್ಟಿದ ಸಗಟೆ ಸೊಪ್ಪಿನ ಗಿಡ)
ಕೆಸ ಸೊಪ್ಪು ತೊರ್ಸಿದಂಗೆ
(ಕೆಸುವಿನ ಸೊಪ್ಪು ತುರಿಸಿದಂತೆ)
ಕುಂಬ್ ಮರ ಚಿಗ್‌ರಿದಂಗೆ
(ಟೊಳ್ಳು(ಮರಕ್ಕೆ ಹಿಡಿಯುವ ಕುಟ್ಟೆ, ಹುಳುಕು) ಮರವು ಚಿಗುರಿದ ಹಾಗೆ)
ಹೊಳೆ ಕರೆಲಿದ್ದ ಮರಕೆ ನೀರ್ ಯಾಕೆ?
(ಹೊಳೆಯ ದಡದಲ್ಲಿದ್ದ ಮರಕ್ಕೆ ನೀರು ಏಕೆ?)

ಹಗ್ಗ ಹಾವಾದುಲೆ ನುಗ್ಗೆ ನೊಜ ಆದುಲೆ

(ಹಗ್ಗ ಹಾವಾಗದು ನುಗ್ಗೆ ನೊಗವಾಗದು)

ಕೆಸನ ಎಲೆಲಿ ನೀರ್ ಕಟ್ಟಿದಂಗೆ

(ಕೆಸುವಿನ ಎಲೆಯಲ್ಲಿ ನೀರು ಕಟ್ಟಿದ ಹಾಗೆ)

ಗಿಡಲಿ ಬಗ್ಗಾದ್ ಮರಲಿ ಬಗ್ಗಿದೆನಾ

(ಗಿಡವಾಗಿ ಬಗ್ಗದ್ದು ಮರವಾಗಿ ಬಗ್ಗೀತೆ) ಇತ್ಯಾದಿ.

೪.೧.೭. ಬೇಸಾಯಕ್ಕೆ ಸಂಬಂಧಿಸಿದ ಗಾದೆಗಳು:

ಅಗೆದ್ ಗುಣ ಬೆಳೆಲಿ ಕಾಂಬೊದು

(ಪೈರಿನ ಗುಣ ಬೆಳೆಯಲ್ಲಿ ಕಾಣುವುದು)

ಬಿತ್ತಿಕೆ ಮುಂದೆ ಗದ್ದೆ ನೋಡೋಕು

(ಬಿತ್ತುವ ಮೊದಲು ಹೊಲ ನೋಡಬೇಕು)

ಅನ್ನ ಹಾಕಿದ ಮನೆ ಗೊಬ್ಬರ ಹಾಕಿದ ಗದ್ದೆ ಕೆಡ್ದುಲೆ

(ಅನ್ನ ಹಾಕಿದ ಮನೆಯು ಗೊಬ್ಬರ ಹಾಕಿದ ಗದ್ದೆಯೂ ಹಾಳಾಗುವುದಿಲ್ಲ)

ಆದು ಹೋದು ದೇವರಿಚ್ಚೆ ಹೂಡ್ದು ಬಿತ್ತುದು ತನ್ನಿಚ್ಚೆ

(ಆಗುವುದು ಹೋಗುವುದು ದೇವರಿಚ್ಚೆ ಉಳುವುದು ಬಿತ್ತುವುದು ತನ್ನ ಇಚ್ಚೆ)

ಮಳೆ ಇಲ್ಲದ ಅಗೆನೂ ಅಯ್ಯೆ ಇಲ್ಲದ ಕೂಸುನೂ ಒಂದೇ

(ಮಳೆ ಇಲ್ಲದ ಪೈರು ತಾಯಿ ಇಲ್ಲದ ಮಗು ಎರಡೂ ಒಂದೇ)

ಮಾಡ್ದಂವ ಉಂಡತ್ ಮಲ್ಗಿದಂವ ಕೆಟ್ಟತ್

(ಮಾಡಿದವನು ತಿಂದನು ಮಲಗಿದವನು ಹಾಳಾದನು)

ಬ್ಯಾಸಾಯ ಮಾಡ್ದಂವ ಬ್ಯಾಗ ಸಾಯಕಿಲೆ

(ಬೇಸಾಯ ಮಾಡಿದವನು ಬೇಗ ಸಾಯಲಿಕ್ಕಿಲ್ಲ)

ಹೊಲ ಬಿತ್ತಿ ನೋಡ್ ನೆಲ ಸಾರ್ಸಿ ನೋಡ್

(ಹೊಲ ಬಿತ್ತಿ ನೋಡು ನೆಲ ಸಾರಿಸಿ ನೋಡು)

ಹದ ನೋಡಿ ಹರ್ಗೋಕು ಬಜೆ ನೋಡಿ ಬಿತ್ತೋಕು

(ಹದ ನೋಡಿ ಹರಗಬೇಕು ಬಜೆ (ವಾಸನೆಯುಳ್ಳ ಒಂದು ಬಗೆಯ ಉಪಯುಕ್ತ ಸಸ್ಯ ಮತ್ತು ಅದರ ಬೇರು) ನೋಡಿ ಬಿತ್ತಬೇಕು)

ಬರಣಿ ಮಳೆ ಬಿದ್ದರೆ ದರಣಿ ತುಂಬಿದೆ

(ಭರಣಿ ಮಳೆ ಬಿದ್ದರೆ ಧರಣಿ ತುಂಬುತ್ತದೆ)

ತನ್ನ ಬಲನೇ ಬಲ ಬತ್ತದ್ ಪಲನೇ ಪಲ

(ತನ್ನ ಬಲವೇ ಬಲ ಭತ್ತದ ಫಲವೇ ಫಲ)
ಕಾಲ ಮುಗಿಯಕೆ ಮುಂದೆ ಬಿತ್ತಿ ಆಕು
(ಕಾಲ ಮುಗಿಯುವ ಮುಂಚೆ ಬಿತ್ತಿ ಆಗಬೇಕು)
ಸಾಲಾಗಿ ಬಿತ್ತಿದ್ ಅಗಲಾಗಿ ಬಂದೆ
(ಸಾಲಾಗಿ ಬಿತ್ತಿರುವುದು ಅಗಲವಾಗಿ ಬರುತ್ತದೆ)
ರಟ್ಟೆ ಮುರಿಯೋಕು ರೊಟ್ಟಿ ತಿಂಬೋಕು)
ಅಂಗೈ ಹಂಗೆ ಗದ್ದೆ ಮಾಡ್ರೆ ಕಡಿಕೆ ತುಂಬ ಫಲ
(ಅಂಗೈ ಹಾಗೆ ಗದ್ದೆ ಮಾಡಿದರೆ ಕಡಿಕೆ ತುಂಬ ಫಲ)
ಆಡಿಕೆಟ್ಟ ಜನಯಿಲ್ಲೆ ಹೂಡಿ ಕೆಟ್ಟ ಗದ್ದೆಯಿಲ್ಲೆ
(ಆಡಿ ಕೆಟ್ಟ ಜನರಿಲ್ಲ ಉತ್ತು ಕೆಟ್ಟ ಗದ್ದೆಯಿಲ್ಲ)
ಕಂಡವನ ಗದ್ದೆ ನೆಡ್‌ದರ ಬದ್‌ಲ್ ತುಂಡ್ ಗದ್ದೆ ಮಾಡುದೇ ಒಳ್ಳೆದ್
(ಕಂಡವರ ಗದ್ದೆ ನೆಡುವುದರ ಬದಲು ತನ್ನ ಪಾಲಿಗಿರುವ ಗದ್ದೆ ನೆಡುವುದೇ ಲೇಸು)
ಗದ್ದೆ ಇದ್ದಂವ ಕುದ್ದ್ ತೀಂತ್
(ಗದ್ದೆ ಇದ್ದವನು ಕುಳಿತು ತಿಂದನು)
ಎಳ್ಳಿದಸ್ಟ್ ಮಣ್ಣ್ ಚಪ್ಪಿದಸ್ಟ್ ರಸ
(ಅಗೆದಷ್ಟು ಮಣ್ಣು ಸವಿದಷ್ಟು ರುಚಿ)
ಕೈ ಕೆಸ್‌ರಾದರೆ ಬಾಯಿ ಮೊಸ್‌ರ್
(ಕೈ ಕೆಸರಾದರೆ ಬಾಯಿ ಮೊಸರು)

೪.೧.೮. ಸಂಬಂಧವಾಚಿಗಳಿಗೆ ಸಂಬಂಧಿಸಿದ ಗಾದೆಗಳು:

ಅಜ್ಜಿ ಸಾಂಕಿದ ಪುಳ್ಳಿ ಬೊಜ್ಜ(ತಿಥಿ)ಕೂ ಆಕಿಲೆ
(ಅಜ್ಜಿ ಸಾಕಿದ ಮೊಮ್ಮಗಳು ತಿಥಿ ಊಟ ಮಾಡಲೂ ಪ್ರಯೋಜನವಿಲ್ಲ)
ಅಜ್ಜಿಗ್ಯಾಕೆ ಕುಸಾಲು ಕೆಸಕ್ಯಾಕೆ ಮಸಾಲು
(ಅಜ್ಜಿಗೆ ಯಾಕೆ ತಮಾಷೆ ಕೆಸುವಿಗೆ ಯಾಕೆ ಮಸಾಲು)
ನೂಲ್‌ನಂಗೆ ಸೀರೆ ಅಯ್ಯೆನಂಗೆ ಮಗ
(ನೂಲಿನಂತೆ ಸೀರೆ ತಾಯಿಯಂತೆ ಮಗಳು)
ಅತ್ತೆಗೆ ಹೊಟ್ಟೆ ಮ್ಯಾಲೆ ಗ್ಯಾನ ಸೊಸೆಗೆ ಮೊಟ್ಟೆ ಮ್ಯಾಲೆ ಗ್ಯಾನ
(ಅತ್ತೆಗೆ ಹೊಟ್ಟೆ ಮೇಲೆ ಯೋಚನೆ ಸೊಸೆಗೆ ಮಡಿಲಿನ ಮೇಲೆ ಯೋಚನೆ)
ಅಕ್ಕಿ ತಕಂಡ್ ಅಕ್ಕನಲ್ಲಿಗೆ ಹೋಕಾ?

(ಅಕ್ಕನ ಮನೆಗೆ ಅಕ್ಕಿ ತೆಗೆದುಕೊಂಡು ಹೋಗಬೇಕೆ?)

ಅತ್ತೆನ ಮ್ಯಾಲೆ ಸಿಟ್ಟ್ ಕೊತ್ತಿ ಮ್ಯಾಲೆ

(ಅತ್ತೆ ಮೇಲಿನ ಸಿಟ್ಟು ಕೊತ್ತಿಯ ಮೇಲೆ)

ಹಿರಿಯಕ್ಕನ ಬುದ್ದಿ ಮನೆ ಮಕ್ಕಳಿಗೆಲ್ಲಾ

(ಹಿರಿಯಕ್ಕನ ಚಾಳಿ ಮನೆ ಮಕ್ಕಳಿಗೆಲ್ಲಾ)

ಹಿರಿ ಸೊಸೆ ಆಕಾಗದ್ ಹಿಂದೆಬರಿ ಬಾಗ್‌ಲ್ ಆಕಾಗದ್

(ಹಿರಿ ಸೊಸೆ ಆಗಬಾರದು ಹಿಂಬದಿಯ ಬಾಗಿಲು ಆಗಬಾರದು)

ಹಿರಿ ಮಜ ಆಕಾಗದ್ ಕಿರಿ ಅಳಿಯ ಆಕಾಗದ್

(ಹಿರಿ ಮಗ ಆಗಬಾರದು ಕಿರಿ ಅಳಿಯ ಆಗಬಾರದು)

ಅವ್ವ ಇದ್ದರೆ ತೌರು ಮನೆ ಗಂಡ ಇದ್ದರೆ ಗಂಡನ ಮನೆ

(ತಾಯಿ ಇದ್ದರೆ ತೌರುಮನೆ ಗಂಡ ಇದ್ದರೆ ಗಂಡನ ಮನೆ)

ಕೂಸ್ನ ಕಂಕ್‌ಳ್‌ಲಿ ಮಡ್‌ಗಿಕಂಡ್ ಊರ್‍ರೂರ ಹುಡ್‌ಕಿದಂಗೆ

(ಮಗುವನ್ನು ಕಂಕುಳಲ್ಲಿ ಇಟ್ಟುಕೊಂಡು ಊರೆಲ್ಲಾ ಹುಡುಕಿದರಂತೆ)

ಅಟ್ಟಲಿ ಅಕ್ಕಿ ಇದ್ದರೆ ಅವ್ವಂಗೆ ಬಿರ್‌ದ್

(ಅಟ್ಟದಲ್ಲಿ ಅಕ್ಕಿ ಇದ್ದರೆ ತಾಯಿಗೆ ಬಿರುದು)

ಅವ್ವನ ಹಾಲ್ ಕುಡ್ದ್ ಹೊಟ್ಟೆ ತುಂಬದಿದ್ದೆನಾ?

(ತಾಯಿಯ ಹಾಲು ಕುಡಿದು ಹೊಟ್ಟೆ ತುಂಬದಿರುತ್ತದೆಯೇ?)

ಒಲ್ಲದ ಗಂಡಂಗೆ ಮೊಸ್‌ರ್‌ಲಿ ಕಲ್ಲ್

(ಒಲ್ಲದ ಗಂಡನಿಗೆ ಮೊಸರಲ್ಲಿ ಕಲ್ಲು)

ಬರ ಬಂದ ಕಾಲಕೆ ನನ್ನ ಮಜ ಉಂಬಕೆ ಕಲ್ತತ್

(ಬರ ಬರುವ ಕಾಲಕ್ಕೆ ಮಗ ಉಂಬೋದು ಕಲಿತ)

ಅತ್ತೆಗೊಂದ್ ಕಾಲ ಸೊಸೆಗೊಂದ್ ಕಾಲ

(ಅತ್ತೆಗೆ ಒಂದು ಕಾಲ ಸೊಸೆಗೆ ಒಂದು ಕಾಲ)

ಅರ್ದ ರೊಟ್ಟಿ ಕೊಟ್ಟರೆ ಅತ್ತೆ ಕಡೆ ಇಡೀ ರೊಟ್ಟಿ ಕೊಟ್ಟರೆ ಸೊಸೆ ಕಡೆ

(ಅರ್ಧ ರೊಟ್ಟಿ ಕೊಟ್ಟರೆ ಅತ್ತೆ ಕಡೆ ಪೂರ್ತಿ ರೊಟ್ಟಿ ಕೊಟ್ಟರೆ ಸೊಸೆ ಕಡೆ) ಇತ್ಯಾದಿ

೪.೧.೯. ವೃತ್ತಿಗೆ ಸಂಬಂಧಿಸಿದ ಗಾದೆಗಳು:

ಕೆಲ್ಸ ಇಲ್ಲದ ಆಚಾರಿ ಕೂಸ್‌ನ ಕುಂಡೆ ಕೆತ್ತಿತ್ ಗಡ

(ಕೆಲಸ ಇಲ್ಲದ ಆಚಾರಿ ಮಗುವಿನ ಅಂಡು ಕೆತ್ತಿದನಂತೆ)

ಕೊಲ್ಲನ ಕತ್ತಿ ಕೊಲ್ಲಂಗೇ ಕೇಡ್

(ಬಡಗಿಯ ಕತ್ತಿ ಬಡಗಿಗೇ ಕುತ್ತು)

ಕಳ್ಳಂಗೆ ಗೊತ್ತುಟ್ಟಾ ಮನೆದ್ ಗರೀಬತನ

(ಕಳ್ಳನಿಗೆ ಗೊತ್ತೇ ಮನೆಯ ಬಡತನ)

ಕಳ್ಳ ದೇವಂಗೆ ಕೊಳ್ಳಿ ಪೂಜಾರಿ

(ಕಳ್ಳ ದೇವರಿಗೆ ಕೊಳ್ಳಿ ಪೂಜಾರಿ)

ಕಳ್ಳನ ಬುದ್ಧಿ ಕಳ್ಳಂಗೇ ಗೊತ್ತು

(ಕಳ್ಳನ ಬುದ್ಧಿ ಕಳ್ಳನಿಗೇ ಗೊತ್ತು)

ಮಡ್ಕೆ ಮಾರೋವ್‌ಕೆ ಮಡ್ಕೆಲೇ ಗಂಜಿ ಬೇಕ್

(ಮಡಿಕೆ ಮಾರುವವರಿಗೆ ಮಡಿಕೆಯಲ್ಲೇ ಗಂಜಿ ಬೇಕು)

ಸಿಪಾಯಿ ಎಂದೂ ರಾಜನಾಕಿಲೆ

(ಸಿಪಾಯಿ ಎಂದೂ ರಾಜನಾಗುವುದಿಲ್ಲ)

೪.೧.೧೦. ಆಹಾರ ಪದಾರ್ಥಗಳಿಗೆ ಸಂಬಂಧಿಸಿದ ಗಾದೆಗಳು:

ಚಪ್ಪೆ ಅನ್ನಕಿಂತ ಉಪ್ಪಾಕಿದ ಗಂಜಿ ಒಳ್ಳೆದ್

(ಸಪ್ಪೆ ಅನ್ನಕ್ಕಿಂತಾ ಉಪ್ಪು ಹಾಕಿದ ಗಂಜಿಯೇ ಲೇಸು)

ಮಡ್ಕೆ ಹಾಲ್‌ಗೆ ತುಳಿ ಹುಳಿ ಸಾಕ್

(ಮಡಿಕೆ ಹಾಲಿಗೆ ಒಂದು ತೊಟ್ಟು ಹುಳಿ ಸಾಕು)

ತಂಗ್‌ಳ್ ಉಂಬೋವಂಗೆ ಪಾಯ್ಸದ ಗ್ಯಾನ

(ತಂಗಳು ತಿನ್ನುವವನಿಗೆ ಪಾಯಸದ ಯೋಚನೆ)

ಹಾಲ್ ಕುಡ್ದಂವ ಹಾಳಾತ್ಲೆ

(ಹಾಲು ಕುಡಿದವನು ಹಾಳಾಗಲಿಲ್ಲ)

ಕೇತ್ರಪ್ಪಂಗೆ ಪಾತ್ರೋಡೆ

(ತಿನ್ನುವವನಿಗೆ ಪಾತ್ರೆಯನ್ನೇ ಕೊಟ್ಟಹಾಗೆ)

ಹಸ್‌ನ ಹಾಲ್‌ಗೆ ನಂಜ್ ಇಲ್ಲೆ

(ಹಸುವಿನ ಹಾಲಿನಲ್ಲಿ ವಿಷವಿಲ್ಲ)

ಹಂಗ್‌ನ ಅನ್ನಕಿಂತ ತಂಗ್‌ಳ್ ಅನ್ನ ಮೇಲ್

(ಹಂಗಿನ ಅನ್ನಕಿಂತ ತಂಗಳು ಅನ್ನವೇ ಲೇಸು)

ಜೇನ್ ಕೊಯ್ದಂವ ಕೈ ನೆಕ್ಕದಿರುದಾ

(ಜೇನು ಕುಯಿದವನು ಕೈ ನೆಕ್ಕದೇ ಇರುವನಾ)

ಎಲ್ಲರ ಮನೆ ದೋಸೆ ತೂತ

(ಎಲ್ಲರ ಮನೆ ದೋಸೆ ತೂತು)

ಮಜ್ಜಿಗೆಗೆ ಬಂದಂವಂಗೆ ಯಾಕೆ ಎಮ್ಮೆದ್ ಕ್ರಯ

(ಮಜ್ಜಿಗೆಗೆ ಬಂದವನಿಗೆ ಏಕೆ ಎಮ್ಮೆಯ ಕ್ರಯ)

ಎಮ್ಮೆ ಸತ್ತಾಕನ ಮೊಸ್ರ್‌ದ್ ಹುಳಿ ಗೊತ್ತಾದು

(ಎಮ್ಮೆ ಸತ್ತ ಮೇಲೆಯೇ ಮೊಸರಿನ ಹುಳಿ ಗೊತ್ತಾಗುವುದು)

೪.೧.೧೧. ಕೆಲವು ಜಾತಿಗಳನ್ನು ತಿಳಿಸುವ ಗಾದೆಗಳು:

ನೆಳ ತಿಂದ್ ಜಾತಿ ಕೆಡ್ಸಿಕಂಡಂಗೆ

(ನೊಣ ತಿಂದು ಜಾತಿ ಕೆಡಿಸಿಕೊಂಡ ಹಾಗೆ)

ಕೊಂಕಣಿ ಹೋದ ಊರ್ ಹಾಳ್

(ಕೊಂಕಣಿ ಹೋದ ಊರು ಹಾಳು)

ಮಾಪ್‌ಳೆ ಸಾಂಕಿದ ನಾಯಿ ತೊಪ್ಪಿ ಹಾಕಂಡವರೊಟ್ಟಿಗೆ ಹೋದೆ

(ಮಾಪಿಳ್ಳೆ ಸಾಕಿದ ನಾಯಿ ಟೋಪಿ ಹಾಕಿದವರ ಜೊತೆಗೆ ಹೋಗಿಬಿಡುತ್ತದೆ)

ಹಾರ್‍ರಂವ ಮಾಡ್ದ್ ಪಿಂಡಕೆ ಗೌಡ ಮಾಡ್ದ್ ಹೆಂಡಕೆ

(ಬ್ರಾಹ್ಮಣ ಮಾಡಿದ್ದು ಪಿಂಡಕ್ಕೆ ಗೌಡ ಮಾಡಿದ್ದು ಹೆಂಡಕ್ಕೆ)

ಬಂಟನ ಅಬ್ಬರ ಕೆಸಕೆ ಗೊಬ್ಬರ

(ಬಂಟನ ಅಬ್ಬರ ಕೆಸುವಿಗೆ ಗೊಬ್ಬರ)

ಚಂಡೆಗೆ ಗುದ್ದು ಮೇದಂಗೆ ದುಡ್ಡು

(ಡೋಲಿಗೆ ಗುದ್ದು ಮೇದನಿಗೆ ದುಡ್ಡು)

ಬಿಲ್ಲಂವ ಬೊಯ್ಯುದು ತಪ್ಪಿರೆ ಕೊಲ್ಲುದು

(ಬಿಲ್ಲವನು ಬಯ್ಯುವನು ಇಲ್ಲದಿದ್ದರೆ ಕೊಲ್ಲುವನು)

ಕರಿ ಹಾರ್‍ರಂವನ ಬೆಳಿ ಸೂದ್ರನ ನಂಬಿಕಾಗದ್

(ಕಪ್ಪು ಬ್ರಾಹ್ಮಣನನ್ನು ಬಿಳಿ ಶೂದ್ರನನ್ನು ನಂಬಬಾರದು) ಇತ್ಯಾದಿ

೪.೧.೧೨. ಮಳೆಗೆ ಸಂಬಂಧಿಸಿದ ಗಾದೆಗಳು:

ಒಂದ್ ಮಳೆಗೆ ಒಂದ್ ಕೊಡೆ ಹರ್ದಂಗೆ

(ಒಂದು ಮಳೆಗೆ ಒಂದು ಕೊಡೆ ಹರಿದಂತೆ)

ಮಳೆಯಿಲ್ಲದ ಅಗೆನೂ ಅಯ್ಯೆಯಿಲ್ಲದ ಕೂಸೂ ಒಂದೇ

(ಮಳೆಯಿಲ್ಲದ ಪೈರೂ ತಾಯಿಯಿಲ್ಲದ ಮಗು ಎರಡೂ ಒಂದೇ)

ಸೊರಿಯ ಮಳೆ ಅರೆಗಳಿಗೆ ಸೋನೆ ದಿನಯಿಡೀ

(ಸುರಿವ ಮಳೆ ಅರೆಗಳಿಗೆ ಸೋನೆ ಮಳೆ ದಿನವಿಡೀ)

ನಿನ್ನೆನ ಮಳೆಗೆ ಇಂದು ಹುಟ್ಟಿದ ಚಗ್‌ತೆ

(ನಿನ್ನೆಯ ಮಳೆಗೆ ಇಂದು ಹುಟ್ಟಿದ ಸಗಟೆ ಸೊಪ್ಪಿನ ಗಿಡ) ಇತ್ಯಾದಿ

೪.೧.೧೩. ಬೆಂಕಿಗೆ ಸಂಬಂಧಿಸಿದ ಗಾದೆಗಳು:

ಕಿಚ್ಚ್‌ತ ಹೇಳ್‌ರೆ ಬಾಯಿ ಬೆಂದೋಲೆ

(ಬೆಂಕಿ ಎಂದು ಹೇಳಿದರೆ ಬಾಯಿ ಬೆಂದು ಹೋಗುವುದಿಲ್ಲ)

ಬೆಂದವಂಗೇ ಗೊತ್ತು ಬೆಂಕಿದ್ ಉರಿ

(ಬೆಂದವನಿಗೇ ಗೊತ್ತು ಬೆಂಕಿಯ ಉರಿ)

ಸುಟ್ಟವಂಗೇನ್ ಗೊತ್ತ್ ಸುಟ್ಟಗಾಯದ ಬ್ಯಾನೆ

(ಸುಟ್ಟವನಿಗೇನು ಗೊತ್ತು ಸುಟ್ಟ ಗಾಯದ ನೋವು)

ಕಿಚ್ಚಿ ಮನೆದ್‌ತ ಹೇಳಿ ಮುಟ್ಟಿಕಾದೆನಾ?

(ಬೆಂಕಿ ಮನೆಯದ್ದೆಂದು ಮುಟ್ಟಲಿಕ್ಕಾಗುತ್ತದೆಯೇ?) ಇತ್ಯಾದಿ

೪.೧.೧೪. ಪ್ರಾಣಿ ಪಕ್ಷಿಗಳಿಗೆ ಸಂಬಂಧಿಸಿದ ಗಾದೆಗಳು:

ಎಮ್ಮೆ ಸತ್ತಾಕನ ಮೊಸ್‌ರ್‌ದ್ ಹುಳಿ ಗೊತ್ತಾದು

(ಎಮ್ಮೆ ಸತ್ತ ಮೇಲೆಯೇ ಮೊಸರಿನ ಹುಳಿ ಗೊತ್ತಾಗುವುದು)

ನಾಯಿ ಸಂತೆಗೋದಂಗೆ

(ನಾಯಿ ಸಂತೆಗೆ ಹೋದ ಹಾಗೆ)

ನಾಯಿ ಬಾಲಕೆ ಸೂಂತ್ರಿ ಹಾಕಿದಂಗೆ

(ನಾಯಿ ಬಾಲಕ್ಕೆ ದಬ್ಬೆ ಕಟ್ಟಿದ ಹಾಗೆ)

ದನ ನೋಡಿಕೆ ಹುಲಿನ ಬುಟ್ಟಂಗೆ

(ದನಕಾಯಲು ಹುಲಿಯನ್ನು ಬಿಟ್ಟಂತೆ)

ಕೈಲಾಗದ ಕಾಕೆ ಮಡ್‌ಕೆನೇ ಹೊತ್ತ್‌ಕಂಡ್ ಹಾರ್‌ತ್ಗಡ

(ಕೈಯಲ್ಲಾಗದ ಕಾಗೆ ಮಡಿಕೆಯನ್ನೇ ಹೊತ್ತುಕೊಂಡು ಹಾರಿತಂತೆ)

ಕಾಕೆ ಕೂರ್‌ಕನ ಕೊಂಬೆ ಮುರ್ದಂಗೆ

(ಕಾಗೆ ಕೂರುವಾಗ ಕೊಂಬೆ ಮುರಿದಹಾಗೆ)

ಆಡ್ ಎಸ್ಟ್ ಬೆಳ್ದರೂ ಆನೆ ಆಕಿಲೆ

(ಆಡು ಎಷ್ಟು ಬೆಳೆದರೂ ಆನೆ ಆಗುವುದಿಲ್ಲ)

ಕ್ವಾಡ ಮನೆ ಕಟ್ಟಿದಂಗೆ

(ಕೋತಿ ಮನೆ ಕಟ್ಟಿದ ಹಾಗೆ)

ಕಾಸಿಗೋದರೂ ಕಾಸಿಗೊಂದು ಕುದುರೆ

(ಕಾಶಿಗೆ ಹೋದರೂ ಕಾಸಿಗೆ ಒಂದು ಕುದುರೆ)

ಕ್ವಾಡ ಬಾಲನ ಅಡಿಗಾಕಂಡ್ ಮುಚ್ಚನ ಬಾಲನ ಅಳ್ತ್ ಗಡ

(ಕೋತಿ ತನ್ನ ಬಾಲ ಕೆಳಗೆ ಬಿಟ್ಟು ಮುಚ್ಚದ ಬಾಲವನ್ನು ಅಳೆಯಿತಂತೆ)

ಹಸ್‌ನ ಹಾಲ್‌ಗೆ ನಂಜ್ ಇಲ್ಲೆ

(ಹಸುವಿನ ಹಾಲಿಗೆ ನಂಜು ಇಲ್ಲ)

ಸತ್ತ ಎಮ್ಮೆಗೆ ಹಾಲ್ ಜಾಸ್ತಿ

(ಸತ್ತುಹೋದ ಎಮ್ಮೆಗೆ ಹಾಲು ಹೆಚ್ಚು)

ಸಾಯ ಎತ್ತ್‌ಗೆ ಮೇಯ ಗ್ಯಾನ

(ಸಾಯುವ ಎತ್ತಿಗೆ ಮೇಯುವ ಯೋಚನೆ)

ನಾಯಿ ಮುಟ್ಟಿದ ಮಡ್‌ಕೆ ನಾಯಿಗೆ

(ನಾಯಿ ಮುಟ್ಟಿದ ಮಡಿಕೆ ನಾಯಿಗೆ)

ನೂರ್ ಎಲಿ ತಿಂದಮ್ಯಾಲೆ ಕೊತ್ತಿ ಸನ್ಯಾಸಿ ಆದಂಗೆ

(ನೂರು ಇಲಿ ತಿಂದ ನಂತರ ಬೆಕ್ಕು ಸನ್ಯಾಸಿ ಆದಹಾಗೆ)

ರಾಜನ ಕುದುರೆ ಲಾಯಲೇ ಮುದಿ ಆತ್

(ರಾಜನ ಕುದುರೆ ಲಾಯದಲ್ಲೇ ಮುದಿ ಆಯಿತು)

ಆನೆ ಹೊತ್ತವಂಗೆ ಆನೆದ್ ಬಾಲ ತೂಕ ಆದೆನಾ?

(ಆನೆ ಹೊತ್ತವನಿಗೆ ಆನೆ ಬಾಲ ಭಾರ ಆಗುತ್ತದೆಯೇ?)

ಎತ್ತ್ ಹಾರಿಕೆ ಮುಂದೆ ಕೌಂದಿ ಹಾರುದು

(ಎತ್ತು ಹಾರುವ ಮೊದಲೇ ಭುಜ ಹಾರುವುದು)

ಒಂದ್ ಎತ್ತ್ ಎತ್ತಲ್ಲೆ ಒಂದ್ ಕೂಸು ಕೂಸಲ್ಲೆ

(ಒಂದು ಎತ್ತು ಎತ್ತಲ್ಲ ಒಂದು ಮಗು ಮಗುವಲ್ಲ)

ಕೇಡ್ ಕಾಲಕೆ ಕುದುಕ ಮೊಟ್ಟೆ ಹಾಕುದು

(ಕೆಟ್ಟ ಕಾಲಕ್ಕೆ ನರಿ ಮೊಟ್ಟೆ ಹಾಕುವುದು)

ಎಸಂಡೂ ಇಲ್ಲೆ ಎಸಂಡ್‌ಗಾಕಿದ ಕೈಯ್ಯೂ ಇಲ್ಲೆ

(ಏಡಿಯೂ ಇಲ್ಲ ಏಡಿ ಹಿಡಿಯಲು ಹಾಕಿದ ಕೈಯ್ಯೂ ಇಲ್ಲ)

ಕಾಣದ ನಾಯಿ ಕಡುಂಬುಟ್ಟ್ ತಿಂದಂಗೆ

(ನಾಯಿ ಎಂದೂ ಕಾಣದೆ ಕಡುಬು ತಿಂದಂತೆ)

ಎರಣೆ ತಿಂದ ಕೊತ್ತಿನಂಗೆ

(ಹಾವುರಾಣಿ ತಿಂದ ಬೆಕ್ಕಿನ ಹಾಗೆ)

ಅರೆ ಮಕ್ಕ ಕೆಲ್ಸಕೆ ಅರೆ ಕೋಳಿ ಗೆಯಿಪುಗೆ

(ಅರೆ ಮಕ್ಕಳು ಕೆಲಸಕ್ಕೆ ಅರೆ ಕೋಳಿ ಸಾರಿಗೆ)

ಹುಲಿ ಹುಟ್ಟಿದ ಕಾಡ್‌ಲಿ ಹುಲಿ ಹುಟ್ಟದಿರಿಕಿಲೆ

(ಹುಲಿ ಹುಟ್ಟಿದ ಕಾಡಲ್ಲಿ ಹುಲಿ ಹುಟ್ಟದೆ ಇರಲಿಕ್ಕಿಲ್ಲ)

ನಾಯಿಗೆ ಹೇಳ್‌ಕನ ನಾಯಿ ಬಾಲಕೆ ಹೆಳ್‌ತ್‌ಗಡ

(ನಾಯಿಗೆ ಹೇಳುವಾಗ ನಾಯಿ ಬಾಲಕ್ಕೆ ಹೇಳಿತಂತೆ)

ಕನ್ನಡಿ ಬೊಳಿಗೆ ಕಾಕೆ ಹಾರ್ದಂಗೆ

(ಕನ್ನಡಿಯ ಬೆಳಕಿಗೆ ಕಾಗೆ ಹಾರಿದ ಹಾಗೆ)

ಗಿಣಿನಂಗೆ ಸಾಂಕಿ ಗಿಡ್‌ಇನ ಕೈಗೆ ಕೊಟ್ಟಂಗೆ

(ಗಿಣಿ ಹಾಗೆ ಸಾಕಿ ಗಿಡುಗನಿಗೆ ಕೊಟ್ಟಂತೆ)

ಕಾಕೆ ಮೀದಸ್ಟ್ ಕಪ್ಪ್ ಜಾಸ್ತಿ

ಕಾಗೆ ಮಿಂದಷ್ಟು ಕಪ್ಪು ಹೆಚ್ಚು)

ಪಿಜಿನ್‌ಗೆ ನಿದ್ದೆ ಇಲ್ಲೆ

(ಇರುವೆಗೆ ನಿದ್ರೆ ಇಲ್ಲ)

ಆನೆಗೆ ದಾರಿ ಉಟ್ಟಾ

(ಆನೆಗೆ ದಾರಿ ಇದೆಯೇ)

ಬಾಳೆ ತೋಟಕೆ ಆನೆ ನುಗ್ಗಿದಂಗೆ

(ಬಾಳೆಯ ತೋಟಕ್ಕೆ ಆನೆ ನುಗ್ಗಿದ ಹಾಗೆ)

ಎಮ್ಮೆನ ಮ್ಯಾಲೆ ಮಳೆ ಹೊಯ್ದಂಗೆ

(ಎಮ್ಮೆ ಮೇಲೆ ಮಳೆ ಹುಯಿದ ಹಾಗೆ)

ಎರೆಹುಳಕೂ ನಂಜ್ ಬಂದಂಗೆ

(ಎರೆಹುಳಕ್ಕೂ ವಿಷ ಬಂದ ಹಾಗೆ)

ಇಲಿ ಹೋತುತ ಹೇಳ್‌ಕನ ಹುಲಿ ಹೋತೂತ ಹೇಳ್ದೊಗಡ

(ಇಲಿ ಹೋಯ್ತೂಂದ್ರೆ ಹುಲಿ ಹೋಯ್ತೂಂದ್ರಂತೆ)

ಎತ್ತ್‌ಗೆ ಜೊರ ಬಾಕನ ಎಮ್ಮೆಗೆ ಬರೆ ಹಾಕಿದೊಗಡ

(ಎತ್ತಿಗೆ ಜ್ವರ ಬಂದರೆ ಎಮ್ಮೆಗೆ ಬರೆ ಹಾಕಿದಂತೆ)

ನಾಯಿ ಬೊಗ್‌ಳಿರೆ ದೇವಲೋಕ ಹಾಳಾದುಲೆ

(ನಾಯಿ ಬೊಗಳಿದರೆ ದೇವಲೋಕ ಹಾಳಾಗದು)

೪.೧.೧೫. ಇತರೆ:

ಕೈಲಿ ಕಾಸ್ ಇಲ್ಲೆ ಮೈಲಿ ಮಾಂವ್ಸ ಇಲ್ಲೆ

(ಕೈಯಲ್ಲಿ ಕಾಸು ಇಲ್ಲ ಮೈಯಲ್ಲಿ ಮಾಂಸ ಇಲ್ಲ)

ಬಾಣೆಲಿ ಗೋಲಿ ಆಡ್ದಂಗೆ

(ಬಯಲಿನಲ್ಲಿ ಗೋಲಿ ಆಡಿದ ಹಾಗೆ)

ಮನ್‌ಸನ ಅಂಕೆಯಿಲ್ಲೆ ದೆವ್ವದ ಹೆದ್ರಿಕೆ ಇಲ್ಲೆ

(ಮನುಷ್ಯನ ಅಂಕೆ ಇಲ್ಲ ಭೂತದ ಹೆದರಿಕೆ ಇಲ್ಲ)

ಜಲ ಹುಟ್ಬೋಕು ಪಾತಾಳಂದ ಬುದ್ದಿ ಹುಟ್ಬೋಕು ಆತ್ಮಂದ

(ಜಲ ಹುಟ್ಟಬೇಕು ಪಾತಾಳದಿಂದ ಬುದ್ಧಿ ಹುಟ್ಟಬೇಕು ಆತ್ಮದಿಂದ)

ಜರ ಬುಟ್ಟರೂ ಸಳಿ ಬುಟ್ಟತ್‌ಲೆ

(ಜ್ವರ ಬಿಟ್ಟರೂ ಚಳಿ ಬಿಡಲಿಲ್ಲ)

ನಾಡ್ ಅಡ್‌ಕಿಸಿರೂ ಗೂಡ್ ಅಡ್‌ಕಿಸಿಕಾಕಿಲೆ

(ನಾಡನ್ನು ಅಡಗಿಸಿದರೂ ಗೂಡನ್ನು ಅಡಗಿಸಲಾಗಲಿಕ್ಕಿಲ್ಲ)

ಅನ್ನ ಕೊಟ್ಟವಂಗೆ ಗುದ್ದು ಕೊಟ್ಟಂಗೆ

(ಅನ್ನ ಕೊಟ್ಟವನಿಗೆ ಗುದ್ದು ಕೊಟ್ಟಹಾಗೆ)

ಕಂಡದ್ದರ ಹೇಳ್‌ರೆ ದೊಂಡೆಲಿ ಉರಿ

(ಕಂಡಿದ್ದನ್ನು ಹೇಳಿದರೆ ಗಂಟಲಲ್ಲಿ ಉರಿ)

ಕಾಸಿಲಿ ಮೀದ್ ಕೈಲಾಸ ಸೇರೋಕು

(ಕಾಶಿಲಿ ಮಿಂದು ಕೈಲಾಸ ಸೇರಬೇಕು)

ಆಗದ ಕಾರ್ಯಕೆ ಅರ್‌ವತ್ತ್ ತಂತ್ರ

(ಆಗದ ಕಾರ್ಯಕ್ಕೆ ಅರುವತ್ತು ತಂತ್ರ)

ಅರಮನೆ ಇದ್ದರೂ ನೆರೆಮನೆ ಬೇಕ್

(ಅರಮನೆ ಇದ್ದರೂ ನೆರೆಮನೆ ಇರಬೇಕು)

ಒಳ್ಳೆವರ ಹೊಟ್ಟೆಲಿ ನಾಯಿ ಹುಟ್ಟಿದಂಗೆ

(ಒಳ್ಳೆಯವರ ಹೊಟ್ಟೆಯಲ್ಲಿ ನಾಯಿ ಹುಟ್ಟಿದ ಹಾಗೆ)

ಸೂಜಿನ ಹಿಂದೆ ನೂಲ್ ಇದ್ದಂಗೆ

(ಸೂಜಿ ಹಿಂದೆ ನೂಲು ಇದ್ದ ಹಾಗೆ)

ಕಣ್ಣ್ ಕೊಟ್ಟ ದೇವನೂ ಹೆಣ್ಣ್ ಕೊಟ್ಟ ಮಾಂವನೂ ಒಂದೇ

(ಕಣ್ಣು ಕೊಟ್ಟ ದೇವನೂ ಹೆಣ್ಣು ಕೊಟ್ಟ ಮಾವನೂ ಒಂದೇ)

ಹೊಡೆಯಕೆ ಗೊತ್ತಿಲ್ಲದಂವ ಹೊಡ್ದರೆ ತಲೆಗೆ
(ಹೊಡೆಯಲು ಗೊತ್ತಿಲ್ಲದವನು ಹೊಡೆದರೆ ತಲೆಗೆ)
ದೊಡ್ಡ ಜನರ ಕೆಲ್ಸ ತೀರ್‌ಕನ ಸಣ್ಣ ಜನರ ಜೀವ ಹೋದು
(ದೊಡ್ಡ ಜನರ ಕೆಲಸ ಮುಗಿಯುವಾಗ ಸಣ್ಣ ಜನರ ಜೀವ ಹೋಗಬಹುದು)
ತುಂಬಿದ ಗಾಡಿಗೆ ಕುಕ್ಕೆ ತೂಕ ಆದಂಗೆ
(ತುಂಬಿದ ಗಾಡಿಗೆ ಕುಕ್ಕೆ ಭಾರ ಆದ ಹಾಗೆ)
ತಲೆ ಇದ್ದರೆ ನಾಳೆನೂ ಬಟ್ಟೆ ಕಟ್ಟಕ್
(ತಲೆ ಇದ್ದರೆ ನಾಳೆಯೂ ಬಟ್ಟೆ ಕಟ್ಟಬಹುದು)
ಉಜ್ಜಿಕಂಡ್ ಇದ್ದರೆ ಮಾತ್ರ ಪಾತ್ರೆ ಹೊಳಿಯುದು
(ತಿಕ್ಕುತಿದ್ದರೆ ಮಾತ್ರ ಪಾತ್ರೆ ಹೊಳೆಯುವುದು)
ಬಾಗ್ಯ ಬಾಕನ ಬೊಗ್ಗಿ ನಡೆಯೋಕು
(ಭಾಗ್ಯ ಬರುವಾಗ ಬಗ್ಗಿ ನಡೆಯಬೇಕು)
ದ್ರಾಕ್ಸಿ ಸಿಕ್ಕದಾಕನ ಹುಳಿ ಲೊಟ್ಟೇತ ಹೇಳ್ದಂಗೆ
(ದ್ರಾಕ್ಷಿ ಸಿಗದಿರುವಾಗ ಅದು ಹುಳಿ ಅಂದಹಾಗೆ)
ಹುಳಿ ಮಾಯನ ಕಾಯಿ ತಿಂದರೆ ಬೊಸುರೀತ ಹೆಳುದಾ?
(ಹುಳಿ ಮಾವಿನಕಾಯಿ ತಿಂದರೆ ಬಸುರಿ ಎಂದು ಹೇಳುವುದೇ?)
ಬದ್‌ಕೊ ಮಕ್ಕಳ ಹೇಲ್ ನೋಡ್‌ರೆ ಗೊತ್ತಾದೆ
(ಬದುಕುವ ಮಕ್ಕಳ ಹೇಲು ನೋಡಿದರೆ ಗೊತ್ತಾಗುತ್ತದೆ)
ತಾನ್ ತಿಂಬೊದೇ ತೌಡ್ ಪಾಲಿಗೆ ಹಂದಿ ಸಾಂಕಿಕಾದೆನಾ?
(ತಾನು ತಿನ್ನುವುದೇ ಭತ್ತದ ಹೊಟ್ಟು ಪಾಲಿನ ಹಂದಿ ಸಾಕಲು ಸಾಧ್ಯವೇ?)
ಮೀಸೆ ಬಂದವಂಗೆ ದೇಸ ಕಾಂಬಲೆ
(ಮೀಸೆ ಬಂದವನಿಗೆ ದೇಶ ಕಾಣುವುದಿಲ್ಲ)
ನೀರಿಗೆ ಬಂದಂವಂಗೆ ಊರ್ ಕಾರ್‌ಬಾರ್ ಯಾಕೆ?
(ನೀರಿಗೆ ಬಂದವನಿಗೆ ಊರಿನ ಕಾರುಬಾರು ಏಕೆ?)
ಉಂಬಕೆ ಗೊತ್ತಿಲ್ಲದಂವ ಬಾಳೆಲೆ ಹರ್ಕಂಡಂಗೆ
(ಉಣಲು ಬರದವನು ಬಾಳೆ ಎಲೆ ಹರಿದುಕೊಂಡಂತೆ)
ಹೆಗ್‌ಲ್‌ಲಿ ಗುದ್ದೋಲಿ ಮಡ್ಕಂಡ್ ಊರ್ ಪೂರ ಹುಡ್ಕಿದಂಗೆ
(ಹೆಗಲಲ್ಲಿ ಗುದ್ದಲಿ ಇಟ್ಟುಕೊಂಡು ಊರೆಲ್ಲಾ ಹುಡುಕಿದಂತೆ)

ಕರಿಯಕೆ ಇರೋಂವ ಇಕ್ಕಿಕೆ ಅಂಜುಲೆ

(ಕರಿಯಲು ಇರುವವನು ಇಕ್ಕಲು ಅಂಜುವುದಿಲ್ಲ)

ಉಂಡವನ ಉಣ್‌ಸಿಕೆ ಹೋಕಾಗದ್

(ಉಂಡವನನ್ನು ಉಣ್ಣಿಸಲು ಹೋಗಬಾರದು)

ತನಿಗೆ ತೌಡು ಕುಟ್ಟಿಕಿಲೆ ಊರಿಗೆ ಕಬ್ಬಿಣ ಕುಟ್ಟಿದೆ

(ತನಗೆ ತೌಡು ಕುಟ್ಟುವುದಿಲ್ಲ ಊರಿನವರ ಕಬ್ಬಿಣ ಕುಟ್ಟುತ್ತಾನೆ)

ಒನಿಕೆದ್ ಕುಟ್ಟು ಒರ್‌ಲ್‌ಗೇ ಗೊತ್ತು

(ಒನಕೆಯ ಕುಟ್ಟು ಒರಳಿಗೇ ಗೊತ್ತು)

ಪ್ರೀತಿ ಇಲ್ಲದಂವನ ಮನೆಲಿ ಮರ್ಡಿಕಾಗದ್

(ಪ್ರೀತಿ ಇಲ್ಲದವನ ಮನೆಯಲ್ಲಿ ಅಳಬಾರದು)

ಸೊಪನಲಿ ಬತ್ತ ಅಳಿಯಕೆ ಹಸ್‌ಂಬೆ ತಕಂಡೋದಂಗೆ

(ಸ್ವಪ್ನದಲ್ಲಿ ಭತ್ತ ಅಳೆಯಲು ಹಸುಂಬೆ ತಕಂಡ್ ಹೋದಂಗೆ)

ಎಸಂಡ್ ಇದ್ದಸ್ಟ್ ಕೆರೆ ಹಾಳ್ ಕಳೆ ಇದ್ದಸ್ಟ್ ಗದ್ದೆ ಹಾಳ್

(ಏಡಿ ಇದ್ದಷ್ಟೂ ಕೆರೆ ಹಾಳು ಕಳೆ ಇದ್ದಷ್ಟೂ ಗದ್ದೆ ಹಾಳು)

ಹೋದು ಬಾದು ಇದ್ದರೆ ನೆಂಟಸ್ತಿಕೆ

(ಹೋಗುವುದು ಬರುವುದು ಇದ್ದರೆ ನೆಂಟಸ್ತಿಕೆ ಇರುತ್ತದೆ)

ದೂಪದ ಹೊಗೆ ಹಾಕಿರೆ ಪಾಪ ಹೋದಾ?

(ದೂಪದ ಹೊಗೆ ಹಾಕಿದರೆ ಪಾಪ ಹೋಗುವುದೇ?)

ಹತ್ತಿಕೆ ಮುಂದೆ ಮರ ನೋಡೋಕು

(ಹತ್ತುವ ಮೊದಲು ಮರ ನೋಡಬೇಕು)

ಹೊಟ್ಟೇಸಿರೆ ಮಾತ್ರ ಉಂಬೋಕು

(ಹೊಟ್ಟೆ ಹಸಿದರೆ ಮಾತ್ರ ಉಣ್ಣಬೇಕು)

ಕಲ್ತಂವ ಸುಮ್ಮನಿದ್ದರೂ ಕಲಿಯದಂವ ಹಾರಿಯಾಡುದು

(ಕಲಿತವನು ಸುಮ್ಮನಿದ್ದರೂ ಕಲಿಯದವನು ಎಗರಾಡುವುದು)

ಯಾಗೋಳು ಸಾಯವಂಗೆ ಮಡ್ರೋವು ಯಾರ್?

(ದಿನಾಲು ಸಾಯುವವನಿಗೆ ಅಳುವವರು ಯಾರು?)

ಕಾಮಾಲೆ ಕಣ್ಣಿಗೆ ಕಾಂಬೊದೆಲ್ಲಾ ಅರ್‌ಸಣ

(ಕಾಮಾಲೆ ಕಣ್ಣಿಗೆ ಕಾಣೋದೆಲ್ಲಾ ಹಳದಿ)

ಚಿಂತೆ ಇಲ್ಲದವಂಗೆ ಸಂತೆಲಿ ನಿದ್ದೆಗಡ

(ಚಿಂತೆ ಇಲ್ಲದವನಿಗೆ ಸಂತೆಲಿ ನಿದ್ರೆ)

ಬಗ್ಗಿದವಂಗೊಂದ್ ಗುದ್ದು ಜಾಸ್ತಿ

(ಬಗ್ಗಿದವನಿಗೊಂದು ಗುದ್ದು ಹೆಚ್ಚು)

ಅಲ್ಪಂಗೆ ಐಸ್ವರ್ಯ ಬಾಕನ ನಡು ಇರ್‌ಲ್‌ಲಿ ಕೊಡೆ ಹಿಡ್ಕಂಡಂಗೆ

(ಅಲ್ಪನಿಗೆ ಐಶ್ವರ್ಯ ಬಂದ್ರೆ ಅರ್ಧ ರಾತ್ರೀಲಿ ಕೊಡೆ ಹಿಡಿದಂತೆ)

ಊರ್ ಹೋಗ್‌ತ ಹೇಳ್ದೆ ಕಾಡ್ ಬಾತ ಹೇಳ್ದೆ

(ಊರು ಹೋಗು ಅನ್ನುತ್ತೆ ಕಾಡು ಬಾ ಅನ್ನುತ್ತೆ)

ಕೈಗೆ ಬಂದದ್ ಬಾಯಿಗೆ ಬಾತ್‌ಲೆ

(ಕೈಗೆ ಬಂದ ತುತ್ತು ಬಾಯಿಗೆ ಬರಲಿಲ್ಲ)

ತಾಳ್ದಂವ ಬಾಳ್ತ್

(ತಾಳಿದವನು ಬಾಳಿಯಾನು)

ಇರ್‌ಲ್ ಕಂಡ ಬಾಮಿಲಿ ಹಗ್‌ಲ್ ಬಿದ್ದಂಗೆ

(ಇರುಳು ಕಂಡ ಬಾವಿಯಲ್ಲಿ ಹಗಲು ಬಿದ್ದಹಾಗೆ)

ಇದ್ದ ಮೂರ್ ಜನಲಿ ಕದ್ದೋವು ಯಾರ್

(ಇದ್ದ ಮೂವರಲ್ಲಿ ಕದ್ದವರು ಯಾರು)

ಆದೆಲ್ಲಾ ಒಳ್ಳದಕ್ಕೆ

(ಆಗುವುದೆಲ್ಲಾ ಒಳ್ಳೆಯದಕ್ಕೆ)

ಉಪ್ಪು ತಿಂದಂವ ನೀರ್ ಕುಡಿಯೋಕು

(ಉಪ್ಪು ತಿಂದವನು ನೀರು ಕುಡಿಯಲೇ ಬೇಕು)

ಉತ್ತರನ ಪೌರುಸ ಹೆಣ್ಣ್‌ಮಕ್ಕಳ ಮುಂದೆ

(ಉತ್ತರನ ಪೌರುಷ ಹೆಂಗಸರ ಮುಂದೆ)

ಬಂದ್ ಬಂದ್ ರಾಯರ ಕುದುರೆ ಕತ್ತೆಗಡ

(ಬರಬರುತ್ತಾ ರಾಯರ ಕುದುರೆ ಕತ್ತೆಯಾಯಿತು)

ಮನೆಗೆ ಮಾರಿ ಊರ್‌ಗೆ ಉಪಕಾರಿ

(ಮನೆಗೆ ಮಾರಿ ಊರಿಗೆ ಉಪಕಾರಿ)

ಒಂದ್ ಕಣ್ಣಿಗೆ ಸುಣ್ಣ ಒಂದ್ ಕಣ್ಣಿಗೆ ಬೆಣ್ಣೆ

(ಒಂದು ಕಣ್ಣಿಗೆ ಸುಣ್ಣ ಒಂದು ಕಣ್ಣಿಗೆ ಬೆಣ್ಣೆ)

ಬೇರ್ ಗೊತ್ತಿಲ್ಲದವಂಗೆ ಸೊಪ್ಪು ತೋರ್ಸಿದಂಗೆ

(ಬೇರು ಗೊತ್ತಿಲ್ಲದವನಿಗೆ ಸೊಪ್ಪು ತೋರಿಸಿದ ಹಾಗೆ)

ಬಂದರೆ ಬಾತ್ ಹೋದರೆ ಹೋತ್ತ ಹೇಳ್ದಂಗೆ
(ಬಂದರೆ ಬಂತು ಹೋದರೆ ಹೋಯಿತು ಅಂದ ಹಾಗೆ)
ಮಣ್ಣ್‌ದ್ ಕಾಲ್ ನೀರಿಗಾದುಲೆ ಮರದ್ ಕಾಲ್ ಬೆಂಕಿಗಾದುಲೆ
(ಮಣ್ಣಿನ ಕಾಲು ನೀರಿಗೆ ಆಗದು ಮರದ ಕಾಲು ಬೆಂಕಿಗೆ ಆಗದು)
ಬಾಕನ ಏನ್ ತಂದಿಯ? ಹೋಕನ ಏನ್ ಕೊಟ್ಟಿಯ?
(ಬರುವಾಗ ಏನು ತರುತ್ತೀಯೆ ಹೋಗುವಾಗ ಏನು ಕೊಡುತ್ತೀಯೆ)
ಕುಂಡೆಗೆ ಬಂದ್ ಕುತ್ತುಕಾಕನ ಜಾಗ ಹುಡ್ಕುದು
(ಅಂಡಿಗೆ ಬಂದು ಚುಚ್ಚುವಾಗ ಜಾಗ ಹುಡುಕುವುದು)
ಊರಿಗೆ ದೊರೆ ಆದರೂ ಅಪ್ಪಂಗೆ ಮಜನೆ
(ಊರಿಗೆ ರಾಜನಾದರೂ ಅಪ್ಪನಿಗೆ ಮಗನೆ)
ಅಡ್ಡ ಗೋಡೆ ಮ್ಯಾಲೆ ದೀಪ ಇಸಿದಂಗೆ
(ಅಡ್ಡ ಗೋಡೆ ಮೇಲೆ ದೀಪ ಇಟ್ಟಹಾಗೆ)
ಆಡಿಕೆ ಉಟ್ಟು ಲೆಕ್ಕಕೆ ಇಲ್ಲೆ
(ಆಟಕ್ಕುಂಟು ಲೆಕ್ಕಕ್ಕಿಲ್ಲ)
ಇಬ್ಬರಿಗೆ ಜಗಳ ಮೂರನೆಯವಂಗೆ ಲಾಬ
(ಇಬ್ಬರ ಜಗಳ ಮೂರನೆಯವನಿಗೆ ಲಾಭ)
ಅಂಗೈಲಿ ಬೆಣ್ಣೆನ ಮಡ್ಕಂಡ್ ತುಪ್ಪಕೆ ಊರ್ ಪೂರ ಹುಡ್ಕಿದೊಗಡ
(ಅಂಗೈಲಿ ಬೆಣ್ಣೆ ಇಟ್ಟುಕೊಂಡು ತುಪ್ಪಕ್ಕೆ ಹುಡುಕಿದರಂತೆ)
ಕಣ್ಣ್ ಮರೆಯಾದರೆ ಕುಂದ್ ಮರೆಯಾದಂಗೆ ಆಡುದು
(ಕಣ್ಣು ಮರೆಯಾದರೆ ಬೆಟ್ಟ ಮರೆಯಾದಂತೆ ಆಡುವುದು)
ಸಂಕಟ ಬಾಕನ ವೆಂಕಟರಮಣ
(ಸಂಕಟ ಬಂದಾಗ ವೆಂಕಟರಮಣ)
ಹೆಣ್ಣ್‌ಮಕ್ಕಳ ಬುದ್ದಿ ಮೊಣ್‌ಕಾಲ್ ಕೆಳಗೆ
(ಹೆಂಗಸರ ಬುದ್ಧಿ ಮೊಳಕಾಲು ಕೆಳಗೆ)
ವೇದ ಸುಳ್ಳಾದು ಗಾದೆ ಸುಳ್ಳಾಕಿಲೆ
(ವೇದ ಸುಳ್ಳಾದರೂ ಗಾದೆ ಸುಳ್ಳಾಗದು)
ಕೊಟ್ಟ ಹೆಣ್ಣ್ ಕುಲಂದ ಹೊರಗೆ
(ಕೊಟ್ಟ ಹೆಣ್ಣು ಕುಲದಿಂದ ಹೊರಗೆ)
ಬೆಳ್ಳಂಗೆ ಇರ್‌ದೆಲ್ಲಾ ಹಾಲಲ್ಲ
(ಬೆಳ್ಳಗಿರುವುದೆಲ್ಲಾ ಹಾಲಲ್ಲ)

ಒಣ್ಗದ ಬತ್ತಲಿ ಚಿಂದ ಜಾಸ್ತಿ

(ಒಣಗದ ಭತ್ತದಲ್ಲಿ ಜೊಳ್ಳು ಹೆಚ್ಚು)

ಕೋಣಿಯಕೆ ಗೊತ್ತಿಲ್ಲದವಂಗೆ ನೆಲ ಡೊಂಕು

(ಕುಣಿಯಲಾರದವಳು ನೆಲ ಡೊಂಕು ಅಂದಂತೆ)

ಮಾಣೆ ಮಾಣೆ ಹುತ್ತೇರಿ

(ಪದೇ ಪದೇ ಹತ್ತರಿ ಹಬ್ಬವೇ)

ಕೊಯಿ ಕತ್ತಿಯಂವಂಗೆ ಕೊಡುದುಲೆ ಕೊಟ್ಟ್ ಕತ್ತಿಯಂವ ಬಾದುಲೆ

(ಗದ್ದೆ ಕೆಲಸ ಮಾಡುವವನಿಗೆ ಕೊಡುವುದಿಲ್ಲ ತೋಟ ಕೆಲಸ ಮಾಡುವವನು ಬರುವುದಿಲ್ಲ)

ಬರೆ ಕರೆ ಬೂಮಿ ನೆರೆ ಕರೆ ಹೆಣ್ಣ್ ಬ್ಯಾಡ

(ಬರೆ ಪಕ್ಕದ ಭೂಮಿ ನೆರೆಕರೆಯ ಹೆಣ್ಣು ಬೇಡ)

ಉಂಬೋಕೆ ಮುಂದೆ ಹೋಕು ಮೀಯಕೆ ಹಿಂದೆ ಹೋಕು

(ಉಣಲು ಮೊದಲು ಹೋಗಬೇಕು ಸ್ನಾನಕ್ಕೆ ಕೊನೆಗೆ ಹೋಗಬೇಕು)

ತಬ್ಬುಲಿ ಮಕ್ಕಳಿಗೆ ಹೆಬ್ಬುಲಿ ಬುದ್ದಿ

(ತಬ್ಬಲಿ ಮಕ್ಕಳಿಗೆ ಹೆಬ್ಬುಲಿ ಬುದ್ಧಿ)

ಕೆಸ್‌ರ್ ಕಂಡಲ್ಲಿ ಮೆಟ್ಟುದು ನೀರ್ ಕಂಡಲ್ಲಿ ತೊಳೆಯುದು

(ಕೆಸರು ಕಂಡಲ್ಲಿ ಮೆಟ್ಟುವುದು ನೀರು ಕಂಡಲ್ಲಿ ತೊಳೆಯುವುದು)

ಹೊತ್ತಂವನ ತೂಕ ಸತ್ತಂವಂಗೇನ್ ಗೊತ್ತ್?

(ಹೊರುವವನ ತೂಕ ಸತ್ತವನಿಗೇನು ಗೊತ್ತು?)

ಕೊಟ್ಟ ಹೆಣ್ಣ್ ಕುಲಂದ ಹೊರಗೆ

(ಕೊಟ್ಟ ಹೆಣ್ಣು ಕುಲದಿಂದ ಹೊರಗೆ)

ಬರ ಬಂದ ಕಾಲಕೆ ನನ ಮಜ ಉಂಬಕೆ ಕಲ್ತತ್

(ಬರಬಂದ ಕಾಲಕ್ಕೆ ನನ್ನ ಮಗ ಉಣ್ಣಲು ಕಲಿತ)

ಗಂಡ್ ದಂಡ್‌ಲಿ ಸಾಯೋಕು ಹೆಣ್ಣ್ ಹೆತ್ತ್ ಸಾಯೋಕು

(ಗಂಡು ಯುದ್ಧದಲ್ಲಿ ಸಾಯಬೇಕು ಹೆಣ್ಣು ಹೆತ್ತು ಸಾಯಬೇಕು)

ಕೊಯ್ದ ಕೈಗೆ ಉಪ್ಪಾಕಿಕಿಲೆ

(ಕುಯಿದ ಕೈಗೆ ಉಪ್ಪು ಹಾಕುವುದಿಲ್ಲ)

ಎಮ್ಮೆನ ಮ್ಯಾಲೆ ಮಳೆ ಹೊಯ್ದಂಗೆ

(ಎಮ್ಮೆ ಮೇಲೆ ಮಳೆ ಹುಯಿದ ಹಾಗೆ)

ಆಟಿ ಗಾಳಿ ಬೀಸಿ ಬಡಿಯಕಾಕನ ಅಯ್ಯೋ ನಾ ಹೆಣ್ಣಾಕಾಗದಿತ್ತಾತ ಹೇಳ್ದಂಗೆ

(ಆಷಾಡದ ಗಾಳಿ ಬೀಸಿ ಬಡಿಯುವಾಗ ಅಯ್ಯೋ ನಾ ಹೆಣ್ಣಾಗಬಾರದಿತ್ತೇ ಎಂದು ಹೇಳಿದಂತೆ)

ಕೆಸ ದಂಟ್‌ಲಿ ಕರು ಕಟ್ಟಿದಂಗೆ

(ಕೆಸುವಿನ ದಂಟಿಗೆ ಕರು ಕಟ್ಟಿದಂತೆ) ಇತ್ಯಾದಿ.

ಇಲ್ಲಿರುವ ಎಲ್ಲಾ ಗಾದೆಗಳನ್ನು ಗಮನಿಸಿದಾಗ ಎಲ್ಲಾ ಭಾಷೆಗಳಲ್ಲಿ ಕಾಣುವ ಗಾದೆಗಳ ಲಕ್ಷಣಗಳು ಕೊಡಗಿನ ಅರೆಭಾಷೆಯಲ್ಲೂ ಇರುವುದನ್ನು ಕಾಣಬಹುದು. ಇವುಗಳ ರಚನೆಯನ್ನು ಗಮನಿಸಿದರೆ ಪ್ರಾಸ ಅನುಪ್ರಾಸ ಇತ್ಯಾದಿಗಳು ಇಲ್ಲೂ ಇರುವುದು ಕಂಡುಬರುತ್ತದೆ. ಇಲ್ಲಿರುವ ಅನೇಕ ಗಾದೆಗಳು ಬೇರೆಡೆಯೂ ಇರುವಂತಹದ್ದೇ ಆದರೂ ಇಲ್ಲಿನ ಭೌಗೋಳಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಲಕ್ಷಣಗಳನ್ನು ಒಳಗೊಂಡಿರುವಂತವುಗಳಾಗಿವೆ. ಇವರಲ್ಲಿ ಬಳಕೆಯಾಗುವ ಗಾದೆಗಳಲ್ಲಿ ಕೆಲವು ಗಾದೆಗಳು ಶಿಷ್ಟ ಕನ್ನಡ, ಕೊಡವ ಮತ್ತು ತುಳು ಭಾಷೆಯಲ್ಲಿ ಅದೇ ಅರ್ಥದಲ್ಲಿ ಇವೆ.

೪.೧.೧೬. ಶಿಷ್ಟ ಕನ್ನಡದಲ್ಲಿ ಇರುವ ಗಾದೆಗಳು ಗೌಡಕನ್ನಡದಲ್ಲಿ:

ಶಿ.ಕ.: ಇಬ್ಬರಿಗೆ ಜಗಳ ಮೂರನೆಯವನಿಗೆ ಲಾಭ

ಗೌ.ಕ.: ಇಬ್ಬರ್‌ಗೆ ಜಗಳ ಮೂರನೆಯಂವಂಗೆ ಲಾಬ

ಶಿ.ಕ.: ಇರುಳು ಕಂಡ ಬಾವಿಯಲ್ಲಿ ಹಗಲು ಬಿದ್ದರಂತೆ

ಗೌ.ಕ.: ಇರ್‌ಲ್ ಕಂಡ ಬಾಮಿಲಿ ಹಗ್‌ಲ್ ಬಿದ್ದೊಗಡ

ಶಿ.ಕ.: ಎಮ್ಮೆ ಮೇಲೆ ಮಳೆ ಹೊಯ್ದಂತೆ

ಗೌ.ಕ.: ಎಮ್ಮೆನ ಮ್ಯಾಲೆ ಮಳೆ ಹೊಯ್ದಂಗೆ

ಶಿ.ಕ.: ಕೈಗೆ ಬಂದ ತುತ್ತು ಬಾಯಿಗಿಲ್ಲ

ಗೌ.ಕ.: ಕೈಗೆ ಬಂದದ್ ಬಾಯಿಗೆ ಬಾತ್ಲೆ

ಇತ್ಯಾದಿ ಹೆಚ್ಚಿನ ಶಿಷ್ಟ ಕನ್ನಡದ ಗಾದೆಗಳು ಗೌಡ ಕನ್ನಡದಲ್ಲಿ ಬಳಕೆಯಲ್ಲಿವೆ.

೪.೧.೧೭. ಶಿಷ್ಟ ಕನ್ನಡದಲ್ಲಿರುವ ಗಾದೆಗಳು ಅರ್ಥ ವ್ಯತ್ಯಾಸದೊಂದಿಗೆ ಗೌಡ ಕನ್ನಡದಲ್ಲಿ:

ಶಿ.ಕ.: ಕೆಲಸವಿಲ್ಲದ ಮುರವ ಹೆಂಡತಿ ತಲೆ ಬೋಳಿಸಿದ

ಗೌ.ಕ.: ಕೆಲ್‌ಸ ಇಲ್ಲದ ಆಚಾರಿ ಕೂಸ್‌ನ ಕುಂಡೆ ಕೆತ್ತಿತ್‌ಗಡ

(ಕೆಲಸವಿಲ್ಲದ ಆಚಾರಿ ಮಗುವಿನ ಅಂಡು ಕೆತ್ತಿದನಂತೆ)

ಶಿ.ಕ.: ಅಜ್ಜಿಗೆ ಅರಿವೆ ಚಿಂತೆಯಾದರೆ ಮೊಮ್ಮಗಳಿಗೆ ಮಿಂಡನ ಚಿಂತೆ

ಗೌ.ಕ.: ಅತ್ತೆಗೆ ಹೊಟ್ಟೆ ಮ್ಯಾಲೆ ಗ್ಯಾನ, ಸೊಸೆಗೆ ಮೊಟ್ಟೆ ಮ್ಯಾಲೆ ಗ್ಯಾನ
(ಅತ್ತೆಗೆ ಹೊಟ್ಟೆಯ ಯೋಚನೆಯಾದರೆ, ಸೊಸೆಗೆ ಮಡಿಲಿನ ಯೋಚನೆ)

ಶಿ.ಕ.: ಆರು ಕೊಟ್ಟರೆ ಅತ್ತೆ ಕಡೆ, ಮೂರು ಕೊಟ್ಟರೆ ಸೊಸೆ ಕಡೆ

ಗೌ.ಕ.: ಅರ್ಧ ರೊಟ್ಟಿ ಕೊಟ್ಟರೆ ಅತ್ತೆ ಕಡೆ, ಇಡೀ ರೊಟ್ಟಿ ಕೊಟ್ಟರೆ ಸೊಸೆ ಕಡೆ

೪.೧.೧೮. ಕೊಡವ ಭಾಷೆ ಮತ್ತು ಗೌಡ ಕನ್ನಡದಲ್ಲಿ ಇರುವ ಒಂದೇ ರೀತಿಯ ಗಾದೆಗಳು:

ಕೊಡಗಿನ ಮುಖ್ಯ ಭಾಷೆಗಳಾದ ಕೊಡವ ಮತ್ತು ಗೌಡ ಕನ್ನಡದಲ್ಲಿ ಕೆಲವೊಂದು ಗಾದೆಗಳು ಒಂದೇ ರೀತಿಯಲ್ಲಿವೆ. ಒಂದೇ ಭೌಗೋಳಿಕ ನೆಲೆಯಲ್ಲಿ ವಾಸಿಸುವ ಎರಡೂ ಭಾಷೆಗಳ ಮೇಲೆ ಇಲ್ಲಿನ ಭೌಗೋಳಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಅಂಶಗಳು ಸಾಮಾನ್ಯವಾಗಿ ಪ್ರಭಾವ ಬೀರಿರುತ್ತವೆ.

ಉದಾ: ಕೊಡವ: ಕೇತ್‌ರಪ್ಪಂಗ್ ಪಾತ್‌ರೊಡನೆ

ಗೌ.ಕ.: ಕೇತ್‌ರಪ್ಪಂಗೆ ಪಾತ್ರೋಡೆ

ಕೊಡವ: ಆಣ್ ಪೊತ್ತಿತ್ ಚಾವಂಡು, ಪೊಣ್ಣ್ ಪೆತ್ತಿತ್ ಚಾವಂಡು

ಗೌ.ಕ.: ಗಂಡ್ ಯುದ್ದಲಿ ಸಾಯೋಕು, ಹೆಣ್ಣ್ ಹೆತ್ತ್ ಸಾಯೋಕು

ಕೊಡವ: ಇಂಡೂ ಇಲ್ಲೆ ಇಂಡ್‌ಕಿಟ್ಟ ಕೈಯ್ಯೂ ಇಲ್ಲೆ

ಗೌ.ಕ.: ಎಸಂಡೂ ಇಲ್ಲೆ ಎಸಂಡ್‌ಗೆ ಹಾಕಿದ ಕೈಯ್ಯೂ ಇಲ್ಲೆ

ಕೊಡವ: ಕಣ್ಣ್ ಮರೆ ಆಚೇಂಗಿ ಕುಂದ್ ಮರೆ ಆಚೇಂದ್ ಕಳಿಪ

ಕೊಡವ: ಕಣ್ಣ್ ಮರೆ ಆದರೆ ಕುಂದ್ ಮರೆಯಾದಂಗೆ ಆಡುದು ಇತ್ಯಾದಿ.

ಮೇಲಿನ ಗಾದೆಗಳು ಕೊಡವ ಭಾಷೆಯದ್ದು ಅಥವಾ ಗೌಡಕನ್ನಡದ್ದೇ ಕೊಡವ ಭಾಷೆಯಲ್ಲಿರುವುದು ಎಂದು ಖಚಿತವಾಗಿ ಹೇಳಲು ಸಾಧ್ಯವಿಲ್ಲ. ಆದರೆ ಇಲ್ಲಿರುವ 'ಕೇತ್' 'ಕುಂದ್' ಪದಗಳು ಕೊಡವ ಭಾಷೆಯ ಪದಗಳಾಗಿವೆ. ಕೊಡಗಿನ ಗೌಡರು ಕೊಡವ ಭಾಷಾ ಪ್ರಭಾವದಿಂದ ಈ ಪದಗಳನ್ನು ಬಳಸುವರು. ಇದರಿಂದ ಕೊಡವ ಭಾಷೆಯ ಕೆಲವು ಗಾದೆಗಳು ಕೊಡಗಿನ ಗೌಡಕನ್ನಡದಲ್ಲಿ ಬಳಕೆಯಾಗುತ್ತಿವೆ ಎಂದು ಹೇಳಬಹುದು.

೪.೧.೧೯. ತುಳು ಭಾಷೆ ಮತ್ತು ಗೌಡ ಕನ್ನಡ ಭಾಷೆಯಲ್ಲಿರುವ ಒಂದೇ ರೀತಿಯ ಗಾದೆಗಳು:

ತುಳು ತನ್ನದೇ ಆದ ಸಾಂಸ್ಕೃತಿಕ ಅನನ್ಯತೆಯನ್ನು ಹೊಂದಿರುವ ಭಾಷೆ. ಇಂತಹ ತುಳು

ಪರಿಸರದಲ್ಲಿ ಕಂಡುಬರುವ ಇನ್ನೊಂದು ಭಾಷೆ ಗೌಡ ಕನ್ನಡ. ಸ್ವಾತಂತ್ರ್ಯೋತ್ತರದಲ್ಲಿ ಜಿಲ್ಲಾವಾರು ವಿಂಗಡಣೆಯಾದಾಗ ಸಾಂಸ್ಕೃತಿಕವಾಗಿ ದಕ್ಷಿಣ ಕನ್ನಡ ಜಿಲ್ಲೆಯೊಂದಿಗೆ ಅವಿನಾಭಾವವಾಗಿ ಹೊಂದಿ ಕೊಂಡಿರುವ ಕೆಲವು ಭೂಭಾಗಗಳು ಕೊಡಗು ಜಿಲ್ಲೆಗೆ ಸೇರಿಹೋದವು. ಮುಖ್ಯವಾಗಿ ಕರಿಕೆ, ಪೆರಾಜೆ. ಚೊಂಬು, ಸಂಪಾಜೆ, ಗಾಳಿಬೀಡುವಿನ ಕಡಮಕಲ್ಲು ಇತ್ಯಾದಿ. ಇವು ಆಢಳಿತಾತ್ಮಕವಾಗಿ ಕೊಡಗಿನಲ್ಲಿ ಸೇರಿವೆಯೇ ಹೊರತು ಭಾಷಿಕವಾಗಿ ಹಾಗೂ ಸಾಂಸ್ಕೃತಿಕವಾಗಿ ತುಳುವೇ ಇವರ ಸಂವಹನ ಭಾಷೆಯಾಗಿದೆ. ಐತಿಹಾಸಿಕ ದೃಷ್ಟಿಯಿಂದ ಅವಲೋಕಿಸಿದಾಗ ಗೌಡರು ತುಳುನಾಡಿನ ಮೂಲ ನಿವಾಸಿಗಳಲ್ಲವೆನ್ನುವ ಅಂಶ ಸ್ಪಷ್ಟವಾಗುತ್ತದೆ. ಇವರು ಸುಳ್ಯ ಸೀಮೆಗೆ ವಲಸೆ ಬಂದು ವಾಸ್ತವ್ಯ ಹೂಡಿದವರು. ಕ್ರಮೇಣ ಕೃಷಿ ಭೂಮಿ ಅನ್ವೇಷಣೆಯಲ್ಲಿ ಕೊಡಗಿಗೂ ಬಂದು ನೆಲೆಸಿದರು. ಹೀಗೆ ತುಳುನಾಡಿನ ಸಂಸ್ಕೃತಿಯನ್ನು ಹೊಂದಿದ ಗೌಡ ಕನ್ನಡಿಗರು ಕೊಡಗಿನಲ್ಲಿ ಇರುವುದು ಕಂಡು ಬರುತ್ತದೆ. ತುಳುವು ತನ್ನ ಸಾಂಸ್ಕೃತಿಕ ಅನನ್ಯತೆಯನ್ನು ಗೌಡಕನ್ನಡದ ಮೇಲೆ ಪ್ರಭಾವಿಸಿದರೂ ಭಾಷಿಕವಾಗಿ ಇವೆರಡಕ್ಕೂ ನಿಖಟತೆ ಕಡಿಮೆ. ಆದರೂ ತುಳು ಭಾಷೆಯಲ್ಲಿರುವ ಕೆಲವು ಗಾದೆಗಳು ಗೌಡ ಕನ್ನಡದಲ್ಲಿ ಬಳಕೆಯಲ್ಲಿದೆ.

ಉದಾ:

ತುಳು: ಅಜ್ಜಿ ತಾಂಕಿನ ಪುಳ್ಳಿ ಬೊಜ್ಜ ತಿನಿಯೆರೆ

ಗೌ.ಕ.: ಅಜ್ಜಿ ಸಾಂಕಿದ ಪಿಳ್ಳಿ ಬೊಜ್ಜಕೂ ಆಕಿಲೆ

(ಅಜ್ಜಿ ಸಾಕಿದ ಮೊಮ್ಮಗು ತಿಥಿ ಊಟ ಮಾಡಲಿಕ್ಕೂ ಆಗದು)

ತುಳು: ಉಡಲ್‌ಡ್ ಪುಟ್ಟೋಡು ಬುದ್ಧಿ, ಭೂಮಿಡ್ ಪುಟ್ಟೋಡು ಒಸರ್

ಗೌ.ಕ,: ಬುದ್ಧಿ ಹುಟ್ಟೋಕು ಆತ್ಮಂದ, ಜಲ ಹುಟ್ಟೋಕು ಪಾತಾಳಂದ

(ಆತ್ಮದಿಂದ ಬುದ್ಧಿ ಹುಟ್ಟಬೇಕು, ಭೂಮಿಯಲ್ಲಿ ನೀರು ಹುಟ್ಟಬೇಕು)

ತುಳು: ಗಂಜಿ ಉರ್ಕೊಡು, ಪಂಜಿ ಸೊರ್ಕೊಡು

ಗೌ.ಕ.: ಗಂಜಿ ಉಕ್ಕೋಕು, ಹಂದಿ ಸೊಕ್ಕೋಕು

(ಗಂಜಿ ಉಕ್ಕಬೇಕು, ಹಂದಿ ದಷ್ಟಪುಷ್ಟವಾಗಿ ಬೆಳೆಯಬೇಕು)

ದಕ್ಷಿಣ ಕನ್ನಡ ಜಿಲ್ಲೆಗೆ ಮುಟ್ಟಿಕೊಂಡು ಕೊಡಗು ಜಿಲ್ಲೆಯಿದೆ. ಕೊಡಗಿನ ಸೋಮವಾರಪೇಟೆ ತಾಲ್ಲೂಕಿನ ಕೆಲವು ಭಾಗಗಳಲ್ಲಿ ತುಳುವರೇ ಹೆಚ್ಚಾಗಿರುವರು. ಕೊಡಗಿನಲ್ಲಿ ತುಳುವರನೇಕರು ಗೌಡ ಕನ್ನಡ ಹಾಗೂ ಕೊಡವ ಭಾಷೆಯನ್ನು ಮಾತನಾಡುತ್ತಾರೆ. ಹಾಗೆಯೇ ಕೊಡವರು ಹಾಗೂ ಗೌಡಕನ್ನಡಿಗರು ತುಳು ಮಾತನಾಡುತ್ತಾರೆ. ಇದಕ್ಕೆ ಪೂರಕವಾಗಿ ಇಲ್ಲಿ ಕೆಲವು ಗಾದೆಗಳು ತುಳು, ಗೌಡಕನ್ನಡ ಹಾಗೂ ಕೊಡವ ಭಾಷೆಗಳಲ್ಲಿ ಬಳಕೆಯಲ್ಲಿವೆ.

ಉದಾ:

ಗೌ.ಕ.: ನಿನ್ನೆನ ಮಳೆಗೆ ಇಂದ್ ಹುಟ್ಟಿದ ಚಗ್‌ತೆ.

ಕೊಡವ: ನಿನ್ನಾಂದೆತ ಮಳೆಕ್ ಇಂದ್ ಪುಟ್ಟ್‌ನ ತಾತೆ.

ತುಳು: ಕೋಡೆ ಬತ್ತ್‌ನ ಬರ್ಸಗ್ ಇನಿ ಕೊಡಿತ್ತಿನ ತೇವುತಜಂಕ್.

ಗೌ.ಕ.: ಕಾಡ್ ಕೋಳಿಗುಟ್ಟಾ ಸನಿ ಸಂಕ್ರಾಂತಿ.

ಕೊಡವ: ಕಾಡ್ ಕೋಳಿಕುಂಡಾ ಶನಿ ಚಂಗ್ರಾದಿ.

ತುಳು: ಕಾಟ್ ಕೋರಿಗೆ ಸಂಕ್ರಾಂತಿ ಆಂಡದಾನೆ.

ಗೌ.ಕ.: ಕೊಯಿ ಕತ್ತಿಯಂವಂಗೆ ಕೊಡ್ದುಲೆ, ಕೊಟ್ಟ್ ಕತ್ತಿಯಂವ ಬಾದುಲೆ.

ಕೊಡವ: ಕೊಯಿ ಕತ್ತಿಕಾರಂಗ್ ಕೊಡ್‌ಪುಲೆ, ಕೊಟ್ಟ್ ಕತ್ತಿಕಾರ ಕೇಪ್‌ಲೆ.

ತುಳು: ಪಟ್ಟೆ ಕಟ್ಟೆದಾಯೆಗ್ ಕೊರ್ಪುಜ್ಜಿ, ಮಟ್ಟ್‌ದ ಪೇಂಟೆದಾಯೆ ಬರ್ಪುಜ್ಜಿ.

ಇಲ್ಲಿ ತುಳುವಿನಲ್ಲಿ ಗಾದೆಯು ಸ್ವಲ್ಪ ಬದಲಾವಣೆ ಹೊಂದಿದೆ. ಇಲ್ಲಿ ಆಯಾ ಭಾಷಿಕರ ಸಾಮಾಜಿಕ ಅಂಶಗಳನ್ನು ಒಳಗೊಂಡು ಗಾದೆ ಬಳಕೆಯಾಗುತ್ತಿದೆ. ಆದರೆ ಮೂರೂ ಭಾಷೆಯಲ್ಲಿ ಈ ಗಾದೆಯನ್ನು ಬಳಸುವ ಉದ್ದೇಶ ಹಾಗೂ ಸಂದರ್ಭ ಒಂದೇ ಆಗಿದೆ.

ಇವುಗಳಲ್ಲದೆ ಕೊಡಗಿನ ಗೌಡಕನ್ನಡದಲ್ಲಿ ಮಾತ್ರ ಬಳಕೆಯಾಗುವ ವಿಶಿಷ್ಟವಾದ ಗಾದೆಗಳೂ ಇವೆ.

ನೆಂಟರಿಗಿಲ್ಲದ ಉಪ್ಪಣ ಯಾಕೆ.

ಕೊಲ್ಲನ ಕತ್ತಿ ಕೊಲ್ಲಂಗೇ ಕೇಡ್.

ಅತ್ತೆಗೆ ಹೊಟ್ಟೆ ಮ್ಯಾಲೆ ಗ್ಯಾನ, ಸೊಸೆಗೆ ಮೊಟ್ಟೆ ಮ್ಯಾಲೆ ಗ್ಯಾನ.

ಅಟ್ಟಲಿ ಅಕ್ಕಿ ಇದ್ದರೆ ಅವ್ವಂಗೆ ಬಿರ್‌ದ್.

ಕೆಸನ ಎಲೆಲಿ ನೀರ್ ಕಟ್ಟಿದಂಗೆ.

ಸೊಪನಲಿ ಬತ್ತ ಅಳಿಯಕೆ ಹಸ್‌ಂಬೆ ತಕಂಡ್ ಹೋದಂಗೆ.

ಕಂಡದರ ಹೇಳ್‌ರೆ ದೊಂಡೆಲಿ ಉರಿ.

ಹೆಗ್‌ಲ್‌ಲಿ ಗುದ್ದೋಲಿ ಮಡ್‌ಕಂಡ್ ಊರ್ ಪೂರ ಹುಡ್ಕಿದಂಗೆ ಇತ್ಯಾದಿ.

ಈ ರೀತಿಯಾಗಿ ಕೊಡಗಿನ ಗೌಡ ಕನ್ನಡದಲ್ಲಿರುವ ಗಾದೆಗಳು ಅಲ್ಲಿ ಬಳಕೆಯಲ್ಲಿರುವ

ಇತರ ಭಾಷಾ ಪ್ರಭಾವ ಹಾಗೂ ಅಲ್ಲಿನ ಪ್ರಾದೇಶಿಕ, ಸಾಂಸ್ಕೃತಿಕ, ಭೌಗೋಳಿಕ ಹಾಗೂ ಸಾಮಾಜಿಕ ಅಂಶಗಳನ್ನೊಳಗೊಂಡವುಗಳಾಗಿವೆ.

೪.೨. ಒಗಟುಗಳು:

ಜನಪದ ಸಾಹಿತ್ಯದಲ್ಲಿ ಗೀತೆ, ಕಥೆ, ಗಾದೆಗಳಂತೆ ಒಗಟುಗಳು ಕೂಡ ಪ್ರತ್ಯೇಕ ಅಸ್ತಿತ್ವವುಳ್ಳ ಪ್ರಕಾರವಾಗಿದೆ. ಭಾರತೀಯ ಸಂಸ್ಕೃತಿ ಪರಂಪರೆಯಲ್ಲಿ ಇದಕ್ಕೆ ವಿಶಿಷ್ಟ ಸ್ಥಾನವಿದ್ದು, ಹಲವು ಸಂವಾದಿ ಪದಗಳನ್ನು ಒಳಗೊಂಡಿದೆ. ಇಂಗ್ಲಿಶಿನಲ್ಲಿ ಇದಕ್ಕೆ 'Riddle' ಎಂದು ಹೆಸರಿದೆ. 'Riddle' ಎಂದರೆ 'to give advice' ಎಂದಾಗಿದೆ. ಕನ್ನಡದಲ್ಲಿ ಒಗಟು, ಒಂಟು, ಒಡಪು ಮುಂತಾದ ರೂಪಗಳಿರುವುದು ತಿಳಿದಿರುವ ವಿಚಾರ. ವಾಕ್ಸಂಪ್ರದಾಯದ ಹಲವು ಪ್ರಕಾರಗಳಲ್ಲಿ ಜನಸಾಮಾನ್ಯರ ಊಹಾ ಶಕ್ತಿಗೆ ಕನ್ನಡಿ ಹಿಡಿಯುವ ಅತ್ಯುತ್ತಮ ಪ್ರಕಾರವೆಂದರೆ ಒಗಟು. ಇವು ಸಾಮಾನ್ಯವಾಗಿ ಊಹೆಯ ಮೇಲೆ ಉತ್ತರವನ್ನು ಹುಡುಕುವ, ಕೇಳಿದ ಕೂಡಲೇ ದಿಗ್ಭ್ರಮೆ ಹಿಡಿಸುವ ಪ್ರಶ್ನಾರ್ಥಕ ಹೇಳಿಕೆಗಳು ಮುಂತಾದ ಪ್ರತಿಯೊಂದರಲ್ಲೂ ಒಂದು ಸಮಸ್ಯೆಯಿದ್ದು, ಸುಲಭವಾಗಿ ಬಿಡಿಸಲಾರದ ರೀತಿಯಲ್ಲಿ ಸಂಯೋಜಿತವಾಗಿರುತ್ತದೆ. ಇದರಲ್ಲಿ ಒಡ್ಡಿದ್ದು ಒಂದಾದರೆ, ಒಡೆಸುವುದು ಒಂದಾಗಿರುತ್ತದೆ. ಗುಪ್ತವಾಗಿರುವ ಮೊದಲನೆಯದನ್ನು ಎರಡನೆಯದು ವ್ಯಕ್ತಗೊಳಿಸುತ್ತದೆ. ಯಾವುದೇ ನಿಜವಾದ ಒಗಟಿನಲ್ಲಿ ಅಸ್ಪಷ್ಟತೆಯೇ ಅದರ ದೊಡ್ಡ ಗುಣವಾಗಿರುತ್ತದೆ. ಅರ್ಥಗೋಪ್ಯತೆ, ಧಾರ್ಮಿಕತೆ, ಅಶ್ಲೀಲತೆ, ನಿಷೇಧಾತ್ಮಕತೆ, ಪದ್ಯರೂಪ, ಪ್ರಶ್ನೋತ್ತರ ರೂಪ, ಸ್ಪರ್ಧಾರೂಪ ಮುಂತಾದ ಲಕ್ಷಣಗಳನ್ನೊಳಗೊಂಡ ಒಗಟು ಒಂದು ಶಾಬ್ದಿಕ ಸಂಕೇತವಾಗಿದೆ.

ಕೊಡಗಿನ ಗೌಡ ಜನರು ಮಾತನಾಡುವ ಗೌಡಕನ್ನಡ ಭಾಷೆಯಲ್ಲಿ ಒಗಟುಗಳನ್ನು 'ಒಡ್ಸಕತೆ' ಎನ್ನುವರು. ಶಿಷ್ಟಕನ್ನಡದ 'ಒಡಗತೆ'ಯ ರೂಪವೇ ಗೌಡಕನ್ನಡದಲ್ಲಿ 'ಒಡ್ಸಕತೆ' ಯಾಗಿರಬಹುದೆಂದು ಊಹಿಸಲಾಗಿದೆ. 'ಒಡಗತೆ' ಎಂದರೆ 'ಒಡೆಸುವ ಕಥೆ' ಎಂದರ್ಥ. ಈ 'ಒಡೆಸುವ ಕಥೆ' ಗೌಡಕನ್ನಡದ ಬಳಕೆಯಲ್ಲಿ ಸಂಕ್ಷಿಪ್ತಗೊಂಡು 'ಒಡ್ಸಕತೆ' ಆಗಿದೆ. ಅಲ್ಲದೆ, ಗೌಡಕನ್ನಡದಲ್ಲಿ ಒಗಟುಗಳನ್ನು 'ಎದ್‌ರ್ ಕತೆ' ಎಂದೂ ಕರೆಯುತ್ತಾರೆ. ಎರಡೂ ಕಡೆಯಲ್ಲಿ ಎದುರು ಬದುರಾಗಿ ಕುಳಿತು ಒಗಟನ್ನು ಒಡ್ಡಿ ಬಿಡಿಸುವ ಕ್ರಿಯೆಗೆ 'ಎದ್‌ರ್ ಕತೆ' ಎಂದು ಕರೆಯುತ್ತಾರೆ.

ಕೊಡಗಿನ ಗೌಡಕನ್ನಡದಲ್ಲಿ ಶಿಷ್ಟಕನ್ನಡದಲ್ಲಿರುವ ಒಗಟುಗಳು ಕೂಡ ಬಳಕೆಯಲ್ಲಿವೆ. ಮತ್ತು ಕೆಲವು ಶಿಷ್ಟಕನ್ನಡದ ಒಗಟುಗಳು ಗೌಡಕನ್ನಡಕ್ಕೆ ರೂಪಾಂತರಗೊಂಡು ಬಳಕೆಯಲ್ಲಿವೆ ಹಾಗೂ ಗೌಡಕನ್ನಡದಲ್ಲಿ ಶಿಷ್ಟಕನ್ನಡದಲ್ಲಿಲ್ಲದ ವಿಶಿಷ್ಟವಾದ ಕೆಲವು ಒಗಟುಗಳೂ ಇವೆ. ಕೊಡಗು ತನ್ನ ಭೌಗೋಳಿಕ ಪರಿಸರ ಮತ್ತು ಪ್ರಾದೇಶಿಕ ಭಿನ್ನತೆಗಳಿಂದಾಗಿ ತನ್ನಲ್ಲಿ ವಿಶಿಷ್ಟವಾದ ಒಗಟುಗಳನ್ನು ಹೊಂದಿದೆ. ಈ ಹಿನ್ನೆಲೆಯ ಆಧಾರದ ಮೇಲೆ ಅವುಗಳನ್ನು ಈ ಕೆಳಗಿನಂತೆ ವಿವರಿಸಲಾಗಿದೆ.

೪.೨.೧. ಭೌಗೋಳಿಕ ಮತ್ತು ಪ್ರಾದೇಶಿಕ ಹಿನ್ನೆಲೆ:

ಕಣ್ಣ್ ಕಾಣದ ಅಜ್ಜ ಪಾಲ ದಾಟುದು

(ಕಣ್ಣು ಕಾಣದ ಅಜ್ಜ ಚಿಕ್ಕ ಸೇತುವೆ ದಾಟುವುದು):

ಉತ್ತರ: ಉಂಬುಳು (ಉಂಬಳ, ಜಿಗಣೆ)

ಕೊಡಗಿನಲ್ಲಿ ಮಳೆಗಾಲದಲ್ಲಿ ಸಾಮಾನ್ಯವಾಗಿ ಕಾಫಿ, ಏಲಕ್ಕಿ, ಅಡಿಕೆ ಇತ್ಯಾದಿ ತೋಟಗಳಲ್ಲಿ, ಗದ್ದೆ, ಬಯಲುಗಳಲ್ಲಿ, ಕಾಡುಗಳಲ್ಲಿ, ಒಟ್ಟಿನಲ್ಲಿ ಇಲ್ಲಿನ ಪರಿಸರದಲ್ಲಿ ಮನುಷ್ಯರ ರಕ್ತವನ್ನು ಹೀರಿ ಜೀವಿಸುವ ಜಿಗಣೆ(ಉಂಬುಳು)ಗಳು ಕಂಡುಬರುತ್ತವೆ. ಇಲ್ಲಿನ ಕೆಲವೆಡೆ ಶೀತ ಪ್ರದೇಶಗಳಲ್ಲಿ ಬೇಸಿಗೆಯಲ್ಲೂ ಇವು ಇರುತ್ತವೆ. ಸಾಮಾನ್ಯವಾಗಿ ಇವು ಮಲೆನಾಡಿನ ಹಲವಾರು ಪ್ರದೇಶಗಳಲ್ಲಿ ಜೀವಿಸುತ್ತವೆ. ಈ ಕೀಟಕ್ಕೆ ಕಣ್ಣಿಲ್ಲದ ಕಾರಣ ಅದು ತನ್ನ ದೇಹದ ಒಂದು ಬದಿಯಿಂದ ತಡವುತ್ತಾ ಕುರುಡರಂತೆ ಚಲಿಸುತ್ತದೆ. ಈ ಹುಳುವನ್ನು ಗಮನದಲ್ಲಿಟ್ಟುಕೊಂಡು ಮೇಲಿನ ಒಗಟನ್ನು ಇಲ್ಲಿ ರಚಿಸಲಾಗಿದೆ. ಇದು ಇಲ್ಲಿ ಜೀವಿಸುವ, ದಿನನಿತ್ಯ ಕಣ್ಣಿಗೆ ಕಾಣುವ ಹುಳುವಾದ್ದರಿಂದ ಇಲ್ಲಿನವರಿಗೆ ಈ ಒಗಟಿನ ಉತ್ತರ ಹೊಳೆಯುವುದು ಕಷ್ಟವೇನಲ್ಲ.

ಎಪ್ಪಂದಿ ಹೊಟ್ಟೆಲಿ ಮುನ್ನೂರ್ ಮಕ್ಕ: ಉತ್ತರ: ಹಲ್‌ಸ್‌ನ ಹಣ್ಣ್.

(ಮುಳ್ಳುಹಂದಿಯ ಹೊಟ್ಟೆಯಲ್ಲಿ ಮುನ್ನೂರು ಮಕ್ಕಳು): (ಹಲಸಿನ ಹಣ್ಣು)

ಪೆಟ್ಟಿಗೆ ಪೆಟ್ಟಿಗೆ ಒಂದೇ ಪೆಟ್ಟಿಗೆ ಬಿಚ್ಚಿ ನೋಡಿದರೆ ಮುನ್ನೂರು ಪೆಟ್ಟಿಗೆ.

ಮುಳ್ಳಂದಿ ಹೊಟ್ಟೆಯಲ್ಲಿ ಚಿನ್ನದ ಮೊಟ್ಟೆ

ಈ ಮೇಲಿನ ಶಿಷ್ಟ ಕನ್ನಡದಲ್ಲಿರುವ ಹಲಸಿನ ಹಣ್ಣಿನ ಮೇಲಿನ ಒಗಟುಗಳು ಕೊಡಗಿನ ಗೌಡರಲ್ಲೂ ಬಳಕೆಯಾಗುತ್ತದೆ. ಇದರೊಂದಿಗೆ ಮೇಲಿನ "ಎಪ್ಪಂದಿ ಹೊಟ್ಟೆಲಿ ಮುನ್ನೂರ್ ಮಕ್ಕ" ಎಂಬ ಒಗಟೂ ಇಲ್ಲಿದೆ. ಹಲಸಿನ ಹಣ್ಣು ಮುಳ್ಳು ಮುಳ್ಳಾಗಿರುತ್ತದೆ. ಹಾಗೆಯೇ ಮುಳ್ಳು ಹಂದಿಯೂ ಮುಳ್ಳಿನಿಂದ ಕೂಡಿರುತ್ತದೆ. ಕೊಡಗಿನ ಗೌಡರಲ್ಲಿ ಮುಳ್ಳು ಹಂದಿಯೊಂದಿಗೆ 'ಎಪ್ಪಂದಿ' ಎಂಬ ಪದವೂ ಬಳಕೆಯಲ್ಲಿದೆ. ಈ ಪದವು ಕೊಡವ ಭಾಷೆಯ ಪದವಾಗಿದ್ದು, ಅವರಲ್ಲಿಯೂ ಈ ಒಗಟು ಇದೆ. ಬೇಟೆಗಾರರಾದ ಕೊಡಗಿನವರು ಮುಳ್ಳುಹಂದಿಯನ್ನು ಆಹಾರವಾಗಿ ಸೇವಿಸುತ್ತಾರೆ. ಹಾಗಾಗಿ ಈ ಒಗಟನ್ನು ಬಿಡಿಸಲು ಅವರಿಗೆ ಕಷ್ಟವಾಗದು.

ಕೊಡಗಿನ ಗೌಡರಲ್ಲಿ ಹಲಸಿನ ಹಣ್ಣಿನ ಬಗ್ಗೆ ಇರುವ ಇತರ ಒಗಟುಗಳು:

ಕಡ್ದರೆ ಹಾಲ್ ವಳಗೆ ಮುನ್ನೂರ್ ಮಕ್ಕ

(ಕಡಿದರೆ ಹಾಲು ಒಳಗೆ ಮುನ್ನೂರು ಮಕ್ಕಳು)

ಅಡ್ಡ ಗೋಡೆಲಿ ಗುಡ್ಡ ಕುದ್ದುಟ್ಟು

ಗುಡ್ಡನ ಕುಂಡೆಲಿ ಜಡ್ಡ್ ಸೊರ್ದದೆ.

(ಹಲಸಿನ ಹಣ್ಣು ಮತ್ತು ಅದರಿಂದ ಸುರಿಯುವ ಮೇಣ)

(ಅಡ್ಡ ಗೋಡೆಯ ಮೇಲೆ ದಿಬ್ಬ ಕುಳಿತಿದೆ, ದಿಬ್ಬದ ಅಂಡಿನಲ್ಲಿ ಗಲೀಜು ಸುರಿಯುತ್ತಿದೆ)

ಕೆಂಪಣ್ಣನ ಕಾಂಬಕನ ಬೆಳಿ ಅಕ್ಕ ಬೊಸುರಿಯಾದು: ಉತ್ತರ: ರೊಟ್ಟಿ.

(ಕೆಂಪಣ್ಣನನ್ನು ಕಾಣುವಾಗ ಬಿಳಿ ಅಕ್ಕ ಬಸುರಿಯಾಗುತ್ತಾಳೆ): ಉತ್ತರ: ಅಕ್ಕಿರೊಟ್ಟಿ.

ಕೊಡಗಿನ ಆಹಾರಗಳಲ್ಲಿ ಅಕ್ಕಿರೊಟ್ಟಿ ಬಹು ಮುಖ್ಯವಾದುದಾಗಿದೆ. ಅಕ್ಕಿಯನ್ನು ತೊಳೆದು ಒಣಗಿಸಿ ಪುಡಿಮಾಡಿ ಅನ್ನದೊಂದಿಗೆ ನಾದಿ ಕಲೆಸಿ ರೊಟ್ಟಿ ತಯಾರಿಸುತ್ತಾರೆ. ರೊಟ್ಟಿ ತಟ್ಟಿ ಒಲೆಯ ಮೇಲೆ ಓಡು(ಅಂಚು)ವಿನಲ್ಲಿ ಬೇಯಿಸಿ ನಂತರ ಕೆಂಡದ ಎದಿರು ಇಟ್ಟು ಕಾಯಿಸಿ ಬೇಯಿಸುತ್ತಾರೆ. ಆಗ ರೊಟ್ಟಿಯು ಉಬ್ಬಿ ಬರುತ್ತದೆ. ಕೆಂಪಾದ ಕೆಂಡವನ್ನು ನೋಡಿದಾಗ ಬಿಳಿ ರೊಟ್ಟಿಯು ಉಬ್ಬಿ ಬರುತ್ತದೆ. ಸಾಮಾನ್ಯವಾಗಿ ಕೊಡಗಿನಲ್ಲಿ ಕೊಡವ ಮತ್ತು ಗೌಡಕುಟುಂಬಗಳಲ್ಲಿ ಯಾವಾಗಲೂ ಬೆಳಿಗ್ಗೆ, ರಾತ್ರಿ ರೊಟ್ಟಿಯನ್ನು ತಯಾರಿಸಿ ತಿನ್ನುತ್ತಾರೆ. ಈ ರೀತಿ ರೊಟ್ಟಿ ಮಾಡುತ್ತಿರುವ ಸಮಯದಲ್ಲೇ ಈ ಒಗಟು ರಚನೆಯಾಗಿರಬಹುದೆಂದು ಇಲ್ಲಿನ ಜನರ ಊಹೆ. ಕೊಡಗಿನ ವಿಶಿಷ್ಟ ಆಹಾರದ ಮೇಲೆ ಕಟ್ಟಿರುವ ಈ ಒಗಟು ಇಲ್ಲಿ ವಿಶಿಷ್ಟವಾಗಿದೆ ಎನ್ನಬಹುದು.

ಕಾಡೆಲ್ಲಾ ತಿರ್‌ಗಿದೆ ಬಂದ್ ಮೂಲೆಲಿ ಕುದ್ದದೆ

(ಕಾಡೆಲ್ಲಾ ತಿರುಗುತ್ತದೆ ಬಂದು ಮೂಲೆಯಲ್ಲಿ ಕೂರುತ್ತದೆ): ಉತ್ತರ: ಕತ್ತಿ

'ಊರೆಲ್ಲ ತಿರುಗಿ ಬಂದು ಮೂಲೆಯಲ್ಲಿ ಕೂರುತ್ತದೆ' ಎಂಬ ಶಿಷ್ಟಕನ್ನಡದಲ್ಲಿರುವ ಒಗಟನ್ನು ಆಧಾರವಾಗಿಟ್ಟುಕೊಂಡು ಗೌಡಕನ್ನಡದಲ್ಲಿ ಮೇಲಿನ ಒಗಟಿದೆ. ಗೌಡಕನ್ನಡದ ಪರಿಸರದಲ್ಲಿ 'ಕತ್ತಿ'ಯನ್ನು ವಿಷಯವಾಗಿಟ್ಟುಕೊಂಡು ಮೇಲಿನ ಒಗಟನ್ನು ರಚಿಸಿರುವುದಕ್ಕೆ ಅವರ ಸಾಮಾಜಿಕ ಹಿನ್ನೆಲೆ ಕಾರಣವಾಗಿದೆ. ಕೊಡಗಿನ ಗೌಡ ಜನಾಂಗದವರು ಕೃಷಿಕರು. ಗದ್ದೆ ಮತ್ತು ತೋಟ ಕೆಲಸಗಳಲ್ಲಿ ನುರಿತವರು. ಅವರು ತೋಟಗಳಿಗೆ ಹೋಗುವಾಗ ಬರಿಗೈಯಲ್ಲಿ ಹೋಗುವುದಿಲ್ಲ, ಯಾವಾಗಲೂ ಇವರು ಕೈಯಲ್ಲಿ ಕತ್ತಿಯನ್ನು ಹಿಡಿದೇ ಹೋಗುತ್ತಾರೆ. ಬರಿಗೈಯಲ್ಲಿ ತೋಟಕ್ಕೆ ಹೊರಟವರಿಗೆ ಕೈಯಲ್ಲಿ ಕತ್ತಿ ಇಲ್ಲವೆಂದು ಇತರರು ನೆನಪಿಸುವಷ್ಟು ಇದು ಪ್ರಮುಖವಾಗಿದೆ. ಏಕೆಂದರೆ ತೋಟದಲ್ಲಿ ಹಲವು ಕೆಲಸಗಳಿರುತ್ತವೆ. ಕಾಫಿ ಗಿಡಗಳಿಗೆ ಹಬ್ಬಿಕೊಂಡಿರುವ ಬಳ್ಳಿಗಳನ್ನು ಬಿಡಿಸಲು, ಒಣಗಿದ ಗೆಲ್ಲುಗಳನ್ನು ತೆಗೆಯಲು, ತೋಟದಲ್ಲಿ ಏನಾದರೂ ಅಪಾಯ ಎದುರಾದಲ್ಲಿ ರಕ್ಷಣೆಗೆ ಹೀಗೆ ಕೆಲಸಕ್ಕೆ ಬರುತ್ತದೆ. ಆದ್ದರಿಂದ ಕತ್ತಿಯನ್ನು ಇವರು ಬಹಳ ಜೋಪಾನವಾಗಿ ತೆಗೆದುಕೊಂಡು ಹೋಗಿ ತಂದು ಮನೆಯಲ್ಲಿ ಇಡುತ್ತಾರೆ. ಈ ಹಿನ್ನೆಲೆಯಿಂದ ಈ ಒಗಟು ಬಂದಿದೆ.

ಆಯಿ ಊಯಿ ಮಣ್ಣೊಳಗೆ ಎಂತ?: ಸುಂಟಿ

(ಆಹ್ ಊಹ್ ಮಣ್ಣಿನೊಳಗೆ ಏನು?): ಉತ್ತರ: ಶುಂಠಿ.

ಈ ಒಗಟು ಕೊಡಗಿನಲ್ಲಿ ಬೆಳೆಯುವ ಒಂದು ಬೆಳೆಯನ್ನಾಧರಿಸಿ ರಚನೆಯಾಗಿದೆ. ಕೊಡಗು ಜಿಲ್ಲೆಯ ನೆರೆ ರಾಜ್ಯವಾದ 'ಕೇರಳ'ದ ಜನರು ಕೊಡಗಿಗೆ ಬಂದು ಭೂಮಿಯನ್ನು ಗುತ್ತಿಗೆಗೆ ಪಡೆದು ಶಂಠಿ ಬೆಳೆಯನ್ನು ಬೆಳೆಯುತ್ತಿದ್ದರು. ಇತ್ತೀಚಿನ ದಿನಗಳಲ್ಲಿ ಕೊಡಗಿನ ಜನರೇ ಶಂಠಿ ಬೆಳೆಯನ್ನು ಅಧಿಕ ಪ್ರಮಾಣದಲ್ಲಿ ಬೆಳೆಯುತ್ತಿರುವುದು ಕಂಡುಬಂದಿದೆ. ಶುಂಠಿಯು ಭೂಮಿಯ ಒಳ ಭಾಗದಲ್ಲಿ ಬೆಳೆಯುತ್ತದೆ. ಇದು ಬೆಳೆದ ನಂತರ ಬಹಳ ಜೋಪಾನವಾಗಿ ಮಣ್ಣಿನ ಒಳಗಿನಿಂದ ಹೊರ ತೆಗೆದು ಸ್ವಚ್ಛಗೊಳಿಸಬೇಕು. ಇಲ್ಲವಾದಲ್ಲಿ ಅದು ಮುರಿದು ಹೋಗುವ ಸಾಧ್ಯತೆಗಳಿರುತ್ತವೆ. ಇದರಿಂದಾಗಿಯೇ ಒಗಟಿನಲ್ಲಿ 'ಆಯಿ ಊಯಿ' ಎಂಬ ಪದಗಳಿವೆ. ಹೀಗೆ ಹೇಳುವಾಗಲೇ ಒಗಟಿನ ಉತ್ತರ ಹೊಳೆಯುತ್ತದೆ ಎಂಬುದು ಇಲ್ಲಿನವರ ಅಭಿಪ್ರಾಯ.

ಕಣ್ಣಿಗೆ ಹತ್ರ ಕಾಲ್‌ಗೆ ದೂರ: ಕುಂದ್.

(ಕಣ್ಣಿಗೆ ಹತ್ತಿರ ಕಾಲಿಗೆ ದೂರ) ಉತ್ತರ: ಬೆಟ್ಟ.

ಕೊಡಗು ಬೆಟ್ಟಗುಡ್ಡಗಳಿಂದ ಕೂಡಿದ ಪ್ರದೇಶವಾಗಿದೆ. ಈ ಪ್ರದೇಶದಲ್ಲಿ ಬೆಟ್ಟಗಳು ಬಹಳ ಹತ್ತಿರದಲ್ಲೇ ಇವೆ ಎಂಬಂತೆ ಗೋಚರಿಸುತ್ತವೆ. ಬಹಳ ಹತ್ತಿರದಲ್ಲಿರುವಂತೆ ಕಾಣಿಸಿದರೂ ಬೆಟ್ಟಕ್ಕೆ ಹೋಗಬೇಕಾದರೆ ಬಹಳ ದೂರ ನಡೆಯಬೇಕು. ಈ ವಿಷಯವನ್ನಿಟ್ಟುಕೊಂಡು ಈ ಒಗಟನ್ನು ರಚಿಸಲಾಗಿದೆ.

ಹೀಗೆ ಕೊಡಗಿನಲ್ಲಿ ವಿಶಿಷ್ಟವಾಗಿರುವ ಒಗಟುಗಳೊಂದಿಗೆ ಶಿಷ್ಟ ಕನ್ನಡದಲ್ಲಿರುವ ಒಗಟುಗಳೂ ಇಲ್ಲಿ ಬಳಕೆಯಾಗುತ್ತವೆ.

೪.೨.೩.ಕೊಡಗಿನ ಗೌಡ ಕನ್ನಡದಲ್ಲಿ ಬಳಕೆಯಲ್ಲಿರುವ ಒಗಟುಗಳು:

೧. ಅವ್ವನೊಳಗೆ ಮಗ ಹೋದೆ

ಮಗನೊಳಗೆ ಅವ್ವ ಹೋಲೆ (ಸೇರು, ಮಾನ)

(ತಾಯಿಯ ಮನೆಗೆ ಮಗಳು ಹೋಗುತ್ತಾಳೆ, ಮಗಳ ಮನೆಗೆ ತಾಯಿ ಹೋಗುವುದಿಲ್ಲ: ಸೇರು, ಪಾವು).

೨. ಅಕ್ಕನಲ್ಲಿಗೆ ತಂಗೆ ಹೋದೆ

ತಂಗೆನಲ್ಲಿಗೆ ಅಕ್ಕ ಹೋದುಲೆ. (ಚೊಂಬು, ಮಡಿಕೆ)

(ಅಕ್ಕಳ ಮನೆಗೆ ತಂಗಿ ಹೋಗುತ್ತಾಳೆ, ತಂಗಿಯ ಮನೆಗೆ ಅಕ್ಕ ಹೋಗುವುದಿಲ್ಲ: ತಂಬಿಗೆ, ಹಂಡೆ).

೩. ಒಂದ್ ಕುಪ್ಪಿಲಿ ಎರ್‌ಡ್ ತರ ಎಣ್ಣೆ (ಕೋಳಿ ಮೊಟ್ಟೆ)

(ಒಂದು ಬಾಟಲಿಯಲ್ಲಿ ಎರಡು ತರಹದ ಎಣ್ಣೆ: ಕೋಳಿಯ ಮೊಟ್ಟೆ)

೪. ಮುಳ್ಳು ಮುಳ್ಳು ಮರಲಿ ಮುತ್ತು ಮುತ್ತು ಕಾಯಿ (ನಿಂಬೆ ಹಣ್ಣು)

(ಮುಳ್ಳು ಮುಳ್ಳು ಮರದಲ್ಲಿ ಮುತ್ತು ಮುತ್ತು ಕಾಯಿ: ನಿಂಬೆ ಹಣ್ಣು)

೫. ಉದ್ದ ಮರಲಿ ಕೆಂಪು ಸನ್ಯಾಸಿ (ಅಡಿಕೆ)

(ಉದ್ದ ಮರದಲ್ಲಿ ಕೆಂಪು ಸನ್ಯಾಸಿ: ಅಡಿಕೆ)

೬. ಸಣ್ಣ ಕೂಸ್‌ಗೆ ಮೈಪೂರ ಬೆಳಿ ಬಟ್ಟೆ (ಬೆಳ್ಳುಳ್ಳಿ)

(ಚಿಕ್ಕ ಮಗುವಿಗೆ ಮೈಯೆಲ್ಲಾ ಬಿಳಿ ಬಟ್ಟೆ: ಬೆಳ್ಳುಳ್ಳಿ).

೭. ಅಲ್ಲಿ ಇಲ್ಲಿ ಎಲ್ಲಿ ಹೋದರೂ ನನ್ನ ಹೆಜ್ಜೆ ಗುರ್‌ತು ಸಿಕ್ಕುಲೆ (ಮೀನ್).

(ಅಲ್ಲಿ ಇಲ್ಲಿ ಎಲ್ಲಿ ಹೋದರೂ ನನ್ನ ಹೆಜ್ಜೆ ಗುರುತು ಸಿಗುವುದಿಲ್ಲ: ಮೀನು).

೮. ನಂಗೆ ಮೂರ್ ಕಣ್ಣ್

ನನ್ನ ತಲೆಲಿ ಜುಟ್ಟು

ನನ್ನ ಹೊಟ್ಟೆಲಿ ನೀರ್ (ತೆಂಗಿನಕಾಯಿ)

(ನನಗೆ ಮೂರು ಕಣ್ಣಿದೆ, ನನ್ನ ತಲೆಯಲ್ಲಿ ಜುಟ್ಟಿದೆ, ನನ್ನ ಹೊಟ್ಟೆಯಲ್ಲಿ ನೀರಿದೆ).

೯. ಅಣ್ಣನ ಕುಂಡೆಲಿ ತಮ್ಮ ನೇತಾಡ್ದೆ (ಗೇರು ಹಣ್ಣು ಮತ್ತು ಗೇರು ಬೀಜ).

(ಅಣ್ಣನ ಅಂಡಿನಲ್ಲಿ ತಮ್ಮ ತೂಗಾಡುವುದು: ಗೇರು)

೧೦. ದೊಡ್ಡ ಹಟ್ಟಿಲಿ ದನ ಕೂಡಿ

ಬೊಳ್ಪುಗೆ ನೋಡ್‌ಕನ ಒಂದೂ ಇಲ್ಲೆ (ನಕ್ಷತ್ರ).

(ದೊಡ್ಡ ಕೊಟ್ಟಿಗೆಯಲ್ಲಿ ದನಗಳನ್ನು ಕೂಡಿಸಿ, ಬೆಳಗ್ಗೆ ನೋಡಿದರೆ ಒಂದೂ ಇಲ್ಲ: ನಕ್ಷತ್ರ)

೧೧. ನೋಡೋವು ಇಬ್ಬರ್ (ನೋಡುವವರು ಇಬ್ಬರು)

ಕೇಳೋವು ಇಬ್ಬರ್ (ಕೇಳುವವರು ಇಬ್ಬರು)

ಕೊಡೋವು ಇಬ್ಬರ್ (ಕೊಡುವವರು ಇಬ್ಬರು)

ತಿಂಬಕೆ ಮೂವತ್ತೆರಡ್ ಜನ (ತಿನ್ನುವವರು ೩೨ ಜನ)

ಆದರೆ ರಸ ಗೊತ್ತಾದು ಒಬ್ಬಂಗೆ ಮಾತ್ರ (ಆದರೆ ರುಚಿ ಗೊತ್ತಾಗುವುದು ಒಬ್ಬನಿಗೆ)

(ಕಣ್ಣ್, ಕಿವಿ, ಕೈಗ, ಹಲ್ಲ್‌ಗ, ನಾಲಿಗೆ).

೧೨. ಅಡ್ಡ ಗೋಡೆಲಿ ಗುಡ್ಡ ಕುದ್ದುಟ್ಟು.

ಗುಡ್ಡನ ಕುಂಡೆಲಿ ಜಡ್ಡ್ ಸೊರ್ದದೆ (ಹಲ್ಸ್‌ನಕಾಯಿ)

(ಅಡ್ಡ ಗೋಡೆಯ ಮೇಲೆ ಗುಡ್ಡ ಕುಳಿತಿದೆ, ಆ ಗುಡ್ಡದ ಅಂಡಿನಲ್ಲಿ ಗಲೀಜು ಸುರಿಯುತ್ತಿದೆ: ಹಲಸಿನ ಹಣ್ಣು).

೧೩. ಆರ್ ಮೂರ್ ಗೂಟ, ಪೊರ್ಲುನ ತೋಟ

ಹೋಕೆ ದಾರಿ ಉಟ್ಟು, ಬಾಕೆ ದಾರಿ ಇಲ್ಲೆ (ಮೀನ್ ಕೂಳಿ).

(ಆರು ಮೂರು ಗೂಟ, ಚೆಂದದ ತೋಟ, ಹೋಗಲು ದಾರಿ ಇದೆ, ಬರಲು ದಾರಿ ಇಲ್ಲ: ಮೀನು ಹಿಡಿಯುವ ಕೂಳಿಗೆ).

೧೪. ಕುದ್ದರೆ ಸನ್ಯಾಸಿ, ಹಾರ್‌ರೆ ಕೋಡ

ಬಾಯಿ ಬುಟ್ಟರೆ ಹುಲಿ, ನಾಯಾರ್? (ಕಪ್ಪೆ)

(ಕುಳಿತರೆ ಸನ್ಯಾಸಿ, ಹಾರಿದರೆ ಕೋತಿ, ಬಾಯಿ ಬಿಟ್ಟರೆ ಹುಲಿ, ನಾನು ಯಾರು? ಕಪ್ಪೆ).

೧೫. ಊರವ್ಕೆಲ್ಲಾ ಒಂದೇ ಕಂಬ್ಳಿ (ಆಕಾಸ).

(ಊರಿನವರಿಗೆಲ್ಲಾ ಒಂದೇ ಕಂಬಳಿ: ಆಕಾಶ).

೧೬. ಬಗ್ಗಿರೆ ಬಾಯಿಗೆ, ಎದ್ದರೆ ಎದೆಗೆ (ಮಣಿ ಸರ).

(ಬಗ್ಗಿದರೆ ಬಾಯಿಗೆ, ಎದ್ದರೆ ಎದೆಗೆ)

೧೭. ಹೊಟ್ಟೆ ಮೇಲೆ ಹೊಟ್ಟೆ, ನೆತ್ತಿಲಿ ಗೂಟ

ಬಾಯಿಲಿ ತಿಂಬೊದು, ಬರಿಲಿ ಉರ್ಚುದು (ಬೀಸುವ ಕಲ್ಲು)

(ಹೊಟ್ಟೆ ಮೇಲೆ ಹೊಟ್ಟೆ, ನೆತ್ತಿ ಮೇಲೆ ಗೂಟ, ಬಾಯಿಯಲ್ಲಿ ತಿನ್ನುವುದು, ಬದಿಯಲ್ಲಿ ಹೇಲುವುದು: ಬೀಸುವ ಕಲ್ಲು).

೧೮. ಬೆಳ್ಳನೆ ಹಕ್ಕಿಗೆ ಸಾವಿರಾರ್ ಕಣ್ಣ್ (ದೋಸೆ)

(ಬಿಳಿಯ ಹಕ್ಕಿಗೆ ಸಾವಿರಾರು ಕಣ್ಣು: ದೋಸೆ)

೧೯. ಅಪ್ಪ ಆಕಾಶಕೆ, ಅವ್ವ ಪಾತಾಳಕೆ

ಮಜ ಸಂತೆಗೆ, ಮಗ ಮೊದುವೆಗೆ (ತೆಂಗಿನ ಮರ)

(ಅಪ್ಪ ಆಕಾಶಕ್ಕೆ, ಅವ್ವ ಪಾತಾಳಕ್ಕೆ, ಮಗ ಸಂತೆಗೆ, ಮಗಳು ಮದುವೆಗೆ)

೨೦. ಅಕ್ಕ ತಂಗೆಕ ಇಬ್ಬರ್

ಅಪ್ಪತ ಹೇಳ್ದರೆ ಕೂಡ್ವೆ

ಅವ್ವತ ಹೇಳ್‌ರೆ ಕೂಡ್ದುಲೆ (ತುಟಿ)

(ಅಕ್ಕ ತಂಗಿಯರು ಇಬ್ಬರು ಅಪ್ಪ ಎಂದರೆ ಕೂಡುವರು, ಅವ್ವ ಎಂದರೆ ಕೂಡುವುದಿಲ್ಲ)

೨೧. ಎರ್‌ಡ್ ಕುಪ್ಪಿಲಿ ಒಂದ್ ತರ ಎಣ್ಣೆ (ಮೂಕುಚಾರ್).

(ಎರಡು ಬಾಟಲಿಯಲ್ಲಿ ಒಂದೇ ತರಹದ ಎಣ್ಣೆ: ಸಿಂಬಳ).

೨೨. ಎಪ್ಪಂದಿ ಹೊಟ್ಟೆಲಿ ಮುನ್ನೂರ್ ಮಕ್ಕ (ಹಲಸು).

(ಮುಳ್ಳು ಹಂದಿಯ ಹೊಟ್ಟೆಯಲ್ಲಿ ಮುನ್ನೂರು ಮಕ್ಕಳು: ಹಲಸಿನ ಹಣ್ಣು).

೨೩. ಅಪ್ಪ ಕೊಟ್ಟ ದುಡ್ಡ್ ಎಣಿಸಿಕಾದುಲೆ

ಅವ್ವ ಕೊಟ್ಟ ಮಂದ್ರಿ ಮಡ್‌ಚಿಕಾದುಲೆ (ಆಕಾಸ, ನಕ್ಷತ್ರ).

(ಅಪ್ಪ ಕೊಟ್ಟ ಹಣ ಎಣಿಸಲು ಆಗುವುದಿಲ್ಲ, ಅವ್ವ ಕೊಟ್ಟ ಚಾಪೆ ಮಡಿಸಲು ಆಗುವುದಿಲ್ಲ: ಆಕಾಶ, ನಕ್ಷತ್ರ).

೨೪. ಅಂಕು ಡೊಂಕುನ ಮರ

ಕಚ್ಚಿದವರ ಬಾಯಿಗೆ ಉಚ್ಚೆ ಹೊಯ್ಯ ಮರ (ಕಬ್ಬು)

(ಅಂಕು ಡೊಂಕಿನ ಮರ, ಕಚ್ಚಿದವರ ಬಾಯಿಗೆ ಉಚ್ಚೆ ಹುಯ್ಯುವ ಮರ)

೨೫. ಕೊಂಡಿ ತಪ್ಪಿರೆ ಕುಂಡೆಲಿ ಉರಿ (ಚೇಳು).

(ಕೊಂಡಿ ತಪ್ಪಿದರೆ ಅಂಡಿನಲ್ಲಿ ಉರಿ: ಚೇಳು)

೨೬. ನೂರ್ ಮಕ್ಕಳಿಗೆ ಒಂದೇ ಉಡದಾರ (ಚೇಪೆ ಕಟ್ಟವ ಹಗ್ಗ).

(ನೂರು ಮಕ್ಕಳಿಗೆ ಒಂದೇ ಸೊಟದ ದಾರ, ಉತ್ತರ: ಕಸಬರಿಕೆ ಕಟ್ಟುವ ದಾರ)

೨೭. ಹಾಕಂವ ಒಬ್ಬ, ನೂಕಂವ ಒಬ್ಬ

ದಾರಿಗೆ ದೀಪ ಹಿಡಿಯಂವ ಒಬ್ಬ (ಇಡುಮಣೆ ಹಿಟ್ಟ್).

(ಹಾಕುವವನು ಒಬ್ಬ, ನೂಕುವವನು ಒಬ್ಬ, ದಾರಿಗೆ ದೀಪ ಹಿಡಿಯುವವನು ಒಬ್ಬ: ಒತ್ತು ಶ್ಯಾವಿಗೆ)

೨೮. ನೋಡಿಕೆ ಬೆಳಿ, ತಿಂದರೆ ಕೆಂಪು (ಸುಣ್ಣ).

(ನೋಡಲು ಬಿಳಿ, ತಿಂದರೆ ಕೆಂಪು: ಸುಣ್ಣ)

೨೮. ಅಂವನ ಮನೆಗೆ ಇಂವ ಹೋಲೆ

ಇವಂನ ಮನೆಗೆ ಅಂವ ಬಾಲೆ (ಕಣ್ಣ್‌ಗ).

(ಅವನ ಮನೆಗೆ ಇವನು ಹೋಗುವುದಿಲ್ಲ, ಇವನ ಮನೆಗೆ ಅವನು ಬರುವುದಿಲ್ಲ: ಕಣ್ಣುಗಳು).

೨೯. ಅಕ್ಕ ಮರ್‍ಪರೆ ತಂಗೆ ಮರ್‍ಪದೆ (ಕಣ್ಣುಗಳು)

(ಅಕ್ಕ ಅತ್ತರೆ ತಂಗಿಯೂ ಅಳವಳು: ಕಣ್ಣುಗಳು).

೩೦. ಕಣ್ಣ್‌ಗೆ ಹತ್ರ ಕಾಲ್‌ಗೆ ದೂರ (ಕುಂದ್)

(ಕಣ್ಣಿಗೆ ಹತ್ತಿರ, ಕಾಲಿಗೆ ದೂರ: ಬೆಟ್ಟ).

೩೧. ಕೆಂಪಣ್ಣನ ಕಾಂಬಕನ ಬೆಳಿ ಅಕ್ಕ ಬೊಸುರಿಯಾದು (ಕೆಂಡ,ರೊಟ್ಟಿ).

(ಕೆಂಪು ಅಣ್ಣನನ್ನು ಕಾಣುವಾಗ ಬಿಳಿ ಅಕ್ಕ ಬಸುರಿಯಾಗುವುದು: ಕೆಂಡ ಮತ್ತು ಅಕ್ಕಿ ರೊಟ್ಟಿ).

೩೨. ಸುಟ್ಟ ಹೆಣನ ಮತ್ತೆ ಸುಡ್‌ದು (ಮಸಿಕೆಂಡ)

(ಸುಟ್ಟ ಹೆಣವನ್ನು ಮತ್ತೆ ಸುಡುವುದು: ಇದ್ದಿಲು) ಇತ್ಯಾದಿ.

ಈ ಮೇಲಿನ ಕೊಡಗಿನ ಗೌಡ ಕನ್ನಡದಲ್ಲಿರುವ ಒಗಟುಗಳನ್ನು ಗಮನಿಸಿದಾಗ ಇವುಗಳಲ್ಲಿ ಕೊಡವ ಮತ್ತು ತುಳು ಭಾಷೆಯಲ್ಲಿರುವ ಒಗಟುಗಳು ಹಾಗೂ ಶಿಷ್ಟ ಕನ್ನಡದಲ್ಲಿರುವ ಒಗಟುಗಳು ಇರುವುದು ಕಂಡು ಬರುತ್ತದೆ.

ಶಿ.ಕ ಮತ್ತು ಗೌ.ಕ.

ಉದಾಹರಣೆಗೆ

ಶಿ.ಕ.: ನೂರು ಮಕ್ಕಳಿಗೆ ಒಂದೇ ಉಡದಾರ. ಉತ್ತರ: ಕಸಬರಿಕೆ.

ಗೌ.ಕ.: ನೂರ್ ಮಕ್ಕಳಿಗೆ ಒಂದೇ ಉಡೆದಾರ. ಉತ್ತರ: ಚೀಪೆ.

ಶಿ.ಕ.: ಅಕ್ಕನ ಮನೆಗೆ ತಂಗಿ ಹೋಗುತ್ತಾಳೆ, ತಂಗಿ ಮನೆಗೆ ಅಕ್ಕ ಹೋಗುವುದಿಲ್ಲ.

ಉತ್ತರ: ತಂಬಿಗೆ, ಹಂಡೆ.

ಗೌ.ಕ.: ಅಕ್ಕನಲ್ಲಿಗೆ ತಂಗೆ ಹೋದೆ, ತಂಗೆನಲ್ಲಿಗೆ ಅಕ್ಕ ಹೋದುಲೆ.

ಉತ್ತರ: ಚೊಂಬು ಹಂಡೆ ಇತ್ಯಾದಿ.

ಕೊಡವ ಮತ್ತು ಗೌ.ಕ.

ಉದಾ: ಕೊಡವ: ಕಣ್ಣ್ ಕಾಣತ ಅಜ್ಜ ಪಾಲ ದಾಟ್‌ವೊ. ಉತ್ತರ: ಉಂಬುಳು.

ಗೌ.ಕ.: ಕಣ್ಣ್ ಕಾಣದ ಅಜ್ಜ ಪಾಲ ದಾಟುದು. ಉತ್ತರ: ಉಂಬುಳು.

ಕೊಡವ: ಎಪ್ಪಂದಿ ಪೊಟ್ಟೆಲ್ ಮುನ್ನೂರ್ ಮಕ್ಕ. ಉತ್ತರ: ಚಕ್ಕೆ ಪಣ್ಣ್.

ಗೌ.ಕ.: ಎಪ್ಪಂದಿ ಹೊಟ್ಟೆಲಿ ಮುನ್ನೂರ್ ಮಕ್ಕ. ಉತ್ತರ: ಹಲ್ಸನ ಹಣ್ಣ್ ಇತ್ಯಾದಿ.

ಗೌ.ಕ. ಮತ್ತು ತುಳು:

ಉದಾ: ಗೌ.ಕ.: ಅಡ್ಡ ಮರಲಿ ಗುಡ್ಡ ಕುದ್ದುಟ್ಟು. ಉತ್ತರ: ಹಲ್ಸನ ಕಾಯಿ

ತುಳು: ಅಡ್ಡ ಮರಟ್ ಬಡ್ಡೆ ಕುಳ್ಳಿ ಲೆಕ್ಕ.

ಗೌ.ಕ.: ಅವ್ವ ಕೊಟ್ಟ ಮಂದ್ರಿ ಮಡ್ಚಿಕಾದುಲೆ

ಅಪ್ಪ ಕೊಟ್ಟ ದುಡ್ಡು ಲೆಕ್ಕ ಮಾಡಿಕೆ ಆದುಲೆ.

ಉತ್ತರ: ಆಕಾಶ ಮತ್ತು ನಕ್ಷತ್ರ.

ತುಳು: ಅಪ್ಪೆ ಕೊರಿ ಪಜೆ ಮಡಿಪರೆ ಬಲ್ಲಿ

ಅಮ್ಮೆ ಕೊರಿ ಪಣವು ಲೆಕ್ಕ ಮಲ್ಪರೆ ಬಲ್ಲಿ ಇತ್ಯಾದಿ.

ಇವುಗಳೊಂದಿಗೆ ಗೌಡ ಕನ್ನಡದಲ್ಲಿ ಮಾತ್ರ ಬಳಕೆಯಾಗುವ ಒಗಟುಗಳು ಕೂಡ ಇಲ್ಲಿ ಇವೆ.

ಉದಾ: ಕಣ್ಣ್‌ಗೆ ಹತ್ರ ಕಾಲ್‌ಗೆ ದೂರ ಉತ್ತರ: ಕುಂದ್.

(ಕಣ್ಣಿಗೆ ಹತ್ತಿರ ಕಾಲಿಗೆ ದೂರ: ಬೆಟ್ಟ)

ಕೆಂಪಣ್ಣನ ಕಾಂಬಕನ ಬೆಳಿ ಅಕ್ಕ ಬೊಸುರಿಯಾದು ಉತ್ತರ: ರೊಟ್ಟಿ.

ಕೆಂಪು ಅಣ್ಣನನ್ನು ಕಾಣುವಾಗ ಬಿಳಿ ಅಕ್ಕ ಬಸುರಿಯಾಗುವುದು: ಅಕ್ಕಿ ರೊಟ್ಟಿ ಇತ್ಯಾದಿ.

ಇಂತಹ ಗಾದೆ, ಒಗಟುಗಳು ಮತ್ತು ಇವುಗಳಲ್ಲಿ ವ್ಯಕ್ತವಾಗುವ ಅನುಭವ ದ್ರವ್ಯಗಳು ಗೌಡ ಭಾಷಿಕರದ್ದು ಮಾತ್ರವಲ್ಲದೆ, ತುಳು, ಕೊಡವ ಭಾಷಿಕ ಪರಿಸರದ ಅನುಭವವೂ ಆಗಿ ಬಳಕೆಯಲ್ಲಿದೆ.

೪.೩. ನುಡಿಗಟ್ಟುಗಳು:

ನಾವು ಮಾತನಾಡುವುದು ವಾಕ್ಯದ ರೂಪದಲ್ಲಿರುತ್ತದೆ. ಈ ವಾಕ್ಯವು ಪದಗಳಿಂದ ಕೂಡಿರುತ್ತದೆ. ಒಂದು ಪದಕ್ಕೆ ಒಂದು ಅರ್ಥವಿದ್ದು, ಆ ಪದವು ಇನ್ನೊಂದು ಅರ್ಥದಲ್ಲಿ ಬಳಸುವಂತಿದ್ದರೆ ಅದನ್ನು 'ನುಡಿಗಟ್ಟು'ಗಳು ಎಂದು ಕರೆಯುವರು. ಅಂದರೆ, ಪದಗಳಿಂದ ನೇರವಾದ ಅರ್ಥವು ವ್ಯಕ್ತವಾದರೆ ಅದು ಆ ಪದದ ವಾಚ್ಯಾರ್ಥವೆಂದೂ, ವಿಶಿಷ್ಟಭಾವವು ಅಭಿವ್ಯಕ್ತವಾದರೆ ಲಕ್ಷ್ಯಾರ್ಥವೆಂದೂ ಕರೆಯಲಾಗುವುದು. ವಾಚ್ಯಾರ್ಥ ನೀಡುವ ಬಿಡಿ ಪದಗಳನ್ನು ಸೂಚ್ಯಾರ್ಥ ನೀಡುವಂತೆ ಸಮಾಸಗೊಳಿಸಿ ವಿಶಿಷ್ಟ ಅರ್ಥಕ್ಕೆ ಅವಕಾಶ ಕಲ್ಪಿಸಲಾಗುವುದು. ಹೀಗೆ ರಚಿತವಾದ ಪದಪುಂಜವೇ 'ನುಡಿಗಟ್ಟು'. ಇದು ಆಯಾ ಭಾಷೆಯ ಜಾಯಮಾನಕ್ಕೆ ಅನುಗುಣವಾಗಿರುತ್ತದೆ. ಕನ್ನಡದಲ್ಲಿ ಇವುಗಳನ್ನು 'ಪಡೆನುಡಿ'ಗಳು ಎಂದೂ ಕರೆಯುತ್ತಾರೆ ಇಂತಹಾ

ನುಡಿಗಟ್ಟುಗಳು ಎಲ್ಲಾ ಭಾಷೆಗಳಲ್ಲೂ ಕಂಡುಬರುತ್ತವೆ. ಇವುಗಳಿಂದ ಭಾಷೆಯ ಸಂಪತ್ತು ಹೆಚ್ಚಾಗುತ್ತದೆ. ಕೊಡಗಿನ ಗೌಡಜನಾಂಗದವರ ಭಾಷೆಯಾದ 'ಗೌಡಕನ್ನಡ'ದಲ್ಲಿಯೂ ಇಂತಹ ನುಡಿಗಟ್ಟುಗಳಿವೆ. ಅವುಗಳನ್ನು ಸಂಗ್ರಹಿಸಿ ಅವುಗಳ ಅರ್ಥ ಮತ್ತು ಬಳಕೆಯನ್ನು ಈ ರೀತಿ ವಿವರಿಸಲಾಗಿದೆ

ನುಡಿಗಟ್ಟುಗಳು ಸಾಮಾನ್ಯವಾಗಿ ಮನುಷ್ಯನ ಅಂಗಗಳ ಕ್ರಿಯೆ ಪ್ರತಿಕ್ರಿಯೆಗಳನ್ನು ಒಳಗೊಂಡು ಹೆಚ್ಚಾಗಿ ರೂಪಿತವಾಗಿರುತ್ತವೆ. ಕೊಡಗಿನ ಗೌಡಕನ್ನಡದಲ್ಲಿ ಕಂಡುಬರುವ ನುಡಿಗಟ್ಟುಗಳು ಈ ಮಾದರಿಯಲ್ಲಿವೆ.

ಉದಾ: ತಲೆಹಾಕ್ : ಮಧ್ಯೆ ಪ್ರವೇಶಿಸು.

ಗೌ.ಕ : ನೀ ನಮ್ಮ ವಿಸಯಕೆ ತಲೆ ಹಾಕ್‌ಬಡ

ಶಿ.ಕ : ನೀನು ನಮ್ಮ ವಿಷಯಕ್ಕೆ ತಲೆ ಹಾಕಬೇಡ

ಕೊಡಗು ಗೌಡರ ಭಾಷೆಯಲ್ಲಿ ಬಳಕೆಯಲ್ಲಿರುವ 'ನುಡಿಗಟ್ಟು'ಗಳಲ್ಲಿ ಒಂದು ಪದ, ಎರಡು ಪದಗಳು ಮತ್ತು ಮೂರು ಪದಗಳನ್ನು ಹೊಂದಿದ ನುಡಿಗಟ್ಟುಗಳಿರುವುದು ಕಂಡುಬಂದಿದೆ.

ಒಂದು ಪದ:

ಕಿಚ್ಚ್ : 'ಅಸೂಯೆ' ಎಂಬರ್ಥದಲ್ಲಿ ಬಳಕೆಯಾಗುತ್ತದೆ. ಕಿಚ್ಚು ಎಂದರೆ ವಾಚ್ಯಾರ್ಥ ಬೆಂಕಿ.

ಉದಾ : ನಾವು ಕುಸಿಲಿದ್ದರೆ ಅವುಕೆ ಕಿಚ್ಚ್

(ನಾವು ಸಂತೋಷದಿಂದ ಇರುವುದಕ್ಕೆ ಅವರಿಗೆ ಅಸೂಯೆ)

ಈ ನುಡಿಗಟ್ಟು ಶಿಷ್ಟ ಕನ್ನಡದ ಹೊಟ್ಟೆಕಿಚ್ಚು, ಹೊಟ್ಟೆಯುರಿ ಎಂಬ ಅರ್ಥದಲ್ಲಿಯೂ ಬಳಕೆಯಾಗುತ್ತದೆ.

ಎರಡು ಪದಗಳು:

ಕೋಳಿ ನಿದ್ದೆ: ಕೊಡಗು ಗೌಡರಲ್ಲಿ ಚಿಕ್ಕ ನಿದ್ರೆ, ಸಣ್ಣ ನಿದ್ರೆ ಎಂಬ ಅರ್ಥದಲ್ಲಿ ಈ ನುಡಿಗಟ್ಟು ಬಳಕೆಯಾಗಿದೆ

ಉದಾ: ನನ್ನದ್ ಒಂದ್ ಕೋಳಿ ನಿದ್ದೆ ಆತ್

(ನಾನು ಚಿಕ್ಕದಾಗಿ ಒಂದು ನಿದ್ರೆ ಮಾಡಿದೆನು)

ಮೂರು ಪದಗಳು:

ಕೋಳಿ ತಲೆಗೆ ನೀರಾಕಂವ: ಜಿಪುಣ ಎಂಬರ್ಥದಲ್ಲಿ ಬಳಕೆಯಾಗುತ್ತದೆ. ಅವನು ಜಿಪುಣ. ಅಂದರೆ ಕೊಡಗಿನಲ್ಲಿ ಅಥಿತಿಗಳು ಮನೆಗೆ ಬರುವಾಗ ಕೋಳಿಯನ್ನು ಸಾಯಿಸಿ ಅಡುಗೆ ಮಾಡಿ ಉಣಬಡಿಸುವರು. ಹಾಗೆಯೇ ಅಥಿತಿಗಳೂ ಸಿಹಿತಿಂಡಿಗಳು, ಮಾಂಸ ಇತ್ಯಾದಿ ತರುತ್ತಾರೆ.

ಕೆಲವರು ಹಾಗೆಯೇ ಬರೀಗೈಯಲ್ಲಿ ಬಂದು ಚೆನ್ನಾಗಿ ತಿಂದು ಹೋಗುತ್ತಾರೆ. ಕೋಳಿಯನ್ನು ಸಾಯಿಸುವಾಗ ಅದರ ತಲೆಗೆ ನೀರು ಚಿಮುಕಿಸಿ ಕೊಲ್ಲುವುದು ಇವರ ಪದ್ಧತಿ. ಹಾಗಾಗಿ ಈ ನುಡಿಗಟ್ಟು 'ಜಿಪುಣ' ಎಂಬರ್ಥದಲ್ಲಿದೆ.

೪.೩.೧. ಗೌಡ ಕನ್ನಡದಲ್ಲಿರುವ ನುಡಿಗಟ್ಟುಗಳು ಮತ್ತು ಅವುಗಳ ಪ್ರಯೋಗಗಳು:

ಉರಿಕೊಳ್ಳಿ : (ಉರಿಯುತ್ತಿರುವ ಸೌದೆ). 'ತುಂಟ' ಎಂಬ ಅರ್ಥದಲ್ಲಿ ಬಳಕೆಯಾಗುತ್ತದೆ.
ಉದಾ: ಆ ಹೈದ ಎಂತಾ ಉರಿಕೊಳ್ಳಿ (ಆ ಹುಡುಗ ಎಷ್ಟೊಂದು ತುಂಟ)

ಉಸ್‌ರೇ ಬುಟ್ಟತ್‌ಲೆ : (ಉಸಿರು ಬಿಡಲಿಲ್ಲ). 'ಮಾತಿಲ್ಲದಂತಾಗು' 'ಮಾತು ಮೂಕವಾಗು' ಎಂಬ ಅರ್ಥವಿದೆ.
ಉದಾ: ಅಪ್ಪ ಬೊಯ್ಯಕನ ನಾ ಉಸ್‌ರೇಬುಟ್ಟತುಲೆ.
(ಅಪ್ಪ ಬಯ್ಯುವಾಗ ನಾನು ಮಾತನಾಡಲಿಲ್ಲ).

ಮೂಸಿತ್ಲೆ : (ಮೂಸಲಿಲ್ಲ) ಗಮನಿಸಲಿಲ್ಲ ಎಂಬ ಅರ್ಥದಲ್ಲಿ ಪ್ರಯೋಗವಾಗುತ್ತದೆ.
ಉದಾ: ಅದ್ ದೊಡ್ಡಸ್ತಿಕೆಲಿ ಆಡ್ತಿತ್ತ್, ಅದನ ಯಾರೂ ಮೂಸಿತ್‌ಲೆ (ಅವಳು ದೊಟ್ಟಸ್ತಿಕೆಯಿಂದ ಆಡುತಿದ್ದಳು, ಅವಳನ್ನು ಯಾರೂ ಗಮನಿಸಲಿಲ್ಲ).

ದುಂಡು ದಪ್ಪ : (ಬಾಯಿ ದಪ್ಪ). ಸಿಟ್ಟು, ಅಸಮಾಧಾನ, ಮುಖ ಊದಿಸಿಕೊಳ್ಳು ಎಂಬ ಅರ್ಥದಲ್ಲಿ ಬಳಕೆಯಾಗುತ್ತದೆ.
ಉದಾ: ಎಲ್ಲವೂ ಕುಸೀಲಿದ್ದೊ. ಅಣ್ಣಂದ್ ಮಾತ್ರ ದುಂಡ್ ದಪ್ಪ ಇತ್ತ್.
(ಎಲ್ಲವರೂ ಸಂತೋಷದಿಂದ ಇದ್ದರು ಅಣ್ಣ ಮಾತ್ರ ಸಿಟ್ಟಿನಿಂದ ಇದ್ದನು).

ಬಾಯಿ ಬಡ್‌ಕಂಡೊ : (ಬಾಯಿ ಬಡಿದುಕೊಂಡರು). ಮಾತಿನಲ್ಲಿ ಜಗಳವಾಡುವುದು.
ಉದಾ: ಅವು ಇಬ್ಬರೂ ಒಬ್ಬಂದೊಬ್ಬ ಬಾಯಿ ಬಡ್‌ಕೊಡೊ
(ಅವರು ಇಬ್ಬರೂ ಒಬ್ಬರಿಗೊಬ್ಬರು ಬೈದಾಡಿಕೊಂಡರು).

ಹುಳ ಬುಡ್ : (ಹುಳ ಬಿಡು). ತಲೆಕೆಡಿಸಿಕೊಳ್ಳು ಎಂಬ ಅರ್ಥದಲ್ಲಿ ಬಳಕೆಯಾಗುತ್ತದೆ.
ಉದಾ: ನಾ ಹೇಳ್‌ದನ ಕೇಳಿ ಅಂವಂಗೆ ಹುಳಬುಟ್ಟಂಗಾತ್
(ನಾನು ಹೇಳಿದ್ದನ್ನು ಕೇಳಿ ಅವನು ತಲೆ ಕೆಡಿಸಿಕೊಡನು).

ಕುತ್ತಿಕೊಡ್ : (ಚುಚ್ಚಿ ಕೊಡು). ಚಾಡಿ ಹೇಳು ಎಂಬರ್ಥದಲ್ಲಿದೆ.
ಉದಾ: ಇಂವನೇ ಅವಂಗೆ ನನ್ನ ಕುತ್ತಿಕೊಟ್ಟದ್
(ಇವನೇ ಅವನಿಗೆ ನನ್ನ ಬಗ್ಗೆ ಚಾಡಿ ಹೇಳಿದ್ದು).

ಕೈಹಿಡಿ : (ಕೈಯನ್ನು ಹಿಡಿ). ನೆರವಾಗು, ಸಹಾಯಮಾಡು ಎಂಬರ್ಥದಲ್ಲಿ ಬಳಕೆಯಾಗುತ್ತದೆ.

ಉದಾ: ನಾವು ಕಸ್ಟಲಿರ್‌ಕನ ಅವು ನಮ್ಮ ಕೈಹಿಡ್‌ದೊಳೊ

(ನಾವು ಕಷ್ಟದಲ್ಲಿದ್ದಾಗ ಅವರು ನಮಗೆ ಸಹಾಯ ಮಾಡಿದ್ದರು).

ದಮ್ಮ್‌ಕಟ್ಟ್ : (ಉಸಿರು ಕಟ್ಟು). ಕಷ್ಟಪಟ್ಟು ಎಂಬ ಅರ್ಥದಲ್ಲಿ ಬಳಕೆಯಾಗುತ್ತದೆ.

ಉದಾ: ಪಾಪು ಹೈದ ಇಂದ್ ದಮ್ಮ್‌ಕಟ್ಟಿ ಕೆಲ್ಸ ಮಾಡಿಯುಟ್ಟು.

(ಪಾಪು ಹುಡುಗ ಇಂದು ಕಷ್ಟಪಟ್ಟು ಕೆಲಸ ಮಾಡಿದ್ದಾನೆ).

ಸೊಂಟ ಪದ ಹಾಡ್ದು : (ಸೊಂಟ ಹಾಡುವುದು). ಸೊಂಟ ನೋವು ಎಂಬ ಅರ್ಥದಲ್ಲಿ ಬಳಕೆಯಾಗುತ್ತದೆ. ಉದಾ: ನನ್ನ ಸೊಂಟ ಪದ ಹಾಡ್ದೆ.

(ನನ್ನ ಸೊಂಟ ನೋವಾಗುತ್ತಿದೆ).

ಕೊದಿಕೂಸು : ಮುದ್ದಿನ ಮಗು ಎಂಬ ಅರ್ಥದಲ್ಲಿ ಬಳಕೆಯಾಗುತ್ತದೆ.

ಉದಾ: ಅಂವ ಒಬ್ಬನೇ ಕೊದಿಕೂಸು.

(ಅವನು ಒಬ್ಬನೇ ಮುದ್ದಿನ ಮಗ).

ಓಡಿಯಾಡ್ : (ಓಡಿಯಾಡು):ಶ್ರಮಪಡು, ಕೆಲಸಮಾಡು ಎಂಬ ಅರ್ಥದಲ್ಲಿ ಬಳಕೆಯಾಗುತ್ತದೆ.

ಉದಾ: ನಮ್ಮ ಜಂಬರಲಿ ಅವು ಬಾಳ ಓಡಿಯಾಡಿಯೊಳೊ

(ನಮ್ಮ ಸಮಾರಂಭದಲ್ಲಿ ಅವರು ಬಹಳ ಶ್ರಮಪಟ್ಟಿದ್ದಾರೆ).

ಬುಟ್ಟಾಕ್ : (ಬಿಟ್ಟು ಹಾಕು). ನಿರ್ಲಕ್ಷಿಸು ಎಂಬ ಅರ್ಥದಲ್ಲಿ ಬಳಕೆಯಾಗುತ್ತದೆ.

ಉದಾ: ಅದ್ ಹೇಳ್‌ದರ ನೀ ಕೇಳ್‌ಬಡ, ಬುಟ್ಟಾಕ್.

(ಅವಳು ಹೇಳಿದ್ದನ್ನು ನೀನು ಕೇಳಬೇಡ, ಅದನ್ನು ನಿರ್ಲಕ್ಷ್ಯ ಮಾಡು).

ಪದ್ರಾಡ್ : ಓಡಿಹೋಗು/ಜಾಗ ಖಾಲಿಮಾಡು/ತಪ್ಪಿಸಿಕೊಳ್ಳು ಎಂಬ ಅರ್ಥದಲ್ಲಿ ಬಳಕೆಯಾಗುತ್ತದೆ.

ಉದಾ: ನಾವು ಹೋಕನ ಅಂವ ಅಲ್ಲಿಂದ ಪದ್ರಾಡ್.

(ನಾವು ಹೋಗುವಾಗ ಅವನು ಅಲ್ಲಿಂದ ಓಡಿಹೋಗಿದ್ದನು).

ಕೊಕ್ಕೆ ಹಾಕ್: ಆಕ್ಷೇಪಣೆ ಮಾಡು/ತಡೆಯೊಡ್ಡು ಎಂಬ ಅರ್ಥದಲ್ಲಿ ಬಳಕೆಯಾಗುತ್ತದೆ.

ಉದಾ: ನಾವು ಎಂತ ಮಾಡಿಕೆ ಹೊರ್ಟರೂ ಅವು ಅದಕೆ ಕೊಕ್ಕೆ ಹಾಕಿವೆ.

(ನಾವು ಏನು ಮಾಡಲು ಹೊರಟರೂ ಅವರು ಅದಕ್ಕೆ ತಡೆಯೊಡ್ಡುತ್ತಾರೆ).

ಹೊಟ್ಟೆ ತುಂಬ್‌ಸ್: (ಹೊಟ್ಟೆ ತುಂಬಿಸು). ಜೀವನ ಸಾಗಿಸು/ಬದುಕು ಎಂಬ ಅರ್ಥದಲ್ಲಿ ಬಳಕೆಯಾಗುತ್ತದೆ.

ಉದಾ: ಹೆಂಗೋ ಅಲ್ಲಿಲ್ಲಿ ಕೆಲ್ಸ ಮಾಡಿಕಂಡ್ ಹೊಟ್ಟೆ ತುಂಬ್‌ಸಿಕಂಡ್ ಒಳೊ (ಹೇಗೋ ಅಲ್ಲಿ ಇಲ್ಲಿ ಕೆಲಸ ಮಾಡಿಕೊಂಡು ಜೀವನ ನಡೆಸುತ್ತಿದ್ದಾರೆ).

ಕೆಮಿಗೆ ಬೀಳ್: (ಕಿವಿಗೆ ಬೀಳು). ವಿಷಯ ತಿಳಿಯುವುದು ಎಂಬ ಅರ್ಥದಲ್ಲಿದೆ.

ಉದಾ: ವಿಸ್ಯ ನನ್ನ ಕೆಮಿಗೂ ಬೀತ್ (ವಿಷಯ ನನಗೂ ತಿಳಿಯಿತು).

ಚವರ ಮಾಡ್ : (ಕ್ಷೌರಮಾಡು/ಬೋಳಿಸು). ಹಣ ಖಾಲಿಮಾಡಿಸು ಎಂಬ ಅರ್ಥದಲ್ಲಿದೆ.

ಉದಾ: ಅಂವನೊಟ್ಟಿಗೆ ಹೋಕಾಗದ್, ಅಂವ ಲಾಯ್ಕ ಚವರ ಮಾಡ್ದೆ. (ಅವನ ಜೊತೆಯಲ್ಲಿ ಹೋಗಬಾರದು, ಅವನು ಚೆನ್ನಾಗಿ ನಮ್ಮ ಹಣ ಖರ್ಚು ಮಾಡಿಸುತ್ತಾನೆ)

ಜೀವಕೆ ಬಾದು: (ಜೀವಕ್ಕೆ ಬರು). ಪ್ರಾಣಕ್ಕೆ ಕುತ್ತು ಎಂಬ ಅರ್ಥದಲ್ಲಿ ಬಳಕೆಯಾಗುತ್ತದೆ.

ಉದಾ: ನೋಡಿ ಮಾಡಿ ಕೆಲ್ಸ ಮಾಡಿ ಇಲ್ಲರೆ ಅದ್ ಜೀವಕೆ ಬಾದು (ನೋಡಿಕೊಂಡು ಕೆಲಸ ಮಾಡಿ ಇಲ್ಲವಾದಲ್ಲಿ ಅದರಿಂದ ಪ್ರಾಣಕ್ಕೆ ಕುತ್ತಾಗಬಹುದು).

ನೆಲಲಿ ನಿಲ್ಲುಲೆ: (ನೆಲದಲ್ಲಿ ನಿಲ್ಲುವುದಿಲ್ಲ). ಬಹಳ ಸಂತೋಷಪಡು ಎಂಬ ಅರ್ಥದಲ್ಲಿದೆ.

ಉದಾ: ಮಗ ಬಾದುತ ಕೇಳಿ ಅವ್ವನ ಕಾಲ್ ನೆಲಲಿ ನಿಲ್ಲುಲೆ (ಮಗಳು ಬರುವಳು ಎಂದು ತಿಳಿದ ಮೇಲೆ ಅಮ್ಮ ಬಹಳ ಸಂತೋಷದಿಂದ ಇರುವಳು).

ಹೊಟ್ಟೆ ಬೇನೆ ಆದು: (ಹೊಟ್ಟೆ ನೋವಾಗುವುದು). ಗುಟ್ಟು ರಟ್ಟು ಮಾಡು ಎಂಬಅರ್ಥದಲ್ಲಿದೆ.

ಉದಾ: ವಿಸ್ಯ ಹೇಳಿ ಸೊಲ್ಪ ಹೊತ್ತಿಗೇ ಅದ್‌ಕೆ ಹೊಟ್ಟೆ ಬೇನೆ ಆಗಿಹೋತು (ವಿಷಯ ಹೇಳಿದ ಸ್ವಲ್ಪ ಹೊತ್ತಿನಲ್ಲೇ ಅವಳು ಗುಟ್ಟು ರಟ್ಟು ಮಾಡಿದಳು).

ತೊಪ್ಪಿ ಹಾಕ್: (ಟೋಪಿ ಹಾಕು). ಮೋಸ ಮಾಡು ಎಂಬ ಅರ್ಥದಲ್ಲಿ ಬಳಕೆಯಾಗುತ್ತದೆ.

ಉದಾ: ನಿಂಗೆ ಅಂವ ತೊಪ್ಪಿ ಹಾಕಿತ್ (ನಿನಗೆ ಅವನು ಮೋಸ ಮಾಡಿದನು).

ಹೊಟ್ಟೆಗೆ ಹಾಕ: (ಹೊಟ್ಟೆಗೆ ಹಾಕಿಕೊ). ಕ್ಷಮಿಸು ಎಂಬ ಅರ್ಥದಲ್ಲಿ ಬಳಕೆಯಾಗುತ್ತದೆ.

ಉದಾ: ಬುಡು ಏನೋ ಆಗಿಹೋತು, ಹೊಟ್ಟೆಗೆ ಹಾಕ. (ಬಿಡು ಏನೋ ಆಗಿಹೋಯಿತು, ಕ್ಷಮಿಸಿಬಿಡು).

ಲಾಯ್ಕ ಕೊಡ್: (ಚೆನ್ನಾಗಿ ಕೊಡು). ಅವಮಾನ ಮಾಡು/ಹೊಡೆ ಎಂಬ ಅರ್ಥದಲ್ಲಿದೆ.

ಉದಾ: ಅಂದ್‌ಂದೇ ಕೆಣ್‌ಕಿಕಂಡ್ ಇತ್ತ್, ಇಂದ್ ಲಾಯ್ಕ ಕೊಟ್ಟೆ ನೋಡ್

ಉಸ್‌ರೇ ಇಲ್ಲೆ (ಅಂದಿನಿಂದಲೇ ಕೆಣಕಿಕೊಂಡಿದ್ದನು ಇಂದು ಚೆನ್ನಾಗಿ ಕೊಟ್ಟೆ ನೋಡು ಮಾತೇ ಆಡಲಿಲ್ಲ).

ತಲೆಲಿ ಮಡ್ಗ್: (ತಲೆಯ ಮೇಲಿಡು). ಸಲಿಗೆ ಬಿಡು ಎಂಬ ಅರ್ಥದಲ್ಲಿದೆ.

ಉದಾ: ಅಂವ ಹೆಣ್ಣ್‌ನ ತಲೆಲಿ ಇಸಿಟ್ಟು.

(ಅವನು ಹೆಂಡತಿಯನ್ನು ತೀರಾ ಸಲಿಗೆ ಬಿಟ್ಟಿದ್ದಾನೆ).

ತಲೆಲಿ ನಡಿ : (ತಲೆಯ ಮೇಲೆ ನಡೆ). ಅಹಂಕಾರ ಎಂಬ ಅರ್ಥದಲ್ಲಿ ಬಳಕೆಯಾಗುತ್ತದೆ.

ಉದಾ: ಅಂವನ ಕಾಲ್ ನೆಲಲಿ ಇಲ್ಲೆ, ತಲೆಲಿ ನಡ್ದದೆ

(ಅವನು ಅಹಂಕಾರದಿಂದ ನೆಲದ ಮೇಲೆಯೇ ನಿಲ್ಲುತ್ತಿಲ್ಲ).

ಅಡ್ಡ ಬಾಯಿ ಹಾಕ್ : ಮಧ್ಯೆ ಮಾತನಾಡು ಎಂಬ ಅರ್ಥದಲ್ಲಿ ಬಳಕೆಯಾಗುತ್ತದೆ.

ಉದಾ: ಏನಾರ್ ಒಂದ್ ಒಳ್ಳ ವಿಸ್ಯ ಹೇಳಿ ಆಕೆ ಮುಂದೇ ಅಡ್ಡ ಬಾಯಿ ಹಾಕಿದೊ (ಏನಾದರು ಒಂದು ಒಳ್ಳೆಯ ವಿಷಯ ಹೇಳಿ ಮುಗಿಸುವ ಮೊದಲೇ ಮಧ್ಯೆ ಬಾಯಿ ಹಾಕಿದರು).

ಪಾಸಾಣ ಮನ್‌ಸ್ : ಕೆಟ್ಟ ಮನಸ್ಸು ಎಂಬ ಅರ್ಥದಲ್ಲಿ ಬಳಕೆಯಾಗುತ್ತದೆ.

ಉದಾ: ಅದರ್‌ದ್ ಪಾಸಾಣ ಮನ್‌ಸ್ (ಅವಳದ್ದು ಕೆಟ್ಟ ಮನಸು).

ಹಲ್ಲ್ ಬುಡು : ನಗು/ಪೆಚ್ಚಾಗು ಎಂಬ ಅರ್ಥದಲ್ಲಿ ಬಳಕೆಯಾಗುತ್ತದೆ.

ಉದಾ: ಕೂಸು ನನ್ನ ಕಾಂಬಕನ ಹಲ್ಲ್ ಬುಟ್ಟದೆ

(ಮಗು ನನ್ನನ್ನು ಕಾಣುವಾಗ ನಗುತ್ತದೆ).

ಅಡ್ಡ ಬೀಳು : (ನಮಸ್ಕಾರ ಮಾಡು) ಶಕ್ತಿ ಮೀರಿ ಪ್ರಯತ್ನಿಸು ಎಂಬ ಅರ್ಥದಲ್ಲಿದೆ.

ಉದಾ: ಈ ಸರಿ ಹೆಂಗಾರ್ ಅಡ್ಡಬಿದ್ದ್ ಪಾಸ್ ಆಕು (ಈ ಬಾರಿ ಹೇಗಾದರು ಶಕ್ತಿ ಮೀರಿ ಪ್ರಯತ್ನಿಸಿ ಪಾಸಾಗಬೇಕು).

ತಲೆ ಹೋಗು: ಅಪಾಯ ಉಂಟಾಗು ಎಂಬ ಅರ್ಥದಲ್ಲಿ ಬಳಕೆಯಾಗುತ್ತದೆ.

ಉದಾ: ಅದ್ ತಲೆ ಹೋವ ಕೆಲ್ಸ (ಅದು ಅಪಾಯದ ಕೆಲಸ).

ಕುತ್ತಿಗೆಗೆ ಬಾದು : (ಕೊರಳಿಗೆ ಬರು). ಸಂದಿಗ್ಧ ಪರಿಸ್ತಿತಿಗೆ ಸಿಲುಕು ಎಂಬ ಅರ್ಥದಲ್ಲಿದೆ.

ಉದಾ: ಅವಂಗೆ ಒಳ್ಳದಾಗಲಿತೇಳಿ ನಾ ಸುಳ್ಳು ಹೇಳ್‌ದೆ, ಈಗ ಅದ್ ನನ್ನ ಕುತ್ತಿಗೆಗೆ ಬಂದುಟ್ಟು, (ಅವನಿಗೆ ಒಳ್ಳೆಯದಾಗಲಿ ಎಂದು ನಾನು ಸುಳ್ಳು ಹೇಳಿದ್ದೆ. ಈಗ ಅದು ನನ್ನನ್ನು ಸಂದಿಗ್ಧ ಪರಿಸ್ತಿತಿಗೆ ಸಿಲುಕಿಸಿದೆ).

ಏಕ್ ತ ಹೇಳ್‌ರೆ ಪೋಕ್ : ಕೇಳಿದ್ದಕ್ಕೆ ವಿರುದ್ಧವಾಗಿ ಹೇಳು ಎಂಬ ಅರ್ಥದಲ್ಲಿದೆ.

ಶಿಷ್ಟ ಕನ್ನಡದ ಏತಿ ಎಂದರೆ ಪ್ರೀತಿ ಎಂಬರ್ಥದಲ್ಲಿದೆ.

ಕೇಳ್ದಕೆ ಸರಿ ಹೇಳ್ ಏಕ್‌ತ ಹೇಳ್ಕನ ಪೋಕ್‌ತ ಹೇಳ್ದೆ

(ಸರಿಯಾಗಿ ಹೇಳು ಏತಿ ಅಂದರೆ ಪ್ರೀತಿ ಎಂದು ಹೇಳುತ್ತೀಯೆ).

ಬಾಯಿ ಕಟ್ಟ್ : (ಬಾಯಿ ಕಟ್ಟು). ಪಥ್ಯ ಇರು ಎಂಬ ಅರ್ಥದಲ್ಲಿ ಬಳಕೆಯಾಗುತ್ತದೆ.

ಜಾಂಡೀಸ್ ಕಾಯಲ ಬಂದರೆ ಬಾಳ ಬಾಯಿ ಕಟ್ಬೋಕು

(ಜಾಂಡೀಸು ಕಾಯಿಲೆ ಬಂದರೆ ಬಹಳ ಪಥ್ಯ ಇರಬೇಕು).

ಬಂಗ ಬರ್‌ಸ್ : ಕಷ್ಟಬರಿಸು ಎಂಬ ಅರ್ಥದಲ್ಲಿ ಬಳಕೆಯಾಗುತ್ತದೆ.

ಉದಾ : ಈ ಮಕ್ಕ ಎಂತಾ ಬಂಗ ಬರಿಸಿವೆ

(ಈ ಮಕ್ಕಳು ಎಷ್ಟು ಕಷ್ಟಬರಿಸುತ್ತಾರೆ).

ಊದಿಕಂಡ್ ಹೋಗ್ : ಸಾರಿಕೊಂಡು ಹೋಗು/ಡಂಗುರ ಹೊಡೆ ಎಂಬರ್ಥದಲ್ಲಿ ವ್ಯಂಗ್ಯವಾಗಿ ಬಳಕೆಯಾಗುತ್ತದೆ. ಉದಾ: ಏನಾರ್ ಹೇಳ್‌ರೆ ಇಡಿ ಊರಿಗೇ ಊದಿಕಂಡ್ ಹೋದೆ (ಏನಾದರು ಹೇಳಿದರೆ ಇಡೀ ಊರಿಗೇ ಸಾರಿಕೊಂಡು ಹೋಗುತ್ತಾನೆ/ಳೆ).

ಅಪ್ಪುರಿಯಾಗ್: (ಅಪ್ಪಚ್ಚಿಯಾಗು). ಕಷ್ಟದಿಂದ ತತ್ತರಿಸು ಎಂಬ ಅರ್ಥದಲ್ಲಿದೆ.

ಉದಾ: ನಾನ್ ಕಾಡಿಗೆ ಹೊದಂವ ದಾರಿತಪ್ಪಿ ಅಲ್ಲಿ ಸಿಕ್ಕಿಹಾಕಂಡ್ ಅಪ್ಪುರಿಯಾಗಿ ಹೋದೆ (ನಾನು ಕಾಡಿಗೆ ಹೋದವನು ದಾರಿತಪ್ಪಿ ಅಲ್ಲಿ ಸಿಕ್ಕಿಹಾಕಿಕೊಂಡು ಕಷ್ಟದಿಂದ ತತ್ತರಿಸಿ ಹೋದೆನು).

ಕುಂಡೆ ನೀರ್‌ಲಿ: ಕಷ್ಟದಲ್ಲಿರುವುದು ಎಂಬ ಅರ್ಥದಲ್ಲಿ ಬಳಕೆಯಾಗುತ್ತದೆ.

ನನ್ನ ಕುಂಡೆ ನೀರ್‌ಲಿ ಇನ್ನೊಬ್ಬಂಗೆ ಎಂತ ಸಹಾಯ ಮಾಡ್ದು (ನಾನೇ ಕಷ್ಟದಲ್ಲಿರುವೆನು ಇನ್ನೊಬ್ಬರಿಗೆ ಏನು ಸಹಾಯ ಮಾಡಲಿ).

ಕುದ್ದುಟ್ಟು : ಋತುಮತಿಯಾದವಳು ಎಂಬ ಅರ್ಥದಲ್ಲಿ ಬಳಕೆಯಾಗುತ್ತದೆ.

ಉದಾ: ಬೋಜಿ ಗೂಡೆ ಕುದ್ದುಟ್ಟು ಗಡ.

(ಬೋಜಿ ಹುಡುಗಿ ಋತುಮತಿಯಾಗಿದ್ದಾಳಂತೆ).

ಇವುಗಳಲ್ಲದೆ ಕೊಡಗಿನ ಗೌಡ ಕನ್ನಡದಲ್ಲಿ ಶಿಷ್ಟಕನ್ನಡದಲ್ಲಿರುವ ಹಲವಾರು ನುಡಿಗಟ್ಟುಗಳು ಅದೇ ಅರ್ಥದಲ್ಲಿ ಗೌಡಕನ್ನಡದಲ್ಲಿ ಬಳಕೆಯಲ್ಲಿರುವುದನ್ನು ಕಾಣಬಹುದು.

ಶಿ.ಕ.	ಗ್ರಾ.ಕ.
ತಲೆಗೆ ಹಚ್ಚಿಕೊ	ತಲೆಗೆ ಹಾಕ
ಹುಳಿ ಹಿಂಡು	ಹುಳಿ ಹಿಂಡ್
ಆಟ ನಡೆಯದು	ಆಟ ನಡೆಯಲೆ
ಅರೆದು ಕುಡಿ	ಅರ್‌ದ್ ಕುಡಿ
ಎರಡು ಮನಸು	ಎರ್‌ಡ್ ಮನ್‌ಸ್
ಕಾಲು ಕೆರಿ	ಕಾಲ್ ಕೆರಿ
ಕಿವಿಗೆ ಹಾಕು	ಕಿವಿಗೆ ಹಾಕ್
ತಲೆ ಬುಡ	ತಲೆ ಬುಡ
ಅಟ್ಟಕೇರಿಸು	ಅಟ್ಟಕೇರ್‌ಸ್
ಅಡ್ಡಹಾದಿ ಹಿಡಿ	ಅಡ್ಡದಾರಿ ಹಿಡಿ
ಆಕಾಶ ಕಳಚಿಕೊಂಡು ಬೀಳು	ಆಕಾಸ ತಲೆ ಮೇಲೆ ಬೀಳ್
ಕಾಲಮೇಲೆ ನಿಲ್ಲು	ಕಾಲ್ ಮೇಲೆ ನಿಲ್ಲ್.
ಕಾಲ್ವಿಡಿ	ಕಾಲಿಡಿ
ಕೈಕೊಡು	ಕೈಕೊಡು
ಗುಡ್ಡಕ್ಕೆ ಕಲ್ಲು ಹೊರು	ಕುಂದ್‌ಗೆ ಕಲ್ಲ್ ಹೊರು
ತಲೆದೂಗು	ತಲೆ ಆಡ್‌ಸ್
ನೊಣ ಹೊಡೆಯುತ್ತಾ ಕೂರು	ನೊಣ ಹೊಡೆಯುದು
ಬಾಯಿಗೆ ಬೀಗ	ಬಾಯಿಗೆ ಬೀಗ
ಬಾಯಲ್ಲಿ ನೀರು ಸುರಿ	ಬಾಯಿಲಿ ನೀರ್ ಬಾದು
ಮೂಗು ತೂರಿಸು	ತಲೆ ಹಾಕ್
ಹಣೆ ಬರಹ	ಹಣೇಬರ
ತಲೆಗೆ ಏರು	ತಲೆಗೆ ಹತ್ತ್
ತೂಕದ ವ್ಯಕ್ತಿ	ತೂಕದ ಮನ್‌ಸ
ಉತ್ತರಕುಮಾರ	ಉತ್ತರಕುಮಾರ
ಎತ್ತಿದ ಕೈ	ಎತ್ತಿದ ಕೈ
ಚರ್ಮ ಸುಲಿ	ಚಕ್ಕಳ ಸುಲಿ
ತಲೆ ತಿನ್ನು	ತಲೆ ತಿಂಬೊ
ತಾಳಕ್ಕೆ ಸರಿಯಾಗಿ ಕುಣಿ	ಹೇಳ್‌ದಂಗೆ ಕೋಣಿ

ರೋಮಾಂಚನವಾಗು	ರೋಮ ಎದ್ದ್ ನಿಲ್ಲ್
ಕಣ್ಣು ತಾಕಿಸು	ಕಣ್ಣ್ ಮುಟ್ಟ್
ತಲೆಗೆ ಹತ್ತ್	ತಲೆಗೆ ಹೋಗ್
ಮಕ್ಕಳಾಟ	ಮಕ್ಕಳಾಟ
ಬೆರಳು ತೋರಿಸಿದರೆ ಹಸ್ತ ನುಂಗು	ಬೆರ್ಳ್ ತೋರ್ಸಿರೆ ಕೈ ನುಂಗಿದೆ
ಬಿಸಿ ಮಾಡ್	ಬಿಸಿ ಮುಟ್ಟ್ಸ್
ಮುಂದಕ್ಕೆ ಬರು	ಮುಂದೆ ಬಾ
ಮುಖ ಕಪ್ಪಿಡು	ಮೊಕ ಕಪ್ಪ್ ಆದು
ಮುಖ ಬಾಡು	ಮೊಕ ಬಾಡ್
ಮುಖ ಅರಳು	ಮೊಕ ಅರ್ಳ್
ಮುಖ ತಿರುಗಿಸು	ಮೊಕ ತಿರ್ಗ್ಸ್
ಮುಂದಕ್ಕೆ ಹಾಕು	ಮುಂದಕೆ ಹಾಕ್
ಮುಟ್ಟಿಸು	ಮುಟ್ಟ್ಸ್
ಮುಖದ ಮೇಲೆ ಎಸೆ	ಮೊಕದ ಮ್ಯಾಲೆ ಬಿಸಾಡ್
ಮುಖಕ್ಕೆ ಹಿಡಿ	ಮೊಕಕೆ ಹಿಡಿ
ಮುಖ ಮುಖ ನೋಡು	ಮೊಕ ಮೊಕ ನೋಡ್
ಮುಳ್ಳು	ಕುತ್ತಿ
ಮೆಟ್ಟಿಲು ತುಳಿ	ಮೆಟ್ಟ್ ಹತ್ತ್
ಒಂದು ಕೈ ಮೇಲೆ	ಒಂದ್ ಕೈ ಮ್ಯಾಲೆ
ಕೈ ಮುಂದು	ಕೈ ಮುಂದೆ
ಆಗಿ ಬರುವುದಿಲ್ಲ	ಆಗಿ ಬಾದುಲೆ
ಹುಷಾರು ಕಡಿಮೆ	ಹುಸಾರ್ ಕಮ್ಮಿ
ಮೈ ಜುಂ ಅನ್ನು	ಮೈ ಜುಂ ಆದು
ಮೈ ಬಗ್ಗುವುದಿಲ್ಲ	ಮೈ ಬಗ್ಗುಲೆ
ಹಗಲು ರಾತ್ರಿ	ಹಗ್ಲ್ ಇರ್ಲ್
ರಾಮಾಯಣ	ರಾಮಾಯಣ
ರಾವು ಬಡಿ	ಕೊಲೆ ಬಡಿ
ರೋಗ	ರೋಗ

ಲೆಕ್ಕಕ್ಕೆ ಬರು	ಲೆಕ್ಕಕೆ ತಕ
ಹುರಿದು ತಿನ್ನು	ಹುರ್‌ದ್ ತಿನ್ನ್
ಕಡೆಯಾಗಿ ಎಣಿಸು	ಕಟ್ಟ ಕಡೆ
ಚರ್ಮ ಕಟ್ಟು	ಚಕ್ಕಳ ಕಟ್ಟ್
ಹೇಳಿದಂತೆ ಕುಣಿ	ಹೇಳ್‌ದಂಗೆ ಕೋಣಿ
ಹೊರೆಸಿ ಕಳುಹಿಸು	ಹೊರ್‌ಸಿ ಕಳ್‌ಸ್
ಮುಳ್ಳನ್ನು ಮುಳ್ಳಿನಿಂದ ತೆಗೆ	ಮುಳ್ಳ್‌ನ ಮುಳ್ಳ್‌ಂದ ತೆಗಿ
ಮೂಗಿನ ತುದಿಯಲ್ಲಿ ಕೋಪ	ಮೂಕು ತುದಿಲಿ ಸಿಟ್ಟ್
ಎಂಜಲು ಕೈಲಿ ಕಾಗೆ ಓಡಿಸದಿರು	ಎಂಜ್‌ಲ್ ಕೈಲಿ ಕಾಗೆ ಓಡ್ಸಿಕಿಲೆ

ಇತ್ಯಾದಿ ನುಡಿಗಟ್ಟುಗಳು ಬಳಕೆಯಲ್ಲಿವೆ.

ಇಲ್ಲಿ ಗುರುತಿಸಿರುವ ಕೊಡಗಿನ ಗೌಡ ಕನ್ನಡದಲ್ಲಿರುವ ನುಡಿಗಟ್ಟುಗಳಲ್ಲಿ ಅನೇಕ ನುಡಿಗಟ್ಟುಗಳು ಶಿಷ್ಟ ಕನ್ನಡದಲ್ಲಿರುವ ನುಡಿಗಟ್ಟುಗಳೇ ಆಗಿವೆ. ಇವು ಅದೇ ಅರ್ಥದಲ್ಲಿ ಗೌಡ ಕನ್ನಡದಲ್ಲಿವೆ. ಇದಲ್ಲದೆ ಕೊಡವ ಮತ್ತು ತುಳು ಭಾಷೆಯಲ್ಲಿರುವ ಕೆಲವು ನುಡಿಗಟ್ಟುಗಳು ಕೂಡ ಅದೇ ಅರ್ಥದಲ್ಲಿ ಗೌಡ ಕನ್ನಡದಲ್ಲಿವೆ.

ಕೊಡವ ಮತ್ತು ತುಳು ಭಾಷೆಯಲ್ಲಿರುವ ಕೆಲವು ನುಡಿಗಟ್ಟುಗಳು ಗೌಡ ಕನ್ನಡದಲ್ಲಿವೆ ಉದಾ:

ಕೊಡವ	**ಗೌ.ಕ.**	**ಶಿ.ಕ.**
ಕೊದಿ ಕುಞ	ಕೊದಿ ಕೂಸು	ಮುದ್ದಿನ ಮಗು
ಪದ್ರಾಡ್	ಪದ್ರಾಡ್	ಪರಾರಿಯಾಗು
ಚಾಯತೆ ಕೊಡ್	ಲಾಯ್ಕ ಕೊಡ್	ಚೆನ್ನಾಗಿ ಕೊಡು ಇತ್ಯಾದಿ.

ತುಳು	**ಗೌ.ಕ.**	**ಶಿ.ಕ.**
ಕೂಳಿ ಬುಡ್‌ಪೆ	ಹಲ್ಲ್ ಬುಡ್	ಹಲ್ಲು ಬಿಡು
ಪಂಡೊಂತ್ ಪೋಪೆ	ಊದಿಕಂಡ್ ಹೋಗ್	ಊದಿಕೊಂಡು ಹೋಗು.
ಬಂಜಿ ಬೇನೆ ಆಪುಂಡು	ಹೊಟ್ಟೆ ಬೇನೆ ಆದು	ಹೊಟ್ಟೆ ನೋವಾಗುವುದು.
ನೆಲತ್ತ ಮಿತ್ತ್ ಕಾರ್	ನೆಲಲಿ ನಿಂತತ್ಲೆ	ನೆಲದ ಮೇಲೆ ನಿಲ್ಲಲಿಲ್ಲ

ಇತ್ಯಾದಿ

ಹೀಗೆ ಪ್ರತಿ ಭಾಷೆಯಲ್ಲಿರುವಂತೆ ಕೊಡಗಿನ ಗೌಡ ಕನ್ನಡದಲ್ಲಿ ಸಂದರ್ಭಕ್ಕೆ ತಕ್ಕಂತೆ ಮಾತಿನಲ್ಲಿ ಹಲವಾರು ನುಡಿಗಟ್ಟುಗಳು ಬಳಕೆಯಾಗುತ್ತವೆ. ಇದರೊಂದಿಗೆ ಗೌಡ ಕನ್ನಡದಲ್ಲಿ ಮಾತ್ರ ಬಳಕೆಯಾಗುವ ಹಲವು ನುಡಿಗಟ್ಟುಗಳೂ ಇವೆ.

ಉದಾ: ಬಂಗ ಬಾದು : ಕಷ್ಟ ಬರು.

ಕುದ್ದುಟ್ಟು : ಕುಳಿತಿದ್ದಾಳೆ (ಋತುಮತಿಯಾಗು).

ಕುಂಡೆ ನೀರ್‌ಲಿ : ಅಂಡು ನೀರಲ್ಲಿ (ಕಷ್ಟದಲ್ಲಿರು) ಇತ್ಯಾದಿ

೪.೪. ಸಂಬಂಧವಾಚಕಗಳು/ಬಂಧುವಾಚಕಗಳು

ಮಾನವ ಸಮಾಜಜೀವಿ. ಸಮಾಜವಿಲ್ಲದೆ ಮಾನವ ಜೀವಿಸಲಾರ. ಸಮಾಜದಿಂದ ಮಾನವ ಸಂಪೂರ್ಣವಾಗಿ ಹೊರಗುಳಿಯಲು ಸಾಧ್ಯವಿಲ್ಲ. ಹಾಗೆಯೇ ಸಮಾಜ ಮತ್ತು ಸಂಸ್ಕೃತಿಗಳು ವ್ಯಕ್ತಿಯಿಂದ ಪೂರ್ಣವಾಗಿ ಬೇರ್ಪಟ್ಟು ತಮ್ಮ ಸ್ವತಂತ್ರವಾದ ಅಸ್ತಿತ್ವವನ್ನು ಪಡೆಯಲು ಸಾಧ್ಯವಾಗುವುದಿಲ್ಲ. ಹಾಗಾಗಿ ಮಾನವನ ಜೀವನ ಸಮಾಜ ಮತ್ತು ಸಂಸ್ಕೃತಿಗಳ ಆಧಾರದ ಮೇಲೆಯೇ ರೂಪಿತವಾಗಿದೆ. ಭಾಷೆ ಒಂದು ಸಮಾಜ ಮತ್ತು ಸಂಸ್ಕೃತಿಯ ಬಹುಮುಖ್ಯ ಅಂಗವಾಗಿದೆ. ಭಾಷೆ, ಸಮಾಜ ಮತ್ತು ಸಂಸ್ಕೃತಿ ಇವು ಒಂದಕ್ಕೊಂದು ಪೂರಕವಾಗಿರುತ್ತದೆ.

ಮನುಷ್ಯನು ತನ್ನ ಅನುಭವಗಳನ್ನು, ಆಲೋಚನೆಗಳನ್ನು, ಅನಿಸಿಕೆಗಳನ್ನು ಬೇರೊಬ್ಬರಿಗೆ ತಿಳಿಸಲು ಭಾಷೆ ಅವಶ್ಯಕ. ಅಂದರೆ, ಮಾನವನ ಎಲ್ಲಾ ವ್ಯವಹಾರಗಳಿಗೂ ಭಾಷೆಯ ಅವಶ್ಯಕತೆಯಿರುವುದರಿಂದ ಮಾನವ ಜೀವನದಲ್ಲಿ ಭಾಷೆಯು ಬಹುಮುಖ್ಯ ಅನಿವಾರ್ಯ ಅಂಗವಾಗಿದೆ. ಜನಾಂಗ–ಭಾಷೆ–ಸಮಾಜ–ಸಂಸ್ಕೃತಿ ಇವುಗಳಲ್ಲಿ ಒಂದಕ್ಕೊಂದು ಸಂಬಂಧವಿದ್ದೇ ಇರುತ್ತದೆ. ಕತೆ, ಗೀತೆ, ಗಾದೆ, ಒಗಟು, ಹೆಸರುಗಳು ಮುಂತಾದ ಭಾಷಾ ಸಮುದಾಯದ ಮೂಲಕ ಆ ಸಮಾಜದ ಸಂಸ್ಕೃತಿ ಅಭಿವ್ಯಕ್ತಗೊಳ್ಳುತ್ತದೆ. ಈ ಭಾಷಾ ಸಮುದಾಯದ ಹೆಸರುಗಳಲ್ಲಿ ಬರುವ 'ಸಂಬಂಧವಾಚಕಗಳು' ಮತ್ತು 'ಸಂಬೋಧನಾ ರೂಪಗಳು' ಭಾಷಿಕರ ಸಾಮಾಜಿಕ ಸಂಬಂಧವನ್ನು ಸ್ವೀಕರಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ.

ಭಾಷೆಗಳಲ್ಲಿ ವಿವಿಧ ಬಗೆಯ ಸಂಬೋಧನಾ ಸೂಚಕ ಶಬ್ದಗಳು ಬಳಕೆಯಲ್ಲಿರುವುದು ಕಂಡು ಬರುತ್ತವೆ. ಇವು ವ್ಯಕ್ತಿಯೊಡನೆ ನಾವು ಹೊಂದಿರುವ ಸಂಬಂಧ ಸ್ವರೂಪಕ್ಕೆ ಅನುಗುಣವಾಗಿ ಬೆಳೆದುಬಂದಿರುತ್ತವೆ. ಉದಾಹರಣೆಗೆ ಒಬ್ಬ ವ್ಯಕ್ತಿ ಇನ್ನೊಬ್ಬ ವ್ಯಕ್ತಿಯನ್ನು ಸಂಧಿಸಿದಾಗ, ಒಬ್ಬರನ್ನೊಬ್ಬರು ಪರಿಚಯಿಸುವಾಗ, ಸ್ವಾಗತಿಸುವಾಗ, ಅವರನ್ನು ಪ್ರೀತಿ ಗೌರವದಿಂದ ಆದರಿಸುವಾಗ ಯಾವ ಯಾವ ಶಬ್ದಗಳನ್ನು ಬಳಸುತ್ತಾನೆ ಎಂಬುದು ಇಲ್ಲಿ ಬಹಳ ಮುಖ್ಯ ಸಂದರ್ಭ ಹಾಗೂ ಪರಿಸರಕ್ಕೆ ತಕ್ಕಂತೆ ಇನ್ನೊಬ್ಬ ವ್ಯಕ್ತಿಯ ಸ್ಥಾನಮಾನಕ್ಕೆ ತಕ್ಕಂತೆ ವ್ಯಕ್ತಿ ಬೇರೆ ಬೇರೆ ಸಂಬೋಧನಾ ಸೂಚಕ ಶಬ್ದಗಳನ್ನು ಬಳಸುವುದನ್ನು ನಮ್ಮ ದಿನನಿತ್ಯದ ವ್ಯವಹಾರದಲ್ಲಿ ಕಾಣುತ್ತಿರುತ್ತೇವೆ. ಕೆಲವು ಸಮಾಜಗಳಲ್ಲಿ ಅವರು ಬಳಸುವ ಶಬ್ದಗಳು ಅವರ ಸ್ಥಾನಮಾನ ಮತ್ತು ವಯೋಮಾನಕ್ಕೆ ಅನುಗುಣವಾಗಿದ್ದರೆ ಮತ್ತೆ ಕೆಲವು ಸಮಾಜಗಳಲ್ಲಿ ಅವರು ಬಳಸುವ ಶಬ್ದಗಳು ಅವರ ಸ್ಥಾನಮಾನ ಮತ್ತು ವಯೋಮಾನವನ್ನು ನಿರ್ದೇಶಿಸುವಂತಿರುವುದಿಲ್ಲ.

ಒಂದು ಸಮುದಾಯದ ಭಾಷಿಕರು ಹಲವು ಬಗೆಯ ಸಾಮಾಜಿಕ ಸಂಬಂಧಗಳಿಂದ ಬೆಸೆದುಕೊಂಡಿರುತ್ತಾರೆ. ಅಂತಹ ಸಾಮಾಜಿಕ ಸಂಬಂಧಗಳಲ್ಲಿ 'ಬಂಧುತ್ವ'ವೂ ಒಂದು. ಇದು ಇಂಗ್ಲಿಶ್‌ನ 'Kinship' ಪದದ ಸಂವಾದಿಯಾಗಿ ಕನ್ನಡದಲ್ಲಿರುವ ಪದ. 'ಬಂಧುತ್ವ' ಪದವು ರಕ್ತಸಂಬಂಧಿ, ಕಳ್ಳುಬಳ್ಳಿ , ನೆಂಟರು ಇತ್ಯಾದಿ ಅರ್ಥಗಳನ್ನು ಹೊಂದಿದೆ. ಸಮಾಜ ಜೀವಿಯಾದ ವ್ಯಕ್ತಿಯು ತನ್ನ ಸುತ್ತ ಮುತ್ತಲಿನ ಜನರ ಸಂಬಂಧವನ್ನು ತೊರೆದು ಒಂಟಿ ಜೀವನ ನಡೆಸಲು ಸಾಧ್ಯವಿಲ್ಲ. ಒಬ್ಬ ವ್ಯಕ್ತಿ ಒಂದು ಜನಾಂಗಕ್ಕೆ ಸೇರಿದ್ದಾನೆ ಎಂದರೆ, ಅವನು ತನ್ನ ಹಿರಿಯರಿಂದ ಹರಿದು ಬಂದ ವಾಂಶಿಕತೆಗೆ ಒಳಗಾಗಿದ್ದಾನೆ ಎಂದರ್ಥವಾಗುತ್ತದೆ. ಬಂಧುತ್ವ ಹುಟ್ಟಿನಿಂದಲೇ ಬರುವಂತದ್ದು. ಬಂಧುತ್ವವು ವಯಸ್ಸು, ಲಿಂಗ, ಜಾತಿ ಹಾಗೂ ಸಾಮಾಜಿಕ ವರ್ಗಗಳನ್ನು ಅವಲಂಬಿಸಿರುತ್ತದೆ. ಇಂತಹಾ ಬಂಧುವಾಚಕ ಅಥವಾ ಸಂಬಂಧವಾಚಕಗಳ ಪರಿಕಲ್ಪನೆ ಮತ್ತು ಪರಿಭಾಷೆಗಳು ಭಿನ್ನ ಸಂಸ್ಕೃತಿಗಳಲ್ಲಿ ವೈವಿಧ್ಯಮಯವಾಗಿರುವ ಸಾಧ್ಯತೆಗಳಿವೆ. ಒಂದು ಭಾಷೆಯಲ್ಲಿ ಸಂಬಂಧಸೂಚಕ ಶಬ್ದಗಳು ಸ್ಪಷ್ಟವಾಗಿದ್ದರೆ. ಅವು ಇನ್ನೊಂದು ಭಾಷೆಯಲ್ಲಿ ಅಷ್ಟೊಂದು ಸ್ಪಷ್ಟವಾಗಿಲ್ಲ. ಅಲ್ಲದೇ ಅವು ಪ್ರತ್ಯೇಕ ಪ್ರತ್ಯೇಕವಾಗಿ ಬಳಕೆಯಲ್ಲಿರುವುದಿಲ್ಲ. ದ್ರಾವಿಡ ಭಾಷೆಗಳಲ್ಲಿ ಅಕ್ಕ-ತಂಗಿ, ಅಣ್ಣ–ತಮ್ಮ, ಅಜ್ಜ–ಅಜ್ಜಿ, ಮಾವ–ಅತ್ತೆ, ಮಗಳು–ಸೊಸೆ, ಮಗ–ಅಳಿಯ, ಭಾವ–ಮೈದುನ, ನಾದಿನಿ ಮುಂತಾದ ಸಂಬಂಧ ಸೂಚಕ ಶಬ್ದಗಳು ಲಿಂಗಕ್ಕೆ ಅನುಗುಣವಾಗಿ ಪ್ರತ್ಯೇಕ ಪ್ರತ್ಯೇಕವಾಗಿ ಬಳಕೆಯಲ್ಲಿವೆ. ಸಂಬಂಧವಾಚಕಗಳು ಆಯಾ ಸಮಾಜದ ಸಂಬಂಧಕ್ಕೆ ತಕ್ಕಂತೆ ಅವರ ಭಾಷೆಯಲ್ಲಿ ಬಳಕೆಯಲ್ಲಿರುತ್ತವೆ.

ಅದೇರೀತಿಯಾಗಿ ಕೊಡಗಿನ ಗೌಡಸಮುದಾಯದಲ್ಲಿ ಅಭಿವ್ಯಕ್ತಗೊಳ್ಳುವ ಸಂಬಂಧವಾಚಕಗಳ ಸ್ವರೂಪ ಮತ್ತು ಬಳಕೆಯ ವಿಧಾನಗಳನ್ನು ಇಲ್ಲಿ ಚರ್ಚಿಸಲಾಗಿದೆ. ಇದರ ರಾಚನಿಕ ಸ್ವರೂಪವನ್ನು ಅನುಲಕ್ಷಿಸಿ ಕೆಳಗಿನಂತೆ ಇವುಗಳನ್ನು ವರ್ಗೀಕರಿಸಬಹುದು.

೧. ರಕ್ತ ಸಂಬಂಧದಿಂದ ಉಂಟಾಗುವ ಸಂಬಂಧವಾಚಕಗಳು.

೨. ವೈವಾಹಿಕ ಸಂಬಂಧದಿಂದ ಉಂಟಾಗುವ ಸಂಬಂಧವಾಚಕಗಳು ಅಥವಾ ಇತರೆ ಸಂಬಂಧವಾಚಕಗಳು.

೪.೪.೧. ರಕ್ತ ಸಂಬಂಧದ ಸಂಬಂಧವಾಚಕಗಳು:

ರಕ್ತ ಸಂಬಂಧ ಅಂದರೆ ಕಳ್ಳುಬಳ್ಳಿ ಸಂಬಂಧ. ಹೆತ್ತ ತಂದೆ–ತಾಯಿ, ಅಣ್ಣ–ತಮ್ಮ, ಅಕ್ಕ–ತಂಗಿ, ದೊಡ್ಡಪ್ಪ–ದೊಡ್ಡಮ್ಮ, ಚಿಕ್ಕಪ್ಪ–ಚಿಕ್ಕಮ್ಮ, ಅಜ್ಜ–ಅಜ್ಜಿ, ತಾತ ಮುಂತಾದವರಿಂದ ಉಂಟಾದ ಸಂಬಂಧವನ್ನು ರಕ್ತ ಸಂಬಂಧ ಎಂದು ಕರೆಯುವರು.

ಕೊಡಗಿನ ಗೌಡ ಜನಾಂಗದವರಲ್ಲಿ ರಕ್ತ ಸಂಬಂಧದಿಂದ ಉಂಟಾಗುವ ಸಂಬಂಧವಾಚಕಗಳನ್ನು ಮೂರು ಭಾಗಗಳನ್ನಾಗಿ ವಿಂಗಡಿಸಲಾಗಿದೆ.

೧. ಹಿಂದಿನ ಸಂತತಿ, ೨. ಮುಂದಿನ ಸಂತತಿ, ೩. ಸಮಕಾಲೀನ ಆಪ್ತ ಸಂತತಿ.

೪.೪.೧.೧. ಹಿಂದಿನ ಸಂತತಿ:

ತಂದೆ: ಅಪ್ಪ

ತಾಯಿ: ಅವ್ವ, ಅಯ್ಯೆ, ಅಮ್ಮ

ತಂದೆಯ ತಂದೆ: ತಾತ

ತಂದೆಯ ತಂದೆಯ ತಂದೆ: ಅಜ್ಜಪ್ಪ

ತಾಯಿಯ ತಂದೆ: ತಾತ

ತಾಯಿಯ ತಂದೆಯ ತಂದೆ: ಅಜ್ಜಪ್ಪ

ತಂದೆಯ ತಾಯಿ: ಅವ್ವ

ತಂದೆಯ ತಾಯಿಯ ತಾಯಿ: ಅವ್ವ/ತಾವ

ತಾಯಿಯ ತಾಯಿ: ಅವ್ವ

ತಾಯಿಯ ತಾಯಿಯ ತಾಯಿ: ಅವ್ವ/ತಾವ

ತಂದೆಯ ಹಿರಿಯ ಸಹೋದರ: ದೊಡ್ಡಪ್ಪ

ತಂದೆಯ ಕಿರಿಯ ಸಹೋದರ: ಕುಞಪ್ಪ

ತಂದೆಯ ನಡುವಿನ ಸಹೋದರ: ಬೋಜಪ್ಪ

ತಾಯಿಯ ಹಿರಿಯ ಸಹೋದರ: ಮಾವ/ದೊಡ್ಡಮಾಂವ

ತಾಯಿಯ ಕಿರಿಯ ಸಹೋದರ: ಮಾವ/ಕುಞ ಮಾಂವ

ತಾಯಿಯ ಎರಡನೇ ಸಹೋದರ: ಬೋಜಿಮಾಂವ

ತಂದೆಯ ಹಿರಿಯ ಸಹೋದರಿ: ದೊಡ್ಡ ಅತ್ತೆ

ತಂದೆಯ ಕಿರಿಯ ಸಹೋದರಿ: ಕುಞ ಅತ್ತೆ

ತಂದೆಯ ನಡುವಿನ ಸಹೋದರಿ: ಬೋಜಿ ಅತ್ತೆ

ತಾಯಿಯ ಹಿರಿಯ ಸಹೋದರಿ: ದೊಡ್ಡಮ್ಮ/ದೊಡ್ಡವ್ವ

ತಾಯಿಯ ಕಿರಿಯ ಸಹೋದರಿ: ಕುಞವ್ವ/ಸಣ್ಣವ್ವ

ತಾಯಿಯ ಎರಡನೇ ಸಹೋದರಿ: ಬೋಜವ್ವ

(ಅ) ಇಲ್ಲಿ ತಾಯಿಯ ತಾಯಿಯ ತಾಯಿ ಮತ್ತು ತಂದೆಯ ತಾಯಿಯ ತಾಯಿಯು 'ತಾವ' ಎನ್ನಿಸಿಕೊಳ್ಳುತ್ತಾರೆ. ತಾಯಿಯ ತಾಯಿಯು 'ಅವ್ವ' ಎನ್ನಿಸಿಕೊಳ್ಳುವರು. ತಾಯಿ+ತಾಯಿಯ ತಾಯಿ, ತಾಯಿ+ಅವ್ವ=ತಾಯವ್ವ, ತಾಯವ್ವ ಎಂಬುದು ಬಳಕೆಯಲ್ಲಿ ಸಂಕ್ಷಿಪ್ತಗೊಂಡು 'ತಾವ' ಎಂದಾಗಿದೆ. ಇಲ್ಲಿ ಶಿಷ್ಟ ಕನ್ನಡದ 'ಅಮ್ಮಮ್ಮ' ಪದವನ್ನು ಗಮನಿಸಬಹುದು.

(ಆ) ತಂದೆಯು ಅಪ್ಪ, ಪೊಪ್ಪ ಎಂದೆನಿಸಿಕೊಳ್ಳುವರು. ತಾಯಿಯು ಅಯ್ಯೆ, ಅವ್ವ, ಅಮ್ಮ ಎಂದೆನ್ನಿಸಿಕೊಳ್ಳುತ್ತಾರೆ. ಈ ಅಪ್ಪ, ಅಮ್ಮ, ಅವ್ವ ಎಂಬ ಬಂಧುಸೂಚಕಗಳು ಕೊಡಗು ಗೌಡರ ವ್ಯಕಿನಾಮಗಳಲ್ಲಿ ವಾರ್ಗಿಕ ಘಟಕಗಳಾಗಿ ಬಳಕೆಯಾಗಿರುವುದು ಕಂಡುಬಂದಿದೆ.

ಉದಾ: ಕಾರ್ಯ+ಅಪ್ಪ= ಕಾರ್ಯಪ್ಪ

ಬಿದ್ದು+ಅಪ್ಪ= ಬಿದ್ದಪ್ಪ

ಸೀತ+ಅವ್ವ= ಸೀತವ್ವ

ಪೊನ್ನು+ಅಮ್ಮ= ಪೊನ್ನಮ್ಮ ಇತ್ಯಾದಿ.

(ಇ) ಚಿಕ್ಕಪ್ಪನನ್ನು 'ಚಿಕ್ಕಯ್ಯ' ಎಂದು ಸಂಬೋಧಿಸುವರು. 'ಅಯ್ಯ' ಎಂಬುದು 'ಅಪ್ಪ' ಪದದ ರೂಪವಾಗಿದೆ. ಚಿಕ್ಕ+ಅಯ್ಯ ಅಂದರೆ, ಚಿಕ್ಕ ಅಪ್ಪ. ತಂದೆಗಿಂತ ಚಿಕ್ಕವರಾದವರು, ಅಂದರೆ ತಂದೆಯ ತಮ್ಮ ಎಂಬರ್ಥದಲ್ಲಿದೆ. 'ಅಯ್ಯ' ರೂಪವು ಕೂಡ ಕೊಡಗು ಗೌಡರ ವ್ಯಕ್ತಿನಾಮಗಳಲ್ಲಿ ವಾರ್ಗಿಕಗಳಾಗಿ ಬಳಕೆಯಲ್ಲಿದೆ.

ಉದಾ: ಪೂವು+ಅಯ್ಯ=ಪೂವಯ್ಯ

ಸೋಮು+ಅಯ್ಯ=ಸೋಮಯ್ಯ.

ಮುದ್ದು+ಅಯ್ಯ=ಮುದ್ದಯ್ಯ. ಇತ್ಯಾದಿ.

ಇದೇ ಅಲ್ಲದೇ ಕೊಡಗಿನಲ್ಲಿ 'ಚಿಕ್ಕ' ಎಂಬ ಪದಕ್ಕೆ 'ಕುಞ' ಎಂಬ ಪದವೂ ಬಳಕೆಯಲ್ಲಿದೆ. ಚಿಕ್ಕಪ್ಪ, ಚಿಕ್ಕಮ್ಮ, ಚಿಕ್ಕ ಅಣ್ಣ, ಚಿಕ್ಕ ಅತ್ತೆ, ಚಿಕ್ಕ ಅಕ್ಕ ಮುಂತಾದವುಗಳು ಕುಞಪ್ಪ, ಕುಞವ್ವ, ಕುಞಕ್ಕ, ಕುಞಣ್ಣ ಎಂದಿದೆ. ಈ ಕುಞ ಪದವು ಕೊಡಗಿನ ಗೌಡರಲ್ಲಿ ಮಾತ್ರ ಬಳಕೆಯಲ್ಲಿದೆಯೇ ಹೊರತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಗೌಡ ಜನಾಂಗದವರ ಭಾಷೆಯಲ್ಲಿ ಇಲ್ಲ. ಅಲ್ಲಿ ಸಣ್ಣ, ಚಿಕ್ಕ ಎಂದೇ ಬಳಕೆಯಲ್ಲಿದೆ. ಕೊಡಗಿನಲ್ಲಿ ಪ್ರಮುಖ ಭಾಷೆಯಾದ ಕೊಡವ ಭಾಷೆಯಲ್ಲಿ ಚಿಕ್ಕ, ಸಣ್ಣ ಎಂಬುದನ್ನು ಸೂಚಿಸಲು 'ಕುಞ' ಪದವಿದೆ. ಕೊಡವ ಭಾಷಾ ಪ್ರಭಾವದಿಂದಾಗಿ ಈ 'ಕುಞ' ಪದವು ಕೊಡಗಿನ ಗೌಡರ ಭಾಷೆಯಾದ ಗೌಡಕನ್ನಡದಲ್ಲಿದೆ. ಜೊತೆಗೆ ಸಂಬಂಧಸೂಚಕಗಳಾದ ಕುಞಪ್ಪ, ಕುಞಣ್ಣ ಮುಂತಾದ ರೂಪ ಕೊಡವರಲ್ಲಿಯೂ ಸಂಬಂಧಸೂಚಕವಾಗಿ ಬಳಕೆಯಲ್ಲಿದೆ. ಕೇವಲ ಸಂಬಂಧ ಸೂಚಕ ಪದಗಳಲ್ಲದೆ ಚಿಕ್ಕ ಗಾತ್ರವನ್ನು ಸೂಚಿಸುವಲ್ಲಿಯೂ ಕೊಡವರಂತೆ ಕೊಡಗಿನ ಗೌಡಕನ್ನಡದಲ್ಲಿಯೂ 'ಕುಞ' ಪದ ಬಳಕೆಯಲ್ಲಿದೆ.

ಉದಾ: ಕುಞೆ ಮೊರ(ಚಿಕ್ಕ ಮೊರ)

ಕುಞೆ ಬಾಡೆ(ಚಿಕ್ಕ ನಡು ಮನೆ)

ಕುಞೆಗದ್ದೆ (ಚಿಕ್ಕ ಗದ್ದೆ) ಇತ್ಯಾದಿ.

(ಈ) ತಂದೆಯ ತಮ್ಮ ಮತ್ತು ಅವರ ಹೆಂಡತಿ ಮತ್ತು ತಾಯಿಯ ಅಕ್ಕ–ತಂಗಿ ಮತ್ತು ಅವರ ಗಂಡ, 'ಬೋಜ' 'ಬೋಜಿ' ಎಂಬ ಸಂಬಂಧವಾಚಕಗಳಿಂದ ಗುರುತಿಸಿಕೊಳ್ಳುತ್ತಾರೆ.

ಬೋಜಕ್ಕ (ಎರಡನೇ ಅಕ್ಕ)

ಬೋಜಣ್ಣ (ಎರಡನೇ ಅಣ್ಣ)

ಬೋಜಿ ಅತ್ತೆ (ತಂದೆಯ ಎರಡನೇ ಸಹೋದರಿ/ತಾಯಿಯ ಎರಡನೇ ಸಹೋದರನ ಹೆಂಡತಿ)

ಬೋಜಿ ಮಾಂವ (ತಾಯಿಯ ಎರಡನೇ ಸಹೋದರ/ತಂದೆಯ ಎರಡನೇ ಸಹೋದರಿಯ ಗಂಡ)

ಬೋಜಿ (ಒಡಹುಟ್ಟಿದ ಎರಡನೇ ತಂಗಿ/ಗಂಡನ ಎರಡನೇ ಸಹೋದರನ ಹೆಂಡತಿ)

ಬೋಜ (ತಂದೆಯ ತಮ್ಮ/ತಾಯಿಯ ಸಹೋದರಿಯ ಗಂಡ)

ಈ 'ಬೋಜ' ಪದವು ಕೊಡವರಿಂದ ಪಡೆದುದಾಗಿದೆ. ಕೊಡವ ಭಾಷೆಯಲ್ಲಿ 'ಬೋಜಿಮಾಂವ, ಬೋಜಿಮಾಂವಿ' ಎಂಬ ಬಂಧುಸೂಚಕಗಳಿವೆ. ಇವು ಸೋದರ ಮಾವ ಮತ್ತು ಸೋದರತ್ತೆ ಎಂಬುದಾಗಿದೆ. ಈ ರೂಪವು ಗೌಡರಲ್ಲಿಯೂ ಬಳಕೆಗೆ ಬಂದಿದೆ. ಕೊಡವರಲ್ಲಿಯೂ ಬೋಜಪ್ಪೊ, ಬೋಜವ್ವೊ, ಎಂಬ ಸಂಬಂಧ ಸೂಚಕ ಪದಗಳಿವೆ. ಎರಡನೆಯ ಸಹೋದರಿಯನ್ನು 'ಬೋಜಿ' ಎಂದು ಕೊಡವರಲ್ಲಿಯೂ ಬಳಸುವರು. ಇದರಿಂದ ಕೊಡಗಿನ ಗೌಡರಲ್ಲಿ 'ಬೋಜ, ಬೋಜಿ' ಪದವು ಕೊಡವ ಭಾಷೆಯಿಂದ ಬಂದುದಾಗಿದೆ ಎಂದು ಹೇಳಬಹುದಾಗಿದೆ.

ಅಲ್ಲದೆ, ಕೊಡವ ಭಾಷೆಯಲ್ಲಿ 'ಬೋಜ' ಎಂದರೆ 'ಚೆಲುವು' ಎಂದು ಬೋಜಿ ಎಂದರೆ 'ಅತಿ ಚೆಲುವು' ಎಂಬ ಅರ್ಥವೂ ಇದೆ. ಇದು ಗೌಡಕನ್ನಡದಲ್ಲಿ ಇಲ್ಲ.

೪.೪.೧.೨. ಮುಂದಿನ ಸಂತತಿ.

ಗಂಡುಮಗು: ಗಂಡ್–ಕೂಸು.

ಹೆಣ್ಣು ಮಗು: ಹೆಣ್ಣ್ ಕೂಸು.

ಮೊದಲನೇ ಮಗ: ದೊಡ್ಡಮಜ/ಹಿರಿಮಜ.

ಕಿರಿಯ ಮಗ: ಕಿರಿಮಜ/ಸಣ್ಣಮಜ/ಕಿರ್‌ಮಜ.

ಮೊದಲನೇ ಮಗಳು: ದೊಡ್ಡಮಗ/ಹಿರಿಮಗ.

ಕಿರಿಯ ಮಗಳು: ಸಣ್ಣಮಗ/ಕಿರಿಮಗ.

ನಡುವೆ ಹುಟ್ಟಿದ ಮಗ: ನಡೂನಮಜ

ನಡುವೆ ಹುಟ್ಟಿದ ಮಗಳು: ನಡೂನ ಮಗ

ಮಗನ ಮಗ: ಪಿಳ್ಳಿ

ಮಗಳ ಮಗ: ಪಿಳ್ಳಿ

ಮಗನ ಮಗಳು: ಪಿಳ್ಳಿ

ಮಗಳ ಮಗಳು: ಪಿಳ್ಳಿ

ಮಗನ ಮಗನ ಮಗ: ಮರಿಮಜ/ಪಿಳ್ಳಿ

ಮಗನ ಮಗನ ಮಗಳು: ಮರಿಮಗ/ಪಿಳ್ಳಿ

ಮಗಳ ಮಗಳ ಮಗ: ಮರಿಮಜ/ಪಿಳ್ಳಿ

ಮಗಳ ಮಗಳ ಮಗಳು: ಮರಿಮಗ/ಪಿಳ್ಳಿ

ಕೊಡಗು ಗೌಡರಲ್ಲಿ ಮಗನು 'ಮಜ' ಎನ್ನಿಸಿಕೊಳ್ಳುತ್ತಾನೆ. ಇಲ್ಲಿ ಅನುನಾಸಿಕದ ಬಳಕೆಯಿದೆ. ಮಗಳು 'ಮಗ' ಎಂದೆನ್ನಿಸಿಕೊಳ್ಳುವಳು. 'ಮೊಮ್ಮಗ' ಮತ್ತು 'ಮೊಮ್ಮಗಳು' ಎಂಬ ಬಂಧುಸೂಚಕ ಪದಗಳಿಗೆ ಕೊಡಗಿನ ಗೌಡಕನ್ನಡ ಪರಿಸರದಲ್ಲಿ 'ಪಿಳ್ಳಿ' ಪದವಿದೆ. ಈ 'ಪಿಳ್ಳಿ' ಎಂಬುದು ತುಳು ಭಾಷೆಯ 'ಪುಲ್ಲಿ'ಯ ರೂಪವಾಗಿದೆ. ಕೊಡಗಿನ ಗೌಡರು ಮೂಲದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಿಂದ ವಲಸೆ ಬಂದವರು. ಕೊಡಗಿನ ಹಿಂದಿನ ಗೌಡ ತಲೆಮಾರಿನವರು ತಮ್ಮ ಕೌಟುಂಬಿಕ ವಲಯದಲ್ಲಿ ತುಳು ಭಾಷೆಯನ್ನೇ ಬಳಸುತ್ತಿದ್ದರು. ನಂತರದ ತಲೆಮಾರಿನಿಂದ ಗೌಡಕನ್ನಡ ಬಳಸಲು ಪ್ರಾರಂಭಿಸಿದರು. ಆದರೆ, ಈ ತುಳು ಭಾಷೆಯ 'ಪುಲ್ಲಿ' ಬಂಧುಸೂಚಕ ಪದ ಕೊಡಗಿನ ಪರಿಸರದಲ್ಲಿ 'ಪಿಳ್ಳಿ' ಎಂದಾಗಿರಬಹುದು ಎಂದು ಊಹಿಸಲಾಗಿದೆ. ಏಕೆಂದರೆ, ಕೊಡಗಿನಲ್ಲಿ ಹಲವು ಕಡೆಗಳಲ್ಲಿ ಕೊಡವ ಕುಟುಂಬಗಳೇ ಹೆಚ್ಚಾಗಿವೆ.

೪.೪.೧.೩ ಸಮಕಾಲೀನ ಆಪ್ತ ಸಂತತಿ:

ಪುರುಷನಿಗೆ ಅಣ್ಣನ ಮಗ: ಮಜ.

ಪುರುಷನಿಗೆ ತಮ್ಮನ ಮಗ: ಮಜ.

ಪುರುಷನಿಗೆ ಅಣ್ಣನ ಮಗಳು: ಮಗ.

ಪುರುಷನಿಗೆ ತಮ್ಮನ ಮಗಳು: ಮಗ.

ಪುರುಷನಿಗೆ ಅಕ್ಕನ ಮಗ: ಅಳಿಯ.

ಪುರುಷನಿಗೆ ಅಕ್ಕನ ಮಗಳು: ಸೊಸೆ.

ಪುರುಷನಿಗೆ ತಂಗಿಯ ಮಗ: ಅಳಿಯ.

ಪುರುಷನಿಗೆ ತಂಗಿಯ ಮಗಳು: ಸೊಸೆ.

ಸ್ತ್ರೀಗೆ ಅಣ್ಣನ ಮಗ: ಅಳಿಯ.

ಸ್ತ್ರೀಗೆ ಅಣ್ಣನ ಮಗಳು: ಸೊಸೆ.

ಸ್ತ್ರೀಗೆ ತಮ್ಮನ ಮಗ: ಅಳಿಯ.

ಸ್ತ್ರೀಗೆ ತಮ್ಮನ ಮಗಳು: ಸೊಸೆ.

ಸ್ತ್ರೀಗೆ ಅಕ್ಕನ ಮಗ :ಮಜ.

ಸ್ತ್ರೀಗೆ ಅಕ್ಕನ ಮಗಳು: ಮಗ.

ಸ್ತ್ರೀಗೆ ತಂಗಿಯ ಮಗ: ಮಜ.

ಸ್ತ್ರೀಗೆ ತಂಗಿಯ ಮಗಳು: ಮಗ

೪.೪.೨. ವೈವಾಹಿಕ ಸಂಬಂಧದಿಂದ ಉಂಟಾಗುವ ಸಂಬಂಧವಾಚಕಗಳು ಅಥವಾ ಇತರೆ ಸಂಬಂಧದ ಸಂಬಂಧವಾಚಕಗಳು.

ಅತ್ತೆ, ಮಾವ, ಭಾವ, ಮೈದುನ, ನಾದಿನಿ, ಅತ್ತಿಗೆ, ಅಳಿಯ, ಸೊಸೆ ಮೊದಲಾದವರಿಂದ ಉಂಟಾದ ಸಂಬಂಧವನ್ನು ವಿವಾಹ ಸಂಬಂಧ ಎನ್ನುವರು. ಈ ವೈವಾಹಿಕ ಸಂಬಂಧವು ಎಲ್ಲಾ ಜಾತಿ, ಭಾಷೆಗಳಲ್ಲೂ ಕಂಡುಬರುತ್ತವೆ. ಆದರೆ, ಇವುಗಳು ಆಯಾ ಜಾತಿ, ಭಾಷೆ ಪ್ರದೇಶಗಳಿಗನುಗುಣವಾಗಿ ಭಿನ್ನವಾಗಿರುವುದು ಅಧ್ಯಯನಗಳಿಂದ ತಿಳಿದುಬಂದಿದೆ. ಈ ಹಿನ್ನೆಲೆಯಲ್ಲಿ ಕೊಡಗಿನ ಗೌಡರ ಸಂಬಂಧವಾಚಕಗಳನ್ನು ಕೆಳಕಂಡಂತೆ ಚರ್ಚಿಸಲಾಗಿದೆ.

ಗಂಡ: ಗಂಡ.

ಹೆಂಡತಿ: ಹೆಣ್ಣ್

ಗಂಡನ ಇನ್ನೊಬ್ಬಳು ಹೆಂಡತಿ: ಇನ್ನೊಬ್ಬ ಹೆಣ್ಣ್ ಎರ್‌ಡನೆ ಹೆಣ್ಣ್

ಹೆಂಡತಿಯ ಇನ್ನೊಬ್ಬ ಗಂಡ: ಇಲ್ಲ.

ತಂದೆಯ ಹಿರಿಯ ಸಹೋದರನ ಹೆಂಡತಿ: ದೊಡ್ಡವ್ವ.

ತಂದೆಯ ಕಿರಿಯ ಸಹೋದರನ ಹೆಂಡತಿ : ಕುಞವ್ವ/ಸಣ್ಣವ್ವ.

ತಂದೆಯ ನಡುವಿನ ಸಹೋದರನ ಹೆಂಡತಿ: ಬೋಜವ್ವ

ತಂದೆಯ ಸಹೋದರಿಯ ಗಂಡ: ಮಾವ

ತಾಯಿಯ ಸಹೋದರನ ಹೆಂಡತಿ: ಅತ್ತೆ

ತಾಯಿಯ ಹಿರಿಯ ಸಹೋದರಿಯ ಗಂಡ: ದೊಡ್ಡಪ್ಪ

ತಾಯಿಯ ಕಿರಿಯ ಸಹೋದರಿಯ ಗಂಡ: ಕುಞಪ್ಪ.

ಹಿರಿಯ ಸಹೋದರನ ಹೆಂಡತಿ: ಅತ್ತಿಗೆ.

ಕಿರಿಯ ಸಹೋದರನ ಹೆಂಡತಿ: ನಾದಿನಿ.

ಹಿರಿಯ ಸಹೋದರಿಯ ಗಂಡ: ಬಾವ.

ಕಿರಿಯ ಸಹೋದರಿಯ ಗಂಡ: ಮೈದುನ

ಹೆಂಡತಿಯ ಹಿರಿಯ ಸಹೋದರ: ಬಾವ

ಹೆಂಡತಿಯ ಕಿರಿಯ ಸಹೋದರ: ಮೈದುನ

ಗಂಡನ ಹಿರಿಯ ಸಹೋದರ : ಬಾವ.

ಗಂಡನ ಕಿರಿಯ ಸಹೋದರ: ಮೈದುನ.

ಹೆಂಡತಿಯ ಹಿರಿಯ ಸಹೋದರಿ: ಅತ್ತಿಗೆ

ಹೆಂಡತಿಯ ಕಿರಿಯ ಸಹೋದರಿ: ನಾದಿನಿ.

ಗಂಡನ ಹಿರಿಯ ಸಹೋದರಿ : ಅತ್ತಿಗೆ

ಗಂಡನ ಕಿರಿಯ ಸಹೋದರಿ : ನಾದಿನಿ

ಹೆಂಡತಿಯ ಸಹೋದರಿಯ ಮಗ: ಮಜ

ಹೆಂಡತಿಯ ಸಹೋದರಿಯ ಮಗಳು: ಮಗ

ಹೆಂಡತಿಯ ಸಹೋದರನ ಮಗ: ಅಳಿಯ

ಹೆಂಡತಿಯ ಸಹೋದರನ ಮಗಳು: ಸೊಸೆ

ಗಂಡನ ಸಹೋದರಿಯ ಮಗ: ಅಳಿಯ

ಗಂಡನ ಸಹೋದರಿಯ ಮಗಳು: ಸೊಸೆ.

ಗಂಡನ ಸಹೋದರನ ಮಗ: ಮಜ.

ಗಂಡನ ಸಹೋದರನ ಮಗಳು: ಮಗ

ಹೆಂಡತಿಯ ಹಿರಿಯ ಸಹೋದರಿಯ ಗಂಡ: ಸಡ್ಡಗ

ಹೆಂಡತಿಯ ಕಿರಿಯ ಸಹೋದರಿಯ ಗಂಡ: ಸಡ್ಡಗ

ಹೆಂಡತಿಯ ಕಿರಿಯ ಸಹೋದರನ ಹೆಂಡತಿ: ಅಕ್ಕ

ಹೆಂಡತಿಯ ಕಿರಿಯ ಸಹೋದರನ ಹೆಂಡತಿ :ತಂಗೆ.

ಗಂಡನ ಹಿರಿಯ ಸಹೋದರಿಯ ಗಂಡ: ಅಣ್ಣ

ಗಂಡನ ಕಿರಿಯ ಸಹೋದರಿಯ ಗಂಡ: ತಮ್ಮ

ಗಂಡನ ಹಿರಿಯ ಸಹೋದರನ ಹೆಂಡತಿ: ಅಕ್ಕ

ಗಂಡನ ಕಿರಿಯ ಸಹೋದರನ ಹೆಂಡತಿ: ತಂಗೆ

ಹೆಂಡತಿಯ ತಂದೆ: ಮಾವ

ಹೆಂಡತಿಯ ತಾಯಿ: ಅತ್ತೆ

ಗಂಡನ ತಂದೆ: ಮಾವ

ಗಂಡನ ತಾಯಿ: ಅತ್ತೆ

ಮಗನ ಹೆಂಡತಿ: ಸೊಸೆ

ಮಗಳ ಗಂಡ: ಅಳಿಯ

ಮಗನ ಹೆಂಡತಿಯ ತಂದೆ : ಬಾವ/ಅಣ್ಣ.

ಮಗನ ಹೆಂಡತಿಯ ತಾಯಿ: ಅಕ್ಕ/ಅತ್ತಿಗೆ

ಮಗಳ ಗಂಡನ ತಂದೆ: ಬಾವ/ಅಣ್ಣ

ಮಗಳ ಗಂಡನ ತಾಯಿ: ಅಕ್ಕ/ಅತ್ತಿಗೆ

ತಂದೆಯ ಇನ್ನೊಬ್ಬ ಹೆಂಡತಿ: ಚಿಕ್ಕವ್ವ

ತಾಯಿಯ ಇನ್ನೊಬ್ಬ ಗಂಡ: ಅಪ್ಪ

ಗಂಡನ ಇನ್ನೊಬ್ಬ ಹೆಂಡತಿಯ ಮಗ: ಮಜ

ಗಂಡನ ಇನ್ನೊಬ್ಬ ಹೆಂಡತಿಯ ಮಗಳು: ಮಗ

ಕೊಡಗು ಗೌಡರಲ್ಲಿ 'ಹೆಂಡತಿ'ಗೆ 'ಹೆಣ್ಣ್' ಎಂಬ ಸಂಬಂಧ ಸೂಚಕ ಪದವಿದೆ. ಸಂಬೋಧನೆಯಲ್ಲಿ ಸ್ತ್ರೀ ಸಂಬೋಧನಾ ರೂಪವನ್ನು ಬಳಸುತ್ತಾರೆ.

ಉದಾ: ಇದ್ ನನ್ನ ಹೆಣ್ಣ್', ಇದ್ ನನ್ನ ತಮ್ಮನ ಹೆಣ್ಣ್'

(ಇವಳು ನನ್ನ ಹೆಂಡತಿ, ಇವಳು ನನ್ನ ತಮ್ಮನ ಹೆಂಡತಿ)

ಗಂಡನ ತಂಗಿ ಮತ್ತು ಹೆಂಡತಿಯ ತಂಗಿಯು 'ನಾದಿನಿ' ಎನ್ನಿಸಿಕೊಳ್ಳುವರು. ತಾಯಿಯ ಹಿರಿಯ ಸಹೋದರ ಅಥವಾ ಕಿರಿಯ ಸಹೋದರರ ಮಗಳು ಕಿರಿಯರಾಗಿದ್ದಲ್ಲಿ ಆಕೆಯು 'ನಾದಿನಿ' ಯಾಗುವಳು.

ಗಂಡನ ಇನ್ನೊಬ್ಬಳು ಹೆಂಡತಿಯನ್ನು 'ಇನ್ನೊಬ್ಬ ಹೆಣ್ಣ್' ಅಥವಾ 'ಎರಡನೇ ಹೆಣ್ಣ್' ಎಂದು ಹೇಳುವರು. ಇವರಲ್ಲಿ ಸವತಿ ಎಂಬ ಪದ ಅಥವಾ ಆ ರೀತಿಯ ಪದದ ಬಳಕೆ ಇಲ್ಲ.

೪.೪.೩. ಇತರೆ:

ತಂದೆಯ ಸಹೋದರನ ಹಿರಿಯ ಮಗ: ಅಣ್ಣ/ತಮ್ಮ.

ತಂದೆಯ ಸಹೋದರನ ಕಿರಿಯ ಮಗ: ಅಣ್ಣ/ತಮ್ಮ.

ತಂದೆಯ ಸಹೋದರನ ಹಿರಿಯ ಮಗಳು: ಅಕ್ಕ/ತಂಗೆ.

ತಂದೆಯ ಸಹೋದರನ ಕಿರಿಯ ಮಗಳು: ಅಕ್ಕ/ತಂಗೆ.

ತಂದೆಯ ಸಹೋದರಿಯ ಹಿರಿಯ ಮಗ: ಬಾವ/ಮೈದುನ.

ತಂದೆಯ ಸಹೋದರಿಯ ಕಿರಿಯ ಮಗ: ಬಾವ/ಮೈದುನ.

ತಂದೆಯ ಸಹೋದರಿಯ ಹಿರಿಯ ಮಗಳು: ಅತ್ತಿಗೆ/ನಾದಿನಿ.

ತಂದೆಯ ಸಹೋದರಿಯ ಕಿರಿಯ ಮಗಳು: ಅತ್ತಿಗೆ/ನಾದಿನಿ.

ತಾಯಿಯ ಸಹೋದರನ ಹಿರಿಯ ಮಗ: ಬಾವ/ಮೈದುನ.

ತಾಯಿಯ ಸಹೋದರನ ಕಿರಿಯ ಮಗ: ಬಾವ/ಮೈದುನ.

ತಾಯಿಯ ಸಹೋದರನ ಹಿರಿಯ ಮಗಳು: ಅತ್ತಿಗೆ/ನಾದಿನಿ.

ತಾಯಿಯ ಸಹೋದರನ ಕಿರಿಯ ಮಗಳು: ಅತ್ತಿಗೆ/ನಾದಿನಿ.

ತಾಯಿಯ ಸಹೋದರಿಯ ಹಿರಿಯ ಮಗ: ಅಣ್ಣ/ತಮ್ಮ.

ತಾಯಿಯ ಸಹೋದರಿಯ ಕಿರಿಯ ಮಗ: ಅಣ್ಣ/ತಮ್ಮ

ತಾಯಿಯ ಸಹೋದರಿಯ ಹಿರಿಯ ಮಗಳು: ಅಕ್ಕ/ತಂಗೆ.

ತಾಯಿಯ ಸಹೋದರಿಯ ಕಿರಿಯ ಮಗಳು: ಅಕ್ಕ/ತಂಗೆ.

೪.೪.೪. ಸಂಬಂಧಸೂಚಕ ಪದಗಳಾದ 'ಅಕ್ಕ', 'ಅಣ್ಣ' ಎಂಬವು ಗೌಡರ ವ್ಯಕ್ತಿನಾಮಗಳಲ್ಲಿ ವಾರ್ಗಿಕಗಳಾಗಿ ಬಳಕೆಯಾಗಿವೆ.

ಉದಾ: ಮಂದಣ್ಣ–ಮಂದ್+ಅಣ್ಣ.

ಬೋಪಣ–ಬೋಪು+ಅಣ್ಣ.

ನೀಲಕ್ಕ–ನೀಲ+ಅಣ್ಣ.

ಪೂವಕ್ಕ–ಪೂವು+ಅಕ್ಕ. ಇತ್ಯಾದಿ.

೪.೪.೫. ಆಂಶಿಕ ರಕ್ತ ಸಂಬಂಧದಿಂದ ಉಂಟಾದ ಸಂಬಂಧವಾಚಕಗಳು:

ಮಲತಾಯಿಯ ಹಿರಿಯ ಮಗ: ತಮ್ಮ/ಅಣ್ಣ.

ಮಲತಾಯಿಯ ಕಿರಿಯ ಮಗ: ತಮ್ಮ/ಅಣ್ಣ.

ಮಲತಾಯಿಯ ಹಿರಿಯ ಮಗಳು: ತಂಗೆ/ಅಕ್ಕ.

ಮಲತಾಯಿಯ ಕಿರಿಯ ಮಗಳು: ತಂಗೆ/ಅಕ್ಕ.

ಮಲತಂದೆಯ ಹಿರಿಯ ಮಗ: ತಮ್ಮ/ಅಣ್ಣ.

ಮಲತಂದೆಯ ಕಿರಿಯ ಮಗ: ತಮ್ಮ/ಅಣ್ಣ.

ಮಲತಂದೆಯ ಹಿರಿಯ ಮಗಳು: ಅಕ್ಕ/ತಂಗೆ.

ಮಲತಂದೆಯ ಕಿರಿಯ ಮಗಳು: ಅಕ್ಕ/ತಂಗೆ.

೪.೪.೬. ಅಳವಡಿಕೆಯಿಂದ ಉಂಟಾಗುವ ಸಂಬಂಧವಾಚಕಗಳು:

ಸಾಕುತಂದೆ: ಅಪ್ಪ.

ಸಾಕುತಾಯಿ: ಅವ್ವ

ಸಾಕು ತಂದೆಯ ಹಿರಿಯ ಮಗ: ಅಣ್ಣ/ತಮ್ಮ.

ಸಾಕು ತಂದೆಯ ಹಿರಿಯ ಮಗಳು: ಅಕ್ಕ/ತಮ್ಮ.

ಸಾಕು ತಂದೆಯ ಕಿರಿಯ ಮಗ: ಅಣ್ಣ/ತಮ್ಮ.

ಸಾಕು ತಂದೆಯ ಕಿರಿಯ ಮಗಳು: ಅಕ್ಕ/ತಂಗೆ.

ಸಾಕು ತಾಯಿಯ ಹಿರಿಯ ಮಗ: ಅಣ್ಣ/ತಮ್ಮ.

ಸಾಕು ತಾಯಿಯ ಹಿರಿಯ ಮಗಳು: ಅಕ್ಕ/ತಂಗೆ.

ಸಾಕು ತಾಯಿಯ ಕಿರಿಯ ಮಗಳು: ಅಕ್ಕ/ತಂಗೆ.

ಸಾಕು ತಾಯಿಯ ಕಿರಿಯ ಮಗ: ಅಣ್ಣ/ತಮ್ಮ.

ಸಾಕು ಮಗ: ಮಜ.

ಸಾಕು ಮಗಳು: ಮಗ.

ಸಾಕು ಮಕ್ಕಳು: ಸಾಂಕ್‌ಮಕ್ಕ/ಮಕ್ಕ

೪.೫. ಸಂಬೋಧನಾ ರೂಪಗಳು:

ಒಬ್ಬ ವ್ಯಕ್ತಿಯನ್ನು ಕರೆಯುವಾಗ ಉಪಯೋಗವಾಗುವ ಪದಗಳನ್ನು ಸಂಬೋಧನಾ ರೂಪಗಳು ಎನ್ನಲಾಗುತ್ತದೆ. ಒಂದು ಭಾಷಾ ಸಮುದಾಯದಲ್ಲಿರುವ ಭಾಷಿಕರ ಜೀವನ ಸಂಸ್ಕೃತಿಯನ್ನು ಅರ್ಥಮಾಡಿಕೊಳ್ಳುವಲ್ಲಿ ಸಂಬೋಧನಾ ರೂಪಗಳು ಮಹತ್ವದ ಪಾತ್ರವಹಿಸುತ್ತವೆ. ಇವು ಆಯಾ ಭಾಷೆ, ಪ್ರದೇಶ, ವರ್ಗ, ಲಿಂಗ, ಜಾತಿ, ವಯಸ್ಸುಗಳಿಗನುಗುಣವಾಗಿ ಬಳಕೆಯಲ್ಲಿ ಭಿನ್ನತೆಯನ್ನು ಹೊಂದಿರುತ್ತವೆ. ಕೊಡಗಿನ ಗೌಡಕನ್ನಡ ಭಾಷಾ ಸಮುದಾಯದವರಲ್ಲಿ ಬಳಕೆಯಾಗುವ ಸಂಬೋಧನಾ ರೂಪಗಳ ಸ್ವರೂಪವನ್ನು ಇಲ್ಲಿ ಚರ್ಚಿಸಲಾಗಿದೆ.

೪.೫.೧. ಸಂಬೋಧಿಸುವ ಬಗೆ:

ತಂದೆಯನ್ನು ಸಂಬೋಧಿಸುವ ಬಗೆ: ಅಪ್ಪ, ಪೊಪ್ಪ.

ತಾಯಿಯನ್ನು ಸಂಬೋಧಿಸುವ ಬಗೆ: ಅಮ್ಮ, ಅವ್ವ

ತಂದೆಯ ಹಿರಿಯ ಸಹೋದರ: ದೊಡ್ಡಪ್ಪ.

ತಂದೆಯ ಕಿರಿಯ ಸಹೋದರ: ಕುಞಪ್ಪ, ಚಿಕ್ಕಯ್ಯ.

ತಂದೆಯ ಹಿರಿಯ ಸಹೋದರನ ಹೆಂಡತಿ: ದೊಡ್ಡಮ್ಮ.

ತಂದೆಯ ಕಿರಿಯ ಸಹೋದರನ ಹೆಂಡತಿ: ಕುಞವ್ವ, ಸಣ್ಣವ್ವ

ತಂದೆಯ ನಡುವಿನ ಅಥವಾ ಎರಡನೇ ಸಹೋದರ: ಬೋಜಪ್ಪ.

ತಂದೆಯ ನಡುವಿನ ಸಹೋದರನ ಹೆಂಡತಿ: ಬೋಜವ್ವ.

ತಂದೆಯ ಸಹೋದರಿಯ ಹಿರಿಯ ಮಗ: ಬಾವ/ಹೆಸರಿನಿಂದ.

ತಂದೆಯ ಸಹೋದರಿಯ ಕಿರಿಯ ಮಗ: ಬಾವ/ಹೆಸರಿನಿಂದ.

ತಂದೆಯ ಸಹೋದರಿಯ ಹಿರಿಯ ಮಗಳು: ಅತ್ತಿಗೆ/ಹೆಸರಿನಿಂದ.

ತಂದೆಯ ಸಹೋದರಿಯ ಕಿರಿಯ ಮಗಳು: ಅತ್ತಿಗೆ/ಹೆಸರಿನಿಂದ.

ತಂದೆಯ ಹಿರಿಯ ಸಹೋದರಿ: ಅತ್ತೆ/ ಅತ್ತೆಮ್ಮ/ದೊಡ್ಡತ್ತೆ.

ತಂದೆಯ ಕಿರಿಯ ಸಹೋದರಿ: ಅತ್ತೆ/ಅತ್ತೆಮ್ಮ/ಸಣ್ಣತ್ತೆ/ಕುಞತ್ತೆ.

ತಂದೆಯ ಎರಡನೇ ಸಹೋದರಿ: ಅತ್ತೆ/ ಅತ್ತೆಮ್ಮ/ಬೋಜತ್ತೆ.

ತಂದೆಯ ಹಿರಿಯ ಸಹೋದರಿಯ ಗಂಡ: ಮಾಂವ/ದೊಡ್ಡಮಾಂವ.

ತಂದೆಯ ಕಿರಿಯ ಸಹೋದರಿಯ ಗಂಡ: ಕುಞಮಾವ/ಸಣ್ಣಮಾವ.

ತಂದೆಯ ಎರಡನೇ ಸಹೋದರಿಯ ಗಂಡ: ಮಾವ/ಬೋಜುಮಾವ.

ತಂದೆಯ ಸಹೋದರನ ಹಿರಿಯ ಮಗ: ಅಣ್ಣ/ಹೆಸರಿನಿಂದ.

ತಂದೆಯ ಸಹೋದರನ ಕಿರಿಯ ಮಗ: ಅಣ್ಣ/ಹೆಸರಿನಿಂದ.

ತಂದೆಯ ಸಹೋದರನ ಹಿರಿಯ ಮಗಳು: ಅಕ್ಕ/ಹೆಸರಿನಿಂದ.

ತಂದೆಯ ಸಹೋದರನ ಕಿರಿಯ ಮಗಳು: ಅಕ್ಕ/ಹೆಸರಿನಿಂದ.

ತಾಯಿಯ ಹಿರಿಯ ಸಹೋದರ: ದೊಡ್ಡಮಾಂವ/ಮಾವ.

ತಾಯಿಯ ಕಿರಿಯ ಸಹೋದರ: ಕುಞಮಾವ/ಮಾವ.

ತಾಯಿಯ ನಡುವಿನ/ ಎರಡನೇ ಸಹೋದರ:ಬೋಜಿಮಾವ.

ತಾಯಿಯ ಹಿರಿಯ ಸಹೋದರನ ಹೆಂಡತಿ: ದೊಡ್ಡ ಅತ್ತೆ/ಅತ್ತೆಮ್ಮ/ಅತ್ತೆ.

ತಾಯಿಯ ಕಿರಿಯ ಸಹೋದರನ ಹೆಂಡತಿ: ಸಣ್ಣತ್ತೆ, ಕುಞಅತ್ತೆ/ಅತ್ತೆಮ್ಮ/ಅತ್ತೆ.

ತಾಯಿಯ ಎರಡನೇ ಸಹೋದರನ ಹೆಂಡತಿ:ಬೋಜತ್ತೆ/ಅತ್ತೆಮ್ಮ/ಅತ್ತೆ.

ತಾಯಿಯ ಸಹೋದರನ ಹಿರಿಯ ಮಗ: ಬಾವ/ಹೆಸರಿನಿಂದ.

ತಾಯಿಯ ಸಹೋದರನ ಕಿರಿಯ ಮಗ: ಬಾವ/ಹೆಸರಿನಿಂದ.

ತಾಯಿಯ ಸಹೋದರನ ಹಿರಿಯ ಮಗಳು: ಅತ್ತಿಗೆ/ಹೆಸರಿನಿಂದ.

ತಾಯಿಯ ಸಹೋದರನ ಕಿರಿಯ ಮಗಳು: ಅತ್ತಿಗೆ/ಹೆಸರಿನಿಂದ.

ತಾಯಿಯ ಹಿರಿಯ ಸಹೋದರಿ: ದೊಡ್ಡಮ್ಮ/ದೊಡ್ಡವ್ವ.

ತಾಯಿಯ ಕಿರಿಯ ಸಹೋದರಿ: ಕುಞವ್ವ/ಸಣ್ಣವ್ವ.

ತಾಯಿಯ ನಡುವಿನ ಸಹೋದರಿ: ಬೋಜವ್ವ.

ತಾಯಿಯ ಹಿರಿಯ ಸಹೋದರಿಯ ಗಂಡ: ದೊಡ್ಡಪ್ಪ.

ತಾಯಿಯ ಕಿರಿಯ ಸಹೋದರಿಯ ಗಂಡ: ಕುಞಪ್ಪ/ಸಣ್ಣಪ್ಪ.

ತಾಯಿಯ ಎರಡನೇ ಸಹೋದರಿಯ ಗಂಡ: ಬೋಜಪ್ಪ.

ತಾಯಿಯ ಸಹೋದರಿಯ ಹಿರಿಯ ಮಗ: ಅಣ್ಣ/ಹೆಸರಿನಿಂದ.

ತಾಯಿಯ ಸಹೋದರಿಯ ಕಿರಿಯ ಮಗ: ಅಣ್ಣ/ಹೆಸರಿನಿಂದ.

ತಾಯಿಯ ಸಹೋದರಿಯ ಹಿರಿಯ ಮಗಳು: ಅಕ್ಕ/ಹೆಸರಿನಿಂದ.

ತಾಯಿಯ ಸಹೋದರಿಯ ಕಿರಿಯ ಮಗಳು: ಅಕ್ಕ/ಹೆಸರಿನಿಂದ.

ಕೊಡಗಿನ ಗೌಡ ಜನಾಂಗದಲ್ಲಿರುವ ಸಂಬೋಧನಾ ರೂಪಗಳಲ್ಲಿ ತಂದೆಯನ್ನು ಅಪ್ಪ, ಪೊಪ್ಪ ಎಂದೂ ತಾಯಿಯನ್ನು ಅಮ್ಮ, ಅವ್ವ ಎಂದು ಸಂಬೋಧಿಸುವರು. 'ಚಿಕ್ಕಪ್ಪ' ಸ್ಥಾನದಲ್ಲಿರುವ ತಂದೆಯ ತಮ್ಮ ಹಾಗೂ ತಾಯಿಯ ಸಹೋದರಿಯ ಗಂಡನನ್ನು 'ಕುಞಪ್ಪ, ಚಿಕ್ಕಯ್ಯ' ಸಣ್ಣಪ್ಪ ಎಂದೂ, 'ಚಿಕ್ಕಮ್ಮ'ಂದಿರಾದ ತಂದೆಯ ಸಹೋದರನ ಹೆಂಡತಿ ಹಾಗೂ ತಾಯಿಯ ಸಹೋದರಿ 'ಕುಞವ್ವ, ಸಣ್ಣವ್ವ' ಎಂದು ಸಂಬೋಧಿಸಲ್ಪಡುವರು. ತಾಯಿಯ ಸಹೋದರನ ಮಕ್ಕಳು ಸೋದರ ಮಾವನ ಮಕ್ಕಳಾಗುತ್ತಾರೆ. ತಂದೆಯ ಸಹೋದರಿಯ ಮಕ್ಕಳು ಸೋದರ ಅತ್ತೆಯ ಮಕ್ಕಳಾಗುತ್ತಾರೆ. ಸೋದರ ಮಾವ ಮತ್ತು ಸೋದರ ಅತ್ತೆಯ ಮಕ್ಕಳು ಬಾವ, ಮೈದುನ, ಅತ್ತಿಗೆ, ನಾದಿನಿಯರಾಗುತ್ತಾರೆ. ಇವರನ್ನು ಬಾವ, ಅತ್ತಿಗೆ ಅಥವಾ ಕಿರಿಯವರಾಗಿದ್ದರೆ ಹೆಸರಿನಿಂದ ಸಂಬೋಧಿಸಲಾಗುತ್ತದೆ.

ತಂದೆಯ ಸಹೋದರಿ ಮತ್ತು ತಾಯಿಯ ಸಹೋದರನ ಹೆಂಡತಿ ಅತ್ತೆ, ಅತ್ತೆಮ್ಮ ಹಾಗೂ ಅವರ ಸ್ಥಾನಕ್ಕನುಗುಣವಾಗಿ ದೊಡ್ಡ ಅತ್ತೆ, ಕುಞತ್ತೆ, ಬೋಜತ್ತೆ ಎಂದೂ, ತಂದೆಯ ಸಹೋದರಿಯ ಗಂಡ ಹಾಗೂ ತಾಯಿಯ ಸಹೋದರ ಮಾವ, ದೊಡ್ಡಮಾವ, ಕುಞಮಾವ; ಬೋಜಿಮಾವ ಎಂದು ಸಂಬೋಧಿಸಲ್ಪಡುವರು. ತಾಯಿಯ ಸಹೋದರ ಒಬ್ಬರೇ ಇದ್ದಲ್ಲಿ ಅವರನ್ನು 'ಮಾಮನೆ ಮಾವ' (ಮಾವನಮನೆ ಮಾವ) ಎಂದೂ, ಅವರ ಪತ್ನಿಯನ್ನು 'ಮಾಮನೆ ಅತ್ತೆ' (ಮಾವನಮನೆ ಅತ್ತೆ) ಎಂದು ಕರೆಯುವರು. ಕೊಡಗಿನ ಗೌಡರಲ್ಲಿ 'ಸೋದರಮಾವ' ಅಂದರೆ ತಾಯಿಯ ಸಹೋದರನ ಸ್ಥಾನವು ಪ್ರಮುಖವೆನಿಸಿಕೊಳ್ಳುತ್ತದೆ. ಇವರ ವಿವಾಹದ ವಿಧಿಗಳಲ್ಲಿ ಧಾರೆ ಎರೆಯುವಾಗ ಸೋದರಮಾವನ ಪಾತ್ರವು ಪ್ರಮುಖವಾಗಿದ್ದು, ವಿವಾಹದ ವಿಧಿಗಳು ಸೋದರಮಾವನು ಮದುಮಕ್ಕಳಿಗೆ 'ಕಾಸ್ತಾಳಿ'(ಮುಹೂರ್ತ ಮಣಿ) ಕಟ್ಟುವ ಮೂಲಕವೇ ಪ್ರಾರಂಭವಾಗುವುದು. ಇದರಿಂದ ತಾಯಿಯ ತಾಯಿ ಅಂದರೆ ಅಜ್ಜಿಯ ಮನೆಯನ್ನು ಇವರಲ್ಲಿ ಮಾವನಮನೆ(ಮಾಮನೆ) ಎಂದೇ ಗುರುತಿಸುವರು.

ತಂದೆಯ ಸಹೋದರನ ಮಕ್ಕಳು ಹಾಗೂ ತಾಯಿಯ ಸಹೋದರಿಯ ಮಕ್ಕಳು ಸಂಬಂಧದಲ್ಲಿ ಅಕ್ಕ ತಂಗಿಯರಾಗುವರು. ಇವರನ್ನು ಅಕ್ಕ, ಅಣ್ಣ ಅಥವಾ ಹೆಸರಿನಿಂದ ಸಂಬೋಧಿಸಲಾಗುತ್ತದೆ.

೪.೫.೨. ಹಿರಿಯರು ಕಿರಿಯರನ್ನು ಕಿರಿಯರು ಹಿರಿಯರನ್ನು ಕರೆಯುವ ಸಂಬೋಧನಾ ರೂಪಗಳು:

ತಂದೆಯ ತಂದೆ: ಅಪ್ಪ/ತಾತಾ.

ತಂದೆಯ ತಾಯಿ: ಅವ್ವ/ಅವ್ವಯ್ಯ.

ತಾಯಿಯ ತಂದೆ: ಅಪ್ಪ/ತಾತಾ.

ತಾಯಿಯ ತಾಯಿ: ಅವ್ವ/ ಅವ್ವಯ್ಯ/ಮಾಮನೆ ಅವ್ವ

ತಂದೆಯ ತಂದೆಯ ತಂದೆ: ಅಜ್ಜಪ್ಪ/ತಾತಾ.

ತಂದೆಯ ತಾಯಿಯ ತಾಯಿ: ತಾವ/ತಾಯಿ/ಅವ್ವ

ಹಿರಿಯ ಮಗ: ಅಣ್ಣ/ಹೆಸರಿನಿಂದ.

ಕಿರಿಯ ಮಗ: ಅಣ್ಣ/ಹೆಸರಿನಿಂದ.

ಹಿರಿಯ ಮಗಳು: ಹೆಸರಿನಿಂದ/ಅಕ್ಕಯ್ಯ.

ಕಿರಿಯ ಮಗಳು: ಹೆಸರಿನಿಂದ/ಅಕ್ಕಯ್ಯ.

ಮಗನ ಮಗ: ಪುಟ್ಟ/ ಹೆಸರಿನಿಂದ/ಅಣ್ಣಯ್ಯ/ಕೂಸು.

ಮಗಳ ಮಗ: ಪುಟ್ಟ/ ಹೆಸರಿನಿಂದ/ಅಣ್ಣಯ್ಯ/ಕೂಸು.

ಮಗನ ಮಗಳು: ಅಕ್ಕಯ್ಯ/ ಹೆಸರಿನಿಂದ/ಕೂಸು.

ಮಗಳ ಮಗಳು: ಅಕ್ಕಯ್ಯ/ ಹೆಸರಿನಿಂದ/ಕೂಸು.

ಮಗನ ಮಗನ ಮಗ: ಅಣ್ಣಯ್ಯ/ಪುಟ್ಟ/ಹೆಸರಿನಿಂದ/ಕೂಸು.

ಮಗನ ಮಗನ ಮಗಳು: ಅಕ್ಕಯ್ಯ/ಹೆಸರಿನಿಂದ/ಕೂಸು.

ಮಗಳ ಮಗನ ಮಗ: ಅಣ್ಣಯ್ಯ/ಹೆಸರಿನಿಂದ/ಪುಟ್ಟ/ಕೂಸು.

ಮಗಳ ಮಗನ ಮಗಳು: ಅಕ್ಕಯ್ಯ/ಹೆಸರಿನಿಂದ/ಕೂಸು.

ಮಗನ ಮಗಳ ಮಗಳು: ಅಕ್ಕಯ್ಯ/ಹೆಸರಿನಿಂದ/ಕೂಸು.

ಮಗನ ಮಗಳ ಮಗ: ಅಣ್ಣಯ್ಯ/ಹೆಸರಿನಿಂದ/ಪುಟ್ಟ/ಕೂಸು.

ಮಗಳ ಮಗಳ ಮಗ: ಅಣ್ಣಯ್ಯ/ಹೆಸರಿನಿಂದ/ಪುಟ್ಟ/ಕೂಸು.

ಮಗಳ ಮಗಳ ಮಗಳು: ಅಕ್ಕಯ್ಯ/ಹೆಸರಿನಿಂದ/ಕೂಸು.

ಮೊಮ್ಮಗನ ಮಗನ/ಳ ಮಗಳು: ಅಕ್ಕಯ್ಯ/ಕೂಸು/ಹೆಸರಿನಿಂದ.

ಮೊಮ್ಮಗಳ ಮಗನ/ಳ ಮಗ: ಅಣ್ಣಯ್ಯ/ಹೆಸರಿನಿಂದ/ಪುಟ್ಟ.

ಇಲ್ಲಿ ತಂದೆಯ ತಂದೆ ಮತ್ತು ತಾಯಿಯ ತಂದೆಗೆ ಒಂದೇ ಸಂಬೋಧನಾರೂಪವಿದೆ. 'ಅಪ್ಪ ಅಥವಾ ತಾತಾ' ಆದರೆ, ತಾಯಿಯ ತಾಯಿ ಮತ್ತು ತಂದೆಯ ತಾಯಿಗೆ 'ಅವ್ವ, ಅವ್ವಯ್ಯ' ಎಂದು ಒಂದೇ ರೀತಿಯ ಸಂಬೋಧನಾ ರೂಪವಿದ್ದರೂ, ತಾಯಿಯ ತಾಯಿಯನ್ನು 'ಮಾಮನೆ ಅವ್ವ' 'ಮಾವನ ಮನೆ ಅವ್ವ' ಎಂದೂ ಸಂಬೋಧಿಸುವರು. ತಂದೆಯ ತಂದೆಯ ತಂದೆಗೂ

ಹಾಗೂ ತಾಯಿಯ ತಂದೆಯ ತಂದೆಗೂ ಒಂದೇ ಸಂಬೋಧನಾ ರೂಪವಿದೆ. ಅದೇರೀತಿ ತಾಯಿಯ ತಾಯಿಯ ತಾಯಿಗೂ, ತಂದೆಯ ತಾಯಿಯ ತಾಯಿಗೂ ಒಂದೇ ತೆರನಾದ ಸಂಬೋಧನಾ ರೂಪವಿದೆ. ಉಳಿದಂತೆ ಇವರಲ್ಲಿ ಹಿರಿಯರು ಕಿರಿಯರಾದ ತಮ್ಮ ಮಕ್ಕಳು, ಮಕ್ಕಳ ಮಕ್ಕಳಾದ ಮೊಮ್ಮಕ್ಕಳು ಹಾಗೂ ಮೊಮ್ಮಕ್ಕಳ ಮಕ್ಕಳಾದ ಮರಿ ಮಕ್ಕಳನ್ನು ಒಂದೇ ರೂಪದಲ್ಲಿ ಸಂಬೋಧಿಸುವುದನ್ನು ಕಾಣಬಹುದು.

೪.೫.೩. ವೈವಾಹಿಕ ಸಂಬಂಧಗಳಲ್ಲಿ ಸಂಬೋಧನಾ ರೂಪಗಳು:

ಮಗನ ಹೆಂಡತಿ: ಹೆಸರಿನಿಂದ.

ಮಗಳ ಗಂಡ: ಅಣ್ಣ/ಹೆಸರಿನಿಂದ.

ಹೆಂಡತಿಯ ತಂದೆ: ಮಾವ.

ಹೆಂಡತಿಯ ತಾಯಿ: ಅತ್ತೆ.

ಗಂಡನ ತಂದೆ: ಮಾವ.

ಗಂಡನ ತಾಯಿ: ಅತ್ತೆ.

ಹೆಂಡತಿಯ ತಮ್ಮ: ಹೆಸರಿನಿಂದ.

ಹೆಂಡತಿಯ ತಂಗಿ: ಹೆಸರಿನಿಂದ.

ಹೆಂಡತಿಯ ಅಣ್ಣ: ಬಾವ.

ಹೆಂಡತಿಯ ಅಕ್ಕ: ಅತ್ತಿಗೆ.

ಗಂಡನ ಅಣ್ಣ: ಬಾವ.

ಗಂಡನ ತಮ್ಮ: ಬಾವ/ಹೆಸರಿನಿಂದ.

ಗಂಡನ ತಂಗಿ: ಅತ್ತಿಗೆ.

ಗಂಡನ ಅಕ್ಕ: ಅತ್ತಿಗೆ.

ಹಿರಿಯ ಸಹೋದರ: ಅಣ್ಣಯ್ಯ/ಅಣ್ಣ/ದೊಡ್ಡಣ್ಣ.

ಕಿರಿಯ ಸಹೋದರ: ಹೆಸರಿನಿಂದ/ಅಣ್ಣ.

ನಡುವಿನ ಸಹೋದರ: ಬೋಜಣ್ಣ/ಹೆಸರಿನಿಂದ.

ಹಿರಿಯ ಸಹೋದರಿ: ದೊಡ್ಡಕ್ಕ/ಅಕ್ಕಯ್ಯ.

ಕಿರಿಯ ಸಹೋದರಿ: ಹೆಸರಿನಿಂದ.

ಹೆಂಡತಿಯ ಹಿರಿಯ ಸಹೋದರಿಯ ಗಂಡ: ಅಣ್ಣ.

ಹೆಂಡತಿಯ ಕಿರಿಯ ಸಹೋದರಿಯ ಗಂಡ: ಹೆಸರಿನಿಂದ.

ಗಂಡನ ಹಿರಿಯ ಸಹೋದರನ ಹೆಂಡತಿ: ಅಕ್ಕ.

ಗಂಡನ ಕಿರಿಯ ಸಹೋದರನ ಹೆಂಡತಿ: ಹೆಸರಿನಿಂದ.

ಗಂಡನ ಸಹೋದರಿಯ ಗಂಡ: ಅಣ್ಣ

ಮೇಲಿನ ಸಂಬೋಧನಾ ರೂಪಗಳ ಪ್ರಕಾರ ಕೊಡಗು ಗೌಡರಲ್ಲಿ ಅಳಿಯನನ್ನು ಗೌರವದಿಂದ 'ಅಣ್ಣ' ಎಂದು ಸಂಬೋಧಿಸುವರು. ಹೆಂಡತಿಯ ತಂದೆ, ಗಂಡನ ತಂದೆ ಇವರನ್ನು 'ಮಾವ' ಎಂದೂ, ಹೆಂಡತಿಯ ತಾಯಿ ಹಾಗೂ ಗಂಡನ ತಾಯಿಯನ್ನು 'ಅತ್ತೆ' ಎಂದು ಸಂಬೋಧಸುವರು. ಹೆಂಡತಿಯ ತಮ್ಮ ಅಥವಾ ತಂಗಿಯನ್ನು ಹೆಸರಿನಿಂದ ಕರೆಯುವರು. ಆದರೆ, ಗಂಡನ ತಮ್ಮ ಮತ್ತು ತಂಗಿಯನ್ನು ಸಂಬಂಧದ ಪ್ರಕಾರ 'ಬಾವ' 'ಅತ್ತಿಗೆ' ಎಂದೇ ಸಂಬೋಧಿಸುವರು. ಇವರು ಬಹಳ ಕಿರಿಯರಾಗಿದ್ದ ಪಕ್ಷದಲ್ಲಿ ಮಾತ್ರ ಹೆಸರಿನಿಂದ ಸಂಬೋಧಿಸಲಾಗುತ್ತದೆ. ಗಂಡನು ಹೆಂಡತಿಯ ಕಿರಿಯ ಸಹೋದರಿಯ ಗಂಡನನ್ನು ಹೆಸರಿನಿಂದ ಕರೆದರೆ, ಗಂಡನ ಕಿರಿಯ ಸಹೋದರಿಯ ಗಂಡನನ್ನು ಹೆಂಡತಿ 'ಅಣ್ಣ' ಎಂದೇ ಸಂಬೋಧಿಸುವುದು.

೪.೫.೪. ಪುರುಷನಿಂದ ಸಂಬೋಧನಾ ರೂಪ:

ಹಿರಿಯ ಸಹೋದರನ ಮಗ: ಹೆಸರಿನಿಂದ.

ಕಿರಿಯ ಸಹೋದರನ ಮಗ: ಹೆಸರಿನಿಂದ.

ಹಿರಿಯ ಸಹೋದರನ ಮಗಳು: ಹೆಸರಿನಿಂದ.

ಕಿರಿಯ ಸಹೋದರನ ಮಗಳು: ಹೆಸರಿನಿಂದ.

ಹಿರಿಯ ಸಹೋದರಿಯ ಮಗ: ಹೆಸರಿನಿಂದ.

ಕಿರಿಯ ಸಹೋದರಿಯ ಮಗ: ಹೆಸರಿನಿಂದ.

ಹಿರಿಯ ಸಹೋದರಿಯ ಮಗಳು: ಹೆಸರಿನಿಂದ.

ಕಿರಿಯ ಸಹೋದರಿಯ ಮಗಳು: ಹೆಸರಿನಿಂದ.

ಗಂಡ ಹೆಂಡತಿಯನ್ನು: ಹೆಸರಿನಿಂದ

೪.೫.೫. ಸ್ತ್ರೀಯು ಸಂಬೋಧಿಸುವ ರೂಪ:

ಹಿರಿಯ ಸಹೋದರನ ಮಗ: ಹೆಸರಿನಿಂದ.

ಕಿರಿಯ ಸಹೋದರನ ಮಗ: ಹೆಸರಿನಿಂದ.

ಹಿರಿಯ ಸಹೋದರನ ಮಗಳು: ಹೆಸರಿನಿಂದ.

ಕಿರಿಯ ಸಹೋದರನ ಮಗಳು: ಹೆಸರಿನಿಂದ.

ಹಿರಿಯ ಸಹೋದರಿಯ ಮಗ: ಹೆಸರಿನಿಂದ.

ಕಿರಿಯ ಸಹೋದರಿಯ ಮಗ: ಹೆಸರಿನಿಂದ.

ಹಿರಿಯ ಸಹೋದರಿಯ ಮಗಳು: ಹೆಸರಿನಿಂದ.

ಕಿರಿಯ ಸಹೋದರಿಯ ಮಗಳು: ಹೆಸರಿನಿಂದ.

ಹೆಂಡತಿ ಗಂಡನನ್ನು: ಅಣ್ಣ/ಬನ್ನಿಇಲ್ಲಿ/ಎಲ್ಲಿ ಒಳರಿ.

ವೈವಾಹಿಕ ಸಂಬಂಧದ ಸಂಬೋಧನಾ ರೂಪದಲ್ಲಿ ಪತಿಯು ಪತ್ನಿಯನ್ನು ಆಕೆಯ ಹೆಸರಿನಿಂದ ಸಂಬೋಧಿಸಿದರೆ, ಪತ್ನಿಯು ಮಕ್ಕಳು ಕರೆಯುವಂತೆ 'ಅಪ್ಪ/ಪೊಪ್ಪ' ಎಂದು, 'ಅಣ್ಣ' ಎಂದೂ ಕರೆಯುವರು. 'ಅಣ್ಣ' ಎಂದು ಕರೆಯುವ ಹಿನ್ನೆಲೆಯಲ್ಲಿರುವುದು, ತಂದೆ ತಾಯಿ ತಮ್ಮ ಮಕ್ಕಳನ್ನು 'ಅಣ್ಣ' ಎಂದು ಕರೆಯುವುದು, ವಿಚಾರಿಸುವುದು ಮಾಡುವರು. ಅವರ ಎದಿರು ಪತಿಯನ್ನು ಪತ್ನಿ ಅವರಂತೆಯೇ 'ಅಣ್ಣ' ಎಂದು ಹೇಳುತ್ತಾಳೆ. ಇದೇ ಅಭ್ಯಾಸದಿಂದ ಆತನನ್ನು 'ಅಣ್ಣ' ಎಂದು ಸಂಬೋಧಿಸುತ್ತಾಳೆ. ಆದರೆ, ಇತ್ತೀಚಿನ ದಿನಗಳಲ್ಲಿ ಇಂದಿನ ತಲೆಮಾರಿನಲ್ಲಿ ಈ ರೂಪ ಇಲ್ಲ. ಇಂದು ಆಧುನೀಕತೆಯ ಪ್ರಭಾವದಿಂದ ಪತಿಯನ್ನು ಆತನ ಹೆಸರಿನಿಂದ ಸಂಬೋಧಿಸುತ್ತಾರೆ. ಇಲ್ಲವಾದಲ್ಲಿ ಬನ್ನಿ ಇಲ್ಲಿ, ಕೇಳಿ ಇಲ್ಲಿ, ನೋಡಿ ಇಲ್ಲಿ ಈ ರೀತಿ ಹೇಳಿ ಅವರ ಗಮನವನ್ನು ತಮ್ಮೆಡೆಗೆ ಸೆಳೆಯುತ್ತಾರೆ.

೪.೫.೬. ಸಾಮಾಜಿಕ ಅವಳಿ ಸಂಬಂಧಗಳಲ್ಲಿ ಸಂಬೋಧನೆಗಳು:

ಒಂದು ಭಾಷಾ ಸಮುದಾಯದಲ್ಲಿ ಸ್ತರವಿನ್ಯಾಸಕ್ಕೆ ಅನುಗುಣವಾಗಿ ಒಬ್ಬ ಭಾಷಿಕ ಇನ್ನೊಬ್ಬ ಭಾಷಿಕರಿಗಿಂತ ಭಿನ್ನವಾದ ಸ್ಥಾನಮಾನಗಳನ್ನು ಹೊಂದಿರುತ್ತಾರೆ. ಭಾಷಿಕರ ವಿಭಿನ್ನ ಸ್ಥಾನಮಾನಗಳಿಂದಾಗಿ ವೈವಿಧ್ಯಮಯವಾದ ಸಾಮಾಜಿಕ ರಚನೆ ಏರ್ಪಟ್ಟಿರುತ್ತದೆ. ಇಲ್ಲಿ ಕೊಡಗಿನ ಗೌಡ ಸಮುದಾಯದಲ್ಲಿನ ಸಾಮಾಜಿಕ ಸಂಬಂಧಗಳಾದ ಪರಿಚಿತ–ಅಪರಿಚಿತ, ಬಾಲಕ–ಬಾಲಕಿ, ವ್ಯಾಪಾರಿ–ಗ್ರಾಹಕ, ಪೂಜಾರಿ–ಭಕ್ತ ಇವರುಗಳು ಅವರವರ ಸ್ಥಾನಮಾನಗಳಿಗನುಗುಣವಾಗಿ ಪರಸ್ಪರರನ್ನು ಯಾವ ರೀತಿಯಾಗಿ ಸಂಬೋಧಿಸುತ್ತಾರೆ ಎಂಬುದನ್ನು ನೋಡಲಾಗಿದೆ.

ಬಾಲಕರು ಸಂಬೋಧಿಸುವ ಬಗೆ:

ಪರಿಚಿತ ಬಾಲಕ– ಬಾಲಕರ ನಡುವೆ: ಹೆಸರಿನಿಂದ.

ಪರಿಚಿತ ಬಾಲಕಿ–ಬಾಲಕಿಯರ ನಡುವೆ: ಹೆಸರಿನಿಂದ.

ಪರಿಚಿತ ಬಾಲಕಿ–ಬಾಲಕನಿಗೆ: ಹೆಸರಿನಿಂದ.

ಪರಿಚಿತ ಬಾಲಕ– ಬಾಲಕಿಗೆ: ಹೆಸರಿನಿಂದ.

ಬಾಲಕ, ಬಾಲಕಿಯರು ಪರಸ್ಪರ ಹೆಸರಿನಿಂದ ಸಂಬೋಧಿಸುವರು.

ಮಾಲೀಕ ನೌಕರರಲ್ಲಿ ಸಂಬೋಧನಾ ರೂಪ:

ಮಾಲೀಕ ನೌಕರನಿಗೆ–ಹೆಸರಿನಿಂದ.

ನೌಕರ ಮಾಲೀಕನಿಗೆ–ಅಣ್ಣ/ಗೌಡ್ರು.

ಮಾಲೀಕ ನೌಕರಳಿಗೆ–ಹೆಸರಿನಿಂದ.

ನೌಕರಳು ಮಾಲೀಕನಿಗೆ–ಅಣ್ಣ/ಗೌಡ್ರು.

ಮಾಲೀಕಳು ನೌಕರನಿಗೆ–ಹೆಸರಿನಿಂದ.

ನೌಕರ ಮಾಲೀಕಳಿಗೆ– ಅವ್ವ/ಅಕ್ಕ.

ಮಾಲೀಕಳು ನೌಕರಳಿಗೆ–ಹೆಸರಿನಿಂದ.

ನೌಕರಳು–ಮಾಲೀಕಳಿಗೆ–ಅವ್ವ/ಅಕ್ಕ.

ಚಿಕ್ಕ ಮಕ್ಕಳು ಅಪರಿಚಿತ ಹಿರಿಯರಿಗೆ.

ಸ್ತ್ರೀಯರಿಗೆ– ಅವ್ವಯ್ಯ/ಅವ್ವ/ಅಕ್ಕ/ತಾಯಿ.

ಪುರುಷರಿಗೆ– ತಾತಾ/ ಮಾಮ/ಅಣ್ಣ.

ಚಿಕ್ಕ ಮಕ್ಕಳು ಪರಿಚಿತ ಹಿರಿಯರಿಗೆ:

ಸ್ತ್ರೀಯರಿಗೆ–ಅವ್ವಯ್ಯ/ಅವ್ವ/ಅಕ್ಕ/ತಾಯಿ.

ಪುರುಷರಿಗೆ–ತಾತಾ/ಮಾಮ/ಅಣ್ಣ.

ಜೊತೆಗೆ ಇಲ್ಲಿ ಆಧುನೀಕತೆಯ ಪ್ರಭಾವದಿಂದ ಅಂಕಲ್ (Uncle), ಆಂಟಿ(Aunty)ಎಂಬ ರೂಪವೂ ಇಲ್ಲಿದೆ.

ಅಪರಿಚಿತ ಹಿರಿಯರು ಚಿಕ್ಕ ಮಕ್ಕಳಿಗೆ:

ಗಂಡು ಮಗು–ಪುಟ್ಟ/ ಹೈದ/ ಕೂಸು.

ಹೆಣ್ಣು ಮಗು–ಕೂಸು/ಗೂಡೆ.

ಪರಿಚಿತ ಹಿರಿಯರು ಚಿಕ್ಕ ಮಕ್ಕಳಿಗೆ:

ಗಂಡುಮಗು– ಹೆಸರಿನಿಂದ/ಅಣ್ಣ/ಅಣ್ಣಯ್ಯ/ಪುಟ್ಟ/ಕೂಸು

ಹೆಣ್ಣುಮಗು–ಹೆಸರಿನಿಂದ/ಅಕ್ಕಯ್ಯ/ಕೂಸು.

ಕೊಡಗಿನ ಗೌಡಕನ್ನಡ ಪರಿಸರದಲ್ಲಿ ಚಿಕ್ಕ ಮಕ್ಕಳು ತಮಗೆ ಪರಿಚಯವಿದ್ದ ಹಿರಿಯರನ್ನು ಹಾಗೂ ಅಪರಿಚಿತ ಹಿರಿಯರನ್ನು ಸಂಬೋಧಿಸುವ ರೂಪವು ಒಂದೇ ರೂಪದಲ್ಲಿದೆ. ಹಾಗೆಯೇ ಹಿರಿಯರು ತಮ್ಮ ಪರಿಚಿತ ಹಾಗೂ ಅಪರಿಚಿತರಾದ ಚಿಕ್ಕ ಮಕ್ಕಳನ್ನು ಸಂಬೋಧಿಸುವ ರೂಪವು ಒಂದೇ ರೂಪದಲ್ಲಿರುವುದನ್ನು ಕಾಣಬಹುದು.

ಗೆಳೆಯ ಗೆಳತಿಯರ ನಡುವೆ:

ಗೆಳೆಯ ಗೆಳತಿಗೆ: ಹೆಸರಿನಿಂದ/ನೇ...

ಗೆಳತಿ ಗೆಳೆಯನಿಗೆ: ಹೆಸರಿನಿಂದ/ರಾ...

ಪೂಜಾರಿ ಮತ್ತು ಭಕ್ತರ ನಡುವೆ:

ಭಕ್ತ ಪೂಜಾರಿಗೆ: ಸ್ವಾಮಿ.

ಪೂಜಾರಿ ಭಕ್ತರಿಗೆ: ಹೆಸರಿನಿಂದ/ ಅಣ್ಣ/ ಅಕ್ಕ.

ಕೊಡಗು ಜಿಲ್ಲೆಯ ಗೌಡಕನ್ನಡಿಗರಲ್ಲಿ ಬಳಕೆಯಲ್ಲಿರುವ ಸ್ತ್ರೀ ಪುರುಷರ ಸಂಬೋಧನೆಗೆ ಸಂಬಂಧಿಸಿದ ಕೆಲವು ವಿಶಿಷ್ಟ ರೂಪಗಳನ್ನು ಇಲ್ಲಿ ಗಮನಿಸಬಹುದು.

'ನೇ'... ಮತ್ತು **'ರಾ'**... ಎಂಬ ಸಂಬೋಧನಾ ರೂಪಗಳು.

'ನೇ' : ಸ್ತ್ರೀ ಸಂಬೋಧನಾ ರೂಪ.

'ರಾ' : ಪುರುಷ ಸಂಬೋಧನಾ ರೂಪ.

'ನೇ' ಮತ್ತು 'ರಾ' ಸಂಬೋಧನಾ ರೂಪವು ಗೌಡಕನ್ನಡದ ಪರಿಸರದಲ್ಲಿ ಆಪ್ತರಲ್ಲಿ ಮಾತ್ರ ಬಳಕೆಯಲ್ಲಿದೆ. ಸಮ ವಯಸ್ಕರಲ್ಲಿ, ಹಿರಿಯರು ಕಿರಿಯರನ್ನು ಸಂಬೋಧಿಸುವಾಗ, ಗೆಳೆಯ–ಗೆಳತಿ, ಅಕ್ಕ–ತಂಗಿ, ಅಣ್ಣ–ತಮ್ಮ, ಬಂಧುಗಳಲ್ಲಿ, ಒಂದೇ ವಯಸ್ಸಿನವರು ಇವರೆಲ್ಲರಲ್ಲಿ 'ನೇ' ಸ್ತ್ರೀ ಸಂಬೋಧನಾ ರೂಪ ಹಾಗೂ 'ರಾ' ಪುರುಷ ಸಂಬೋಧನೆಯ ವಿಶಿಷ್ಟ ರೂಪಗಳು ಕಂಡು ಬಂದಿವೆ.

ಉದಾ: 'ನೇ' ಸ್ತ್ರೀ ಸಂಬೋಧನಾ ರೂಪ.

ಏ.. ನೇ : ಏ ಹುಡುಗಿ.

ಬಾನೇ : ಬಾರೆ ಇಲ್ಲಿ.

ಹೋಗುನೇ : ಹೋಗೇ.

ಬಂದಿಯನೇ? : ಬರುತ್ತೀಯೇನೆ?.

ನಾ ಬಾಲೆ ನೇ : ನಾ ಬರುವುದಿಲ್ಲ ಕಣೆ.

'ರಾ' ಪುರುಷ ಸಂಬೋಧನಾ ರೂಪ.

ಬಾರಾ : ಬಾರೋ...

ಪೋಯಿರಾ : ಹೋಗೋಣ ಕಣೋ..

ನಾ ಬನ್ನೆರಾ : ನಾನು ಬರುತ್ತೇನೆ ಕಣೋ.. ಇತ್ಯಾದಿ

ಅಪರಿಚಿತ ಸ್ತ್ರೀ ಪುರುಷರು ಪರಸ್ಪರ:

ಪುರುಷರು ಸ್ತ್ರೀಯರಿಗೆ– ಅಕ್ಕಂದ್‌ರ್

ಪುರುಷರು ಪುರುಷರಿಗೆ– ಅಣ್ಣಂದ್‌ರ್

ಸ್ತ್ರೀಯರು ಪುರುಷರಿಗೆ– ಅಣ್ಣಂದ್‌ರ್

ಸ್ತ್ರೀಯರು ಸ್ತ್ರೀಯರಿಗೆ– ಅಕ್ಕಂದ್‌ರ್

ಅಪರಿಚಿತ ಸ್ತ್ರೀಯರು ಮತ್ತು ಪುರುಷರು ಇವರನ್ನು ಸಂಬೋಧಿಸುವಾಗ ಅಕ್ಕಂದ್‌ರ್ (ಅಕ್ಕಂದಿರು) ಅಣ್ಣಂದ್‌ರ್ (ಅಣ್ಣಂದಿರು) ಎಂದು ಹೇಳುವರು. ಒಬ್ಬರಿಗಿಂತ ಹೆಚ್ಚು ಜನರಿರುವಾಗ ಬಹುವಚನ ರೂಪ ಇರುವುದು ಕಾಣಬಹುದು. ಹಾಗೂ ಅಕ್ಕಂದ್‌ರ್‌ಗ(ಅಕ್ಕಂದಿರುಗಳು), ಅಣ್ಣಂದ್‌ರ್‌ಗ(ಅಣ್ಣಂದಿರುಗಳು) ಎಂಬ ರೂಪವೂ ಇಲ್ಲಿದೆ.

ಮಾರುಕಟ್ಟೆ ಹಾಗೂ ಇತರ ಸ್ಥಳಗಳಲ್ಲಿ:

ಗ್ರಾಹಕ ಸ್ತ್ರೀ ವ್ಯಾಪಾರಿಗೆ–ಏ ಅಮ್ಮ/ ಏಕವಚನದಲ್ಲಿ/ಬಹುವಚನದಲ್ಲಿ.

ಗ್ರಾಹಕ ಪುರುಷ ವ್ಯಾಪಾರಿಗೆ– ಏ ಅಪ್ಪ, ಏಕವಚನದಲ್ಲಿ/ಬಹುವಚನದಲ್ಲಿ

ಕಿರಿಯ ವ್ಯಾಪಾರಿಗೆ–ಏಕವಚನ–ಏಯ್, ಎಷ್ಟಪ್ಪಾ?

ಹಿರಿಯ ವ್ಯಾಪಾರಿಗೆ– ಬಹುವಚನ, ಅಣ್ಣ, ಅಕ್ಕ, ಮೇಡಂ, ಸರ್,

ಅಂಕಲ್, ಆಂಟಿ.

ವ್ಯಾಪಾರಿ ಗ್ರಾಹಕರಿಗೆ– ಅಕ್ಕ/ ಅವ್ವ/ ಅಣ್ಣ/ ಗೌಡ್ರು/ ಸರ್/ ಮೇಡಂ.

ಗ್ರಾಹಕರನ್ನು ವ್ಯಾಪಾರಿಯು ಗೌರವದಿಂದ ಅಕ್ಕ, ಅಣ್ಣ, ಗೌಡ್ರು, ಅವ್ವ ಎಂದು ಸಂಬೋಧಿಸಿದರೆ, ಗ್ರಾಹಕನು ವ್ಯಾಪಾರಿಯನ್ನು ಏಕವಚನದಲ್ಲಿ ಮತ್ತು ಬಹುವಚನದಲ್ಲಿ ಸಂಬೋಧಿಸುವರು. ವ್ಯಾಪಾರಿಯು ಪರಿಚಯದವರಾದಲ್ಲಿ 'ಅಣ್ಣ' ಹೆಸರಿನಿಂದ ಗೌರವದಿಂದಲೂ ಸಂಬೋಧಿಸುವರು.

ಪುರುಷ ಅಪರಿಚಿತ ಸ್ತ್ರೀಯಲ್ಲಿ ಕೋರಿಕೆ ಆಗ್ರಹ: ಓ ಅಕ್ಕ/ ಮೇಡಂ

ಪುರುಷ ಪರಿಚಿತ ಸ್ತ್ರೀಯಲ್ಲಿ ಕೋರಿಕೆ ಆಗ್ರಹ: ಓ ಅಕ್ಕ/ ಹೆಸರಿನಿಂದ.

ಸ್ತ್ರೀ ಅಪರಿಚಿತ ಪುರುಷನಲ್ಲಿ ಕೋರಿಕೆ ಆಗ್ರಹ: ಓ ಅಣ್ಣ/ಸರ್.

ಸ್ತ್ರೀ ಅಪರಿಚಿತ ಪುರುಷನಲ್ಲಿ ಕೋರಿಕೆ ಆಗ್ರಹ: ಓ ಅಣ್ಣ/ಹೆಸರಿನಿಂದ.

೪.೫.೭. ರಕ್ತ ಸಂಬಂಧಿಗಳಲ್ಲದವರ ನಡುವೆ ಸಂಬೋಧನೆ.

ಸ್ತ್ರೀಯರು ಸಂಬೋಧಿಸುವ ಬಗೆ:

ಪರಿಚಿತ ಹಿರಿಯ ಗಂಡಸರಿಗೆ: ಅಣ್ಣ.

ಪರಿಚಿತ ಹಿರಿಯ ಹೆಂಗಸರಿಗೆ: ಅಕ್ಕ/ತಾಯಿ.

ಅಪರಿಚಿತ ಹಿರಿಯ ಗಂಡಸರಿಗೆ: ಅಣ್ಣ.

ಅಪರಿಚಿತ ಹಿರಿಯ ಹೆಂಗರಿಗೆ: ಅಕ್ಕ.

ಅಪರಿಚಿತ ಕಿರಿಯ ಗಂಡಸರಿಗೆ: ಬಾ/ಹೋಗು/ಹೆಸರಿನಿಂದ.

ಅಪರಿಚಿತ ಕಿರಿಯ ಹೆಂಗಸರಿಗೆ: ಬಾ/ಹೋಗು/ಹೆಸರಿನಿಂದ.

ಪರಿಚಿತ ಸಮ ವಯಸ್ಸು ಗಂಡಸು: ಅಣ್ಣ/ಹೆಸರಿನಿಂದ.

ಪರಿಚಿತ ಸಮ ವಯಸ್ಸು ಹೆಂಗಸು: ಅಕ್ಕ/ಹೆಸರಿನಿಂದ.

ಅಪರಿಚಿತ ಸಮವಯಸ್ಸು ಗಂಡಸು: ನೀವು/ ಹೋಗಿ/ಬನ್ನಿ.

ಅಪರಿಚಿತ ಸಮವಯಸ್ಸು ಹೆಂಗಸು: ನೀವು/ಹೋಗಿ/ಬನ್ನಿ.

ಪುರುಷ ಸಂಬೋಧಿಸುವ ಬಗೆ:

ಪರಿಚಿತ ಹಿರಿಯ ಗಂಡಸರಿಗೆ: ಅಣ್ಣ

ಪರಿಚಿತ ಹಿರಿಯ ಹೆಂಗಸರಿಗೆ: ಅಕ್ಕ.

ಅಪರಿಚಿತ ಹಿರಿಯ ಗಂಡಸರಿಗೆ: ಅಣ್ಣ/ಬನ್ನಿ/ಕೇಳಿ.

ಅಪರಿಚಿತ ಹಿರಿಯ ಹೆಂಗಸರಿಗೆ: ಅಕ್ಕ/ಬನ್ನಿ/ಕೇಳಿ.

ಪರಿಚಿತ ಸಮವಯಸ್ಸು ಗಂಡಸು: ಅಣ್ಣ.

ಪರಿಚಿತ ಸಮವಯಸ್ಸು ಹೆಂಗಸು: ಅಕ್ಕ.

ಅಪರಿಚಿತ ಸಮವಯಸ್ಸು ಗಂಡಸು:ಸಾರ್/ನೀವು/ಬನ್ನಿ/ಹೋಗಿ.(ಬ.ವ)

ಅಪರಿಚಿತ ಸಮ ವಯಸ್ಸು ಹೆಂಗಸು: ಮೇಡಂ/ನೀವು/ಬನ್ನಿ/ಹೋಗಿ.

ಪರಿಚಿತ ಕಿರಿಯ ಗಂಡಸರಿಗೆ: ಹೆಸರಿನಿಂದ.

ಪರಿಚಿತ ಕಿರಿಯ ಹೆಂಗಸರಿಗೆ: ಹೆಸರಿನಿಂದ.

ಅಪರಿಚಿತ ಕಿರಿಯ ಗಂಡಸರಿಗೆ: ಏಕವಚನದಲ್ಲಿ ಬಾ/ಹೋಗು/ಹೆಸರಿನಿಂದ.

ಅಪರಿಚಿತ ಕಿರಿಯ ಹೆಂಗಸರಿಗೆ: ಏಕವಚನದಲ್ಲಿ, ಹೆಸರಿನಿಂದ, ಬಾ/ಹೋಗು.

ಕೊಡಗು ಗೌಡ ಸಮುದಾಯದಲ್ಲಿ ಸ್ತ್ರೀ ಪುರುಷರು ಪರಿಚಿತರನ್ನು ಅಕ್ಕ, ಅಣ್ಣ ಎಂದು ಸಂಬೋಧಿಸಿದರೆ, ಅಪರಿಚಿತರನ್ನು ಹಿರಿಯರು ಅಥವಾ ಸಮವಯಸ್ಕರಾದರೆ, ಬಹುವಚನದಲ್ಲಿ ಗೌರವದಿಂದ ಮಾತನಾಡಿಸುವರು. ಕಿರಿಯರಾದಲ್ಲಿ ಏಕವಚನದಲ್ಲಿ ಅಥವಾ ಹೆಸರಿನಿಂದ ಸಂಬೋಧಿಸುವರು.

ಕೊಡಗಿನ ಗೌಡಸಮುದಾಯದ ಪರಿಸರದಲ್ಲಿ 'ಏ..' ಮತ್ತು 'ಓ..' ಎಂಬ ರೂಪಗಳಿವೆ. 'ಏ' ರೂಪವು ಕಿರಿಯರನ್ನು ಸಂಬೋಧಿಸುವಾಗ ಬಳಕೆಯಾಗುತ್ತದೆ. 'ಓ' ರೂಪವು ಹಿರಿಯರನ್ನು ಸಂಬೋಧಿಸುವಾಗ ಬಳಕೆಯಾಗುತ್ತದೆ.

ಉದಾ: **ಹಿರಿಯರು ಕಿರಿಯರನ್ನು ಸಂಬೋಧಿಸುವಾಗ,**

ಏ ಗೂಡೆ(ಏಯ್ ಹುಡುಗಿ)

ಏ ಹೈದ(ಏಯ್ ಹುಡುಗ)

ಏ ರಾಜು(ಎಯ್ ರಾಜು)

ಏ ಸೀತೆ(ಏಯ್ ಸೀತೆ) ಇತ್ಯಾದಿ.

ಕಿರಿಯರು ಹಿರಿಯರನ್ನು ಸಂಬೋಧಿಸುವಾಗ.

ಓ ಅಕ್ಕ.

ಓ ಅಣ್ಣ.

ಓ ಮಾವ.

ಓ ಬೋಜಪ್ಪ ಇತ್ಯಾದಿ.

೪.೫.೮. ಕೌಟುಂಬಿಕ ಅವಳಿ ಸಂಬಂಧಗಳಲ್ಲಿ ಸಂಬೋಧನೆಗಳು:

ತಂದೆ/ತಾಯಿ–ಮಗ/ಮಗಳು:

ಕೊಡಗಿನ ಗೌಡಸಮುದಾಯದಲ್ಲಿ ಸಾಮಾನ್ಯವಾಗಿ ಹೆತ್ತವರಿಗೆ 'ಅಪ್ಪ', 'ಅವ್ವ' ಎಂಬ ರೂಪಗಳಿಂದ ಕರೆಯುತ್ತಾರೆ. ಅಲ್ಲದೆ ಅವು ಬೇರೆ ಸಂದರ್ಭದಲ್ಲಿಯೂ ಬಳಕೆಯಾಗುತ್ತವೆ.

ಉದಾ: ಗಂಡಸಿನ ಹೆಸರಿನ ಕೊನೆಯಲ್ಲಿ ವಾರ್ಗಿಕವಾಗಿ (ಅಪ್ಪ) ಸೇರುತ್ತದೆ.(ಕಾರ್ಯಪ್ಪ, ಮಾದಪ್ಪ)

ಹೆಂಗಸಿನ ಹೆಸರಿನ ಕೊನೆಯಲ್ಲಿ ಸೇರುತ್ತದೆ. ಸೀತವ್ವ, ಬೆಳ್ಯವ್ವ ಮತ್ತು ಹಿರಿಯರು ಕಿರಿಯರನ್ನು ವಾತ್ಸಲ್ಯದಿಂದ ಸಂಬೋಧಿಸುವಾಗಲು ಬಳಸುವುದುಂಟು.

ಉದಾ: ಬಾಪ್ಪ, ಬಾವ್ವ, ಹೋಗವ್ವ, ಪೋಯಿವ್ವ, ಹೋನೋಪ್ಪ. ಇತ್ಯಾದಿ

ಹಾಗೆಯೇ ಇಲ್ಲಿ 'ಅಮ್ಮ' ರೂಪವೂ ಸಂಬೋಧನಾ ರೂಪವಾಗಿ ಕಂಡುಬಂದಿದೆ. ಜೊತೆಗೆ ಆಂಗ್ಲಭಾಷೆಯ ಪ್ರಭಾವ ಹೆಚ್ಚಾಗಿರುವುದರಿಂದ 'ತಂದೆ', 'ತಾಯಿ'ಯರಿಗೆ 'ಡ್ಯಾಡಿ', 'ಮಮ್ಮಿ' ಎಂಬ ರೂಪಗಳ ಬಳಕೆ ಇಲ್ಲಿ ಅಧಿಕವಾಗಿವೆ.

ಹೆಂಡತಿ ಗಂಡನನ್ನು, ಗಂಡ ಹೆಂಡತಿ : ಭಾಷಾ ಬಳಕೆಯಲ್ಲಿ ಗಂಡ ಹೆಂಡಿರು ಪರಸ್ಪರ ಮಾತನಾಡುವಾಗ ಹೆಂಡತಿ ಗಂಡನ ಹೆಸರನ್ನು ಕರೆಯುವುದಿಲ್ಲ. ಗಂಡನ ಹೆಸರನ್ನು ಕರೆದರೆ ಆಯುಷ್ಯ ಕಡಿಮೆಯಾಗುತ್ತದೆಂಬ ನಂಬಿಕೆಯಿದೆ. ಈ ನಂಬಿಕೆಯು ಕೊಡಗು ಗೌಡ ಸಮುದಾಯದಲ್ಲಿ ಹಿಂದಿನ ಕಾಲದಿಂದಲೂ ನಡೆದುಬಂದಿದೆ. ಇಲ್ಲಿ ಹೆಂಡತಿಯು ಗಂಡನ ಬಗೆಗೆ ಹೇಳುವಾಗ 'ಇವು' ಎಂದು ಹೇಳುತ್ತಾಳೆ. 'ಇವು' ಎಂದರೆ 'ಇವರು' ಎಂದರ್ಥ. ಇದರೊಂದಿಗೆ ಇತ್ತೀಚಿನ ತಲೆಮಾರಿನಲ್ಲಿ ಆಧುನೀಕತೆಯ ಪ್ರಭಾವದಿಂದಾಗಿ ಗಂಡನ ಹೆಸರನ್ನೇ ಹಚ್ಚಿ ಸಂಬೋಧಿಸುವುದು ಇಲ್ಲಿ ಕಂಡುಬಂದಿದೆ. ಮತ್ತು ಮಕ್ಕಳೊಂದಿಗೆ ಮಕ್ಕಳು ಸಂಬೋಧಿಸುವಂತೆಯೇ ಹೇಳುವರು(ಡ್ಯಾಡಿ, ಅಪ್ಪ, ಪೊಪ್ಪ).

ಗಂಡನ ತಾಯಿ ಹಾಗೂ ತಂದೆಯ ಬಳಿಯಲ್ಲಿ ಗಂಡನ ಬಗೆಗೆ ಹೇಳುವಾಗ ಅವರು ಸಂಬೋಧಿಸುವಂತೆಯೇ 'ಅಣ್ಣ' ಎಂದು ಅಥವಾ 'ಇವು'(ಇವರು) ಎಂದು ಹೇಳುವರು.

ಗಂಡನು ಹೆಂಡತಿಯ ಬಗೆಗೆ ಮಾತನಾಡುವಾಗ ಹೆಸರಿನಿಂದ ಅಥವಾ 'ನಮ್ಮೋವ್‌ಳ್' ಎಂದು ಹೇಳುವರು ಸಂಬೋಧಿಸುವಾಗ ಹೆಸರಿನಿಂದ ಕರೆಯುವರು. ಪರಿಚಯಿಸುವಾಗ 'ಹೆಣ್ಣ್' (ಹೆಂಡತಿ) ಎಂದು ಹೇಳುವರು.

ಉದಾ: ಹೆಂಡತಿ ಗಂಡನನ್ನು ಕುರಿತು ಬೇರೆಯವರಿಗೆ ಹೇಳುವಾಗ

'ಪೊಪ್ಪ'... ಬನ್ನಿ ಇಲ್ಲಿ...

'ಇವು' ಇಲ್ಲೆ ತೋಟಕೋಗ್ಯೊಳೊ.

(ಇವರು ಇಲ್ಲಿಯೇ ತೋಟಕ್ಕೆ ಹೋಗಿರುವರು)

ನಂಗೆ ಗೊತ್ಲೆ, ನೀವು 'ಅಣ್ಣ'ನೊಟ್ಟಿಗೆ ಹೇಳಿ.

(ನನಗೆ ಗೊತ್ತಿಲ್ಲ, ನೀವು ಪತಿಯ ಜೊತೆಯಲ್ಲಿ ಹೇಳಿ)

ಗಂಡ ಹೆಂಡತಿಯನ್ನು:

ನಂಗೆ ವಿಸ್ಯ ಗೊತ್ತಾತ್, 'ನಮ್ಮೋವ್‌ಳ್ ಹೇಳ್ತ್.

(ನನಗೆ ವಿಷಯ ಗೊತ್ತಾಯಿತು, ನಮ್ಮವಳು ಹೇಳಿದಳು)

ಹೆಣ್ಣ್ ಮಕ್ಕ ಮನೆಗೆ ಹೋದೊ.

(ಹೆಂಡತಿ ಮಕ್ಕಳು ಮನೆಗೆ ಹೋದರು)

ರಾಣೀ... ಕುಡಿಯಕೆ ತಾಂಬಾ.

(ರಾಣೀ... ಕುಡಿಯಲು ತೆಗೆದುಕೊಂಡು ಬಾ) ಇತ್ಯಾದಿ.

ಇಂಗ್ಲೀಷ್ ಭಾಷಾ ಪ್ರಭಾವದಿಂದಾಗಿ ಇಲ್ಲಿ 'ಮಿಸಸ್', 'ಹಸ್‌ಬೆಂಡ್' ಎಂಬ ರೂಪಗಳು ಇಂದು ಅತೀ ಹೆಚ್ಚಾಗಿ ಬಳಕೆಯಾಗುತ್ತಿದೆ.

ಸಹೋದರ-ಸಹೋದರಿಯರು:

ಸಾಮಾನ್ಯವಾಗಿ ಒಡಹುಟ್ಟಿದವರಲ್ಲಿ ಹಿರಿಯವನು 'ಅಣ್ಣನಾಗುತ್ತಾನೆ'. ಹಿರಿಯವಳು 'ಅಕ್ಕ'ಳಾಗುತ್ತಾಳೆ. ಕಿರಿಯವನು ತಮ್ಮನಾಗುತ್ತಾನೆ, ಕಿರಿಯವಳು ತಂಗಿಯಾಗುತ್ತಾಳೆ. ಕೊಡಗಿನ ಗೌಡರ ಪರಿಸರದಲ್ಲಿ ಅಣ್ಣನನ್ನು 'ಅಣ್ಣ', 'ಅಣ್ಣಯ್ಯ' ಎಂದು ಸಂಬೋಧಿಸುವರು.

ಒಡಹುಟ್ಟಿದವರಲ್ಲಿ ಕಿರಿಯನಾದವನನ್ನು ಹೆಸರಿನಿಂದ ಸಂಬೋಧಿಸುವರು. ಮನೆಯ ಒಬ್ಬನೇ ಮಗನಾಗಿದ್ದ ಸಂದರ್ಭದಲ್ಲಿ ಪ್ರೀತಿಯಿಂದ ಎಲ್ಲರೂ 'ಅಣ್ಣಯ್ಯ' ಎಂದು ಸಂಬೋಧಿಸುವುದೂ ಇಲ್ಲಿ ಕಂಡು ಬಂದಿದೆ.

ಹಿರಿಯ ಒಡಹುಟ್ಟಿದವಳು 'ಅಕ್ಕ'. ಈಕೆಯನ್ನು 'ಅಕ್ಕಯ್ಯ' ಎಂದು ಕರೆಯುವರು. ಒಡಹುಟ್ಟಿದ ಕಿರಿಯವಳು 'ತಂಗೆ' ಎನಿಸಿಕೊಳ್ಳುವಳು. ಈಕೆಯನ್ನು ಹೆಸರಿನಿಂದ ಮತ್ತು ಮನೆಯವವರೆಲ್ಲರೂ ಪ್ರೀತಿಯಿಂದ 'ಅಕ್ಕಯ್ಯ' ಎಂದೂ ಸಂಬೋಧಿಸುವರು.

ಉದಾ: ಅಣ್ಣಯ್ಯ: ಬೋಜಣ್ಣಯ್ಯ ಬಾತ್.

(ಎರಡನೇ ಅಣ್ಣ ಬಂದನು)

ಬೋಜಣ್ಣ ಎಂಬುದು ಎರಡನೇ ಅಣ್ಣನಿಗೆ ಮಾತ್ರ ವಿಶೇಷವಾಗಿ ಬಳಸಲಾಗುತ್ತದೆ. ಮೂರನೇ ಅಣ್ಣನು ಕೊನೆಯವನಾದಲ್ಲಿ ಆತನನ್ನು ಕುಞಣ್ಣ ಎಂದು ಕರೆಯಲಾಗುತ್ತದೆ. ಅಥವಾ ಕೊನೆಯ ಮತ್ತೊಬ್ಬ ಅಣ್ಣ ಇದ್ದಲ್ಲಿ ಮೂರನೇ ಅಣ್ಣನಿಗೆ ವಿಶೇಷ ಸಂಬೋಧನಾ ರೂಪವಿಲ್ಲ. ಆತನ ಹೆಸರಿನೊಂದಿಗೆ ಅಣ್ಣ ಎಂದು ಸೇರಿಸಿ ಕರೆಯಲಾಗುತ್ತದೆ.

ಉದಾ: ನನ್ನ ಅಣ್ಣಯ್ಯ ಮನೆಲಿ ಉಟ್ಟು.

(ನನ್ನ ಅಣ್ಣ ಮನೆಯಲ್ಲಿದ್ದಾನೆ)

ಅಕ್ಕಯ್ಯ: ಹಿರಿಯ ಸಹೋದರಿ ಅಥವಾ ಕಿರಿಯ ಸಹೋದರಿ.

ಬಾ ಅಕ್ಕಯ್ಯ ದನ ಹೊಡ್ದ್ ಬರ್‌ನೊ.

(ಬಾ ಅಕ್ಕ ದನ ಹೊಡೆದು ಬರೋಣ)

ಅಕ್ಕಯ್ಯಾ.. ಅವ್ವಂಗೇಳ್ ಅಪ್ಪ ಕರ್ದದೆತ.

(ಅಕ್ಕ... ಅವ್ವನಿಗೆ ಹೇಳು ಅಪ್ಪ ಕರೆಯುತ್ತಾರೆಂದು)

ಕಿರಿಯ ಸಹೋದರನನ್ನು:

ನಾನ್ ಅಣ್ಣಯ್ಯನ ಕರ್ಕಂಡ್ ಹೋನೆ.

(ನಾನು ಅಣ್ಣಯ್ಯನನ್ನು ಕರೆದುಕೊಂಡು ಹೋಗುತ್ತೇನೆ)

ಇದು ವಿಶೇಷ ಸಂದರ್ಭಗಳಲ್ಲಿ ಇಲ್ಲವಾದಲ್ಲಿ ತಮ್ಮನನ್ನು ಹೆಸರಿನಿಂದಲೇ ಸಂಬೋಧಿಸಲಾಗುತ್ತದೆ.

ಭಾವ-ಮೈದುನ:

ಕೊಡಗಿನ ಗೌಡಕನ್ನಡದ ಪರಿಸರದಲ್ಲಿ ಅಕ್ಕನ ಗಂಡ, ಗಂಡನ ಅಣ್ಣ, ಅಕ್ಕನ ಗಂಡನ ಸಹೋದರರು, ತಂದೆಯ ಸಹೋದರಿಯ ಮಗ ವಯಸ್ಸಿನಲ್ಲಿ ಹಿರಿಯವನು, ತಾಯಿಯ ಸಹೋದರನ ಮಗ ವಯಸ್ಸಿನಲ್ಲಿ ಹಿರಿಯವನು 'ಬಾವ' ಎನ್ನಿಸಿಕೊಳ್ಳುವನು. ಆತನನ್ನು 'ಬಾವ' ಎಂದು ಸಂಬೋಧಿಸುವರು.

ಉದಾ: ೧. ಇವು ನನ್ನ ಬಾವ. (ಇವರು ನನ್ನ ಬಾವ)

೨. ಬಾವತೇಳ್‌ರೆ? (ಬಾವ ಎಂದರೆ?)

೧. ನನ್ನ ಅಪ್ಪನ ಅಕ್ಕನ ಮಜ.

(ನನ್ನ ತಂದೆಯ ಅಕ್ಕನ ಮಗ).

ನನ್ನ ಅಕ್ಕನ ಗಂಡ/ ಇವರ ಅಣ್ಣ.

ಸಂಬಂಧದಲ್ಲಿ ಗಂಡನ ತಮ್ಮ, ಅಕ್ಕನ ಗಂಡನ ತಮ್ಮ, ಅಕ್ಕನ ಗಂಡನ ತಮ್ಮ, ತಂದೆಯ ಸಹೋದರಿಯ ಕಿರಿಯ ಮಗ, ತಾಯಿಯ ಸಹೋದರನ ಕಿರಿಯ ಮಗ 'ಮೈದುನ' ನಾಗುತ್ತಾನೆ. ವಯಸ್ಸಿನಲ್ಲಿ ಬಹಳ ಕಿರಿಯರಾಗಿದ್ದಲ್ಲಿ ಹೆಸರಿನಿಂದ ಇವರನ್ನು ಕರೆಯುವರು. ಆದರೆ, ಗಂಡನ ತಮ್ಮ ಮತ್ತು ಅಕ್ಕನ ಗಂಡನ ತಮ್ಮ ಸಮ ವಯಸ್ಸಿನವರು, ಹಿರಿಯರು ಅಥವಾ ವಯಸ್ಸಿನಲ್ಲಿ ಸ್ವಲ್ಪ ಕಿರಿಯರಾಗಿದ್ದಲ್ಲಿ ಅವರನ್ನು 'ಬಾವ' ಎಂದೇ ಸಂಬೋಧಿಸುವರು.

ಅತ್ತಿಗೆ–ನಾದಿನಿ:

ಅಣ್ಣನ ಹೆಂಡತಿ, ತಾಯಿಯ ಸಹೋದರನ ಹಿರಿಯ ಮಗಳು ವಯಸ್ಸಿನಲ್ಲಿ ತಂದೆಯ ಸಹೋದರಿಯ ವಯಸ್ಸಿನಲ್ಲಿ ಹಿರಿಯ ಮಗಳು, ಅಕ್ಕನ ಗಂಡನ ಹಿರಿಯ ಸಹೋದರಿ, ಗಂಡನ ಹಿರಿಯ ಸಹೋದರಿ ಇಲ್ಲಿ 'ಅತ್ತಿಗೆ'ಯಾಗುತ್ತಾಳೆ. ಮತ್ತು 'ಅತ್ತಿಗೆ' ಎಂದೇ ಕರೆಯಲ್ಪಡುತ್ತಾಳೆ. ಹಾಗೆಯೇ ಗಂಡನ ತಂಗಿ, ತಂದೆಯ ಸಹೋದರಿಯ ಕಿರಿಯ ಮಗಳು, ತಾಯಿಯ ಸಹೋದರನ ಕಿರಿಯ ಮಗಳು, ಅತ್ತಿಗೆಯ ತಂಗಿ (ಅಣ್ಣನ ಹೆಂಡತಿಯ ತಂಗಿ), ಹೆಂಡತಿಯ ತಂಗಿ 'ನಾದಿನಿ'ಯರಾಗುತ್ತಾರೆ. ಆದರೆ, ಇವರು ಹೆಸರಿನಿಂದ ಕರೆಯಲ್ಪಡುತ್ತಾರೆ. ಆದರೆ, ಗಂಡನ ತಂಗಿ ಹಾಗೂ ಅಣ್ಣನ ಹೆಂಡತಿಯ ತಂಗಿಯರನ್ನು 'ಅತ್ತಿಗೆ' ಎಂದು ಸಂಬೋಧಿಸುವರು. ವಯಸ್ಸಿನಲ್ಲಿ ತಮಗೆ ಬಹಳ ಕಿರಿಯವರಾದಲ್ಲಿ ಮಾತ್ರ ಹೆಸರಿನಿಂದ ಸಂಬೋಧಿಸುವರು.

ಉದಾ: ಇವು ಇಬ್ಬರೂ ನನ್ನ ಅತ್ತಿಗೆಕ, ಒಂದು ನನ್ನ ಅಣ್ಣನ ಹೆಣ್ಣ್, ಇನ್ನೊಂದು ಅವರ ತಂಗೆ. (ಇವರಿಬ್ಬರೂ ನನ್ನ ಅತ್ತಿಗೆಯರು, ಒಬ್ಬರು ನನ್ನ ಅಣ್ಣನ ಹೆಂಡತಿ, ಇನ್ನೊಬ್ಬರು ಗಂಡನ ತಂಗಿ) ಇವು ನನ್ನ ದೊಡ್ಡ ಅತ್ತಿಗೆ, ಇವು ಸಣ್ಣ ಅತ್ತಿಗೆ, ಇವರ ತಂಗೆ. (ಇವರು ನನ್ನ ಹಿರಿ ಅತ್ತಿಗೆ, ಇವರು ಕಿರಿ ಅತ್ತಿಗೆ ಇವರ ತಂಗಿ (ಗಂಡನ ತಂಗಿ)

ಸಡ್ಡ್‌ಗ (ಷಡ್ಡಕ):

ಹೆಂಡತಿಯ ಸಹೋದರಿಯ ಗಂಡನಿಗೆ ಈ ರೂಪ ಬಳಕೆಯಲ್ಲಿದೆ. ಈ ಬಂಧುಸೂಚಕವು ಸಂಬೋಧನೆಯಲ್ಲಿ ಬಳಕೆಯಾಗುವುದಿಲ್ಲ. ಇನ್ನೊಬ್ಬರಿಗೆ ಪರಿಚಯಿಸುವಾಗ ಮಾತ್ರ ಬಳಕೆಯಾಗುತ್ತದೆ.

ಉದಾ: ನನ್ನ ಇಬ್ಬೊರು ಸಡ್ಡ್‌ಗರೂ ಮನೇಲಿಲ್ಲೆ, ಹೊರಗೆ ಇರ್ರು. (ನನ್ನ ಇಬ್ಬರೂ ಷಡ್ಡಕರೂ ಹೊರಗಡೆ ನೌಕರಿಯಲ್ಲಿದ್ದಾರೆ)

· ಸಂಬೋಧನೆಯಲ್ಲಿ ಹಿರಿಯರನ್ನು 'ಅಣ್ಣ' ಎಂದು, ಕಿರಿಯರನ್ನು ಹೆಸರಿನಿಂದ ಸಂಬೋಧಿಸುವರು. ಇಂಗ್ಲೀಷ್ ಭಾಷಾ ಪ್ರಭಾವದಿಂದ 'ಕೋ ಬ್ರದರ್' ಪದ ಹೆಚ್ಚು ಬಳಕೆಯಲ್ಲಿದೆ. ಸಾಮಾನ್ಯವಾಗಿ ಎಲ್ಲಾ ಭಾಷೆಯ ಬಂಧುಸೂಚಕಗಳ ಮೇಲೆ ಇಂಗ್ಲೀಶ್ ಬಂಧುಸೂಚಕ ಪದಗಳ ಪ್ರಭಾವ ಆಗಿರುತ್ತದೆ. ಕೊಡಗಿನ ಗೌಡಕನ್ನಡದ ಬಂಧುಸೂಚಕ ಪದಗಳು ಮತ್ತು ಸಂಬೋಧನಾ ರೂಪಗಳು ಇದಕ್ಕೆ ಹೊರತಾಗಿಲ್ಲ. ಇವುಗಳ ಮೇಲೆಯೂ ಇಂಗ್ಲೀಶ್ ಬಂಧುಸೂಚಕಗಳ ಪ್ರಭಾವ ಸಾಕಷ್ಟು ಆಗಿರುವುದು ಕಂಡುಬಂದಿದೆ.

ಉದಾ:	**ಇಂಗ್ಲೀಶ್**	**ಗೌಡಕನ್ನಡ.**
	ಮಮ್ಮಿ	ಅವ್ವ/ಅಮ್ಮ.
	ಡ್ಯಾಡಿ	ಅಪ್ಪ.
	ಆಂಟಿ	ಬೋಜವ್ವ/ಕುಞವ್ವ
	ಅಂಕಲ್	ಚಿಕ್ಕಯ್ಯ/ಬೋಜಪ್ಪ/ಕುಞಪ್ಪ.
	ಫಾದರ್–ಇನ್–ಲಾ	ಮಾವ.
	ಮದರ್–ಇನ್–ಲಾ	ಅತ್ತೆ.
	ಸನ್–ಇನ್–ಲಾ	ಅಳಿಯ.
	ಡಾಟರ್–ಇನ್–ಲಾ	ಸೊಸೆ.
	ಕೋ ಬ್ರದರ್	ಅಣ್ಣ (ಸಹಸಹೋದರ) (ಸಡ್ಡ್ಗ)
	ಕೋ ಸಿಸ್ಟರ್	ಅಕ್ಕ. ಇತ್ಯಾದಿ.

ಇಂತಹ ಇಂಗ್ಲೀಶ್ ಬಂಧು ಸೂಚಕ ಪದಗಳು ಗೌಡಕನ್ನಡದ ಬಂಧುಸೂಚಕ ಪದಗಳ ಮೇಲೆ ಪ್ರಭಾವ ಬೀರಿರುವುದು ಮಾತ್ರವಲ್ಲದೆ, ಇಂಗ್ಲೀಶ್ ಮತ್ತು ಗೌಡಕನ್ನಡಿಗರ ಬಂಧುಸೂಚಕ ಪದಗಳು ಸೇರಿ ಇವರಲ್ಲಿ ಕೆಲವು ಸಂಬೋಧನಾ ರೂಪಗಳಾಗಿವೆ. ಉದಾಹರಣೆಗೆ

ಉದಾ:	**ಗೌ.ಕ**	**ಇಂಗ್ಲೀಶ್**	**ಗೌ.ಕ**
	ಬೋಜಿ	ಆಂಟಿ	ಬೋಜಿ ಆಂಟಿ.
	ಬೋಜಿ	ಅಂಕಲ್	ಬೋಜಿ ಅಂಕಲ್.
	ಕುಞ	ಆಂಟಿ	ಕುಞ ಆಂಟಿ.
	ಕುಞ	ಅಂಕಲ್	ಕುಞ ಅಂಕಲ್

ಅನ್ಯಭಾಷೆಯ ಇಂತಹ ಪದಗಳು ಸಂಸ್ಕೃತಿಯ ಬದಲಾವಣೆಯ ಲಕ್ಷಣಗಳಾದರೂ ಅವುಗಳ ಬಳಕೆಗೆ, ಭಾಷಾ ಬೆಳವಣಿಗೆಯ ದೃಷ್ಟಿಯುಳ್ಳ ಸ್ವಭಾಷಿಕರ ವಿರೋಧ, ಪ್ರತಿಭಟನೆಯೂ ಕೊಡಗಿನಲ್ಲಿದೆ.

ಆಧುನಿಕ ಕಾಲದಲ್ಲಿ ಕನ್ನಡವು ಇಂಗ್ಲೀಶಿನಿಂದ ಸ್ವೀಕರಿಸಿರುವ ಪದಗಳನ್ನು ನೋಡಿದರೆ ಇಂಗ್ಲೀಶ್ ಆಧುನಿಕ ಸಂಸ್ಕೃತಿಯ ಹೆಬ್ಬಾಗಿಲಾಗಿ ಪರಿಣಮಿಸಿರುವುದನ್ನು ಗುರುತಿಸಬಹುದು. ಪ್ರತಿಷ್ಠೆ ಮತ್ತು ಆವಶ್ಯಕತೆ ಇದಕ್ಕೆ ಮುಖ್ಯ ಕಾರಣಗಳಾಗಿವೆ. ಉಚ್ಚಾರಣೆ ಮತ್ತು ಬಳಕೆ ಈ ಎರಡು ಸನ್ನಿವೇಶಗಳಲ್ಲಿಯೂ ಇಂಗ್ಲೀಶ್ ಬಂಧುಸೂಚಕಗಳ ಪ್ರಭಾವ ಕನ್ನಡದ ಮೇಲಾಗಿದೆ.

ಓರಗಿತ್ತಿ:

ಸಾಮಾನ್ಯವಾಗಿ ಗಂಡನ ಸಹೋದರನ ಹೆಂಡತಿಯನ್ನು ಓರಗಿತ್ತಿ ಎನ್ನುವರು. ಕೊಡಗು ಗೌಡ ಸಮುದಾಯದಲ್ಲಿ ಈ ಸಂಬಂಧ ಸೂಚಕ ಪದ ಇಲ್ಲ. ಇಲ್ಲಿ 'ಅಕ್ಕ', 'ತಂಗಿ' ಎಂದೇ ಹೇಳಲಾಗುತ್ತದೆ. ಹಿರಿಯವರನ್ನು 'ಅಕ್ಕ' ಎಂದೂ ಕಿರಿಯವರನ್ನು ಹೆಸರಿನಿಂದ ಸಂಬೋಧಿಸಲಾಗುತ್ತದೆ.

ಉದಾ: ಇವು ನನ್ನ ಅಕ್ಕ, ಇವರ ಅಣ್ಣನ ಹೆಣ್ಣ್.

(ಇವರು ನನ್ನ ಅಕ್ಕ, ಇವರ (ಗಂಡನ) ಅಣ್ಣನ ಹೆಂಡತಿ).

ಶಿಕ್ಷಣ ಪಡೆದವರಲ್ಲಿ ಇಂಗ್ಲೀಷಿನ 'ಕೋ ಸಿಸ್ಟರ್' ಪದ ಹೆಚ್ಚು ಬಳಕೆಯಾಗುತ್ತದೆ.

ಕೊಡಗಿನ ಗೌಡರಲ್ಲಿ ಚಾಮಿಪ್ಪ/ಚಾಂಪ(ಕುಟುಂಬದ ಹಿರಿಯ), ಚಾಮಿವ್ವ (ಕುಟುಂಬದ ಹಿರಿಯ ಸ್ತ್ರೀ) ಎಂಬ ರೂಪಗಳಿವೆ. ಆದರೆ ಇಂದು ಈ ರೂಪಗಳು ಬಳಕೆಯಲಿಲ್ಲ. ಇಂದು ಈ ರೂಪಗಳು ಬದಲಾಗಿ ಇಂದಿನ ತಲೆಮಾರಿನಲ್ಲಿ 'ತಾತಾ' ಎಂದೇ ಸಂಬೋಧಿಸಲಾಗುತ್ತದೆ. 'ಚಾಮೆವ್ವ' 'ಅವ್ವ' ಎಂದು ಪರಿವರ್ತನೆಯಾಗಿದೆ.

ಕೊಡಗಿನ ಗೌಡಕನ್ನಡದಲ್ಲಿರುವ ಸಂಬಂಧವಾಚಕಗಳು ಮತ್ತು ಸಂಬೋಧನಾ ರೂಪಗಳನ್ನು ಕೊಡಗಿನ ಕೊಡವ ಭಾಷೆಯ ಸಂಬಂಧವಾಚಕಗಳು ಮತ್ತು ಸಂಬೋಧನಾ ರೂಪಗಳಿಗೆ ಹೋಲಿಸಿದಾಗ ಎರಡೂ ಭಾಷೆಯಲ್ಲಿರುವ ಕೆಲವು ರೂಪಗಳಲ್ಲಿ ಸಾಮ್ಯತೆ ಇರುವುದು ಕಂಡು ಬರುತ್ತದೆ.

ಗೌ.ಕ.	**ಕೊಡವ**
ಅಜ್ಜಪ್ಪ	ಅಜ್ಜಪ್ಪ (ಕುಟುಂಬದ ಹಿರಿಯ)
ತಾಯಿ	ತಾಯಿ (ಕುಟುಂಬದ ಹಿರಿಯ ಸ್ತ್ರೀ)
ಬೋಜಪ್ಪ	ಬೋಜಪ್ಪೊ (ಚಿಕ್ಕಪ್ಪ)
ಬೋಜವ್ವ	ಬೋಜವ್ವೊ (ಚಿಕ್ಕಮ್ಮ)
ಕುಞಿಪ್ಪ	ಕುಞಿಪ್ಪೊ (ಚಿಕ್ಕಪ್ಪ)
ಕುಞಿವ್ವ	ಕುಞಿವ್ವೊ (ಚಿಕ್ಕಮ್ಮ)
ಬೋಜಿಮಾಂವ	ಬೋಜಿ ಮಾಮ (ತಾಯಿಯ ಎರಡನೇ ಅಣ್ಣ/ತಮ್ಮ)
ಬೋಜಿ ಅತ್ತೆ	ಬೋಜಿ ಮಾಂವಿ (ತಾಯಿಯ ಎರಡನೇ ಅಣ್ಣ/ತಮ್ಮನ ಹೆಂಡತಿ)

ಬೋಜಿ	ಬೋಜಿ (ಎರಡನೇ ತಂಗಿ)
ಬೋಜಿ ಅಣ್ಣಯ್ಯ	ಬೋಜಿ ಅಣ್ಣಯ್ಯ (ಎರಡನೇ ಅಣ್ಣ)
ಕುಞಿ ಅಣ್ಣಯ್ಯ	ಕುಞಿ ಅಣ್ಣಯ್ಯ (ಕೊನೆಯ ಅಣ್ಣ) ಇತ್ಯಾದಿ

ಒಂದೇ ಪ್ರದೇಶದಲ್ಲಿ ನೆಲೆಸಿರುವುದರಿಂದ ಇಲ್ಲಿ ಕೊಡವ ಭಾಷೆಯ ಪ್ರಭಾವ ಗೌಡ ಕನ್ನಡದ ಮೇಲೆ ಆಗಿದೆ. ಎರಡೂ ಭಾಷಿಕರು ಪರಸ್ಪರ ಬೆರೆತು ಒಂದೇ ಪರಿಸರದಲ್ಲಿ ನೆಲೆಸಿರುವುದರಿಂದ ಆ ಪದಗಳು ಗೌಡಕನ್ನಡಕ್ಕೆ ಬಂದಿರಬಹುದು. ಏಕೆಂದರೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಗೌಡರ ಸಂಬಂಧ ವಾಚಕಗಳಲ್ಲಿ ಈ ಮೇಲಿನ ರೂಪಗಳಿಲ್ಲ. ಆದ್ದರಿಂದ ಇವುಗಳು ಕೊಡವ ಭಾಷೆಯ ಪದಗಳಾಗಿವೆ. ಹಾಗೆಯೇ ಕೊಡವ ಭಾಷೆಯಲ್ಲಿಯೂ ಗೌಡಕನ್ನಡದಲ್ಲಿಲ್ಲದ 'ಸವತಿ' ಪದಕ್ಕೆ ಯಾವುದೇ ಪದವಿಲ್ಲ. ಬದಲಾಗಿ ಗೌಡಕನ್ನಡದಲ್ಲಿರುವ 'ಗಂಡನ ಎರಡನೇ ಹೆಣ್ಣ್', 'ಇನ್ನೊಬ್ಬ ಹೆಣ್ಣ್' ಎಂಬ ಪದವೇ ಕೊಡವ ಭಾಷೆಯಲ್ಲಿಯೂ 'ದಂಡನೆ ಪೊಣ್ಣ್', 'ಇನ್ನೋರ್ ಪೊಣ್ಣ್' ಎಂಬ ಪದವಿದೆ. ಗೌಡ ಕನ್ನಡದಲ್ಲಿರುವ ಪುರುಷ ಸಂಬೋಧನಾ ರೂಪ 'ರಾ' ಎಂಬುದು ಕೊಡವ ಭಾಷೆಯಲ್ಲಿಯೂ 'ರಾ' ಎಂಬ ರೂಪವಿದೆ. ಆದರೆ ಗೌಡಕನ್ನಡದ 'ನೇ' ಎಂಬ ಸ್ತ್ರೀ ಸಂಬೋಧನಾ ರೂಪ ಕೊಡವ ಬಾಷೆಯಲ್ಲಿಲ್ಲ. ಬದಲಿಗೆ ಅವರು ಸ್ತ್ರೀಯನ್ನು ಸಂಬೋಧಿಸುವಾಗ ಮೂಡಿ' (ಹುಡುಗಿ) ಎಂದು ಬಳಸುವರು. ಇವೇ ಅಲ್ಲದೆ ಅವ್ವಯ್ಯ, ಪೊಪ್ಪ, ಅಕ್ಕಯ್ಯ, ಅಣ್ಣಯ್ಯ ಎಂಬ ರೂಪಗಳು ಕೊಡಗಿನ ಗೌಡಕನ್ನಡ ಹಾಗೂ ಕೊಡವ ಎರಡೂ ಭಾಷೆಗಳಲ್ಲಿ ಇವೆ. ತುಳು ಭಾಷೆಯ ಸಂಬಂಧವಾಚಕಗಳು ಮತ್ತು ಸಂಬೋಧನಾ ರೂಪಗಳು ಹಾಗೂ ಗೌಡಕನ್ನಡದಲ್ಲಿರುವ ರೂಪಗಳು ಭಿನ್ನವಾಗಿವೆ. ಆದರೆ ಮೊಮ್ಮಗ ಅಥವಾ ಮೊಮ್ಮಗಳನ್ನು ಸೂಚಿಸುವ ಸಂಬಂಧವಾಚಕ ತುಳುವಿನಲ್ಲಿ 'ಪುಲ್ಲಿ' ಎಂದಿದೆ. ಗೌಡ ಕನ್ನಡದಲ್ಲಿ ಪಿಲ್ಲಿ/ಪಿಳ್ಳಿ ಎಂದಿದೆ. ತುಳು ನಾಡಿನಿಂದ ಗೌಡರು ಕೊಡಗಿಗೆ ಬಂದು ನೆಲೆ ನಿಂತ ನಂತರ ಗೌಡರು ಈ ಪದವನ್ನು ಅದೇ ರೂಪದಲ್ಲಿ ಉಳಿಸಿ ಕೊಂಡಿರಬಹುದು ಎಂದು ಊಹಿಸಬಹುದು. ಹಾಗೆಯೇ ತುಳು ಭಾಷೆಯಲ್ಲಿಯೂ 'ಸವತಿ' ಪದಕ್ಕೆ ಬದಲಾಗಿ ಪದವಿಲ್ಲ. ಬದಲಿಗೆ ಗೌಡರಲ್ಲಿರುವಂತೆ 'ರಡ್ಡನೆ ಬುಡೆತ್ತಿ' (ಎರಡನೇ ಹೆಂಡತಿ) ಎಂಬ ರೂಪವಿದೆ.

ಗೌಡ ಕನ್ನಡದಲ್ಲಿ ತಾಯಿಯು ಅಯ್ಯೆ, ಅವ್ವ, ಅಮ್ಮ ಎಂದೆನಿಸಿಕೊಳ್ಳುತ್ತಾಳೆ. ಮೊದಲು ಗೌಡ ಕನ್ನಡದಲ್ಲಿ ತಾಯಿಯನ್ನು 'ಅವ್ವ' ಎಂದೇ ಸಂಬೋಧಿಸಲಾಗುತ್ತಿತ್ತು. ಆದರೆ ಆಧುನೀಕರಣದ ಪ್ರಕ್ರಿಯೆಯ ಪ್ರಭಾವದಿಂದಾಗಿ ಹಾಗೂ ನಗರೀಕರಣದ ಸಂಸ್ಕೃತಿಯ ಪ್ರಭಾವದಿಂದಾಗಿ 'ಅವ್ವ' ರೂಪವು ಕಡಿಮೆಯಾಗಿ ಆ ಜಾಗವನ್ನು 'ಅಮ್ಮ' ಪದವು ಆಕ್ರಮಿಸಿಕೊಂಡಿದೆ. ಇದೇ ರೀತಿ ಚಿಕ್ಕಮ್ಮ, ಬೋಜಿ ಅತ್ತೆ ಎಂಬುದು ಆಂಟಿ ಎಂದು, ಬೋಜ, ಕುಞಿಪ್ಪ–ಮಾಮ ಎಂಬುದು ಅಂಕಲ್ ಎಂದು, ಅಪ್ಪ ಎಂಬುದು ಡ್ಯಾಡಿ ಎಂದು, ಅವ್ವ–ಅಮ್ಮ ಎಂಬುದು ಮಮ್ಮಿ ಎಂದು ಬದಲಾವಣೆ ಹೊಂದಿರುವ ಉದಾಹರಣೆಗಳೂ ಇಲ್ಲಿ ಇವೆ. ಒಟ್ಟಿನಲ್ಲಿ ಕೊಡಗಿನ ಗೌಡ

ಜನಾಂಗದಲ್ಲಿರುವ ಸಂಬಂಧವಾಚಕಗಳು ಮತ್ತು ಸಂಬೋಧನಾ ರೂಪಗಳು ಶಿಷ್ಟ ಕನ್ನಡಕ್ಕಿಂತ ಭಿನ್ನವಾಗಿರುವುದನ್ನು ಕಾಣಬಹುದು.

೪.೬. ಬಾಲಭಾಷೆ:

ವ್ಯಕ್ತಿ ಹೇಗೆ ವಿಕಾಸಗೊಳ್ಳುತ್ತಾ ಹೋಗುವನೋ ಹಾಗೆಯೇ ಮನುಷ್ಯ ಸಮೂಹ ವಿಕಾಸಗೊಳ್ಳುತ್ತಿರುತ್ತದೆ. ವ್ಯಕ್ತಿಯ ವಿಕಾಸವನ್ನು ಗಮನಿಸಿದರೆ ಇದು ವ್ಯಕ್ತವಾಗುವುದು. ಅಂತೆಯೇ ಅವನ ಭಾಷೆಯೂ ಕೂಡ ಅವನನ್ನೇ ಅನುಸರಿಸಿ ವಿಕಾಸಗೊಳ್ಳಬಹುದು. ಮಗು ತಾಯಿಯ ಗರ್ಭದಲ್ಲಿರುವಾಗ ಮನುಷ್ಯನ ವಿಕಾಸದ ಬೇರೆ ಬೇರೆ ಹಂತಗಳೆಲ್ಲವೂ ಪುನರಾವರ್ತನೆಯಾಗುತ್ತವೆ. ಹಾಗೆಯೇ ಮಗುವು ಭಾಷೆಯನ್ನು ಕಲಿಯುವಾಗ, ಭಾಷೆಯ ವಿಕಾಸದ ಹಂತಗಳನ್ನು ಗುರುತಿಸಬಹುದು. ಮಕ್ಕಳು ಚಿಕ್ಕಂದಿನಿಂದಲೂ ಭಾಷೆಯನ್ನು ಕಲಿಯುತ್ತಿರುತ್ತವೆ. ಅಂತೆಯೇ ಭಾಷೆಯು ಮೊದಮೊದಲು ತೊದಲುನುಡಿ ರೂಪದಲ್ಲಿ ವಿಕಾಸಗೊಂಡಿರಲು ಸಾಧ್ಯ. ಹಾಗೆಯೇ ಬೆಳೆಯುತ್ತಾ ಬಂದಂತೆ ಅದರ ಭಾಷೆಯು ಬೆಳೆಯುತ್ತಾ ಹೋಗುವುದು. ಮಕ್ಕಳು ಭಾಷೆಯನ್ನು ಗ್ರಹಿಸಬಲ್ಲವು ಮಗು ತನ್ನ ಪರಿಸರದ ಸುತ್ತಮುತ್ತಲೂ ಕಂಡುಬರುವ ವ್ಯಕ್ತಿಗಳ ಬಾಯಿಯಿಂದ ಹೊರಡುವ ಧ್ವನಿಗಳನ್ನು ಗ್ರಹಿಸಿ ಅವುಗಳನ್ನು ವಿವಿಧ ವಸ್ತುಗಳಿಗೆ ಅನ್ವಯಿಸುವುದನ್ನು ಕಲಿಯುತ್ತದೆ. ಆದುದರಿಂದ ಭಾಷೆಯ ಕಡೆಗೆ ಗಮನವನ್ನು ಕೊಡುವ ಮುನ್ನವೇ ಮಕ್ಕಳು ಮೊದಲು ನಿರರ್ಥಕ ಧ್ವನಿಗಳನ್ನು ಉಚ್ಚರಿಸುವುವು. ಏನನ್ನು ಉಚ್ಚರಿಸುತ್ತಿದ್ದೇನೆ ಎಂಬುದರ ಅರಿವೇ ಅವಕ್ಕೆ ಇರುವುದಿಲ್ಲ. ಮಕ್ಕಳು ತಮ್ಮದೇ ರೀತಿಯಲ್ಲಿ ಶಬ್ದಗಳನ್ನು ನಿರ್ಮಿಸುತ್ತಾ ಹೋಗುವುವು. ಮಗುವಿನ ಬಾಯಿಂದ ಹೊರಡುವ ಶಬ್ದಗಳ ಕಡೆಗೆ ಮುಖ್ಯವಾಗಿ ನಮ್ಮ ಗಮನ ಹರಿಯಬೇಕು. ಹೀಗೆ ಹೊಸ ಹೊಸ ಶಬ್ದಗಳನ್ನು ಸೃಷ್ಟಿಸುವ ಮತ್ತು ಅವುಗಳಿಗೆ ಅರ್ಥ ಕಲ್ಪಿಸುವ ಮಕ್ಕಳ ತೊದಲು ನುಡಿಯನ್ನು ನಿರ್ಲಕ್ಷಿಸುವಂತಿಲ್ಲ.

ಮಕ್ಕಳು ಆಡುವ ಮೊದಲ ನುಡಿಗಾಗಿ ಕಾತರಿಸುವ ತಂದೆ ತಾಯಂದಿರು ತಮ್ಮ ಮಗುವಿನೊಡನೆ ಏಕಮುಖವಾದ ಮಾತುಕತೆಗೆ ತೊಡಗುತ್ತಾರೆ. ಮಗುವಿನೊಡನೆ ಇವರು ಮುದ್ದು ಮಾತುಗಳನ್ನಾಡುತ್ತಾರೆ. ಮಗುವಿನ ಪ್ರತಿಕ್ರಿಯೆಗಳಿಗೆ ಅರ್ಥ ಹಚ್ಚುತ್ತಾರೆ. ಒಟ್ಟಾರೆ ಮಗು ಬೆಳೆಯುವಾಗ ಪಡೆದುಕೊಳ್ಳುವ ಹತ್ತಾರು ಸಾಮರ್ಥ್ಯಗಳಲ್ಲಿ 'ಮಾತನಾಡುವುದು' ಒಂದು ಪ್ರಮುಖ ಹಂತ. ಈ ಕ್ರಿಯೆ ಮಗುವಿನ ಎಳೆಯ ವಯಸ್ಸಿನಿಂದಲೇ ಪ್ರಾರಂಭವಾಗುತ್ತದೆ. ಮಗು ಬೆಳೆಯುತ್ತಾ ಅದರ ಕಲಿಕೆಯ ಮಟ್ಟ ಹೆಚ್ಚಾಗುತ್ತದೆ.

ಮಗು ಕೇಳಿಸಿಕೊಳ್ಳುವ ಭಾಷೆ ಸಾಮಾನ್ಯವಾಗಿ ವಯಸ್ಕರು ಆಡುವ ಭಾಷೆಯ ರೀತಿಯಲ್ಲಿರುವುದಿಲ್ಲ. ತಂದೆ ತಾಯಿಯರು ಮಗು ಭಾಷೆಯನ್ನು ಕಲಿಯುವಂತಹಾ ಸಂದರ್ಭದಲ್ಲಿ ಮಗುವಿನೊಡನೆ ವಿಶೇಷರೂಪದ ಭಾಷೆಯನ್ನು ಬಳಸುತ್ತಾರೆ. ವಯಸ್ಕರು ಮಗುವಿಗೆ ಭಾಷೆಯ ಕಲಿಕೆಗೆ ಅನುಕೂಲವಾಗಲೆಂದು ತಮ್ಮ ಭಾಷೆಯನ್ನು ಸರಳಗೊಳಿಸಿ ಹೊಂದಿಸಿಕೊಳ್ಳುತ್ತಾರೆ. ಕ್ಲಿಷ್ಟವಾದ ಧ್ವನಿಗಳನ್ನು ಕೈ ಬಿಟ್ಟು ಪದಗಳ ರೂಪದಲ್ಲಿ ಬದಲಾವಣೆ ಮಾಡಿಕೊಳ್ಳುತ್ತಾರೆ.

ಉದಾ: ಮಾಮ್/ಅನ್ನ/ತಿನ್ನು, ಆಯಿ/ಗಾಯ ಇತ್ಯಾದಿ.

ಮಗುವು ಹುಟ್ಟಿದ ತಕ್ಷಣ ಅಳುವ 'ಅಳುವಿಗೆ' ಬಹಳ ಮಹತ್ವವಿದೆ. ಏಕೆಂದರೆ ಮಗು ಹುಟ್ಟಿದ ತಕ್ಷಣ ಅಳಲು, ಉಸಿರಾಡಲು ಉಪಯೋಗಿಸಿದ ಅಂಗಗಳನ್ನು ಮುಂದೆ ಮಾತನಾಡಲು ಉಪಯೋಗಿಸಬೇಕಾಗುತ್ತದೆ.

ಮಗು ಹುಟ್ಟಿದಂದಿನಿಂದ ಹಿಡಿದು ಐದು ವರ್ಷದವರೆವಿಗೂ ಅದನ್ನು ಶಿಶು ಎಂದು ಕರೆಯಲಾಗುತ್ತದೆ. ಮಗುವು ಎಳೆಯದಿರುವಾಗ ಅದು ಹೊರಡಿಸುವ ಅಸ್ಪಷ್ಟ ಧ್ವನಿಗಳು, ಅದರ ಅಳುವಿನ ಮೂಲಕವಾಗಲಿ ಅಥವಾ ದೈಹಿಕ ಕ್ರಿಯೆಗಳ ಮೂಲಕ ಉಂಟುಮಾಡುವ ಶಬ್ದಗಳು (ಆಹಾರ ಸೇವನೆ, ಮಲಮೂತ್ರ ವಿಸರ್ಜನೆ, ಕೆಮ್ಮು, ಹೂಂಕರಿಸುವುದು) ಮಗುವಿನ ಭಾಷೆ ಎನ್ನಿಸಿಕೊಳ್ಳುತ್ತದೆ. ಬಾಲಭಾಷೆ, ಶಿಶುಭಾಷೆ ಎಂದು ಕರೆಯಲಾಗುವ ಇದು ಒಂದು ಪ್ರತ್ಯೇಕ ಭಾಷೆ ಎಂದು ಗುರುತಿಸಿಕೊಳ್ಳುವುದಿಲ್ಲ. ಏಕೆಂದರೆ, ಮಗುವಿಗಾಗಿ ಹೊಸದಾದ ಪ್ರತ್ಯೇಕ ಭಾಷೆ ಇಲ್ಲ. ಒಂದು ಭಾಷಿಕ ಸಮುದಾಯ ಆ ಪರಿಸರದ ಭಾಷೆಯ ನಿಯಮಕ್ಕನುಗುಣವಾಗಿಯೇ ಕೆಲವು ಪದಗಳನ್ನು ಮಕ್ಕಳಿಗಾಗಿ ಮಾರ್ಪಾಟು ಮಾಡಿಕೊಂಡಿರುತ್ತದೆ. ಈ ರೂಪಗಳು ಆ ಮೂಲ ಭಾಷೆಯಲ್ಲಿರುವ ಕೆಲವು ಪದಗಳ ಸರಳೀಕೃತ ರೂಪವಾಗಿರುತ್ತದೆ. ಅಥವಾ ಧ್ವನಿಗಳ ಅನುಕರಣವಾಗಿರುತ್ತದೆ. ದೊಡ್ಡವರಿಗೆ ಮಗು ತಮ್ಮ ಉಚ್ಚಾರಣೆಗಳನ್ನು ಅನುಕರಿಸುತ್ತಾರೆಂಬ ನಂಬಿಕೆ, ಇಲ್ಲಿ ಮಗು ಮುಖ್ಯವಾಗಿ ಧ್ವನಿಗಳನ್ನು, ಧ್ವನಿ ಸಂಯೋಜನೆಗಳನ್ನು ಅನುಕರಿಸುತ್ತವೆ (ಕೆ.ವಿ ನಾರಾಯಣ, ಭಾ.ವಿ.ಕೋ. ಪು.೨೩೦). ಈ ಎಲ್ಲಾ ಪ್ರಕ್ರಿಯೆಗಳ ಹಿಂದೆ ಮಗುವಿಗೆ ಭಾಷೆ ಕಲಿಸುವ ಮತ್ತು ಅದರ ಸುತ್ತಮುತ್ತಲಿನ ಪರಿಸರವನ್ನು ಪರಿಚಯಿಸುವ ಉದ್ದೇಶವಿರುತ್ತದೆ. ಆದ್ದರಿಂದ ಇದನ್ನು ಒಂದು ಭಾಷೆಯಾಗಿ ಗುರುತಿಸುವುದಕ್ಕಿಂತ ಒಂದು ನಿರ್ದಿಷ್ಟ ವರ್ಗಕ್ಕಾಗಿ ನಿರ್ದಿಷ್ಟ ಕಾಲಾವಧಿಗಾಗಿ ಬಳಸಲ್ಪಡುವ ಒಂದು ಭಾಷಿಕ ರೂಪವೆನ್ನಬಹುದು. ಈ ಭಾಷಿಕ ರೂಪವು ಮಕ್ಕಳು ಬೆಳೆಯುವಾಗ ಒಂದು ನಿರ್ದಿಷ್ಟ ವಯಸ್ಸಿನವರೆಗೆ ಮಾತ್ರ ಬಳಕೆಯಲ್ಲಿರುತ್ತದೆ.

ಮಕ್ಕಳ ಭಾಷೆಯು ವಯಸ್ಕರ ಭಾಷೆಗಿಂತ ಭಿನ್ನವಾಗಿದೆ. ಇಲ್ಲಿ ಕಠಿಣ ಧ್ವನಿಗಳ ಬದಲಿಗೆ ಸರಳವಾದ ಧ್ವನಿಗಳಿಂದ ಕೂಡಿದ ಪದಗಳಿರುತ್ತವೆ. ಮುಖ್ಯವಾಗಿ ತಾಯಿಯು ತನ್ನ ಮಗುವಿನೊಂದಿಗೆ ವಿಶಿಷ್ಟವಾಗಿ ಮಾತನಾಡುತ್ತಾಳೆ. ಮಗುವು ತೊದಲು ನುಡಿಯಲ್ಲಿ ಗೊತ್ತು ಗುರಿಯಿಲ್ಲದಂತೆ, ತನಗೆ ಸಾಧ್ಯವಾಗುವ ಎಲ್ಲ ಶಬ್ದಗಳನ್ನು ಉಚ್ಚರಿಸಲು ಪ್ರಯತ್ನಿಸುತ್ತದೆ. ತಾಯಿಯರೂ ಕೂಡ ಮಕ್ಕಳು ಉಚ್ಚರಿಸಿದಂತೆಯೇ ಉಚ್ಚರಿಸುವುದೂ ಇದೆ. ಕೊಡಗಿನ ತಾಯಿಯರು ಮಗು ಹೇಳಿದಂತೆಯೇ ನಾವೂ ಉಚ್ಚರಿಸಿದರೆ ಅದಕ್ಕೆ ಹೆಚ್ಚು ಅರ್ಥವಾಗುವ ಸಾಧ್ಯತೆ ಇದೆ ಎಂದು ಹೇಳುತ್ತಾರೆ.

ಹಿರಿಯರು ತಾವಿರುವ ಪರಿಸರದಲ್ಲಿ ಕೇಳಿಬರುವ ಧ್ವನಿಗಳನ್ನು ಮಕ್ಕಳಿಗೆ ಅನುಕರಿಸಿ ತೋರಿಸುವುದು. ವಾಹನಗಳನ್ನು ಮಗುವಿಗೆ ಪರಿಚಯಿಸುವಾಗ ಬೂ..ಡುರ್ರ್..., ಬರ್ರ್..., ಕೀಕೀ...,

ಪೋಂ...ಪೋಂ... ಎಂಬ ರೂಪವನ್ನು ಬಳಸುವರು. ಅದೇ ವಾಹನದಲ್ಲಿ ಹೊರಗಡೆ ಹೋಗುವುದನ್ನು ಸೂಚಿಸಲು ಬೂವ್ವ ಎಂದು ಬಳಸುವರು. ಅಲ್ಲದೇ ಪ್ರಾಣಿ, ಪಕ್ಷಿ ಇತ್ಯಾದಿಗಳು ಹೊರಡಿಸುವ ಧ್ವನಿಗಳನ್ನು ಅನುಕರಿಸಿ ಉಚ್ಚರಿಸುವುದು ಕಾ ಕಾ., ಚೀಯಿ ಚೀಯಿ, ಮಿಯ್ಯ, ಬುಸ್ಸ್. ಇತ್ಯಾದಿ ರೂಪಗಳ ಬಳಕೆ ಮಾಡುವರು. ಇವು ಅನುಕರಣವಾಚಕಗಳಾಗಿವೆ.

ಮಗುವು ನಿದ್ರೆಯಿಂದ ಎಚ್ಚರಗೊಂಡಾಗ ತಾಯಿ "ಓನು ಕೂಸೂ..ಆರಪ್ಪ ಜೂಜಿ ಆತೂ... ಕೂಸ್‌ನ ಜೂಜಿ ಆತೂ... ಏಳೊನೋ... ಪೋಯೀ..." ಎಂದೆಲ್ಲಾ ರಮಿಸುವಳು. ಜೂಜಿ ನಿದ್ರೆಯನ್ನು ಸೂಚಿಸುವುದು. ಮಗುವಿಗೆ ಊಟ ಮಾಡಿಸುವಾಗ ಮಾಮ್... ಮಾಮ್ ಮಾಡೊನೋ... ಮಾಮ್ ಮಾಮ್ ಮಾಮ್, ಆ ಮಾಡ್ ಎಂದೆಲ್ಲಾ ಹಾಡಿ ಉಣ್ಣಿಸುವಳು. ಆಹಾರದಲ್ಲಿ ಅಪ್ಪಿ(ರೊಟ್ಟಿ), ಚಿಚ್ಚಿ(ಮಾಂಸಾಹಾರ), ಮಿಮ್ಮಿ(ಮೀನು) ಇತ್ಯಾದಿ ಪದಗಳ ಬಳಕೆ ಕೊಡಗಿನ ಗೌಡರ ಶಿಶು ಭಾಷೆಯಲ್ಲಿದೆ.

ಮಗುವು ಸೇವಿಸುವ ಅತಿ ಮುಖ್ಯವಾದ ಅದಕ್ಕೆ ಪ್ರಿಯವಾದ ಆಹಾರ ತಾಯಿಯ ಎದೆಹಾಲು. ತಾಯಿಯ ಎದೆಹಾಲಿನೊಂದಿಗೆ ಇತರೆ ಹಾಲಿಗೂ ಕೂಡ ಕೊಡಗಿನ ಬಾಲಭಾಷೆಯಲ್ಲಿ 'ಬೋಬು' ಎಂಬ ಒಂದೇ ರೂಪ ಬಳಕೆಯಲ್ಲಿದೆ. ಮಗು ನೀರನ್ನು ಆಬೂ ಎಂದು ಸೂಚಿಸುತ್ತದೆ. ಚಾಕ್ಲೇಟು–ಚಾಕಿ, ಪೆಪ್ಪರ್ ಮೆಂಟ್–ಪೆಪ್ಪಿ, ಬಿಸ್ಕೇಟ್–ಬಿಕ್ಕಿ ಇತ್ಯಾದಿ.

ಮಲಗಿಸುವಾಗ ತಾಯಿಯು ಲಾಲಿ ಹಾಡಿ ಮಗುವನ್ನು ಮಲಗಿಸುವಳು ಜೂ...ಜೂ... ಎಂದು ಹಾಡುವಳು.

"ಕಂದಾ ಜೂ... ಕಂದಯ್ಯ ಜೂ... ಜೂಜೂ ನನ ಕೂಸು ಜೂಜೂ" ಎಂದೆಲ್ಲಾ ಹಾಡುವಳು. ಮಗು ನಿದ್ರೆ ಮಾಡದಿದ್ದಾಗ "ಚಾಚು ಮಗ... ಮಜ ಜೂಜಿ ಮಾಡವ್ವಾ..." ಎಂದು ತೊಟ್ಟಿಲು ತೂಗುವಳು. "ಮ್...ಮ್... ಗುಮ್ಮ ಬಾತ್" ಎಂದು ಹೆದರಿಸುವಳು. ತಾಯಿ ಮಗುವನ್ನು ಪ್ರೀತಿಯಿಂದ ಕೂಸು, ಕಂದ, ಪುಟ್ಟ, ಪುಟ್ಟಕ್ಕ, ದೊರೆಮಜ, ದೊರೆ, ದೊರೆಕೂಸು, ಅಕ್ಕಯ್ಯ, ಅಣ್ಣ, ಚುಮ್ಮಿ. ಇತ್ಯಾದಿಯಾಗಿ ಸಂಬೋಧಿಸುವಳು. ಮಗುವನ್ನು ಆಕೆ ಮುದ್ದಿಸುವ ಕ್ರಿಯೆಯು ಕೊಡಗಿನ ಗೌಡ ಜನಾಂಗದ ಶಿಶುಭಾಷಾ ರೂಪವಾದಾಗ ಪಪ್ಪಿ, ಉಮ್ಮ, ಉಪ್ಪ ಇತ್ಯಾದಿ ರೂಪ ಪಡೆಯುತ್ತದೆ.

ಸ್ನಾನ ಮಾಡಿಸುವಾಗ ಇತರರೊಂದಿಗೆ "ಕೂಸ್‌ನ ಮೀಸೋಕು" (ಮಗುವಿಗೆ ಸ್ನಾನ ಮಾಡಿಸಬೇಕು) ಎಂದರೇ, ಮಗುವಿನೊಂದಿಗೆ ಶಿಶುಭಾಷೆಯಲ್ಲಿ 'ಜಿಜ್ಜಿಮೀಯೊನೋ...' ಎಂದು ಸ್ನಾನ ಮಾಡಿಸುವಾಗ ಉಸ್... ಉಸ್... ಎಂದು ಬಿಸಿ ನೀರು ಬೀಳುವ ಶಬ್ದಕ್ಕೆ ಹಿನ್ನೆಲೆಯಾಗಿ ಅದನ್ನು ಅನುಕರಿಸುವಳು. ಮಗುವಿನ ಶೌಚಕ್ಕೆ ಸಂಬಂಧಿಸಿದಂತೆ ಕಕ್ಕ ಮಾಡ್... ಚೊರ್ರ ಹೊಯಿ(ಮೂತ್ರ) ಎನ್ನುವರು. ಮೂತ್ರ ವಿಸರ್ಜಿಸುವಾಗ ಉಸ್...ಉಸ್...ಎಂದು ಶಬ್ದ ಮಾಡಿ ಆ ಶಬ್ದವು ಮಗುವಿಗೆ

ಮೂತ್ರ ವಿಸರ್ಜಿಸಲು ಬಳಸುವುದು ಎಂದು ಮನವರಿಕೆ ಮಾಡುವಳು. ರುಚಿಯಲ್ಲಿ ಕಾರವನ್ನು 'ಹಾ...' ಎಂದು ಹುಳಿಯನ್ನು ನಾಲಿಗೆಯನ್ನು ಚಪ್ಪರಿಸಿ ಶಬ್ದ ಬರಿಸುವುದರ ಮೂಲಕ ಮಗುವಿಗೆ ಹೇಳಿಕೊಡುವುದು.

ಹುಳು, ಹಾವುಗಳನ್ನು ಮುಟ್ಟದಂತೆ, ಮಕ್ಕಳು ಆಚೆ-ಈಚೆ ಹೋಗದಂತೆ ಮಾಡಲು 'ಹಾಬಿ'(ಹಾವು), ಅದಾ ಹಾಬಿ ಬಾತು.., ಬಾ ಹಾಬಿ ಕಚ್ಚು, ಅಥವಾ ಆವಿ (ಹುಳು) ಬಾತು ಓಡಿ ಬಾ, ಓಡಿ ಬಾ ಎಂದು ಹೆದರಿಸಲಾಗುತ್ತದೆ.

ಮಕ್ಕಳು ಬಳಸುವ ಬಟ್ಟೆಗಳಲ್ಲಿ ತೊಡುವ ಬಟ್ಟೆಗೆ 'ಕುಪ್ಪ' ಎಂದು ಮಕ್ಕಳಿಗೆ ಹೇಳಿಕೊಡುವರು. ಎಳೆ ಮಕ್ಕಳಿಗೆ ಶೌಚಕ್ಕೆ ಬಳಸುವ ಬಟ್ಟೆಗೆ ಕಕ್ಕಬಟ್ಟೆ, ಹೇಲುಬಟ್ಟೆ ಅಥವಾ ಉಚ್ಚೆಬಟ್ಟೆ ಎಂದು ಹೇಳಲಾಗುತ್ತದೆ. ಮಕ್ಕಳಿಗೆ ಕೆಟ್ಟ ದೃಷ್ಟಿಯಿಂದ ರಕ್ಷಿಸಲು ಕೈ ಹಾಗೂ ಕೊರಳಿಗೆ ಬಿಳಿಯಮಣಿಯನ್ನು ಕರಿಮಣಿಯೊಂದಿಗೆ ಪೋಣಿಸಿ ಹಾಕುವರು. ಇದಕ್ಕೆ ಕೊಡಗಿನ ಗೌಡ ಜನಾಂಗದವರು 'ಹಾಲುಮಣಿ' ಎನ್ನುವರು. ಅಲ್ಲದೆ ತಾಮ್ರ, ಹಿತ್ತಾಳೆ, ಬೆಳ್ಳಿ, ಬಂಗಾರ, ಕಬ್ಬಿಣದಿಂದ ತಯಾರಿಸಿದ ಬಳೆಯನ್ನು ಮಗುವಿನ ಕೈಗೆ ಹಾಕುವರು. ಇದಕ್ಕೆ 'ಪಂಚಲೋಹ ಬಳೆ' ಎನ್ನುವರು. ಇದಲ್ಲದೆ ಕಿವಿಗೆ 'ವಾಲೆ' ತೊಡಿಸುವರು. ವಾಲೆಯನ್ನು ಕೇವಲ ಹೆಣ್ಣು ಮಕ್ಕಳಿಗೆ ಹಾಕುತ್ತಾರೆ.

ಕೊಡಗಿನ ಗೌಡ ಸಮುದಾಯದಲ್ಲಿ ಮಗುವು ಜನಿಸಿದ ನಂತರ ಐದು ಅಥವಾ ಏಳನೇ ದಿನಕ್ಕೆ 'ಅಮೆ' ಎಂಬ ಶುದ್ಧಿಕ್ರಿಯೆಯನ್ನು ಮಾಡುತ್ತಾರೆ. ಅಂದು ದೇವಸ್ಥಾನದಿಂದ ಪುಣ್ಯಾರ್ಚನೆಯನ್ನು ತಂದು ಮಾವಿನ ಎಲೆಗಳಿಂದ ಮುಡಿಪು(ದೇವರ ಕಾಣಿಕೆ), ಮನೆ ಮತ್ತು ಮನೆಯವರೆಲ್ಲರಿಗೂ ಚಿಮುಕಿಸುತ್ತಾರೆ. ಇಲ್ಲಿ ಮಗುವಿಗೆ ಸಂಬಂಧಿಸಿದ ಆಚರಣೆಗಳಲ್ಲಿ 'ಕೂಸನ್ನು ತೊಟ್ಟಿಲಿಗೆ ಹಾಕುದು'(ನಾಮಕರಣ) ಮಹತ್ವದ ಆಚರಣೆಯಾಗಿದೆ. ನಾಮಕರಣದ ದಿನ ಮಗುವಿಗೆ ಅನ್ನ ಕೊಡುವ ಶಾಸ್ತ್ರಮಾಡಿ ಮಗುವಿಗೆ ಹೆಸರು ಇಟ್ಟು ಶಾಸ್ತ್ರೋಕ್ತವಾಗಿ ತೊಟ್ಟಿಲಿಗೆ ಹಾಕುವರು. ಹಿರಿಯರು(ಅಜ್ಜಿ) ಮಗುವನ್ನು ಮಡಿಲಲ್ಲಿ ಮಲಗಿಸಿಕೊಂಡು, ಅನ್ನವನ್ನು ಮೊಸರಿನೊಂದಿಗೆ ನುಣ್ಣಗೆ ಅರೆದು ಮೊದಲು ಅಜ್ಜಿ ಮಗುವಿನ ಬಾಯಿಗೆ ಅನ್ನ ಹಾಕಿ "ಹುಗ್ಗೆ (ಅನ್ನ) ಉಂಡ್, ಹುಗ್ಗೆ ಬೇರುಂಡ್ ನೂರು ವರ್ಷ ಆರೋಗ್ಯವಂತನಾ(ಳಾ)ಗಿ ಬಾಳ್ ಕೂಸು" ಎಂದು ಹರಸುವರು.

ಮಗುವನ್ನು ತೊಟ್ಟಿಲಿಗೆ ಹಾಕುವಾಗ ಹಾಡನ್ನು ಹಾಡುವ ಪದ್ಧತಿಯಿದೆ.

ಉದಾ: ಜೋ ಜೋ ಶ್ರೀ ಕೃಷ್ಣ ಪರಮಾನಂದ
ನಂದ ಗೋಪಿಯ ಕಂದ, ನಂದ ಮುಕುಂದ ಜೋ ಜೋ
ಪಾಲುಗಡಲೊಳು ಪವಡಿಸಿದವನೇ
ಆಲದೆಲೆಯ ಮೇಲೆ ಮಲಗಿದ ಶಿಶುವೇ ಜೋ ಜೋ
॥ಶ್ರೀ ಕೃಷ್ಣ॥ ಇತ್ಯಾದಿ.

ಮಗುವಿಗೆ ಬೆಳೆದಿರುವ ಕೂದಲನ್ನು 'ಮುಡಿ ಕೊಡುದು' ಅಥವಾ 'ಕುದೋಲು ತೆಗ್ಸುದು' ಎಂದು ಹೇಳುತ್ತಾರೆ. ಮಕ್ಕಳು ಅವುಗಳು ಹುಟ್ಟಿದ ಅನುಕ್ರಮವಾಗಿ ಹಿರಿಮಜ, ಕಿರಿಮಜ(ಹಿರಿಮಗ, ಕಿರಿಮಗ), ದೊಡ್ಡಂವ, ಸಣ್ಣಂವ, ಎರಡನೆಯಂವ, ಮೂರನೆಯಂವ, ಕೊನೆಯಂವ, ಎಣೆಮಕ್ಕ(ಅವಳಿ–ಜವಳಿ) ಎಂದು ಗುರುತಿಸುತ್ತಾರೆ.

ಇಲ್ಲಿ ಸಾಮಾನ್ಯವಾಗಿ ಬಳಕೆಯಾಗುವ ಬಾಲಪದಗಳು ಶಿಷ್ಟಕನ್ನಡದ ಬಾಲಭಾಷೆಯಲ್ಲಿ ಕಾಣಬರುವ ಪದಗಳೇ ಆಗಿವೆ. ಮತ್ತು ಇವುಗಳಲ್ಲಿ ಕೆಲವು ವಿಶಿಷ್ಟ ಪದಗಳನ್ನೂ ಕಾಣಬಹುದಾಗಿದೆ. ಕೊಡಗಿನ ಗೌಡ ಕನ್ನಡ ಪರಿಸರದಲ್ಲಿ ಮಕ್ಕಳು ಆಡುವ ಮಾತಿನಲ್ಲಿರುವ ಪದಗಳು ಕೆಳಕಂಡಂತಿವೆ.

೪.೬.೧ ಕೊಡಗಿನ ಗೌಡಕನ್ನಡದಲ್ಲಿರುವ ಬಾಲಭಾಷೆಯ ರೂಪಗಳು:

ಅಪ್ಪಿ (ರೊಟ್ಟಿ).
ಅಂಬಾ (ದನ).
ಆಕೆ (ಯಾಕೆ).
ಆಟ (ಆಟದ ಸಾಮಾನು).
ಆತು (ಆಯಿತು).
ಆಬೂ (ನೀರು).
ಆಯಿ (ಗಾಯ/ನೋವು).
ಆ ಮಾಡ್ (ಬಾಯಿ ತೆರೆ).
ಆರ್ (ಯಾರು).
ಉಮ್ಮ (ಮುತ್ತು).
ಉಪ್ಪ (ಮುತ್ತು).
ಉಹ್ (ಗಾಳಿ ಊದು/ ತಣ್ಣಗಾಗಿಸು).
ಓನು (ಏನು).
ಕಕ್ಕ (ಗಲೀಜು/ಹೊಲಸು/ಲೆಟ್ರೀನು).
ಕಡ್ಡಿ (ಬಳಪ).
ಕಾ (ಕಾಗೆ).
ಕುಪ್ಪ (ತೊಡುವ ಬಟ್ಟೆ).
ಕೂಚು (ಕುಳಿತು ಕೊಳ್ಳುವುದು).
ಕೂಸು (ಮಗು).
ಕೊಕ್ಕ (ಕೋಳಿ).

ಕೋಕುಮಣಿ (ಗಂಡು ಮಗುವಿನ ಜನನೇಂದ್ರಿಯ).

ಗುಮ್ಮ (ದೆವ್ವ).

ಚಂದ (ಅಲಂಕಾರ ವಸ್ತು).

ಚಾಕಿ (ಚಾಕ್ಲೇಟು).

ಚೀಂಯಿ ಚೀಂಯಿ (ಪಕ್ಷಿ).

ಚಾಚು (ಮಲಗು).

ಚಾಮಿ (ದೇವರು/ನಮಸ್ಕಾರ).

ಚಿಚ್ಚಿ (ಮಾಂಸ).

ಚುಂಯಿ (ಚುಚ್ಚು ಮದ್ದು).

ಚೊರ್ರ (ಮೂತ್ರ).

ಜಿಜ್ಜಿಮೀಯಿ (ಸ್ನಾನ).

ಜೀಜೀ (ತೊಟ್ಟಿಲು).

ಜೂ (ಜೋಗುಳ).

ಜೂಜಿ (ನಿದ್ರೆ).

ಟೈ (ಏಟು).

ಡುರ್ರ (ವಾಹನ).

ತಾನಿತಾನಿ (ನಡೆಯುವುದು).

ತೂಮಾಡ್ (ಉಗಿ).

ಪಪ್ಪಿ (ಮುತ್ತು).

ಪಾಪ (ಪಾಪು/ಮಗು).

ಪೆಟ್ಟು (ಏಟು).

ಪೆಪ್ಪಿ (ಚಾಕ್ಲೇಟು/ಪೆಪ್ಪರ್‌ಮೆಂಟ್).

ಪೊವ್ವ (ಸುಂದರ).

ಪೋಂ ಪೋಂ (ವಾಹನ).

ಬಿಕ್ಕಿ (ಬಿಸ್ಕತ್ತು).

ಬಿಬ್ಬಿ (ಜನನಾಂಗ).

ಬುವ್ವ (ವಾಹನಗಳಲ್ಲಿ ಹೊರಗೆ ಹೋಗುವುದು).

ಬ್ರೂ (ವಾಹನ).

ಬೊಬ್ಬ (ದನ).

ಬುಸ್ಸ್ (ಹಾವು).

ಬೋಬು (ಮೊಲೆ ಹಾಲು/ ಇತರೆ ಹಾಲು).

ಬೌ (ನಾಯಿ).

ಮ್...(ಹೆದರಿಸುವುದು).

ಮಾಮ್ (ಆಹಾರ).

ಮಾಮಿ (ದೇವರು/ ನಮಸ್ಕಾರ).

ಮಿಮ್ಮಿ (ಮೀನು).

ಮಿಂಯ್ಯ (ಬೆಕ್ಕು).

ಮುಚ್ಚ್ (ಬಾಯಿ ಮುಚ್ಚು).

ಮೂಕ್‌ಚಾರ್ (ಸಿಂಬಳ).

ಸಾಮಿ (ನಮಸ್ಕಾರ/ದೇವರು).

ಹಾಬಿ (ಹಾವು/ಹುಳು).

ಹಾವಿ (ಹಾವು/ಹುಳು).

ಹುಗ್ಗೆ (ಅನ್ನ).

'ಕಾ':ಕಾಗೆ: ಇದು ಅನುಕರಣವಾಚಿ. ಕಾಗೆಯು ಕೂಗುವ ಶಬ್ದವನ್ನು ಅನುಕರಿಸಿ ಮಗು ಉಚ್ಚರಿಸುವ ಶಬ್ದ. ಉದಾ: ಕಾ ಎಲ್ಲಿ ಅವ್ವ (ಕಾಗೆ ಎಲ್ಲಿ ಮಗು.) ಕಾ ಹಾರಿ ಹೋತು (ಕಾಗೆ ಹಾರಿ ಹೋಯಿತು.)

ಚಾಕಿ(ಚಾಕ್ಲೇಟು): ಚಾಕ್ಲೇಟು ಪದವನ್ನು ಸಂಕ್ಷಿಪ್ತಗೊಳಿಸಿ, ಸರಳಗೊಳಿಸಿ ಚಾಕಿ ಎಂಬ ರೂಪವನ್ನು ಬಳಸುವುದು. ಉದಾ: ಕೂಸ್‌ಗೆ ಚಾಕಿ ಬೋಕಾ? (ಮಗುವಿಗೆ ಚಾಕ್ಲೇಟು ಬೇಕಾ?)

ಚೀಂಯಿ ಚೀಂಯಿ: ಪಕ್ಷಿಗಳು ಕೂಗುವ ಧ್ವನಿಯನ್ನು ಅನುಕರಿಸಿ ಮಕ್ಕಳಿಗೆ ಪಕ್ಷಿಗಳನ್ನು ತೋರಿಸುವುದು.

ಕಡ್ಡಿ: ಸ್ಲೇಟಿನಲ್ಲಿ ಬರೆಯಲು ಬಳಸುವ ಬಳಪಕ್ಕೆ 'ಕಡ್ಡಿ' ಎಂದು ರೂಪವಿದೆ. ಉದಾ: ಕಡ್ಡಿ ತಂಬಾ ಮಜ ಬರೆಯನೋ. (ಬಳಪ ತೆಗೆದುಕೊಂಡು ಬಾ ಬರೆಯುವ.)

ಅಂಬಾ.: ದನ(ಹಸು, ಕರು, ಎತ್ತು, ಕೋಣ, ಎಮ್ಮೆ.) ಇದೊಂದು ಅನುಕರಣವಾಚಿ ಪದ. ದನಗಳು ಕೂಗುವ ಶಬ್ದವನ್ನು ಅನುಕರಣೆಮಾಡಿ ಆ ಪ್ರಾಣಿಯನ್ನು ಸೂಚಿಸಲಾಗಿದೆ. ಉದಾ: ಅಂಬಾ ನೋಡಿಕೆ ಪೋಯ? (ದನವನ್ನು ನೋಡಲು ಹೋಗೋಣವೇ?) ಅಂಬಾ.... ಬಾ ಅಂಬಾ.... ಹಾಗೆಯೇ ಕರುವನ್ನು 'ಅಂಬೆ' ಎಂದು ಹೇಳುವುದು. ಕರುವು ಕೂಗುವ ಶಬ್ದವನ್ನು ಅನುಕರಿಸಿ ಅದನ್ನು ಸೂಚಿಸುವುದು. ಉದಾ: ಅಂಬೆ...ಬಾ... (ಕರುವನ್ನು ಕರೆಯುವುದು) ಅಂಬೆ ನೋಡವ್ವ

ಕೊಡಗಿನಲ್ಲಿ ಮಕ್ಕಳಲ್ಲಿ ಇದೇ ಅರ್ಥದಲ್ಲಿ ಬಳಸುವ 'ಬೊಬ್ಬ' ಎಂಬ ವಿಶಿಷ್ಟ ಪದವಿದೆ. ಹಸು, ಎತ್ತು, ಎಮ್ಮೆ, ಕೋಣ, ಕರು ಎಲ್ಲವಕ್ಕೂ 'ಬೊಬ್ಬ' ಎಂದು ಮಕ್ಕಳು ಹೇಳುತ್ತವೆ. 'ಅಂಬಾ'...'ಅಂಬೆ' ಇವುಗಳಿಗಿಂತಲೂ 'ಬೊಬ್ಬ' ಪದ ಹೆಚ್ಚು ಬಳಕೆಯಲ್ಲಿದೆ.

ಉದಾ: ಬೊಬ್ಬ ಬಾತ್ ಕೂಸು (ದನ ಬಂತು ಮಗು).

ಬೊಬ್ಬ ಪೋಯ...? (ದನದ ಬಳಿ ಹೋಗೋಣ) ಇತ್ಯಾದಿ.

ಮಕ್ಕಳು ಭಾಷೆಯನ್ನು ಕಲಿಯುವಾಗ, ಮಾತಾಡಲು, ಆಲಿಸಿ ಅರ್ಥಮಾಡಿಕೊಳ್ಳಲು ಸಮರ್ಥರಾಗುವಾಗ ಅನುಸರಿಸುವ ಕಲಿಕೆಯ ವಿಧಾನಗಳಲ್ಲಿ ಅನುಕರಣೆಯೂ ಒಂದಾಗಿದೆ. ಚಾಲ್ತಿಯಲ್ಲಿರುವ ಭಾಷಾಕಲಿಕೆಯ ಸಿದ್ಧಾಂತಗಳಲ್ಲಿ ಅನುಕರಣೆಯ ಸಿದ್ಧಾಂತ ಹೆಚ್ಚು ಪ್ರಚಾರದಲ್ಲಿದೆ. ದೊಡ್ಡವರು ಆಡಿದ ಮಾತುಗಳನ್ನು ಅಥವಾ ಯಾವುದಾದರೂ ಶಬ್ಧಗಳನ್ನು ಮರಳಿ ತಾವೂ ಆಡಲು ಯತ್ನಿಸುವ ಮೂಲಕ ಮಕ್ಕಳು ಮಾತು ಕಲಿಯುವರು. ಇದನ್ನು ಮಕ್ಕಳೊಡನೆ ದೊಡ್ಡವರು ಮಾತಾಡುವ ಸನ್ನಿವೇಶಗಳನ್ನು ಗಮನಿಸುವ ಯಾರಾದರೂ ಗುರುತಿಸಬಹುದು. ಮಕ್ಕಳು ತಮ್ಮ ಉಚ್ಚಾರಣೆಗಳನ್ನು ಅನುಕರಿಸುತ್ತಾರೆಂಬ ನಂಬಿಕೆ, ಅನುಸರಿಸಬೇಕೆಂಬ ಉದ್ದೇಶ ದೊಡ್ಡವರಲ್ಲಿ ಇರುತ್ತದೆ.

ಇತರ ಅನುಕರಣವಾಚಿಗಳು:

ಜೀ..ಜೀ..: 'ತೊಟ್ಟಿಲು' ಜೀಜಿಲಿ ಚಾಚು(ತೊಟ್ಟಿಲಲ್ಲಿ ಮಲಗು). ಇದು ಅನುಕರಣವಾಚಿ ಪದ. ಕೊಡಗಿನಲ್ಲಿ ಹಿಂದೆ ಬೆತ್ತದಿಂದ ನೇಯ್ದ ತೊಟ್ಟಿಲುಗಳನ್ನು ಉಪಯೋಗಿಸುತ್ತಿದ್ದರು. ಈ ತೊಟ್ಟಿಲನ್ನು ತೂಗುವ ಹಗ್ಗವನ್ನೂ ಬೆತ್ತದಿಂದಲೇ ಸುಂದರವಾಗಿ ನೇಯಲಾಗುತ್ತಿತ್ತು. ಅದನ್ನು ತೂಗುವಾಗ ಅದು 'ಜೀ... ಜೀ...' ಎಂದು ಶಬ್ಧ ಬರುತ್ತಿತ್ತು. ಆ ಶಬ್ಧವನ್ನು ಅನುಕರಿಸಿ ತೊಟ್ಟಿಲನ್ನು ಸೂಚಿಸಲಾಯಿತು. ಇತ್ತೀಚೆಗೆ ಇದರ ಉಪಯೋಗ ಕಡಿಮೆಯಾಗಿದ್ದರೂ ಅದನ್ನು 'ಜೀ...ಜೀ...' ಎಂದೇ ಮಕ್ಕಳಿಗೆ ಹೇಳಿಕೊಡುವರು.

ಮಿಯ್ಯ: 'ಬೆಕ್ಕು'. ಬೆಕ್ಕು ಕೂಗುವ ಶಬ್ಧವನ್ನು ಅನುಕರಿಸಿ 'ಬೆಕ್ಕನ್ನು' ಸೂಚಿಸುವುದು.

ಉದಾ: ಮಿಯ್ಯ ಬಾತ್ (ಬೆಕ್ಕು ಬಂತು)

ಬಾ ಮಿಯ್ಯ ಕೂಸ್‌ನ ಹಕ್ಕಲೆ (ಬಾ ಬೆಕ್ಕು ಮಗುವಿನ ಹತ್ತಿರ)

ಬೌ : 'ನಾಯಿ' ಅನುಕರಣವಾಚಿ (ನಾಯಿ ಬೊಗಳುವ ಶಬ್ಧವನ್ನು ಅನುಕರಿಸಿ ನಾಯಿಯನ್ನು ಸೂಚಿಸುವುದು)

ಉದಾ: ಅದ ... ಬೌ ಬೌ (ಅಲ್ಲಿ ನೋಡು ನಾಯಿ) ಅತ್ತ ಹೋದರೆ ಬೌ ಕಚ್ಚಿದೆ (ಆ ಕಡೆ ಹೋದರೆ ನಾಯಿ ಕಚ್ಚುತ್ತದೆ)

ಡುರ್ರ: 'ಬುವ್ವ' ಶಬ್ಧದ ಅರ್ಥದಲ್ಲಿ ಬಳಕೆಯಲ್ಲಿದೆ. ಇದು ಅನುಕರಣವಾಚಿ ಶಬ್ಧ (ವಾಹನಗಳು ಚಲಿಸುವ ಶಬ್ಧವನ್ನು ಅನುಕರಿಸುವುದು.)

ಉದಾ: ಡುರ್ರ...ಬಾತ್ (ಕಾರು ಇತ್ಯಾದಿ ವಾಹನ ಬಂತು.)

ಪೊಪ್ಪ ಡುರ್ರ ಹೋತು. (ಅಪ್ಪ ವಾಹನದಲ್ಲಿ ಹೋದರು) ಇತ್ಯಾದಿ.

ಟೈ: 'ಏಟು' ಇದು ಅನುಕರಣವಾಚಿ. ಹೊಡೆದಾಗ ಬರುವ ಶಬ್ಧವನ್ನು ಅನುಕರಿಸಿ ಹೇಳುವುದು.

ಉದಾ: ಮುಟ್ಬ್ಬಡ ಟೈ...(ಮುಟ್ಟ ಬೇಡ ಏಟು ಕೊಡುತ್ತೇನೆ.)

ಅಪ್ಪ ಟೈ (ಅಪ್ಪ ಹೊಡೆದರು/ಅಪ್ಪ ಹೊಡೆಯುತ್ತಾರೆ) ಇತ್ಯಾದಿ.

ಮಗು ಹುಟ್ಟಿದ ಕ್ಷಣದಿಂದ, ತಾಯಿಯು ಅದನ್ನು ತನ್ನ ಮುಂದೆ ಅಂಗೈಯಲ್ಲಿ ಇಟ್ಟುಕೊಂಡು, ಮಗುವಿಗೆ ಯಾವುದೇ ಭಾಷೆಯನ್ನು ಅರ್ಥೈಸಿಕೊಳ್ಳುವ ಸಾಮರ್ಥ್ಯವಿಲ್ಲವೆಂಬ ಸತ್ಯ ಗೊತ್ತಿದ್ದರೂ, ಅದರೊಂದಿಗೆ ಮಾತನಾಡುತ್ತಾಳೆ. ತಾಯಂದಿರಿಗೆ ಮಕ್ಕಳ ಮೊಟ್ಟಮೊದಲ ಜೈವಿಕ ಶಬ್ಧಗಳನ್ನು ಪ್ರಚೋದನೆಗಾಗಿ ಬಳಸಿಕೊಂಡು, ಆದಷ್ಟು ಬೇಗ ಅವುಗಳೊಂದಿಗೆ ಸಂವಹನ ಕ್ರಿಯೆಯನ್ನು ಉತ್ತೇಜಿಸುವ ಸಹಜ ಪ್ರವೃತ್ತಿಯಿದೆಯೆಂದು ಕಾಣುತ್ತದೆ. ಮಗುವಿನ ತೊದಲುಗಳಿಗೆ ಉದ್ದೇಶವನ್ನು ಆರೋಪಿಸಲು ತಾಯಿ ಯಾವಾಗಲೂ ಸಿದ್ಧವಾಗಿರುತ್ತಾಳೆ ಮತ್ತು ಅದರೊಂದಿಗೆ ತನ್ನ ಸಲ್ಲಾಪವನ್ನು ರೂಪಿಸುತ್ತಾಳೆ. ಮಗುವಿಗೆ ಹಸಿವಾದಾಗ, ಅದು ನಿದ್ರೆಯಿಂದ ಎಚ್ಚೆತ್ತಾಗ ಇತ್ಯಾದಿ ಸಂದರ್ಭಗಳಲ್ಲಿ ಅದರೊಂದಿಗೆ ಅದನ್ನು ಪ್ರಶ್ನಿಸುವಂತೆ ಮಾತನಾಡುತ್ತಾಳೆ. ಪ್ರಶ್ನೆಗಳ ಮಧ್ಯೆ ಮಗುವಿನ ಪ್ರತಿಕ್ರಿಯೆಗಾಗಿ ಕಾಯುತ್ತಾಳೆ. ತಾಯಿ ಮತ್ತು ಮಗುವಿನ ಈ ಒಡನಾಟ ಮಗುವಿನ ಮುಂದಿನ ಸಂಭಾಷಣೆಯ ಮೂಲ ರಚನೆಯನ್ನು ರೂಪಿಸುತ್ತದೆ. ಮಗುವು ತನ್ನ ಸುತ್ತ ಮುತ್ತಲೂ ಗಮನಿಸಲು ಪ್ರಾರಂಭಿಸಿದ ನಂತರ, ಸುತ್ತಮುತ್ತಲಿನ ವಸ್ತುಗಳ ಬಗ್ಗೆ ಮಗುವಿನ ಗಮನ ಸೆಳೆಯಲು ತಾಯಿಯು ಗಟ್ಟಿ ದನಿಯಲ್ಲಿ ಮಾತನಾಡುತ್ತಾಳೆ. ಆಕೆಯ ದನಿಯ ಏರಿಳಿತ ಹೆಚ್ಚಾಗುತ್ತದೆ. ತನ್ನ ಮಾತುಗಳನ್ನು ಪುನರುಚ್ಚರಿಸುತ್ತಾಳೆ. ದೊಡ್ಡವರನ್ನು ಗಮನಿಸುವುದರ ಮೂಲಕ ಅವರ ಮಾತುಗಳನ್ನು ಅನುಕರಿಸಲು ಮಕ್ಕಳು ಪ್ರಯತ್ನಿಸುತ್ತವೆ. ಮೊದಲ ವರ್ಷದ ಅವಧಿಯಲ್ಲಿ ಮಗುವಿನ ಸಂಭಾಷಣಾ ಶೈಲಿಯಲ್ಲಿ ಅನೇಕ ಬದಲಾವಣೆಗಳಾಗುತ್ತವೆ. ಹೇಗೆ ಶಬ್ಧಗಳ ಮೂಲಕ ದೊಡ್ಡವರು ಬೇರೆ ಬೇರೆ ಅರ್ಥಗಳನ್ನು ಧ್ವನಿಸುತ್ತಾರೆ ಎಂಬುದರ ಬಗ್ಗೆ ಸಾಕಷ್ಟು ತಿಳುವಳಿಕೆಯನ್ನು ಹೊಂದಿರುತ್ತವೆ. ಈ ಅವಧಿಯ ಒಳಗೆ ಮಗುವು ದೊಡ್ಡವರ ಮುಖಚರ್ಯೆಯನ್ನು ಗಮನಿಸುವ ಮೂಲಕ ಅವರ ಮಾತಿಗೆ ಪ್ರತಿಕ್ರಿಯಿಸುತ್ತವೆ. ಮಕ್ಕಳಲ್ಲಿ ತೊದಲು ನುಡಿಗಳು ಕಾಣಿಸಿ ಕೊಳ್ಳುವುದರ ಹೊತ್ತಿಗೆ ದೊಡ್ಡವರ ಸಂಭಾಷಣೆಯನ್ನು ಗಮನಿಸುವುದರ ಮೂಲಕ ಮತ್ತು ಅಭ್ಯಾಸ ಮಾಡುವುದರ ಮೂಲಕ, ಸಂಭಾಷಣೆಯ ಬಗ್ಗೆ ಅದರಲ್ಲಿ ಪಾಲ್ಗೊಳ್ಳುವ ಬಗ್ಗೆ ಅವು ಸಾಕಷ್ಟು ಕಲಿತಿರುತ್ತವೆ. ಈ ರೀತಿ ಅನುಕರಣಾವಾಚಿಗಳಲ್ಲದೆ, ಕೊಡಗಿನ ಗೌಡ ಸಮುದಾಯದಲ್ಲಿ ಮಕ್ಕಳು ಉಚ್ಚರಿಸುವ ಇತರ ಪದಗಳು ಇಂತಿವೆ.

ಜೂಜಿ: ನಿದ್ರೆ ಮಾಡುವುದು.

ಉದಾ: ಜೂಜಿ ಮಾಡ್ ಕಂದಾ...(ನಿದ್ರೆ ಮಾಡು ಕಂದಾ).

ಅಕ್ಕ ಜೂಜಿ (ಅಕ್ಕ ನಿದ್ರೆ ಮಾಡಿರುವಳು).

ಜೂ: ಜೋಗುಳ, ಮಗುವನ್ನು ಮಲಗಿಸಿ ನಿದ್ರೆ ಮಾಡಿಸಲು ಹೇಳುವ ಪದ.

ಕಂದ ಜೂ... ಜೂ..., ಪುಟ್ಟ ಜೂ...ಜೂ...

ಬಾ ಕಂದ ಚಾಚು ಅವ್ವ, ಜೂಜಿ ಮಾಡ್...ಜೂ...ಜೂ...

ಪಾಪ: ೧. ಪಾಪು, ಮಗು. ಚಿಕ್ಕ ಮಕ್ಕಳನ್ನು ತೋರಿಸಿ 'ಪಾಪ' (ಪಾಪು) ಎಂದು ಮಗು ಹೇಳುತ್ತದೆ. ಉದಾ: ಪಾಪ ಬಾತ್ (ಮಗು ಬಂತು/ಪಾಪು ಬಂತು). ಪಾಪ...ಪಾಪ... (ಪಾಪು... ಪಾಪು...).

೨. ನೋವುಂಟಾದಾಗ ಅವರನ್ನು ಸಾಂತ್ವನ ಗೋಳಿಸುವುದಕ್ಕೆ 'ಪಾಪ' ಪದ ಬಳಕೆಯಾಗುತ್ತದೆ. ಮಕ್ಕಳಿಗೆ ನೋವಾದಾಗ ಹಿರಿಯರು ಅಥವಾ ದೊಡ್ಡವರಿಗೆ ನೋವಾದಾಗ ಮಕ್ಕಳು ಈ ಪದ ಬಳಸುವರು ಉದಾ: ಕೂಸ್ ಪಾಪ...(ಮಗುವಿಗೆ ನೋವಾಗಿದೆ ಪಾಪ). ಪಾಪ ಮಾಡಪ್ಪ, ಅಕ್ಕ ಪಾಪ ಇತ್ಯಾದಿ.

ಪಪ್ಪಿ: ಮುತ್ತು. ಉಮ್ಮ: ಮುತ್ತು. ಮುದ್ದಿಸುವುದನ್ನು ಮಕ್ಕಳು 'ಪಪ್ಪಿ' 'ಉಮ್ಮ' ಎಂದು ಸೂಚಿಸುತ್ತದೆ. ಒಂದ್ ಪಪ್ಪಿ ಕೊಡವ್ವಾ... ನಂಗೊಂದ್ ಉಮ್ಮ ಕೊಡು ಕೂಸು... (ನನಗೊಂದು ಮುತ್ತು ಕೊಡು)

ಬೋಬು: ಮೊಲೆಹಾಲು/ಹಾಲು. ಉದಾ: ಬೋಬು ಕುಡಿಯವ್ವ (ಹಾಲು ಕುಡಿಯಪ್ಪ) ಕೂಸಿಗೆ ಬೋಬು? (ಮಗುವಿಗೆ ಹಾಲು ಬೇಕೆ?)

ಚೊರ್ರ: ಮೂತ್ರ ವಿಸರ್ಜಿಸು. (ಚೊರ್ರ... ಮಾಡ್)

ತೂ ಮಾಡ್: ಉಗಿಯುವಂತೆ ಹೇಳುವ ಪದ. ಇಸ್... ತೂಮಾಡ್ (ಗಲೀಜು ಉಗಿ)

ಆಮಾಡ್: ಬಾಯಿ ತೆರೆ. ಎಲ್ಲವ್ವ ಆ... ಮಾಡ್. (ಮಗು... ಬಾಯಿ ತೆರೆ) 'ಉಹ್....ಉಹ್...' ಎಂದು ಗಾಳಿ ಹುರುಗಿ ಬಿಸಿ ಇದೆ ಎಂಬುದನ್ನು ಸೂಚಿಸುವುದು. ಅಬ್ಬೋ! ಉಹ್...ಉಹ್...(ಅಬ್ಬಾ! ಬಿಸಿಯಾಗಿದೆ) ಬಿಸಿಯನ್ನು ತಣ್ಣಗಾಗಿಸಲು ಹುರುಗುವುದು. ಉಹ್... ಮಾಡವ್ವ

ಹುಗ್ಗೆ: ಗೌಡ ಕನ್ನಡದಲ್ಲಿ ಅನ್ನಕ್ಕೆ ಹಿಂದೆ 'ಹುಗ್ಗೆ' ಎನ್ನುವರು. ಆಗ ಮಗುವಿಗೆ ಮರದ ತಟ್ಟೆಯಲ್ಲಿ ಅನ್ನ, ಹಾಲು ಹಾಕಿ ನುಣ್ಣಗೆ ಅರೆದು ತಯಾರಿಸುವ ಆಹಾರಕ್ಕೆ ಹುಗ್ಗೆ ಎನ್ನುವರು. ಹುಗ್ಗೆ ತಿಂದ್ ಚಾಚೊನೋ (ಅನ್ನ ತಿಂದು ಮಲಗೋಣ).

ಮೂಕ್‌ಚಾರ್: ಸಿಂಬಳವನ್ನು ಸೂಚಿಸುವ ರೂಪ. ಈ ಪದವನ್ನು ಮಕ್ಕಳ ಜೊತೆ ಹಿರಿಯರು ಮಾತನಾಡುವಾಗ ಬಳಸುವರು. ಕೂಸ್‌ನ ಮೂಕ್‌ಲಿ ಚಾರ್ ನೋಡು ಬಾವ್ವ ತೆಗೆಯೊನೊ. (ಮಗುವಿನ ಮೂಗಿನಲ್ಲಿ ಸಿಂಬಳವಿದೆ ನೋಡು ಬಾ ಮಗು ತೆಗೆಯೋಣ)

ಆಯಿ: ೧. ಗಾಯ ಆಗಿರುವುದನ್ನು ಸೂಚಿಸುವ ಪದ. ನೋವನ್ನು ಸೂಚಿಸಲು.

೨. ಚೂಪಾದ ಆಯುಧಗಳಿಂದ ನೋವಾಗುವುದೆಂದು ಸೂಚಿಸಲು.

೩. ದೀಪ/ಬೆಂಕಿ ಇತ್ಯಾದಿ ಸುಡುವ ವಸ್ತುಗಳಿಂದ ದೂರ ಇರಬೇಕೆಂದು ಸೂಚಿಸುವ ಪದ.

೪. ಪ್ರಾಣಿ ಅಥವಾ ಹುಳುಗಳನ್ನು ಮುಟ್ಟಿದರೆ ತೊಂದರೆಯಾಗಬಹುದು ಎಂದು ಅದನ್ನು ಮುಟ್ಟಬಾರದು ಎಂದು ಸೂಚಿಸುವ ಪದ.

ಉದಾ: ಕೂಸಿಗೆ ಆಯಿ ಆತಾ (ಮಗುವಿಗೆ ಗಾಯ ಆಯಿತಾ?)

ಮುಟ್ಟ್ ಬಡ ಆಯಿ ಆದೆ. (ಮುಟ್ಟ ಬೇಡ ನೋವಾಗುತ್ತದೆ.)

ಹಾಬಿ.....ಆಯಿ.... (ಹುಳು ಇದೆ... ಕಚ್ಚುತ್ತದೆ) ಇತ್ಯಾದಿ.

ಮಾಮ್: ೧. ತಿಂಡಿ, ಊಟ ಇತ್ಯಾದಿ ಆಹಾರಗಳು.

ನಿಂಗೆ ಮಾಮ್ ತನ್ನೆ. ಮಾಮ್‌ಮಾಡ್.

(ನಿನಗೆ ಊಟ ತರುತ್ತೇನೆ, ಊಟ ಮಾಡು.)

೨. ತಿನ್ನು ಸೇವಿಸು ಎಂದು ಹೇಳಲು. ಮಮ್ ಮಾಡ್. (ತಿನ್ನು...)

ಗುಮ್ಮ: **'ಭೂತ'** ಮಕ್ಕಳನ್ನು ಹೆದರಿಸಲು ಹೇಳುವ ಪದ. ಮಕ್ಕಳು ಆಚೆ ಈಚೆ ಹೋಗುವುದನ್ನು ತಡೆಯಲು ಗಲಾಟೆ ಮಾಡಿದಾಗ ನಿಯಂತ್ರಿಸಲು ಭೂತದ ಬಗೆಗೆ ಹೆದರಿಕೆ ಮೂಡಿಸಲು ಈ ಪದ ಬಳಕೆಯಾಗಿದೆ.

ಉದಾ: ಅಲ್ಲಿ ಹೋಬಡ ಗುಮ್ಮ ಉಟ್ಟು. (ಆ ಕಡೆ ಹೋಗಬೇಡ ಗುಮ್ಮ ಇದೆ.)

ಮ್...ಮ್: ಗುಮ್ಮ ಇದೆ ಎಂದು ಸೂಚಿಸಲು ಮ್...ಮ್... ಎಂದು ಶಬ್ದ ಮಾಡುವುದು.

ಉದಾ: ಚಾಚು ಮ್...ಮ್..(ಮಲಗು ಗುಮ್ಮ ಬಂತು ಮ್...ಮ್...)ಇತ್ಯಾದಿ.

ತಾನಿ ತಾನಿ: ಮಕ್ಕಳು ಹೆಜ್ಜೆ ಇಟ್ಟು ನಡೆಯುವುದನ್ನು ಸೂಚಿಸಲು ತಾನಿತಾನಿ ಪದವನ್ನು ಬಳಸುವರು. ಉದಾ: ಬಾ ಪುಟ್ಟ ತಾನಿ ತಾನಿ ಬಾ.. ತಾನಿ ತಾನಿ ಪೋಯ...

ಬುಸ್ಸ್: ಇದು ಅನುಕರಣವಾಚಿ ಶಬ್ದ. ಹಾವು ಮಾಡುವ ಶಬ್ದವನ್ನು ಅನುಕರಿಸುವುದರ ಮೂಲಕ ಮಗುವಿಗೆ ಹಾವನ್ನು ಸೂಚಿಸುವ ರೂಪ.

ಮುಚ್ಚ್: ಮಕ್ಕಳು ಕಿರುಚುವಾಗ ಸುಮ್ಮನಿರಿಸಲು ಮಚ್ಚ್(ಮುಚ್ಚು) ಎಂದು ಗದರಿಸುವರು.

ಉದಾ: ಏಯ್ ಮುಚ್ಚ್ ಪೆಟ್ಟು (ಏಯ್ ಬಾಯಿ ಮುಚ್ಚು ಏಟು ಕೊಡುತ್ತೇನೆ)

ಕೂಚು: ಕುಳಿತು ಕೊಳ್ಳುವುದು. ಮಗುವಿಗೆ ಕುಳಿತುಕೊಳ್ಳಲು ಹೇಳುವಾಗ, ಅಥವಾ ಮಕ್ಕಳು ಕುಳಿತುಕೊಳ್ಳಲು ಸೂಚಿಸಲು 'ಕೂಚು' ಪದ ಬಳಕೆಯಲ್ಲಿದೆ.

ಉದಾ: ಬಾವ್ವ ಕೂಚು ಇಲ್ಲಿ. (ಬಾ ಮಗು ಕೂರು ಇಲ್ಲಿ)

ಕುಪ್ಪ: ತೊಡುವ ಬಟ್ಟೆ. ಬಾ ಕುಪ್ಪ ಹಾಕಿನೆ. (ಬಾ ಬಟ್ಟೆ ಹಾಕುತ್ತೇನೆ). ಹೊಸ ಕುಪ್ಪ ಲಾಯ್ಕ ಉಟ್ಟು (ಹೊಸ ಬಟ್ಟೆ ಚೆನ್ನಾಗಿದೆ). ಕೊಡಗಿನ ಗೌಡ ಜನಾಂಗದಲ್ಲಿ ಗಂಡಸರ ಸಾಂಪ್ರದಾಯಿಕ ವಸ್ತ್ರಕ್ಕೆ 'ಕುಪ್ಪಸ' ಎನ್ನುವರು. ಬಹುಶಃ ಈ ಪದದಿಂದ ಮಕ್ಕಳಲ್ಲಿ 'ಕುಪ್ಪ' ಶಬ್ದ ಬಂದಿರಬಹುದು ಎಂಬ ಊಹೆ ಇದೆ.

ಕಕ್ಕ: ೧. ಕೊಳೆ, ಗಲೀಜು, ಕೊಳಕು. ಈ... ಮುಟ್ಬ್‌ಬಡ ಕಕ್ಕ.

(ಅಯ್ಯೋ ಗಲೀಜು ಮುಟ್ಟಬೇಡ.)

೨. ಕಕ್ಕಸು. ಕಕ್ಕ ಮಾಡ್ ಬಾ.

ಜಿಜ್ಜಿ ಮೀಯಿ: ಸ್ನಾನ ಮಾಡುವುದು.

ಉದಾ: ನಿನ್ನ ಜಿಜ್ಜಿ ಮೀಯಿಸಿನೆ ಬಾ..(ನಿನ್ನನ್ನು ಸ್ನಾನ ಮಾಡಿಸುತ್ತೇನೆ ಬಾ..)

ಪೊವ್ವ: ಸುಂದರ, ಚೆನ್ನಾಗಿದೆ, ಸುಂದರವಾಗಿದೆ ಎಂದು ಸೂಚಿಸುವ ಪದ.

ಉದಾ: ಪೊವ್ವ... ಪೊವ್ವ ಕುಪ್ಪ(ಚೆನ್ನಾಗಿದೆ, ಸುಂದರವಾದ ಬಟ್ಟೆ)

ಚಂದ: ಅಲಂಕಾರ ಸಾಮಾಗ್ರಿ (ಪೌಡರು, ಬಳೆ. ಸರ, ಉಗುರಿನ ಬಣ್ಣ ಇತ್ಯಾದಿ)

ಉದಾ: ಬಾ ನಿಂಗೆ ಚಂದ ಹಾಕಿನೆ. (ಬಾ ಮಗು ನಿನಗೆ ಬೊಟ್ಟು ಇಡುತ್ತೇನೆ/ ಬಳೆ ತೊಡಿಸುತ್ತೇನೆ ಇತ್ಯಾದಿ).

ಪೆಪ್ಪಿ: ಚಾಕ್ಲೇಟು, ಪೆಪ್ಪರ್‌ಮೆಂಟ್‌ನ್ನು ಸೂಚಿಸಲು ಮಗು ಬಳಸುವ ಪದ.

ಉದಾ: ನಂಗೆ ಪೆಪ್ಪಿ.... (ನನಗೆ ಪೆಪ್ಪರ್‌ಮೆಂಟು ಬೇಕು)

ಪೆಪ್ಪಿ ತಾಕಾ? (ಪೆಪ್ಪರ್‌ಮೆಂಟು ತರಬೇಕಾ?)

ಆಟ: ಆಟದ ಸಾಮಾನುಗಳು, ಬೊಂಬೆ ಇತ್ಯಾದಿ ಆಟಿಕೆಗಳು.

ಉದಾ: ಇದ ಇಲ್ಲಿ ಆಟ (ಇಲ್ಲಿ ನೋಡು ಆಟಿಕೆ)

ಬಾ ಇದ ಆಟ (ಬಾ ಆಟಿಕೆ ತೆಗೆದುಕೊ)

ಅಪ್ಪಿ: ರೊಟ್ಟಿ ಕೊಡಗಿನಲ್ಲಿ ತಯಾರಿಸುವ ಪ್ರಮುಖ ಆಹಾರ ಪದಾರ್ಥಗಳಲ್ಲಿ ಅಕ್ಕಿ ರೊಟ್ಟಿಯನ್ನು ಮಕ್ಕಳು 'ಅಪ್ಪಿ' ಎಂದು ಹೇಳುತ್ತವೆ.

ಉದಾ: ಅಪ್ಪಿ ಮಾಡೊನೊ. (ರೊಟ್ಟಿ ಮಾಡೋಣ)

ಬಿಕ್ಕಿ: 'ಬಿಸ್ಕತ್ತು'. ಉದಾ: ಬಿಕ್ಕಿ ಬೇಕಾ? ಬಿಕ್ಕಿ ತಿನ್ಸ್.
(ಬಿಸ್ಕತ್ತು ಬೇಕೆ? ಬಿಸ್ಕತ್ತು ತಿನ್ನು)

ಮಿಮ್ಮಿ: ಮೀನನ್ನು ಸೂಚಿಸಲು ಮಕ್ಕಳು ಬಳಸುವ ಪದ.
ಉದಾ: ಮಿಮ್ಮಿ ಬೇಕ್. (ಮೀನು ಬೇಕು) ಮಿಮ್ಮಿ ತಿಂದಿಯಾ.(ಮೀನು ತಿನ್ನುವೆಯಾ?)

ಚಿಚ್ಚಿ: 'ಮಾಂಸ'ವನ್ನು ಮಕ್ಕಳು 'ಚಿಚ್ಚಿ' ಎನ್ನುವರು. ಕೊಡಗಿನ ಗೌಡರು ಮಾಂಸಾಹಾರಿಗಳಾದ್ದರಿಂದ ಮಕ್ಕಳಿಗೆ ಅದನ್ನು 'ಚಿಚ್ಚಿ' ಎಂದು ಅದನ್ನು ತಿಳಿಸಿರುವರು.

ಉದಾ: ಚಿಚ್ಚಿ ಸಾರ್(ಮಾಂಸದ ಸಾರು).
ಚಿಚ್ಚಿ ಬೋಕಾ? (ಮಾಂಸ ಬೇಕಾ?) ಇತ್ಯಾದಿ.

ಚುಂಯಿ: ಚುಚ್ಚು/ಚುಚ್ಚು ಮದ್ದು.

ಉದಾ: ಕೂಸೂ... ಚುಂಯಿ ಆದೆ (ಮಗೂ ಚುಚ್ಚುತ್ತದೆ) ನಿಂಗೆ ಚುಂಯಿ ಮಾಡೋಕು
(ನಿನಗೆ ಇಂಜೆಕ್ಷನ್ ಕೊಡಿಸಬೇಕು)

ಕೊಕ್ಕ: 'ಕೋಳಿ'ಯನ್ನು ಸೂಚಿಸುವ ಪದ.
ಉದಾ: ಕೊಕ್ಕ ಕಚ್ಚು. (ಕೋಳಿ ಕಚ್ಚುತ್ತದೆ) ಕೊಕ್ಕ ಚಿಚ್ಚಿ (ಕೋಳಿ ಮಾಂಸ).

ಕೊಡಗಿನ ಗೌಡ ಸಮುದಾಯದ ಕೌಟುಂಬಿಕ ವಲಯದಲ್ಲಿ ಹಿರಿಯರು ಮಕ್ಕಳಿಗೆ ಸಂದರ್ಭಕ್ಕೆ ತಕ್ಕಂತೆ ಹಾಡನ್ನು ಹೊಂದಿಸಿ ಹೇಳಿಕೊಟ್ಟಿರುವ ಹಾಡುಗಳು ಇಂದಿಗೂ ಕಂಡುಬರುತ್ತಿದೆ. ಮಕ್ಕಳ ಜೊತೆ ಆಟವಾಡುವಾಗ, ಮಕ್ಕಳನ್ನು ಸಂತೋಷಗೊಳಿಸಲು ವಿನೋದದಿಂದ ಹೇಳಿದ ಪದಗಳು ಇಲ್ಲಿ ಕಂಡುಬರುತ್ತವೆ. ಅಂತಹ ಹಾಡುಗಳು ಕೆಳಗಿನಂತಿವೆ.

ಅಪ್ಪಂಗೆ ಜೋರ(ಜ್ವರ).
ಅವ್ವಂಗೆ ಕುರ(ಕುರ).
ನಂಗೆಮ್ಮೆ ಪಾರ(ಕಾಯುವುದು/ ನೋಡಿಕೊಳ್ಳುವುದು).
ಚಾಂಪಂಗೆ ದನ ಪಾರ.
ಚಾಮೆವ್ವಂಗೆ ಮಕ್ಕಳ ಪಾರ.
ನಿಮಿಗೆ ಮಾತ್ರ ಸಸಾರ....

ಅಪ್ಪನಿಗೆ ಜ್ವರ ಬಂದಿದೆ, ಅಮ್ಮನಿಗೆ ಕುರ ಎದ್ದಿದೆ, ಹಾಗಾಗಿ ನಾನು ಎಮ್ಮೆ ಕಾಯುತ್ತಿರುವೆ (ಮೇಯಿಸುತ್ತಿರುವೆ) ಅಜ್ಜನು ದನ ನೋಡುತ್ತಿರುವನು, ಅಜ್ಜಿ ಮಕ್ಕಳನ್ನು ನೋಡಿಕೊಳ್ಳುತ್ತಿರುವಳು. ಅಂದರೆ, ತಂದೆ ತಾಯಿಗೆ ಮೈಯಲ್ಲಿ ಹುಷಾರಿಲ್ಲ, ಆ ಕಾರಣ ನಾನು ಕೆಲಸ ಮಾಡುತ್ತಿರುವೆ. ಆದರೆ, ನೀವು ನನ್ನ ನೋಡಿ ನಗುತ್ತಿರುವಿರಿ. ನಿಮಗೆ ನನ್ನನ್ನು ಸಸಾರವಾಗಿದೆ ಎಂಬ ಕಥೆಯನ್ನು ಹಾಡಿನಂತೆ ಹೇಳಿ ಮಕ್ಕಳನ್ನು ನಗಿಸುವುದು.

ಹಿರಿಯರು ಮಕ್ಕಳನ್ನು ಎರಡೂ ಕೈಗಳಿಂದ ಮೇಲಕ್ಕೆ ಎತ್ತಿ ಆಚೆ–ಈಚೆ ಬಾಗಿಸುತ್ತಾ ಆಡಿಸುವಾಗ ಹೇಳುವ ಹಾಡು.

ಕೇಡ್ ಗಿಡ್‌ಜ.... ಕೆಂದಗಿಡ್‌ಜ
ಅಂಗಳದಲ್ಲಿದ್ದ ಬಿಳಿ ಕೋಳಿ
ಪಿಳ್ಳೆನ ತಕೊಂಡೋಗಿ
ಬಾಗೆ ಮರಲಿ ಕುದ್ದತ್...
ಬಾಗೆ ಮರ ಬಾ....ಗಿ ಹೋತ್.

ಇಲ್ಲಿ ಗಿಡ್‌ಜ ಎಂಬುದು ಗಿಡುಗನನ್ನು, ಕೇಡ್ ಗಿಡ್‌ಜ ಎಂಬುದು ಕೆಟ್ಟ ಬುದ್ಧಿಯ ಗಿಡುಗ ಎಂಬರ್ಥದಲ್ಲಿದೆ, ಕೆಂದ್ ಗಿಡ್‌ಜ ಎಂದರೆ ಕೆಂಪು ಗಿಡುಗ. ಇದೇ ರೀತಿ ಕಾಲಿನ ಮೇಲೆ ಕುಳ್ಳಿರಿಸಿ ತೂಗುತ್ತಾ... ಹೇಳುವ ಹಾಡು..

ಕಾಲಾಡ್ ಕಪ್ಪೆ ಕಾಲಾಡ್...
ನೀರಿಗೆ ಬಿದ್ದರೆ ತೇಲಾಡ್....

ಇದೇ ರೀತಿಯ ಇನ್ನೊಂದು ಹಾಡು...

ನಾನ್ ನೀನ್ ಸೇರಿಕಂಡ್
ಗೋಣಿ ಕೊಪ್ಪಕ್ಕೆ ಹೋಕಂಡ್
ಮುದಿ ಎತ್ತ್ ತಂದ್‌ಕಂಡ್
ಹಡ್ಲ್ ಗದ್ದೆನ ಹೂಡಿಕಂಡ್
ಗೋಳು ಗೋಳು ಗೋಳಣ್ಣ....

ಇಲ್ಲಿ ಗೋಣಿಕೊಪ್ಪ ಊರ ಹೆಸರು. ಇಲ್ಲಿ ವರ್ಷವೂ ದನದ ಜಾತ್ರೆ ನಡೆಯುವುದು. ಗೌಡ ಜನಾಂಗದವರ ಮಧ್ಯಮ ವರ್ಗದವರು ಹೆಚ್ಚು ಹಣ ಕೊಟ್ಟು ಎತ್ತು ತರಲಾರದೆ ಮುದಿ ಎತ್ತು ತಂದು ಊಳಲಾರದೆ ಗದ್ದೆಯನ್ನು ಪಾಳುಬಿಟ್ಟು ಗೋಳು ಪಡುವ ವಿಷಯವನ್ನು ಮಕ್ಕಳಿಗೆ ಪದ್ಯವಾಗಿ ಹೇಳಿಕೊಡುವುದು. ಮಕ್ಕಳೂ ಹಿರಿಯರನ್ನು ಅನುಕರಿಸಿ ಹಾಡುವುದನ್ನು ಇಲ್ಲಿ ಕಾಣಬಹುದು.

ಚಿಕ್ಕಮಕ್ಕಳ ಕೈಗಳಲ್ಲಿ ಚಪ್ಪಾಳೆ ಹೊಡೆಸುತ್ತಾ ಅಥವಾ ಎರಡೂ ಅಂಗೈಗಳನ್ನು ಹಿಡಿದು ತಟ್ಟುತ್ತಾ...

ಅಪ್ಪಿ ಅಪ್ಪಿ ಅಪ್ಪಿ...
ಅಪ್ಪಂಗೊಂದ್ ಅಪ್ಪಿ...
ಅವ್ವಂಗೊಂದ್ ಅಪ್ಪಿ...
ಅಣ್ಣಯ್ಯಂಗೊಂದ್ ಅಪ್ಪಿ...
ಅಕ್ಕಯ್ಯಗೊಂದ್ ಅಪ್ಪಿ...
ಬೋಜಂಗೊಂದ್ ಅಪ್ಪಿ...
ಕೂಸಿಗೊಂದ್ ಅಪ್ಪಿ...
ಮಾಮ್... ಮಾಮ್ ಮಾಮ್...

ಎಂದು ತಿನ್ನುವಂತೆ ಅಭಿನಯಿಸಿ ಆಡಿಸಿ ನಗಿಸುವ ಹಾಡಿದು. ಇಲ್ಲಿ ಅಪ್ಪಿ ಎಂಬುದು ಬಾಲ ಭಾಷೆಯ ರೊಟ್ಟಿಯನ್ನು ಸೂಚಿಸುವ ರೂಪವಾಗಿದೆ. ಬೋಜ ತಂದೆಯ ಸಹೋದರರಾಗಿರುತ್ತಾರೆ.

'ಅಪ್ಪಿ' ಎಂದರೆ ರೊಟ್ಟಿಯನ್ನು ಸೂಚಿಸುವ ಪದವಾಗಿ ಮಗು ಬಳಸುತ್ತದೆ. ಈ ಹಾಡನ್ನು ಹೇಳಿದಾಗ ಮಗು/ಮಕ್ಕಳು ಎರಡೂ ಕೈ ಜೋಡಿಸಿ ಚಪ್ಪಾಳೆಯಂತೆ ತಟ್ಟುತ್ತಾ ಸಂತೋಷ ಪಡುತ್ತವೆ.

ಉದ್ದ ಬಾ ಮೂಕು ಉದ್ದಬಾ...
ಪ್ಯಾಟೆಗೆ ಹೋಬಡ ಮೂಕು...ಇತ್ತಬಾ..
ಉದ್ದ ಬಾ ಮೂಕು ಉದ್ದ ಬಾ...
ಕುಂದ್ ಹತ್ತ್ ಬಡ ಮೂಕು... ಇತ್ತಬಾ...
ಉದ್ದ ಬಾ ಮೂಕು ಉದ್ದ ಬಾ...
ಆಕಾಸ ನೋಡ್‌ಬಡ ಮೂಕು ಇತ್ತಬಾ...
ಉದ್ದ ಬಾ ಮೂಕು... ಉದ್ದ ಬಾ...
(ಇಲ್ಲಿ ಕುಂದ್ ಬೆಟ್ಟವನ್ನು ಸೂಚಿಸುವ ಶಬ್ದ)

ಇಲ್ಲಿ ತಾಯಿ ಅಥವಾ ಅಜ್ಜಿ ಎಳೆಯ ಮಕ್ಕಳಿಗೆ ದಿನಕ್ಕೆರಡು ಬಾರಿ ದೇಹಕ್ಕೆ ಎಣ್ಣೆ ಹಚ್ಚಿ ತೀಡಿ, ಕೈ-ಕಾಲನ್ನು ಉಜ್ಜಿ, ಕಾಲನ್ನು ಹಣೆಗೆ ಮುಟ್ಟಿಸಿ, ಕೈಯನ್ನು ಬೆನ್ನಿಗೆ ತಂದು ಇತ್ಯಾದಿಯಾಗಿ ವ್ಯಾಯಾಮ ಮಾಡಿಸುತ್ತಾರೆ. ಮುಖದಲ್ಲಿ ಕಾಣುವ ಮೂಗು ಉದ್ದವಾಗಿ, ನೇರವಾಗಿರಬೇಕು ಎಂದು ಎಣ್ಣೆ ಹಚ್ಚಿ ತೀಡುವಾಗ ಮಗುವು ನೋವಾಗಿ ಅಳುತ್ತದೆ. ಆಗ ಅಳದಿರಲೆಂದು ಈ ಹಾಡನ್ನು ಹೇಳಿ ಬೇರೆಡೆ ಅದರ ಗಮನ ಹರಿಯುವಂತೆ ಮಾಡಿದಾಗ ಮಗು ನೋವು ಮರೆತು

ಹಾಡನ್ನು ಆಲಿಸುತ್ತಾ ಸುಮ್ಮನಾಗುವುದು. ಹೀಗೆ ಹಾಡುತ್ತಾ ಎಣ್ಣೆ ಹಾಕುವುದನ್ನು ಕಾಣಬಹುದು. ಸುಮಾರು ನಾಲ್ಕು-ಐದನೇ ವಯಸ್ಸಿನಲ್ಲಿ ಮಕ್ಕಳು ಈ ಹಾಡನ್ನು ಆಟವಾಡುವಾಗ ಹೇಳುತ್ತಾ ಇರುವುದನ್ನು ಕಾಣಬಹುದು.

ಮಗುವಿಗೆ ಎಣ್ಣೆ ಹಚ್ಚಿದ ನಂತರ ಸ್ನಾನ ಮಾಡಿಸುವರು. ಸ್ನಾನ ಮಾಡಿಸುವಾಗ ಬಿಸಿ ನೀರು ಮೈಗೆ ಹಾಕುತ್ತಾ ಮಗು ಅಳದಂತೆ ಈ ಕೆಳಗಿನ ಹಾಡನ್ನು ಹಾಡುತ್ತಾ ಸ್ನಾನ ಮಾಡಿಸುವರು.

ಅಪ್ಪ ನೆಟ್ಟ ತೆಂಗಿನ ಮರಕೆ ನೀರ್ ಹೋಗಲಿ
ಜಿಜಿ ಜಿಲಾ......
ಅಪ್ಪ ನೆಟ್ಟ ಬಾಳೆ ಗಿಡಕೆ ನೀರ್ ಹೋಗಲಿ
ಜಿಜಿ ಜಿಲಾ......
ಅಪ್ಪ ನೆಟ್ಟ ಮಾಯನ ಮರಕೆ ನೀರ್-ಹೋಗಲಿ
ಜಿಜಿ ಜಿಲಾ...... ಇತ್ಯಾದಿ.

ಹೀಗೆ ಹಾಡುತ್ತಾ ಹಾಡುತ್ತಾ ಸ್ನಾನ ಮಾಡಿಸುವುದು. ಮಗು ಹಾಡಿಗೆ ಕಿವಿಗೊಡುತ್ತಾ ಅಳದೆ ಸುಮ್ಮನಿರುವುದು. ಚಿಕ್ಕ ಮಕ್ಕಳು ಹಠ ಮಾಡಿ ಅಳುವಾಗ ನಗಿಸಲು ಹಿರಿಯರು ಹೇಳುವ ಹಾಡು.

ದಬ್ಬಡ್ಕ ಬಾಣೆಲಿ ದಿಬ್ಬಣ ಬಂದುಟ್ಟು
ಅಳ್‌ಬಡ ಸಣ್ಣಕ್ಕ....
ಕೊಟ್ಟ್‌ಕತ್ತಿ ಬಾಣೆಲಿ ಕೊಂಬೋಲಗ ಕೇಳ್‌ದೆ
ಅಳ್‌ಬಡ ಕುಞಕ್ಕ... ಇತ್ಯಾದಿ.

ಇಲ್ಲಿ ಮಕ್ಕಳನ್ನು ನಗಿಸಿ ಸಂತೋಷಗೊಳಿಸುವುದೇ ಇವರ ಉದ್ದೇಶವಾಗಿರುತ್ತದೆ. ಇದನ್ನೇ ಮಕ್ಕಳೂ ಅನುಕರಿಸಿ ಹಾಡುತ್ತವೆ.

ಕೊಡಗಿನಲ್ಲಿ ಮಳೆ ಜೋರು. ಅದರ ತೀವ್ರತೆಯಿಂದ ಜನರು ಕೆಲವರು ಸೋಂಬೇರಿಗಳಾಗಿ ಚಳಿಕಾಯಿಸುತ್ತಾ ಒಲೆ ಮುಂದೆ ಕೂತು ಕಾಲ ಕಳೆಯುತ್ತಾರೆ. ಮಳೆಯಲ್ಲಿ ಕೆಲಸ ಮಾಡಲು ಉದಾಸೀನವಾಗಿ ಕುಳಿತ ತಂದೆಯ ಬಗೆಗೆ ಹೀಗೊಂದು ಹಾಡನ್ನು ತಾಯಿ ಮಕ್ಕಳಿಗೆ ಹೇಳಿಕೊಡುವುದು..

ಈ ಕಾಲ ಮಳೆಗಾಲ ಬಾಳ
ನಮ್ಮಪ್ಪ ಒಲೆ ಬುಡಂದ ಏಳ
ಸಾಲ ಕೊಟ್ಪೋವೆಲ್ಲಾ ಬೊನ್ನಿ...
ನಮ್ಮಂಗಳ ಮೊಣ್ಣು ತಿನ್ನಿ....

(ಇಲ್ಲಿ ಒಲೆ ಬುಡ ಎಂದರೆ ಒಲೆಯ ಪಕ್ಕದಿಂದ ಹಾಗೂ ಮೊಣ್ಣು ಎಂದರೆ ಮಣ್ಣು ಎಂಬರ್ಥವಿದೆ.)

ಈ ವರುಷ ಮಳೆಗಾಲ ಬಹಳ ಜೋರು, ನಮ್ಮ ಅಪ್ಪ ಒಲೆಯ ಹತ್ತಿರದಿಂದ ಏಳುವುದಿಲ್ಲ. ಹಾಗಾಗಿ ಬೇಸಾಯ, ತೋಟ ಕೆಲಸ ಯಾವುದೂ ಆಗುವುದಿಲ್ಲ. ಸಾಲ ಕೊಟ್ಟವರಿಗೆ ಹಣ ಹಿಂದಿರುಗಿಸಲು ಬೆಳೆಯೇನು ಇಲ್ಲ. ಹಾಗಾಗಿ ಎಲ್ಲಾ ಬಂದು ನಮ್ಮ ಮನೆಯ ಅಂಗಳದ ಮಣ್ಣು ತಿನ್ನಿ.. ಅದೇ ನಿಮಗೆ ಗತಿ ಎಂದು ಹೇಳಿದಾಗ ಮಕ್ಕಳು ನಕ್ಕು ಸಂತೋಷಗೊಳ್ಳುತ್ತವೆ. ಅವೂ ತಲೆದೂಗುತ್ತಾ ತಾವೂ ಹಾಡುವವು.

ಸೆಗಣಿ ಕಟ್ಟೆ ಕಟ್ಟಿ
ಜಿಜ್ಜಿ ಮೀದ್
ಪೊವ್ವ ಕುಪ್ಪಹಾಕಿ
ಹಾಲನ್ನ ಉಂಡ್
ಮಾಮ ಮನೆಗೆ ನಡಿ ಕೂಸು...
ಮುಂದೆ ಮುಂದೆ ನೀ...
ಹಿಂದೆ ಹಿಂದೆ ನಾ...
ಮಾಮನೆಗೆ ದಾರಿಯಾದ್....
ಮಾಮನೆಗೆ ದಾರಿಯಾದ್....
ಇಲ್ಲಿ...ಇಲ್ಲಿ...ಇಲ್ಲಿ...ಇಲ್ಲಿ...

ಅಳುವ ಮಕ್ಕಳನ್ನು ಸಮಾಧಾನಪಡಿಸಲು ತಾಯಿ ಅಥವಾ ಇತರರು ಮಕ್ಕಳ ಕೈ ಹಿಡಿದು ಆಟವಾಡಿಸುತ್ತಾ ಕಚಗುಳಿ ಇಟ್ಟು ಸಂತೋಷಪಡಿಸುವ ಹಾಡಿದು... ಸ್ನಾನಮಾಡಿ, ಹೊಸಬಟ್ಟೆ ತೊಟ್ಟು, ಹೊಟ್ಟೆ ತುಂಬ ಉಂಡು ಮಾವನ ಮನೆಗೆ (ಅಜ್ಜಿಮನೆ) ಹೋಗೋಣ ಎಂದು ತಾಯಿ ಮಗುವಿನೊಂದಿಗೆ ಆಡುತ್ತಾಳೆ.

ಇಲ್ಲಿರುವ ಶಿಶುಗೀತೆಗಳನ್ನು ಗಮನಿಸಿದಾಗ ಇವುಗಳು ಶಿಷ್ಟ ಕನ್ನಡದಲ್ಲಿರುವ ಶಿಶು ಗೀತೆಗಳಿಗಿಂತ ಭಿನ್ನವಾದ ರೂಪದಲ್ಲಿರುವುದನ್ನು ಕಾಣಬಹುದು. ಇದಕ್ಕೆ ಇಲ್ಲಿನ ಪ್ರಾದೇಶಿಕ ಹಿನ್ನೆಲೆ ಕಾರಣವಾಗಿರಬಹುದು. ಇಲ್ಲಿರುವ ಮಗುವು ಶಿಶುಗೀತೆಯಲ್ಲಿ ತಾನು ಎಮ್ಮೆ ಕಾಯುತ್ತಿರುವೆನು ಎಂದು ಹೇಳುತ್ತದೆ. ಇಲ್ಲಿ 'ಪಾರ' ಎಂದರೆ ಕಾಯುವುದು (ಮನೆಪಾರ, ತೋಟಪಾರ, ಕೂಸುನ ಪಾರ). ಕೊಡಗಿನಲ್ಲಿ ಭತ್ತದ ಬೆಳೆಯನ್ನು ಕುಯಿದು ಗದ್ದೆಯಿಂದ ಕಣಕ್ಕೆ ತಂದ ನಂತರ ದನಗಳನ್ನು ಗದ್ದೆಗೆ ಮೇಯಲು ಬಿಡುವರು. ದನಗಳು ಇತರರ ಗದ್ದೆಗೆ ಹೋಗದಂತೆ, ಬೇಲಿ ದಾಟದಂತೆ, ತೋಟಗಳಿಗೆ ನುಸುಳದಂತೆ ಅದನ್ನು ಕಾಯಲಾಗುವುದು ಆ ಸಂದರ್ಭವನ್ನು ಸೇರಿಸಿಕೊಂಡು ಮಕ್ಕಳಿಗಾಗಿ ಹಾಡನ್ನು ಕಟ್ಟಲಾಗಿದೆ.

ಇಲ್ಲಿಯ ಸಾಮಾಜಿಕ ಪರಿಸರದಲ್ಲಿ ಗ್ರಾಮವಾಸಿಗಳು ಕೋಳಿಗಳನ್ನು ಸಾಕುವರು. ಎಷ್ಟೋ ಬಾರಿ ಕೋಳಿಯ ಮರಿಗಳನ್ನು ಕಾಗೆಗಳು, ಗಿಡುಗಗಳು ಬಂದು ಎತ್ತಿಕೊಂಡು ಹೋಗುವುದು ಇಲ್ಲಿ ಕಾಣಬಹುದು. ಆ ಹಿನ್ನೆಲೆಯಿಂದ 'ಕೇಡ್‌ಗಿಡ್‌ಜ...ಕೆಂದಗಿಡ್‌ಜ' ಎಂಬ ಮಕ್ಕಳಿಗೆ ಹೇಳುವ ಹಾಡು ಇಲ್ಲಿದೆ.

ಹಾಗೆಯೇ ಕೊಡಗಿನಲ್ಲಿ ದಿನವೂ ತಯಾರಿಸುವ ಅಕ್ಕಿರೊಟ್ಟಿಯನ್ನು ಕೈಯಲ್ಲಿ ತಟ್ಟಿ ಮಾಡುವುದನ್ನು ಮಕ್ಕಳೂ ಗಮನಿಸಿರುತ್ತವೆ. ಹಾಗೆಯೇ ಕೈಯನ್ನು ತಟ್ಟಿ ತಟ್ಟಿ ಅಪ್ಪಿ (ರೊಟ್ಟಿ) ಅಪ್ಪಿ ಎಂದು ಹಾಡಿದೆ.

ಕೃಷಿಕರಾದ ಇವರಿಗೆ ಗದ್ದೆಯಲ್ಲಿ ಬೆಳೆಯನ್ನು ನೆಡದಿದ್ದಲ್ಲಿ, ಅದನ್ನು ಹಾಗೇ ಬಿಟ್ಟರೆ ಮುಂದೆ ಆ ಗದ್ದೆಯನ್ನು ಉಳಲು ತೊಂದರೆ ಆಗುವುದು ಅವರ ಅನುಭವದಲ್ಲಿರುತ್ತದೆ. ಅದರೊಂದಿಗೆ ಕೊಡಗಿನ ಗೋಣಿಕೊಪ್ಪದಲ್ಲಿ ನಡೆಯುವ ಎತ್ತಿನ ಜಾತ್ರೆಯನ್ನೂ ಬೆಸೆದು ಮಕ್ಕಳ ಹಾಡನ್ನು ಜೋಡಿಸಲಾಗಿದೆ.

ಹಿಂದೆ ಇಲ್ಲಿ ಮದುವೆ ದಿಬ್ಬಣವು ನಡೆದುಕೊಂಡೇ ಬರುತ್ತಿತ್ತು. ಆಗ ವಾಹನ ಸೌಲಭ್ಯಗಳು ಅಷ್ಟಾಗಿ ಇರಲಿಲ್ಲ. ದಿಬ್ಬಣವು ಬರುತ್ತಿದೆ ಎಂದು ತಿಳಿಸಲು ದಾರಿಯಲ್ಲಿ ವಧುವಿನ ಮನೆಯವರು ಯಾರಾದರೂ ಕಾದು ಕುಳಿತಿರುತ್ತಿದ್ದು ಮನೆಗೆ ಸಮೀಪವಾಗುವಾಗ ಬಂದು ಸುದ್ದಿ ಮುಟ್ಟಿಸುತ್ತಿದ್ದರು. ಆಗ ವಧುವು ತವರು ಮನೆಯನ್ನು ತೊರೆದು ಗಂಡನ ಮನೆಗೆ ಹೋಗುವ ಸಮಯ ಹತ್ತಿರವಾಯಿತೆಂದು ದು:ಖಿಸುತ್ತಾಳೆ. ಇದನ್ನೇ ಬಳಸಿಕೊಂಡು ಹೆಣ್ಣುಮಕ್ಕಳು ಅಳುವಾಗ ಅವರನ್ನು ನಗಿಸಲು "ದಬ್ಬಡ್ಕ ಬಾಣೆಲಿ ದಿಬ್ಬಣ ಬಂದುಟ್ಟು ಅಳ್‌ಬಡ ಸಣ್ಣಕ್ಕ" ಎಂದು ಹಾಡುವರು. ದಬ್ಬಡ್ಕ ಎಂಬುದು ಮನೆಹೆಸರಾಗಿದೆ. ಅವರ ಬಾಣೆ (ದನ ಮೇಯಿಸುವ ಬಯಲು) ಇವರ ಮನೆಯ ಸಮೀಪವಾದ್ದುದಾಗಿದೆ.

ಹಾಗೆಯೇ 'ಈ ಕಾಲ ಮಳೆಗಾಲ ಬಾಳ' ಈ ಹಾಡಿನಲ್ಲಿ ಕೊಡಗಿನಲ್ಲಿ ಹೆಚ್ಚಾಗಿ ಸುರಿಯುವ ಮಳೆ, ಮಳೆಯಿಂದ ನೀರೆಲ್ಲಾ ತುಂಬಿ ಮನೆಯಿಂದ ಹೊರಹೋಗಲಾರದ, ಕೆಲಸಮಾಡಲಾರದ ಪರಿಸ್ಥಿತಿಯನ್ನು ತಿಳಿಸುತ್ತದೆ. ಮಳೆಗಾಲದಲ್ಲಿ ಮಳೆ ಸುರಿಯುವಾಗ ಮನೆಯಲ್ಲಿ ಹಿರಿಯರು ಮಕ್ಕಳಿಗೆ ಹೇಳಿಕೊಡಲು ಈ ಹಾಡು ತಕ್ಷಣ ನೆನಪಾಗುವುದೆಂದು ಇಲ್ಲಿನವರ ಅಭಿಪ್ರಾಯ.

ಕೊಡಗಿನ ಗೌಡಸಮುದಾಯದಲ್ಲಿ ತಾಯಿಯ ತವರುಮನೆಗೆ ವಿಶೇಷ ಮಹತ್ವವಿದೆ. ಮಗು ಹೆಣ್ಣಾಗಲಿ, ಗಂಡಾಗಲಿ ಅದರ ಜನನದಿಂದ ವಿವಾಹದವರೆವಿಗೂ ನಡೆಯುವ ಕಾರ್ಯಗಳಿಗೆಲ್ಲಾ ಸೋದರಮಾವನು ಇರುವುದು ಅತೀ ಅವಶ್ಯವಾದುದು. ಸೋದರ ಮಾವನಿರುವ ಮನೆ ಮಾವನ ಮನೆ ಬಳಕೆಯಲ್ಲಿ ಸಂಕ್ಷಿಪ್ತಗೊಂಡು ಮಾಮನೆಯಾಗಿದೆ. ಇಲ್ಲಿ ಅಜ್ಜಿಮನೆ ಎಂಬುದು ಮಾವನಮನೆ, ಮಾಮನೆ ಎಂದೇ ಗುರುತಿಸಿಕೊಳ್ಳುತ್ತದೆ.

ಮಕ್ಕಳಿಗೆ ಮಾವನ ಮನೆ ಎಂದರೆ ಪ್ರಾಣ. ಅಲ್ಲಿಗೆ ಹೋಗುವುದೆಂದರೆ ಎಲ್ಲಿಲ್ಲದ ಸಂತೋಷ. ಜೊತೆಗೆ ತಾಯಿಯೂ ಯಾವಾಗಲೂ ನೆನೆಯುವುದು ತನ್ನ ತವರನ್ನು. ತನ್ನ ತವರನ್ನು ನೆನೆಯುತ್ತಾ ಸಂತೋಷದಿಂದ ತನ್ನ ಮಗುವಿಗೆ ಮಾವನ ಮನೆಗೆ ಹೊಸ ಬಟ್ಟೆ ತೊಟ್ಟು ದಾರಿ ಹುಡುಕುತ್ತಾ ಹೋಗುವಂತೆ ಹಾಡುತ್ತಾ ಕಚಗುಳಿಯಿಟ್ಟು ಮಗುವನ್ನು ನಗಿಸಿ ಸಂತೋಷಿಸುತ್ತಾಳೆ. ಈ ಗೀತೆ ಕನ್ನಡದ 'ಸುತ್ತ-ಮುತ್ತ ಬೇಲಿಕಟ್ಟಿ, ಆಲದ ಮರ ನೆಟ್ಟು ....' ಎಂಬ ಹಾಡಿನ ರೂಪದಂತಿದೆ.

ಕೊಡಗು ಮರಗಿಡ, ಕಾಡು, ತೋಟಗಳಿಂದ ಕೂಡಿದುದಾಗಿದೆ. ಅಲ್ಲಿ ತೋಟದ ಮಧ್ಯದಲ್ಲೇ ಮನೆಗಳನ್ನು ಕಟ್ಟಿಕೊಂಡಿರುತ್ತಾರೆ. ಸುತ್ತೆಲ್ಲಾ ಹಸಿರ ಪರಿಸರ. ಅಂತೆಯೇ ಇಲ್ಲಿ ಮಗುವನ್ನು ಮನೆಯ ಹಿಂಬದಿಯ ಜಗುಲಿಯಲ್ಲಿ ಸ್ನಾನ ಮಾಡಿಸುವರು. ಸ್ನಾನ ಮಾಡಿಸುವಾಗ ಮಗುವು ಅಳದಿರಲೆಂದು ಅಲ್ಲಿರುವ ಗಿಡ ಮರಗಳ ಹೆಸರನ್ನು ಹೇಳುತ್ತಾ ಮಗುವಿಗೆ ಹಾಕುವ ನೀರು ಆ ಮರದ ಬುಡಕ್ಕೆ ಹೋಗಲಿ ಎಂದು ಒಂದೊಂದು ತಂಬಿಗೆ ನೀರು ಹಾಕುವಾಗಲೂ ಒಂದೊಂದು ಮರದ ಹೆಸರು (ತೆಂಗಿನಮರ, ಬಾಳೆಮರ, ಮಾವಿನಮರ ಇತ್ಯಾದಿ) ಹೇಳುತ್ತಾ ಮಕ್ಕಳಿಗೆ ಸ್ನಾನ ಮಾಡಿಸುವ ದೃಶ್ಯವನ್ನು ಇಲ್ಲಿ ಕಾಣಬಹುದು.

೪.೬.೨. ಕೊಡಗಿನ ಗೌಡ ಕನ್ನಡದಲ್ಲಿರುವ ಶಿಶು ಗೀತೆಗಳು.

ಮಗುವನ್ನು ತೊಟ್ಟಿಲಿಗೆ ಹಾಕುವಾಗ ಹಾಡುವ ಹಾಡು:

ಪಾಲ್ಗಡಲ ಮೇಲ ಪನ್ನಾಗಶಯನ।
ಆಲದೆಲೆಯ ಮೇಲೆ ಲೋಲಾಡು ಶಿಶುವೆ॥ ಜೋ ಜೋ॥
ಚಿನ್ನಾಲಿತಂಗಿ, ಚಿತ್ತಾಲಿತಂಗಿ, ಚಿತ್ತಾದರಿಗುಂಡು ಬಾರಿಬಾರಿಗೂ,
ತೂಗುವೆನಯ್ಯಾ॥ ಜೋ ಜೋ॥
ಜೋ, ಜೋ, ಜೋ, ಮುದ್ದು ನೀಲದ ವರ್ಣ
ಜೋ ತೂಷಿ ರೂಪಾ। ಜೋ ಜೋ.
ಒಂದು ತಿಂಗಳಿಗೆ ಏನೆಲ್ಲಾ ಬಯಸಿದೆ ಗೋಪಿ ॥ಜೋ ಜೋ॥
ಒಂದು ತಿಂಗಳಿಗೆ ರಸಬಾಳೆ ಹಣ್ಣಿಗೆ ಬಯಸಿ
ಗೋಪಮ್ಮ ಜೋ ಜೋ ಜೋ ಜೋ ಜೋ
ಮುದ್ದು ನೀಲದುರಿಣ ಜೋತೂಸಿ ರೂಪಾ ಜೋ ಜೋ
ಒಂದಳಾ ಬಿಟ್ಟು ತರುಸ್ಯಾನರಾಯರ ಜೋ ಜೋ.
ಎರಡು ತಿಂಗಳಿಗೆ ಏನೆಲ್ಲಾ ಬಯಸಿದೆ ಗೋಪಿ ಜೋ ಜೋ
ಎರಡು ತಿಂಗಳಿಗೆ ಮಾವಿನ ಹಣ್ಣಿಗೆ ಬಯಸಿದೆ ಗೋಪಿ ಜೋ ಜೋ
ಎರಡಾಳ ಬಿಟ್ಟು ತರುಸ್ಯಾನರಾಯ ಜೋ ಜೋ ಜೋ

ಜೋ ಮುದ್ದು ನೀಲ ವರ್ಣ, ಜೋ ತೂಸಿ ರೂಪಾ .ಜೋ ಜೋ..
ಮೂರು ತಿಂಗಳಿಗೆ ಕಿತ್ತಾಳೆ ಹಣ್ಣಿಗೆ ಬಯಸಿದೆ ಗೋಪಿ ಜೋ ಜೋ
ಮೂರಾಳ ಬಿಟ್ಟು ತರುಸ್ಯಾನರಾಯ ಜೋ ಜೋ ಜೋ
ಜೋ ಮುದ್ದು ನೀಲ ವರ್ಣ, ಜೋ ತೂಷಿ ರೂಪಾ ಜೋ ಜೋ
ಬಾಣಂತಿ ತಂದು ಬಾಗ್ಲಲ್ಲಿ ನಿಲ್ಲಿಸಿ, ಸೂರತ್ತಿ ತಂದು ನಿಲ್ಲಿಸಿ
ಬಾಲನಪ್ಪನ ಬಾಯ್ಮೇಲೆ ಹೊಯ್ಯಿ ಜೋ ಜೋ
ಜೋ ಮುದ್ದು ನೀಲವರ್ಣ ಜೋ ಜೋ ಜೋ ತೂಷಿ ರೂಪಾ
ಜೋ ಜೋ
ಕನಕ ನಿರ್ಮಿತವಾದ, ತೊಟ್ಟಿಲ ತರಿಸಿ, ಜನ ಕುಮಾರನ
ತೊಟ್ಟಿಳೊಳಿರಿಸಿ, ಮುನಿ ಪತ್ನಿಯರೆಲ್ಲರೂ ತಾವು ಸಿಂಗರಿಸಿ ಜೋ
ಜೋ ಜೋ ಭೂಮಿಗೆ ಪತಿಯಾಗಿನಿಂದ ಜೋ ಜೋ
ಜೋ ಮುದ್ದು ಜೋ ನೀಲವರ್ಣ ಜೋ ತೂಷಿ ರೂಪ ಜೋ ಜೋ
ಜೋ ಜೋ ಶ್ರೀ ಕೃಷ್ಣ ಪರಮಾನಂದ
ನಂದ ಗೋಪಿಯ ಕಂದ, ನಂದ ಮುಕುಂದ ಜೋ ಜೋ
ಪಾಲುಗಡಲೊಳು ಪವಡಿಸಿದವನೇ
ಆಲದೆಲೆಯ ಮೇಲೆ ಮಲಗಿದ ಶಿಶುವೇ ಜೋ ಜೋ ॥ ಶ್ರೀ ಕೃಷ್ಣ॥

ಹಾಡು–೨

ಜೋ.. ಜೋ ಲಾಲೀ ಜೋ
ಕತ್ತೆಯ ಮರಿ ಚೆಂದ। ಮುತ್ತಿನಾ ನುಡಿ ಚೆಂದ
ಮುತ್ತುಗದ ಹೂವು ಕಡುಚೆಂದ। ಕಂದಮ್ಮ ನೀ ಚೆಂದನಮ್ಮಾ
ಮನೆಗೆಲ್ಲಾ. ॥ಜೋ॥
ಎಲ್ಲರ ಮಕ್ಕಳಂಗೆ ಅಲ್ಲಕಾಣೆ ನನ್ನಮ್ಮ
ನಲ್ಮೆಯ ಕಣ್ಣು ನಗೆ ಮೊಗ। ಕಾಮನ ಬಿಲ್ಲು ಹೋಲ್ತಾವೆ ಕುಡಿ ಹುಬ್ಬು
॥ಜೋ॥
ಹಾವಿನ ಹೆಡೆ ಚೆಂದ। ಮಾವಿನ ಮಿಡಿಚೆಂದ
ಹಾರಾಡಿ ಬರುವ ಗಿಳಿ ಚೆಂದ। ಕಂದಮ್ಮ ನೀ ಚೆಂದಾನಮ್ಮಾ
ಮನೆಗೆಲ್ಲಾ ॥ಜೋ॥
ಮಾಳಿಗೆ ಮನೆ ಬೇಕು। ಕೊಪ್ಪರಿಗೆ ಹಣ ಬೇಕು
ರುಕ್ಮೀಣಿಯಂತ ಸೊಸೆಬೇಕು। ಈ ಮನೆಗೆ ಶ್ರೀ ಕೃಷ್ಣನಂತಾ ಮಗ
ಬೇಕು ॥ಜೋ॥

ಮಾಳಿಗೆ ಮನೆ ಬೇಕು। ಜೋಳಿಗೆ ಹೊನ್ನು ಬೇಕು

ಜಾನಕಿಯಂತ ಸೊಸೆ ಬೇಕು। ಈ ಮನೆಗೆ ಶ್ರೀ ರಾಮನಂತಾ ಮಗ

ಬೇಕು ॥ಜೋ॥

ಒಟ್ಟಿನಲ್ಲಿ ಸಾಮನ್ಯವಾಗಿ ಮಗುವಿನ ಬಾಯಿಯಿಂದ ಹೊರಡುವ ಶಬ್ಧವು ವಯಸ್ಕರಿಗಿಂತ ಭಿನ್ನವಾಗಿರುತ್ತದೆ. ವಯಸ್ಕರು ತಮ್ಮ ಮಕ್ಕಳೊಂದಿಗೆ ಮಾತನಾಡುವಾಗ ಬಳಸುವ ಪದಗಳು ಆ ಸಮಜದಲ್ಲಿ ಎಲ್ಲರೂ ಮಕ್ಕಳೊಂದಿಗೆ ಮಾತನಾಡಲು ಬಳಸುವ ಪದಗಳೇ ಆಗಿರುತ್ತವೆ. ಹಾಗೆಯೇ ಕೊಡಗಿನ ಗೌಡಕನ್ನಡದ ಪರಿಸರದಲ್ಲೂ ಮಗುವಿನೊಂದಿಗೆ ಸಾಮಾನ್ಯವಾಗಿ ಈ ಹಿಂದೆ ನೋಡಿರುವ ರೂಪಗಳನ್ನೇ ಬಳಸುವರು. ಉದಾ: ಬೊಬ್ಬ (ದನ), ಆಯಿ (ನೋವು), ಮಾಮ್ (ಊಟ), ಉಂಬೆ (ಕರು) ಇತ್ಯಾದಿ. ಆದರೆ ಮಗುವು ನೀರನ್ನು ಕೇಳುವಾಗ ಒಂದಕ್ಕೊಂದು ಬೇರೆ ಬೇರೆ ಪದಗಳನ್ನು ಬಳಸಿರುವುದು, ಸಜ್ಞೆ ಮಾಡಿ ತೋರಿಸುವುದು ಇಲ್ಲಿ ಇದೆ. ಆದರೆ ಆ ಪದಗಳು ಮಗುವು ತನಗೆ ತಿಳಿದಂತೆ ತಾನು ಬಳಸಿರುವುದಾಗಿದೆ. ಅಂದರೆ ಒಂದು ಮಗುವು 'ನೀ ನೀ' ಎಂದರೆ, ಇನ್ನೊಂದು ಮಗುವು 'ಆಬೂ' ಎಂದು ಅಥವಾ ಬಾಯಿಯನ್ನು ತೆರೆದು 'ಆ ಆ' ಎಂದು ತೋರಿಸಿ ಕುಡಿಯಲು ನೀರು ಬೇಕು ಎಂದು ಕೇಳುತ್ತವೆ.

ಗೌಡಕನ್ನಡದಲ್ಲಿರುವ ಬಾಲಭಾಷೆಯಲ್ಲಿ ಕೆಲವು ಪದಗಳು ಶಿಷ್ಟ ಕನ್ನಡದಲ್ಲಿರುವ ಮಗುವಿನ ಭಾಷೆಯಲ್ಲಿರುವ ಪದಗಳೇ ಆಗಿವೆ. ಇವು ಹೆಚ್ಚಾಗಿ ಅನುಕರಣ ವಾಚಿಗಳೇ ಆಗಿವೆ. ಉದಾ: ಪಪ್ಪಿ(ಮುತ್ತು), ಕಾಕಾ(ಕಾಗೆ), ಅಂಬಾ(ದನ), ಬಿಕ್ಕಿ(ಬಿಸ್ಕತ್ತು), ಬೌ ಬೌ(ನಾಯಿ) ಇತ್ಯಾದಿ. ಕೊಡಗಿನಲ್ಲಿ ಕೊಡವ ಮತ್ತು ಗೌಡಕನ್ನಡ ಭಾಷೆಗಳು ನಿಕಟ ಸಂಪರ್ಕದಲ್ಲಿರುತ್ತವೆ. ಇದರ ಪ್ರಭಾವ ಈ ಭಾಷೆಯಲ್ಲಿರುವ ಮಗುವಿನ ಭಾಷೆಯ ಮೇಲೂ ಆಗಿದೆ. ಎರಡು ಭಾಷೆಯ ಮಗುವಿನ ಭಾಷೆಯಲ್ಲಿ ಒಂದೇ ರೀತಿಯ ಪದಗಳು ಬಳಕೆಯಾಗುತ್ತಿವೆ. ಉದಾಹರಣೆಗೆ

ಉದಾ:	**ಗೌ.ಕ.**	**ಕೊಡವ**
	ಕೂಚು/ಕೂಚ	ಕೂಚ (ಕುಳಿತುಕೊ)
	ಕೊಕ್ಕ	ಕೊಕ್ಕ (ಕೋಳಿ)
	ಚಾಮಿ	ಚಾಮಿ (ಸ್ವಾಮಿ)
	ಜೂಜಿ/ಜೂಜು	ಜೂಜು (ನಿದ್ರಿಸು)
	ಮಾಮ್/ಮಮ್	ಮಮ್ (ಊಟ)
	ಮೂಕ್ ಚಾರ್	ಚಾರ್ (ಸಿಂಬಳ) ಇತ್ಯಾದಿ.

ತುಳು ಭಾಷೆಯಲ್ಲಿ ಗೌಡಕನ್ನಡದಲ್ಲಿರುವ ಅಪ್ಪಿ (ರೊಟ್ಟಿ), ಉಂಬಾ (ದನ), ಪೊರ್ಲು (ಸುಂದರ, ಚಂದ), ಕೊಕ್ಕ ಇವೇ ಕೆಲವು ಪದಗಳು ಮಾತ್ರ ಮಗುವಿನ ಭಾಷೆಯಲ್ಲಿವೆ. ಇತರ

ಪದಗಳು ಭಿನ್ನವಾಗಿವೆ. ಕೊಡವ ಭಾಷೆಯಲ್ಲಿ ಮಕ್ಕಳಿಗೆ ಹಾಡುವ ಹಾಡುಗಳು ಬೇರೆ ಇದೆ. ಗೌಡ ಕನ್ನಡದಲ್ಲಿ ಇರುವ ಮಕ್ಕಳ ಹಾಡುಗಳು ಕೊಡವರಲ್ಲಿ ಕನ್ನಡದಲ್ಲಿ ಇವೆ. ಗೌಡಕನ್ನಡದ ಬಾಲಭಾಷೆಯಲ್ಲಿ ಶಿಷ್ಟ ಕನ್ನಡದ ಪದಗಳು, ಕೊಡವ ಭಾಷೆಯಲ್ಲಿರುವ ಪದಗಳು, ತುಳುವಿನಲ್ಲಿ ಇರುವ ಪದಗಳು ಇದ್ದರೂ ಗೌಡಕನ್ನಡದ ಬಾಲಭಾಷೆಯಲ್ಲಿ ಮಾತ್ರ ಬಳಕೆಯಾಗುವ ಪದಗಳೂ ಇವೆ.

ಉದಾ: ಕುಪ್ಪ (ತೊಡುವ ಬಟ್ಟೆ)

ಜಿಜ್ಜಿ ಮೀಯಿ (ಸ್ನಾನ)

ಜೀಜೀ (ತೊಟ್ಟಿಲು)

ಚಾಚು (ಮಲಗು)

ತಾನಿತಾನಿ (ನಡೆಯುವುದು) ಇತ್ಯಾದಿ

೪.೭. ವ್ಯಕ್ತಿನಾಮಗಳು

ವ್ಯಕ್ತಿಯನ್ನು ಸಮೂಹದಿಂದ ಗುರುತಿಸಿಕೊಡುವ ಸಾಧನಗಳಲ್ಲಿ ಹೆಸರು ಪ್ರಾಚೀನವಾದುದು ಹಾಗೂ ಪ್ರಮುಖವಾದುದು. ಇದನ್ನು ಮೀರಿಸುವ ಬೇರೊಂದು ಸಾಧನ ಇನ್ನೂ ಶೋಧವಾಗಿಲ್ಲವೆಂದೇ ಹೇಳಬೇಕು. ಮನುಷ್ಯ ಸಮಾಜಜೀವಿ. ಆತನಿಗೆ ವ್ಯಕ್ತಿ, ವಸ್ತುಗಳ ಸಂಪರ್ಕ ಅನಿವಾರ್ಯ. ಅವುಗಳಲ್ಲಿ ಕೆಲವನ್ನಾದರೂ ಅವನು ಗುರುತಿಸಿಕೊಳ್ಳಲೇಬೇಕು. ಹೀಗೆ ಗುರುತಿಸಿಕೊಳ್ಳಲು ಮುಖ್ಯ ಸಾಧನವಾದುದು ಹೆಸರು. ಹೀಗಾಗಿ ಹೆಸರಿನ ಮುಖ್ಯ ಉದ್ದೇಶ ಸಮೂಹದಿಂದ ವ್ಯಕ್ತಿಯನ್ನು, ವಸ್ತುವನ್ನು ಪ್ರತ್ಯೇಕಿಸಿಕೊಳ್ಳುವುದು ಹಾಗೂ ಗುರುತಿಸಿಕೊಳ್ಳುವುದಾಗಿದೆ. ಜಗತ್ತಿನ ಎಲ್ಲ ಭಾಷೆಗಳಲ್ಲಿ ವ್ಯಕ್ತಿಯನ್ನು ಗುರುತಿಸಲು ವ್ಯಕ್ತಿನಾಮಗಳಿವೆ. ವ್ಯಕ್ತಿನಾಮಗಳಿಲ್ಲದ ಸಮುದಾಯವನ್ನು ಊಹಿಸಿಕೊಳ್ಳುವುದಕ್ಕೂ ಸಾಧ್ಯವಿಲ್ಲ.

ಮಾನವ ಮೊಟ್ಟ ಮೊದಲಿಗೆ ಭೂಮಿಯ ಮೇಲೆ ತನ್ನ ಅಸ್ತಿತ್ವವನ್ನು ಹೊಂದಿದಾಗ ವ್ಯಕ್ತಿಗಳನ್ನು ಹೆಸರಿನಿಂದ ಕರೆಯುವ ಪದ್ಧತಿ ಇರಲಿಕ್ಕಿರಲಿಲ್ಲ. ಆಹಾರ, ನಿದ್ರೆ, ಮೈಥುನಗಳಲ್ಲಿ ಮಗ್ನನಾದ ವ್ಯಕ್ತಿಯು ಚಿಕ್ಕ ಗಾತ್ರದ ಕುಟುಂಬದೊಂದಿಗೆ ಸಂಚರಿಸುತ್ತಿದ್ದ ಕಾಲದಲ್ಲಿ ಕುಟುಂಬದ ವ್ಯಕ್ತಿಗಳನ್ನು ಗುರುತಿಸುವುದು ಅವರಿಗೆ ತೊಂದರೆಯೆನಿಸಿರಲಿಕ್ಕಿಲ್ಲ. ಹಾಗಾಗಿ ಆ ಸಂದರ್ಭದಲ್ಲಿ ವ್ಯಕ್ತಿಗೆ ಹೆಸರಿಡುವುದು ಇರಲಿಕ್ಕಿಲ್ಲ. ನಂತರದಲ್ಲಿ ಆಹಾರ ಉತ್ಪಾದನೆಗಾಗಿ ಕೃಷಿಯನ್ನು ನಡೆಸಬೇಕಾದಾಗ ಕುಟುಂಬ ಒಂದೆಡೆ ನೆಲೆಯೂರುವುದು ಅನಿವಾರ್ಯವಾದಾಗ, ಆ ನೆಲೆಗೆ ಬೇರೆ ಕುಟುಂಬಗಳೂ ಸೇರಿ ಗ್ರಾಮವಾಯಿತು. ಆಗ ವ್ಯಕ್ತಿಗಳನ್ನು ಗುರುತಿಸುವುದು ಕಷ್ಟವಾಗಿ, ಆ ಕಷ್ಟದ ಪರಿಹಾರಕ್ಕಾಗಿ ವ್ಯಕ್ತಿಗೆ ಹೆಸರಿಟ್ಟು ಕರೆಯುವುದು ಪ್ರಾರಂಭವಾಗಿರಬೇಕು. ಹಾಗೂ ಈ ನಾಮ ನಿರ್ದೇಶನ ಪದ್ಧತಿ 'ಕೃಷಿ ಸಂಸ್ಕೃತಿ' ಅಸ್ತಿತ್ವಕ್ಕೆ ಬಂದುದರ ಪರಿಣಾಮವಾಗಿರಬಹುದು ಎಂಬುದು ವಿದ್ವಾಂಸರ ಅಭಿಪ್ರಾಯ. ಬಹುಶಃ ಆಗ ಇದ್ದ ಹೆಸರುಗಳು ವ್ಯಕ್ತಿಯ ರೂಪ-ಗುಣಗಳಿಗೆ ಅನುಗುಣವಾಗಿ, ಕಪ್ಪಗಿದ್ದರೆ

ಕರಿಯಪ್ಪ, ಕೆಂಪಾಗಿದ್ದರೆ ಕೆಂಚಪ್ಪ, ಸಣ್ಣಗಿದ್ದಲ್ಲಿ ಸಣ್ಣಪ್ಪ ಎಂದು ಅನ್ವರ್ಥಕ ನಾಮಗಳಾಗಿರಬೇಕು. ನಂತರ ವ್ಯಕ್ತಿಗೆ ಹೆಸರು ಇಡುವುದು ಅನಿವಾರ್ಯವೆನಿಸಿದಾಗ ಮಗು ಹುಟ್ಟಿದ ಸಂದರ್ಭದಲ್ಲಿ ಹೆಸರಿಡುವುದು, ಸಮಾರಂಭ ನಡೆಸುವುದು ಅಸ್ತಿತ್ವಕ್ಕೆ ಬಂದಿರಬೇಕು.

ಮುಂದೆ ಕುಟುಂಬದಲ್ಲಿ ಸತ್ತು ಹೋದ ಪಿತೃಗಳ ಹೆಸರನ್ನು, ದೇವತೆಗಳ ಹೆಸರನ್ನು ಕೊನೆಗೆ ಭಾವನಾಮಗಳನ್ನು ಇಡುತ್ತಾ ಬಂದಾಗ ವ್ಯಕ್ತಿಗೂ ಹೆಸರಿಗೂ ಇದ್ದ ಅನ್ವರ್ಥಕ ಸಂಬಂಧ ಕ್ರಮೇಣ ತಪ್ಪಿಹೋಗಿ, ಹೆಸರು ವ್ಯಕ್ತಿಯನ್ನು ಗುರುತಿಸುವ ಒಂದು ಸಾಧನ ಮಾತ್ರ ಎಂದಾಗಿ ಅಂಕಿತ ನಾಮಪದ್ಧತಿ ಅಸ್ತಿತ್ವಕ್ಕೆ ಬಂದಿತು. ಇಲ್ಲಿ ವ್ಯಕ್ತಿಗೂ ಆತನ ಹೆಸರಿಗೂ ಸಂಬಂಧವಿರುವುದಿಲ್ಲ, ಇವೆರಡು ಪರಸ್ಪರ ಯಾದೃಚ್ಛಿಕವಾದವುಗಳು. ಏಕೆಂದರೆ, ಹೇಗೆ ವ್ಯಕ್ತಿಗೆ ತಕ್ಕಂತೆ ಹೆಸರಿರುವುದಿಲ್ಲ ಹಾಗೆಯೇ ಹೆಸರಿಗೆ ತಕ್ಕಂತೆ ವ್ಯಕ್ತಿಯಿರುವುದಿಲ್ಲ. ಇವೆರಡರ ಸಂಬಂಧ ಕೇವಲ ಸಂಬೋಧನೆಗಾಗಿ ಮಾತ್ರ ಇದೆ.

ಕುಟುಂಬ ನಾಮಗಳು ಒಂದು ಗ್ರಾಮದ ಒಳಗಿನ ವ್ಯವಹಾರದಿಂದ ಉಂಟಾಗುತ್ತದೆ. ಗ್ರಾಮನಾಮಗಳು ಒಂದು ರಾಷ್ಟ್ರದ ಒಳಭಾಗದ ಗುರುತಿಸುವಿಕೆ ಆಗಿವೆ. ಇವು ವೈಯುಕ್ತಕವಾದವುಗಳು. ಕುಟುಂಬ ಇವುಗಳನ್ನು ಸಮಾಜಕ್ಕೆ ನೀಡುತ್ತದೆ. ಸಮಾಜದಲ್ಲಿ ವ್ಯಕ್ತಿನಾಮಗಳಿಲ್ಲದೆ ವ್ಯವಹಾರ ಸಾಧ್ಯವಿಲ್ಲ. ಹಾಗಾಗಿ ವ್ಯಕ್ತಿಯನ್ನು ಗುರುತಿಸುವಲ್ಲಿ ವ್ಯಕ್ತಿನಾಮಗಳು ಬಂದವು. ಇಂದಿಗೂ ಆದಿವಾಸಿಗಳಿಂದ ಹಿಡಿದು ಮುಂದುವರಿದವರಲ್ಲಿಯೂ ನಾಮಕರಣ ಅತ್ಯಂತ ಮಹತ್ವದ ವಿಧಿಗಳಲ್ಲಿ ಒಂದಾಗಿದೆ. ವ್ಯಕ್ತಿಗೆ ಮಾತ್ರ ಹುಟ್ಟಿದ ಹೊಸದರಲ್ಲಿ ಹೆಸರಿಡುವ ಸಮಾರಂಭವನ್ನು ನೆರವೇರಿಸುತ್ತಾರೆ. ಇದು ಅವನ ಜೀವನದುದ್ದಕ್ಕೂ ಜರುಗುವ ಅನೇಕ ಬಗೆಯ ಸಂಸ್ಕಾರಗಳಲ್ಲಿ ಒಂದು. ವ್ಯಕ್ತಿಗೆ ಇಡುವ ಹೆಸರುಗಳು ಕೇವಲ ಭಾಷಿಕ ರಚನೆಗಳಾಗಿರುವುದಿಲ್ಲ. ಹೆಸರಿನಲ್ಲಿ ಸಾಂಸ್ಕೃತಿಕ ಅಂಶವು ಮಿಳಿತವಾಗಿರುತ್ತದೆ. ನಾಮಕರಣಗೊಂಡ ವ್ಯಕ್ತಿ, ಸ್ಥಳ ಅಥವಾ ವಸ್ತುವಿನ ವಿಶಿಷ್ಟತೆ ಮೊದಲಾದ ಅಂಶಗಳನ್ನು ಹೆಸರು ತನ್ನೊಳಗೆ ಗರ್ಭೀಕರಿಸಿಕೊಂಡಿರುತ್ತದೆ ಎಂಬುದು ಗಮನಾರ್ಹ ಸಂಗತಿಯಾಗಿದೆ. ನಾಮಕರಣವು ಮಹತ್ವದ ಧಾರ್ಮಿಕ ಕ್ರಿಯೆಯಾಗಿದೆ. ಜಗತ್ತಿನ ಬಹುಭಾಗದಲ್ಲಿ ಧರ್ಮದ ಮೂಲವೆ ವ್ಯಕ್ತಿನಾಮಗಳಿಗೆ ಆಕರವಾಗಿವೆ. ಪ್ರಾಚೀನ ಶಾಸನಗಳಲ್ಲೂ ವ್ಯಕ್ತಿನಾಮಗಳು ಹೇರಳವಾಗಿ ಸಿಗುತ್ತವೆ. ಹಾಗೆಯೇ ಪ್ರಕೃತಿರೂಢನಾಮ ಮತ್ತು ಸಮಾಜೋಭಾಷಿಕ ವಲಯವು ವ್ಯಕ್ತಿಗೆ ಹೆಸರನ್ನು ನೀಡಿವೆ.

ಸಂಸ್ಕೃತದ ಧರ್ಮಗ್ರಂಥಗಳಲ್ಲಿ ನಾಲ್ಕು ವರ್ಣಗಳಲ್ಲಿ ಬರುವ ವ್ಯಕ್ತಿನಾಮದ ಲಕ್ಷಣವನ್ನು ಹೇಳಲಾಗಿದೆ. ೧.ಬ್ರಾಹ್ಮಣರ ಹೆಸರು ಮಂಗಳ ದ್ಯೋತಕವಾಗಿ, ೨. ಕ್ಷತ್ರಿಯರ ಹೆಸರು ಬಲಸೂಚಕವಾಗಿ, ೩. ವೈಶ್ಯರ ಹೆಸರುಗಳು ಐಶ್ವರ್ಯ ಸೂಚಕವಾಗಿ, ೪. ಶೂದ್ರದ ಹೆಸರುಗಳು ಸೇವಾದ್ಯೋತಕವಾಗಿರ ಬೇಕೆಂದು ತಿಳಿಸಿದೆ. ಇಲ್ಲಿ ವ್ಯಕ್ತಿನಾಮಗಳು ಸಂಸ್ಕೃತದ ಧಾರ್ಮಿಕವಲಯದಿಂದ ಬಂದಿವೆ ಎಂದಾಗುತ್ತದೆ.

ಸಮಾಜದಲ್ಲಿ ಪ್ರತಿಯೊಂದು ಸಮುದಾಯವು ತನ್ನದೇ ಆದ ಭಾಷೆ, ಸಂಸ್ಕೃತಿ, ಧರ್ಮ, ಸಂಪ್ರದಾಯ ಆಚರಣೆಗಳನ್ನೊಳಗೊಂಡಂತೆ, ತನ್ನದೇ ಆದ ವ್ಯಕ್ತಿನಾಮಗಳನ್ನು ಹೊಂದಿರುತ್ತದೆ. ವ್ಯಕ್ತಿನಾಮಗಳು ಸಾಮಾಜಿಕ ಅಧ್ಯಯನದ ಮುಖ್ಯ ಆಕರಗಳಲ್ಲಿ ಒಂದು ಎಂದು ಪರಿಗಣಿಸಬಹುದು. ಈ ಆಕರಗಳನ್ನು ಇಟ್ಟುಕೊಂಡು ವಿಶ್ಲೇಷಣೆಗೆ ಒಳಪಡಿಸಿದಲ್ಲಿ ಒಂದು ಸಂಸ್ಕೃತಿಯ ಸೂಕ್ಷ್ಮ ಸಂಗತಿಗಳನ್ನು ಬಿಡಿ ಬಿಡಿಯಾಗಿ ತಿಳಿಯಲು ಸಾಧ್ಯವಾಗುತ್ತದೆ. ಹಾಗೆಯೇ, ಕೊಡಗಿನ ಗೌಡ ಸಮುದಾಯದವರಲ್ಲಿ ಬಳಕೆಯಾಗುವ ವ್ಯಕ್ತಿನಾಮಗಳು ಹಾಗೂ ಅದರ ಸ್ವರೂಪಗಳ ಬಗ್ಗೆ ಇಲ್ಲಿ ಚರ್ಚಿಸಲಾಗಿದೆ.

ಕೊಡಗು ಜಿಲ್ಲೆಯಲ್ಲಿ ಕೊಡವರು ಮತ್ತು ಗೌಡರ ಹೆಸರುಗಳು ಒಂದೇ ರೀತಿಯಾಗಿವೆ. ಇವುಗಳಲ್ಲಿ ಯಾವುದೇ ರೀತಿಯ ವ್ಯತ್ಯಾಸಗಳಿಲ್ಲ. ಇದು ಕೊಡಗು ಗೌಡರ ವ್ಯಕ್ತಿನಾಮಗಳ ಮೇಲೆ ಕೊಡವ ವ್ಯಕ್ತಿನಾಮಗಳ ಪ್ರಭಾವ ಅಥವಾ ಪ್ರಾದೇಶಿಕ ಪ್ರಭಾವವಾಗಿದೆ. ಏಕೆಂದರೆ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಇದೇ ಗೌಡರಲ್ಲಿ ಈ ರೀತಿಯ ವ್ಯಕ್ತಿನಾಮಗಳಿಲ್ಲ. ಆದರೆ, ಗೌಡ ಸ್ತ್ರೀಯರ ಹೆಸರುಗಳಲ್ಲಿ ಸಾಕಷ್ಟು ಆಧುನೀಕತೆಯ ಪ್ರಭಾವವನ್ನು ಕಾಣುತ್ತೇವೆ. ಕೊಡವ ಸ್ತ್ರೀನಾಮಗಳು ಸಾಂಪ್ರದಾಯಿಕ ಹೆಸರುಗಳೇ ಆಗಿವೆ. ಇದನ್ನು ಹೊರತು ಪಡಿಸಿದರೆ ಕೇವಲ ವೇಷಭೂಷಣ ಮತ್ತು ಮನೆಹೆಸರುಗಳ ಭಿನ್ನತೆಯಿಂದ ಗೌಡರು ಮತ್ತು ಕೊಡವರು ಎಂದು ಗುರುತಿಸಬಹುದು.

ಸಾಮಾನ್ಯವಾಗಿ ಅಜ್ಜನ ಹೆಸರು ಇಲ್ಲವೆ ಅಜ್ಜಿಯ ಹೆಸರು ಅನಾಯಾಸವಾಗಿ ಮೊಮ್ಮಕ್ಕಳಿಗೆ ಅಂಟಿಕೊಂಡು ಬಿಡುತ್ತದೆ. ಕೆಲವೊಮ್ಮೆ ಹಿರಿಯರ ಹೆಸರಲ್ಲದೆ ಗುರುವಿನ ಇಲ್ಲವೆ ಗತಿಸಿಹೋದ ಹಿರಿಯರ ಕಾಟದಿಂದ ಮುಕ್ತರಾಗಲು ಅಥವಾ ಅವರ ಕೃಪೆ ಗಳಿಸಿಕೊಳ್ಳಲು ಇಲ್ಲವೆ ನೆನಪು ಉಳಿಸಿಕೊಳ್ಳಲು ಅವರ ಹೆಸರುಗಳನ್ನು ಇಡುವುದನ್ನೂ ಕಾಣಬಹುದು.

ನಾಮಕರಣ ವಿಧಿ ವಿಧಾನಗಳನ್ನು ಸಾಮಾಜಿಕ ಹಿನ್ನೆಲೆಯಲ್ಲಿಯೇ ಗಮನಿಸಲಾಗುವುದು. ವ್ಯಕ್ತಿಗೂ ಧರ್ಮಕ್ಕೂ ಅವಿನಾಭಾವ ಸಂಬಂಧ ಇರುವುದರಿಂದ, ವ್ಯಕ್ತಿನಾಮಗಳೂ ಧಾರ್ಮಿಕ ವಲಯದಲ್ಲಿಯೇ ಸುತ್ತುತ್ತವೆ. ಈ ನಾಮಕರಣ ದೇವರನ್ನೂ ಬಿಟ್ಟಿಲ್ಲ. ದೇವತೆಗಳ ಹಿರಿಮೆಯ ಸಾಕಷ್ಟು ನಾಮಗಳೂ ಇವೆ. ಕೊಡಗು ಗೌಡ ಸಮುದಾಯದಲ್ಲಿ ಇಂತಹಾ 'ದೇವಸಂಬಂಧಿ ವ್ಯಕ್ತಿನಾಮ'ಗಳಿವೆ.

ಧರ್ಮ ನಮ್ಮನ್ನು ನೆರಳಿನಂತೆ ಹಿಂಬಾಲಿಸುತ್ತದೆ. ಜೀವೋತ್ಪತ್ತಿಯೆ ಸೃಷ್ಟಿಕಾರ್ಯದ ಪರಮ ಅದ್ಭುತವು, ಕುತೂಹಲ ಪೂರ್ಣವು, ರಹಸ್ಯಗರ್ಭಿತವು ಆಗಿದೆ. ಹಾಗಾಗಿ ಜನನ ಎಂಬುದು ದೈವಿಕೊಡುಗೆ ಎಂಬುದು ಎಲ್ಲರ ತಿಳುವಳಿಕೆಯಾಗಿದೆ. ದೈವಿವಾಚಿಗಳಲ್ಲಿ ಎರಡು ಮೂಲಗಳಿವೆ. ಕುಲದೇವರು ಮತ್ತು ಗುಡಿದೇವರು. ಇವರ ಕುಲದೇವರಾದ ತಿರುಪತಿಯ ವೆಂಕಟೇಶ್ವರ, ಶೃಂಗೇರಿಯ ಸುಬ್ಬಮ್ಮ ಇತ್ಯಾದಿ. ಒಟ್ಟಿನಲ್ಲಿ ದೂರವಿರಲಿ ಸಮೀಪವಿರಲಿ ದೈವಿನಾಮಗಳನ್ನು ವ್ಯಕ್ತಿಗಳಿಗೆ ನಾಮಕರಣ

ಮಾಡುವರು. ಇಲ್ಲಿ ಹೆಸರಿಡುವುದು ಒಂದು ಧಾರ್ಮಿಕ ಆರಾಧನ ಕ್ರಿಯೆಯಾಗಿದೆ. ಎಲ್ಲೆಡೆಯಲ್ಲಿಯೂ ಧಾರ್ಮಿಕ ಪರಿಭಾವನೆಗಳು ವ್ಯಕ್ತಿನಾಮಕ್ಕೆ ಹಿನ್ನೆಲೆಯ ವೇದಿಕೆಯಾಗಿವೆ. ಪ್ರಾಕೃತಿಕ ಶಕ್ತಿಗಳಾದ ಪಂಚಮಹಾ ಭೂತಗಳು, ದೈವಿಕರಣಗೊಂಡ ನದಿ, ಪರ್ವತ ಇತ್ಯಾದಿ ಹೆಸರುಗಳು ವ್ಯಕ್ತಿನಾಮವಾಗುವುವು. ಗಂಗಾಮಾತೆ ನದಿ ದೇವತೆಯಾಗಿ ಗಂಗೆ-ಗಂಗಮ್ಮ ಎಂಬ ಹೆಸರೂ ಇವರಲ್ಲಿವೆ. ಇಂತಹಾ ದೇವಸಂಬಂಧಿ ವ್ಯಕ್ತಿನಾಮಗಳು ಕೊಡಗಿನ ಗೌಡ ಸಮುದಾಯದಲ್ಲಿವೆ. ಉದಾಹರಣೆಗೆ

ಪುರುಷನಾಮ	**ಸ್ತ್ರೀನಾಮ**
ಮುತ್ತಪ್ಪ	ಕಾವೇರಮ್ಮ
ಅಯ್ಯಪ್ಪ	ಸುಬ್ಬಮ್ಮ
ಕುಟ್ಟಪ್ಪ	ಗಂಗಮ್ಮ
ನಾಣಯ್ಯ	ದೇವಮ್ಮ
ಚಂಗಪ್ಪ	ಸೀತಮ್ಮ
ರಾಮಯ್ಯ	ಜಾನಕಿ ಇತ್ಯಾದಿ

ಮಕ್ಕಳನ್ನು ಕೆಟ್ಟ ಶಕ್ತಿಗಳು (ದೆವ್ವಗಳು) ಮುಟ್ಟಬಾರದೆಂದು ಕೆಟ್ಟ ಹೆಸರನ್ನಿಡುವ ಪದ್ಧತಿ ಸಾಮಾನ್ಯವಾಗಿ ಎಲ್ಲ ಸಮುದಾಯಗಳಲ್ಲೂ ಕಂಡುಬರುತ್ತವೆ. ಕೊಡಗಿನಲ್ಲಿಯೂ ಹಿಂದಿನ ತಲೆಮಾರುಗಳಲ್ಲಿ ಕೆಲವು ವಿಚಿತ್ರ ಹೆಸರುಗಳಿವೆ. ಅವರಿಗೆ ಸಾಂಪ್ರದಾಯಿಕ ಹೆಸರುಗಳನ್ನೇ ಇಟ್ಟಿದ್ದರೂ, ಕೌಟುಂಬಿಕ ವಲಯದಲ್ಲಿ ಕರೆಯಲು ಈ ರೀತಿಯ ಹೆಸರನ್ನು ಇಟ್ಟಿರುವರು. ಆದರೆ, ಅವರ ಪ್ರಕಾರ ಅವರ ಹಿರಿಯರು ಪ್ರೀತಿಯಿಂದ ಅವರನ್ನು ಆ ಹೆಸರುಗಳಿಂದ ಕರೆಯುತ್ತಿದ್ದರು ಎಂಬುದಾಗಿದೆ.

ಉದಾ: ಪುರುಷನಾಮಗಳು: ಚೊಲ್ಲು, ಕೊಂಗು, ಕುಂಡು, ಬೊಡ್ಡು, ಕಾಳು, ಚೋಮುಣಿ.

ಸ್ತ್ರೀನಾಮಗಳು: ಚಿಲ್ಲೆ, ಚಿಮ್ಮಿ, ಅವ್ವಿ, ಕಾಮಿ ಇತ್ಯಾದಿ.

ಇಲ್ಲಿನ ಪರಿಸರದಲ್ಲಿ ಇದರ ಬಗೆಗೆ ಗಮನಿಸಿದಾಗ ಇವು ಮಕ್ಕಳನ್ನು ಮುದ್ದಿನಿಂದ ಕರೆಯುವ ಹೆಸರುಗಳಾಗಿವೆ. ಆಧುನಿಕತೆಯ ಪ್ರಭಾವದಿಂದಾಗಿ ಇಂದು ಇದು ತೀರಾ ಕಡಿಮೆಯಾಗಿದೆ.

ಹೊಸತನದ ತುಡಿತ ಮಿಡಿತಗಳು, ಆತುರ, ಕಾತರಿಕೆಗಳು ಹೊಸ ಹೆಸರಿಡಲು ಮೂಲ ಪ್ರೇರಣೆಯಾಗಿವೆ. ಯಾರೂ ಇಡದ ಹೆಸರಾಗಿರಬೇಕೆಂದು ಬಯಸುವವರಿದ್ದಾರೆ. ಹಾಗಾಗಿ ಪ್ರಿಯವಾದ ವಿಶಿಷ್ಟವಾದ ಹೆಸರುಗಳನ್ನು ಇವರು ಇಟ್ಟುಕೊಂಡಿದ್ದಾರೆ. ಜೊತೆಗೆ ಆಧುನೀಕರಣ ಸಿನೀಮಿಯ ಪ್ರಭಾವಗಳು ಹೆಚ್ಚು ಹೆಚ್ಚಾಗುವಂತಹ ಸಂದರ್ಭದಲ್ಲಿ ನವೀಕರಣ ಹಾಗೂ ನವ ನಿರ್ಮಾಣಗಳು ಇವೆರಡು ನಾಮ ಕ್ಷೇತ್ರದಲ್ಲಿಯೂ ಕಾಲಿಟ್ಟಿವೆ. ಮೊದಲು ಹಲವು ವರ್ಷಗಳಿಂದ ಬಳಕೆಯಲ್ಲಿದ್ದು, ಬದಲಾಗದ್ದು ಇಂದು ಕ್ಷಣ ಮಾತ್ರದಲ್ಲಿ ಬದಲಾವಣೆಯ ಪ್ರಕ್ರಿಯೆಗೆ ಒಳಗಾಗಿವೆ. ಯಾವುದೇ

ಕ್ಷೇತ್ರದಲ್ಲಿ ಹೆಸರು ಮಾಡಿದ ವ್ಯಕ್ತಿಯ ಹೆಸರು 'ಪ್ರಿಯ'ವಾಗುವ ಕಾರಣ ಆ ಹೆಸರನ್ನು ಇಡುವುದು ಇಂದು ಕಂಡುಬರುತ್ತಿದೆ. ಅಂತಾ ಹೆಸರುಗಳು ಕೊಡಗಿನಲ್ಲೂ ಕಾಲಿಟ್ಟಿವೆ.

ಉದಾ:	ಪುರುಷನಾಮ	ಸ್ತ್ರೀನಾಮ
	ಡ್ಯಾನಿ	ಬೀನಾ
	ಸನ್ನಿ	ಶೈನಿ
	ಚಿಂಟು	ರೀನಾ
	ಸ್ವೀಟಿ	ಸೋನಿ
	ದಿಲನ್	ಪ್ರೀತು
	ಸಿಂಪು	ಸ್ಮಿತಾ ಇತ್ಯಾದಿ

ವ್ಯಕ್ತಿ ಪ್ರಸಿದ್ಧನಾದಂತೆ ಪ್ರಭಾವವು ಆಗುವುದುಂಟು. ಅಂತಹಾ ವ್ಯಕ್ತಿಗಳ ಹೆಸರನ್ನು ತಮ್ಮ ಮಕ್ಕಳಿಗೆ ಇಡುವುದನ್ನು ಕಾಣುತ್ತೇವೆ. ಹಿರಿಯರ, ಪ್ರಭಾವಿ ವ್ಯಕ್ತಿಗಳ ಹೆಸರುಗಳನ್ನು ಗೌರವವಾಚಿಯಾಗಿ ಮಕ್ಕಳಿಗೆ ನಾಮಕರಣ ಮಾಡಿರುವುದು ಕೊಡಗಿನ ಗೌಡರಲ್ಲೂ ಕಂಡುಬಂದಿದೆ.

ಉದಾ: ಕಾರ್ಯಪ್ಪ–ಜನರಲ್ ಕಾರ್ಯಪ್ಪ, ತಿಮ್ಮಯ್ಯ–ಜನರಲ್ ತಿಮ್ಮಯ್ಯ

೪.೭.೧. ರಾಚನಿಕ ಸ್ವರೂಪ:

ವ್ಯಕ್ತಿನಾಮಗಳ ಸ್ವರೂಪವನ್ನು ತಿಳಿಯುವಲ್ಲಿ ಅದರ ರಾಚನಿಕತೆಯು ಬಹುಮುಖ್ಯ ಭಾಗವಾಗಿದೆ. ಸಂಬೋಧನೆ ಮಾಡುವಾಗ ವ್ಯಕ್ತಿಯ ಹೆಸರಿನಲ್ಲಾಗುವ ಬದಲಾವಣೆಯು ರಚನೆಯ ದೃಷ್ಟಿಯಿಂದ ವಿಶಿಷ್ಟವಾದುದು. ಕೊಡಗಿನ ಗೌಡ ಜನರ ಹೆಸರುಗಳನ್ನು ರಚನೆಯ ದೃಷ್ಟಿಯಿಂದ ಎರಡು ಘಟಕಗಳಾಗಿ ವಿಭಜನೆ ಮಾಡಬಹುದು.

೧. ಏಕ ಘಟಕ: ಗಪ್ಪು, ಕಾವೇರಿ, ಜಾಜಿ, ಮುತ್ತು – ಇತ್ಯಾದಿ.

೨. ದ್ವಿ ಘಟಕ: ಚೋಂದು + ಅವ್ವ= ಚೋಂದವ್ವ
ಪೊನ್ನು + ಅಣ್ಣ= ಪೊನ್ನಣ್ಣ
ಬೆಳ್ಳಿ + ಅಪ್ಪ= ಬೆಳ್ಯಪ್ಪ
ಕಾವೇರಿ + ಅಮ್ಮ= ಕಾವೇರಮ್ಮ ಇತ್ಯಾದಿ.

ಸಾಮಾನ್ಯವಾಗಿ ಹೆಸರಿನಲ್ಲಿ ಪೂರ್ವ ಮತ್ತು ಉತ್ತರ ಎಂಬ ಎರಡು ಘಟಕಗಳಿರುತ್ತವೆ. ಉದಾ: ಲಿಂಗ+ಅಪ್ಪ=ಲಿಂಗಪ್ಪ. ಇಲ್ಲಿ ಪೂರ್ವ ಘಟಕವೇ ವ್ಯಕ್ತಿಯನಾಮ. ಉತ್ತರ ಘಟಕ ಯಾವುದೇ ವ್ಯಕ್ತಿಯ ಹೆಸರಿಗೆ ಅಂಟಿಕೊಳ್ಳಬಹುದು. ಉದಾ: ಶ್ರೀನಿವಾಸ+ಅಪ್ಪ, ಡೇನಿಯಲ್+ಅಪ್ಪ, ಹುಸೇನ+ಅಪ್ಪ. ಈ ಲಕ್ಷಣಗಳನ್ನು ಗಮನಿಸಿ ಪೂರ್ವ ಘಟಕವನ್ನು ನಿರ್ದಿಷ್ಟ (Generic)ವೆಂದು

ಉತ್ತರ ಘಟಕವನ್ನು ವಾರ್ಗಿಕ(Specific)ವೆಂದು ಕರೆಯುತ್ತಾರೆ. ಇದರಲ್ಲಿ 'ನಿರ್ದಿಷ್ಟ'ವು ನಿಜನಾಮವಾಗಿದ್ದು, 'ವಾರ್ಗಿಕ'ವು ಸಂಬಂಧವಾಚಿ, ವ್ಯಕ್ತಿವಾಚಿ, ಕುಲವಾಚಿ, ಸ್ಥಳವಾಚಿ ಆಗಿರುತ್ತದೆ. ಸಾಮಾನ್ಯವಾಗಿ ಇದು ವ್ಯಕ್ತಿನಾಮಗಳ ಸ್ವರೂಪ.

ಕೊಡಗು ಗೌಡ ಜನಾಂಗದವರಲ್ಲಿಯೂ ಇವರ ವ್ಯಕ್ತಿನಾಮಗಳಲ್ಲಿ ನಿರ್ದಿಷ್ಟ ಮತ್ತು ವಾರ್ಗಿಕಗಳ ಕೂಡಿಕೆ ಇದೆ. ಈ ನಿರ್ದಿಷ್ಟ ಮತ್ತು ವಾರ್ಗಿಕಗಳ ಬಳಕೆಯಿಂದ ಕೊಡಗಿನ ಗೌಡ ಜನರ ವ್ಯಕ್ತಿನಾಮಗಳಲ್ಲಿ ಎರಡು ಬಗೆಯ ವಿನ್ಯಾಸಗಳು ಸಾಧ್ಯವಾಗುತ್ತವೆ.

೧. ನಿರ್ದಿಷ್ಟ ವಾಚಿನಾಮ: ಕಾವೇರಿ, ಮುತ್ತು.

೨. ನಿರ್ದಿಷ್ಟ ವಾರ್ಗಿಕ ವಾಚಿನಾಮ: ಕಾವೇರಿ+ಅಮ್ಮ=ಕಾವೇರಮ್ಮ.

ಮುತ್ತು+ಅಪ್ಪ=ಮುತ್ತಪ್ಪ ಇತ್ಯಾದಿ.

ಕನ್ನಡ ಭಾಷೆಯಲ್ಲಿ ಸಂಬಂಧವಾಚಿಗಳು ಮೂಲತಃ ಸ್ತ್ರೀ, ಪುರುಷ ಸೂಚಿಗಳಾಗಿವೆ. ಇವು ವಾರ್ಗಿಕಗಳಾಗಿ ಬಳಕೆಗೊಳ್ಳುತ್ತಿರುವುದು ಈ ಭಾಷೆಯ ವೈಶಿಷ್ಟ್ಯವಾಗಿದೆ.

ಉದಾ: 'ಅಪ್ಪ' ಎಂಬುದು ಪುರುಷಸೂಚಿ ಇದು ರಾಮ+ಅಪ್ಪ ಎಂಬಲ್ಲಿ ವಾರ್ಗಿಕವಾಗಿದೆ. ಕನ್ನಡ ಭಾಷೆಯಲ್ಲಿ ಬಳಕೆಯಾಗುವ ಎಲ್ಲ ವಾರ್ಗಿಕಗಳನ್ನು ಸಂಬಂಧವಾಚಿ, ವ್ಯಕ್ತಿವಾಚಿ, ಗೌರವವಾಚಿಯೆಂದು ವರ್ಗೀಕರಿಸಬಹುದಾಗಿದೆ.

ಸಂಬಂಧವಾಚಿ: ಅಪ್ಪ-ಅಪ, ಅಮ್ಮ-ಅಮ, ಅಣ್ಣ-ಅಣ, ತಮ್ಮ, ತಂದೆ, ಅಯ್ಯ, ಅಜ್ಜ, ಅಚ್ಚ, ಅವ್ವ, ಅವ್ವೆ, ಅಮ್ಮ, ಆಯಿ, ಅಜ್ಜಿ, ಅಚ್ಚಿ, ಅಕ್ಕ, ತಾಯಿ, ಅಬ್ಬೆ, ಬಾಯಿ.

ವೃತ್ತಿವಾಚಿ: ರಾಜ, ಅರಸು, ಶ್ರಮಿತ, ಗೌಡ, ನಾಯಕ, ರಾಣಿ, ಅರಸಿ, ನಾಯಕಿ, ಗಾವುಂಡಿ ಇತ್ಯಾದಿ.

ಗೌರವವಾಚಿ: ದೇವ, ಸ್ವಾಮಿ, ಭಟ್ಟ, ಮೂರ್ತಿ, ದೇವಿ, ಕಂತಿ, ಗೊರವಿ ಇತ್ಯಾದಿ. ಆದರೆ, ಕೊಡಗಿನ ಗೌಡ ಜನರ ಸ್ತ್ರೀ ಹಾಗೂ ಪುರುಷರ ಹೆಸರಿನಲ್ಲಿರುವ ವಾರ್ಗಿಕಗಳು ಕೇವಲ ಸಂಬಂಧವಾಚಿಗಳಾಗಿವೆ. ಅವುಗಳು

ಪುರುಷ: ಅಪ್ಪ, ಅಮ್ಮ, ಅಣ್ಣ, ಅಯ್ಯ, ಅಚ್ಚ.

ಸ್ತ್ರೀ : ಅವ್ವ, ಅಮ್ಮ, ಅಕ್ಕ, ಅಕ್ಕಿ.

ಇವರ ಹೆಸರಿನಲ್ಲಿ ವಾರ್ಗಿಕವು ಕೆಲವೊಮ್ಮೆ ನಿರ್ದಿಷ್ಟವಾಗಿರುವ ರೂಪವಿದೆ.

ಉದಾ: ಅಯ್ಯ + ಅಪ್ಪ = ಅಯ್ಯಪ್ಪ.

ಅಕ್ಕ + ಅಮ್ಮ = ಅಕ್ಕಮ್ಮ.

ಅಪ್ಪ + ಅಚ್ಚ = ಅಪ್ಪಚ್ಚ. ಇತ್ಯಾದಿ.

ಹಾಗೆಯೇ ವಾರ್ಗಿಕದ ಮುಂದೆ ವಾರ್ಗಿಕ ಬಂದಿರುವ ಹೆಸರುಗಳೂ ಇವೆ. ಉದಾಹರಣೆಗೆ

ವಾ	+	**ವಾ**	=	**ಪುರುಷನಾಮ**
ಅಪ್ಪ	+	ಅಯ್ಯ	=	ಅಪ್ಪಯ್ಯ
ಅಯ್ಯ	+	ಅಣ್ಣ	=	ಅಯ್ಯಣ್ಣ
ಅಯ್ಯ	+	ಅಮ್ಮ	=	ಅಯ್ಯಮ್ಮ
ಅಣ್ಣ	+	ಅಯ್ಯ	=	ಅಣ್ಣಯ್ಯ
ಅಚ್ಚ	+	ಅಯ್ಯ	=	ಅಚ್ಚಮ್ಮ
ಅಪ್ಪ	+	ಅಚ್ಚ	=	ಅಪ್ಪಚ್ಚ
ಅಯ್ಯ	+	ಅಪ್ಪ	=	ಅಯ್ಯಪ್ಪ

ವಾ	+	**ವಾ**	=	**ಸ್ತ್ರೀನಾಮ**
ಅಕ್ಕ	+	ಅಮ್ಮ	=	ಅಕ್ಕಮ್ಮ
ಅಮ್ಮ	+	ಅಕ್ಕ	=	ಅಮ್ಮಕ್ಕ
ಅಕ್ಕ	+	ಅವ್ವ	=	ಅಕ್ಕವ್ವ
ಅಮ್ಮ	+	ಅಕ್ಕಿ	=	ಅಮ್ಮಕ್ಕಿ
ಅಮ್ಮ	+	ಅವ್ವ	=	ಅಮ್ಮವ್ವ

ಒಟ್ಟಿನಲ್ಲಿ ಕೊಡಗಿನ ಅರೆಭಾಷೆ ಗೌಡರ ಹೆಸರುಗಳನ್ನು ಗಮನಿಸಿದಾಗ ಸಂಬಂಧವಾಚಿಗಳು, ನಿರ್ದಿಷ್ಟಗಳಾಗಿಯೂ ಬಳಕೆಯಾಗಿದೆ ಎಂಬುದು ಕಂಡುಬರುತ್ತದೆ. ಅಂದರೆ, ಕೊಡಗಿನ ಗೌಡ ಜನರ ಹೆಸರುಗಳಲ್ಲಿ ನಿರ್ದಿಷ್ಟದ ಜೊತೆಗೆ ಸಂಬಂಧವಾಚಿ ವಾರ್ಗಿಕವು ಕಂಡುಬರುತ್ತದೆ. ಅವುಗಳು ಇಂತಿವೆ.

೪.೭.೨. ಕೊಡಗು ಅರೆಭಾಷೆ ಗೌಡರ ಪುರುಷನಾಮಗಳು:

ವ್ಯಕ್ತಿನಾಮ	=	**ನಿರ್ದಿಷ್ಟ**	+	**ವಾರ್ಗಿಕ.**
ಅಪ್ಪಯ್ಯ	=	ಅಪ್ಪ	+	ಅಯ್ಯ.
ಅಣ್ಣಯ್ಯ	=	ಅಣ್ಣ	+	ಅಯ್ಯ.
ಅಯ್ಯಪ್ಪ	=	ಅಯ್ಯ	+	ಅಪ್ಪ.
ಅಯ್ಯಣ್ಣ	=	ಅಯ್ಯ	+	ಅಣ್ಣ.
ಅಚ್ಚಯ್ಯ	=	ಅಚ್ಚ	+	ಅಯ್ಯ.
ಅಪ್ಪಚ್ಚು	=	ಅಪ್ಪ	+	ಅಚ್ಚು.

ಅಪ್ಪಚ್ಚ	=	ಅಪ್ಪ	+	ಅಚ್ಚ.
ಅಚ್ಚಪ್ಪ	=	ಅಚ್ಚ	+	ಅಪ್ಪ.
ಅಯ್ಯಮ್ಮ	=	ಅಯ್ಯ	+	ಅಮ್ಮ.
ಈರಪ್ಪ	=	ಈರ	+	ಅಪ್ಪ.
ಉತ್ತಯ್ಯ	=	ಉತ್ತ	+	ಅಯ್ಯ.
ಉತ್ತಪ್ಪ	=	ಉತ್ತ	+	ಅಪ್ಪ.
ಕರುಂಬಯ್ಯ	=	ಕರುಂಬ್	+	ಅಯ್ಯ.
ಕಾರ್ಯಪ್ಪ	=	ಕಾರ್ಯ	+	ಅಪ್ಪ.
ಕಾಳಯ್ಯ	=	ಕಾಳ	+	ಅಯ್ಯ.
ಕಾವೇರಪ್ಪ	=	ಕಾವೇರಿ	+	ಅಪ್ಪ.
ಕುಟ್ಟಪ್ಪ	=	ಕುಟ್ಟ	+	ಅಪ್ಪ.
ಕುಟ್ಟಯ್ಯ	=	ಕುಟ್ಟ	+	ಅಯ್ಯ.
ಕುಶಾಲಪ್ಪ	=	ಕುಶಾಲು	+	ಅಪ್ಪ.
ಕುಞಪ್ಪ	=	ಕುಞ	+	ಅಪ್ಪ.
ಚಂಗಪ್ಪ	=	ಚಂಗ್	+	ಅಪ್ಪ.
ಚಿಣ್ಣಪ್ಪ	=	ಚಿನ್ನ(ಣ್ಣ)	+	ಅಪ್ಪ.
ಚೆನಿಯಪ್ಪ	=	ಚೆನಿಯ	+	ಅಪ್ಪ.
ಚೀಯಣ್ಣ	=	ಚೀಯ	+	ಅಣ್ಣ.
ಚಿಟ್ಟಿಯಪ್ಪ	=	ಚಿಟ್ಟಿ	+	ಅಪ್ಪ
ಚೆಟ್ಟಿಯಪ್ಪ	=	ಚೆಟ್ಟಿ	+	ಅಪ್ಪ.
ನಂಜಪ್ಪ	=	ನಂಜು	+	ಅಪ್ಪ.
ನಾಣಯ್ಯ	=	ನಾಣಿ	+	ಅಯ್ಯ.
ನಾಚಪ್ಪ	=	ನಾಚು	+	ಅಪ್ಪ.
ನಾಚಯ್ಯ	=	ನಾಚು	+	ಅಯ್ಯ.
ತಮ್ಮಯ್ಯ	=	ತಮ್ಮ	+	ಅಯ್ಯ.
ತಮ್ಮಪ್ಪ	=	ತಮ್ಮ	+	ಅಪ್ಪ.
ತಮ್ಮಚ್ಚ	=	ತಮ್ಮ	+	ಅಚ್ಚ.
ತಿಮ್ಮಯ್ಯ	=	ತಿಮ್ಮ	+	ಅಯ್ಯ.
ದೇವಯ್ಯ	=	ದೇವ	+	ಅಯ್ಯ.

ಪಳಂಗಪ್ಪ	=	ಪಳಂಗು	+	ಅಪ್ಪ.
ಪೊನ್ನಪ್ಪ	=	ಪೊನ್ನು	+	ಅಪ್ಪ.
ಪೊನ್ನಣ್ಣ	=	ಪೊನ್ನು	+	ಅಣ್ಣ.
ಪೂವಯ್ಯ	=	ಪೂವು	+	ಅಯ್ಯ.
ಪೂವಪ್ಪ	=	ಪೂವು	+	ಅಪ್ಪ.
ಬೆಳ್ಳಪ್ಪ	=	ಬೆಳ್ಳಿ	+	ಅಪ್ಪ.
ಬಿದ್ದಪ್ಪ	=	ಬಿದ್ದು	+	ಅಪ್ಪ.
ಬಿದ್ದಯ್ಯ	=	ಬಿದ್ದು	+	ಅಯ್ಯ.
ಭೀಮಯ್ಯ	=	ಭೀಮ	+	ಅಯ್ಯ.
ಬೋಪಯ್ಯ	=	ಬೋಪು	+	ಅಯ್ಯ.
ಬೋಪಣ್ಣ	=	ಬೋಪು	+	ಅಣ್ಣ.
ಮಾದಪ್ಪ	=	ಮಾದ	+	ಅಪ್ಪ.
ಮಾದಯ್ಯ	=	ಮಾದ	+	ಅಯ್ಯ.
ಮಾಚಯ್ಯ	=	ಮಾಚು	+	ಅಯ್ಯ.
ಮುದ್ದಪ್ಪ	=	ಮುದ್ದು	+	ಅಪ್ಪ.
ಮುದ್ದಯ್ಯ	=	ಮುದ್ದು	+	ಅಯ್ಯ.
ಮುತ್ತಣ್ಣ	=	ಮುತ್ತು	+	ಅಣ್ಣ.
ಮುತ್ತಪ್ಪ	=	ಮುತ್ತು	+	ಅಪ್ಪ.
ಮುತ್ತಯ್ಯ	=	ಮುತ್ತು	+	ಅಯ್ಯ.
ಮೇದಪ್ಪ	=	ಮೇದ	+	ಅಪ್ಪ.
ಮೇದಯ್ಯ	=	ಮೇದ	+	ಅಯ್ಯ.
ಮಂದಪ್ಪ	=	ಮಂದ್	+	ಅಪ್ಪ.
ಮಂದಣ್ಣ	=	ಮಂದ್	+	ಅಣ್ಣ.
ಮೋಟಯ್ಯ	=	ಮೋಟು	+	ಅಯ್ಯ.
ಸೋಮಯ್ಯ	=	ಸೋಮ	+	ಅಯ್ಯ.
ಸೋಮಣ್ಣ	=	ಸೋಮ	+	ಅಣ್ಣ.
ಸೋಮಪ್ಪ	=	ಸೋಮ	+	ಅಪ್ಪ.
ಸುಬ್ಬಯ್ಯ	=	ಸುಬ್ಬ	+	ಅಯ್ಯ.
ಪೂಣಚ್ಚ	=	ಪೂಣ(೯)	+	ಅಚ್ಚ.

ಪೂವಣ್ಣ	=	ಪೂವು	+	ಅಣ್ಣ.
ಪೆಮ್ಮಯ್ಯ	=	ಪೆಮ್ಮು	+	ಅಯ್ಯ.
ಪೂರ್ಣಯ್ಯ	=	ಪೂರ್ಣ	+	ಅಯ್ಯ.
ಬಸಪ್ಪ	=	ಬಸ(ವ)	+	ಅಪ್ಪ.
ರಾಮಯ್ಯ	=	ರಾಮ	+	ಅಯ್ಯ.
ರಾಮಚ್ಚ	=	ರಾಮ	+	ಅಚ್ಚ.

ಕೊಡಗಿನ ಅರೆಭಾಷೆ ಗೌಡ ಸಮುದಾಯದವರ ವ್ಯಕ್ತಿ ನಾಮಗಳಲ್ಲಿ ವಿಶಿಷ್ಟತೆ ಇದ್ದು, ಇವುಗಳು ಸುಮಾರು ೨೦೦ ವರ್ಷಗಳಿಂದೀಚೆಗೆ ಕೇಳಿ ಬಂದ ಹೆಸರುಗಳು ಎಂಬುದು ವಿದ್ವಾಂಸರಿಂದ ತಿಳಿದುಬಂದಿದೆ. ಡಾ. ಐಚೆಟ್ಟಿರ ಮುತ್ತಣ್ಣ ತಮ್ಮ 'Coorg memories' ಎಂಬ ಪುಸ್ತಕದಲ್ಲಿ ಹೆಸರುಗಳ ಬಗೆಗೆ ಈ ರೀತಿ ವಿವರಿಸಿದ್ದಾರೆ.

ಕೊಡಗಿನ ವ್ಯಕ್ತಿನಾಮಗಳು ಹೆಚ್ಚಾಗಿ ಮಲಯಾಳಂ, ತುಳು, ಕನ್ನಡ, ತೆಲಗು, ತಮಿಳು ಈ ಪಂಚ ದ್ರಾವಿಡ ಭಾಷೆಗಳ ಶಬ್ದಗಳಿಂದ ಕೂಡಿವೆ ಎಂದಿರುವ ಅವರು ಈ ಹಿನ್ನೆಲೆಯಲ್ಲಿ ಇವುಗಳ ಅರ್ಥವನ್ನು ತಿಳಿಸಿದ್ದಾರೆ.

ಅಚ್ಚಪ್ಪ/ಅಚ್ಚಯ್ಯ : ಮಲಯಾಳಂ ಭಾಷೆಯಲ್ಲಿ 'ಅಚ್ಚ' ಎಂದರೆ 'ಅಪ್ಪ' ಎಂದೂ ವಿಷ್ಣುವಿನ ಹೆಸರು 'ಅಚ್ಯುತ' ಎಂದು, ಸಾವಿಲ್ಲದವನು ಎಂಬ ಅರ್ಥದಲ್ಲಿ ಈ ಹೆಸರುಗಳಿವೆ.

ಬೆಳ್ಳಿಯಪ್ಪ/ಬೆಳ್ಳಿಯವ್ವ: ಇದರ ಅರ್ಥ ಬೆಳ್ಳಿ ಎಂದು, ಬೊಳಿ ಎಂದು, ಅಂದರೆ, ಬೊಳಿ ಎಂದರೆ ಬೆಳಕು ಎಂಬ ಅರ್ಥವಿದೆ. ಅಂದರೆ, 'ಸೂರ್ಯ'ನಿಗೆ ಹೋಲಿಸಿದ್ದಾರೆ.

ಭೀಮಯ್ಯ : ಪಾಂಡವರ ಭೀಮನಂತೆ ಶಕ್ತಿವಂತ.

ಬೋಪಯ್ಯ/ಬೋಪಣ್ಣ : ತೆಲುಗಿನ ಪದ 'ಬೋಪ' ಎಂದರೆ ಬುದ್ಧಿವಂತ

ಚಂಗಪ್ಪ : ಚಂಗ್ ಎಂದರೆ ಶಂಖ, ಚಂಗಪ್ಪ ಎಂದರೆ ಶಿವ, ಶಂಕರ.

ಚಿಣ್ಣಪ್ಪ/ಚಿನ್ನಪ್ಪ : ಚಿನ್ನ+ಅಪ್ಪ, ಚಿನ್ನಪ್ಪ ಎಂದರೆ ಬಂಗಾರ.

ಕಾಳಪ್ಪ : ಕಾಳೆ ಎಂದರೆ ಪ್ರಮುಖ ನಾಯಕ ಎಂದೂ, ಶಿವನ ಆಭರಣ ಕಾಳಸರ್ಪ ಎಂದಿದ್ದು, 'ಕಾಳಪ್ಪ' ಎಂದರೆ 'ಶಿವ' ಎಂದಿದೆ.

ಕಾರ್ಯಪ್ಪ : ಕಾರ್ಯ – ಕೆಲಸ–ಕೆಲಸಗಾರ

ಕುಶಾಲಪ್ಪ : ತುಳುವಿನಲ್ಲಿನಲ್ಲಿ 'ಕುಶಾಲು' ಎಂದರೆ ತಮಾಷೆ. ಅಂದರೆ ತಮಾಷೆಗಾರ ಅಥವಾ ಸಂತೋಷವನ್ನು ಉಂಟು ಮಾಡುವವನು.

ಕುಟ್ಟಪ್ಪ: 'ಕುಟ್ಟಿ' ಎಂದರೆ ಕೃಷ್ಣ. ನಡಿಕೇರಿಯಂಡ ಚಿಣ್ಣಪ್ಪ ಅವರು ತಮ್ಮ 'ಪಟ್ಟೋಲೆ ಪಳಮೆ'ಯಲ್ಲಿ ಕೃಷ್ಣನನ್ನು 'ಕುಟ್ಟಪ್ಪ' ಎಂದಿದ್ದಾರೆ.

ಮಾಚಯ್ಯ/ಮಾಚಮ್ಮ: 'ಮಾಚ್' ಎಂದರೆ ತಮಿಳಿನಲ್ಲಿ ಪುನರ್ಜನ್ಮ. ಇಲ್ಲಿ ಎಂಬರ್ಥದಲ್ಲಿ ಹೆಸರಿದೆ.

ಮಂದಪ್ಪ/ಮಂದಣ್ಣ: 'ಮಂದ್' ಎಂದರೆ ಸಮುದಾಯ ಅಥವಾ ಗ್ರಾಮದ ಮುಖ್ಯಸ್ಥ.

ಮುತ್ತಣ್ಣ: ಮಲೆಯಾಳಂನಲ್ಲಿ 'ಮಾತ' ಎಂದರೆ ಹಿರಿಯವನು ಎಂಬರ್ಥದಲ್ಲಿರುವ ಹೆಸರು.

ನಾಣಯ್ಯ : ನಾಣಿ+ಅಯ್ಯ–'ನಾಣಿ' ಎಂದರೆ ನಾರಾಯಣ, ವಿಷ್ಣು.

ನಂಜಪ್ಪ/ನಂಜುಂಡ : ನಂಜು+ವಿಷ–ನಂಜುಂಡ–ಈಶ್ವರ.

ಪೂಣಚ್ಚ : ಪೂರ್ಣ+ಅಚ್ಚ. ಪೂರ್ಣ ಎಂದರೆ, ಸರ್ವಶಕ್ತ, ಪರಮಾತ್ಮ

ಪೆಮ್ಮಯ್ಯ : 'ಪೆರ್ಮ' ಎಂದರೆ ಗೌರವಾನ್ವಿತ ವ್ಯಕ್ತಿ.

ಸೋಮಯ್ಯ: ಸೋಮ–ಚೋಮ–ಎತ್ತು. ಶಿವನ ವಾಹನ ನಂದಿ

ಸುಬ್ಬಯ್ಯ : ಸುಬ್ರಹ್ಮಣ್ಯ.

ಸುಬ್ಬಮ್ಮ : ಶೃಂಗೇರಿ ಶಾರದೆ.

ತಿಮ್ಮಯ್ಯ : ಕುಲದೇವರಾದ ತಿರುಪತಿ ತಿಮ್ಮಪ್ಪ

೪.೭.೩. ಕೊಡಗು ಅರೆಭಾಷೆ ಗೌಡರ ಸ್ತ್ರೀನಾಮಗಳು:

ನಮ್ಮದು ಪುರುಷ ಪ್ರಧಾನ ಸಮಾಜವಾಗಿರುವುದರಿಂದ ಪ್ರಾಚೀನ ಯಾವುದೇ ರೂಪದ ಬರವಣಿಗೆಯಲ್ಲಿ ಸಂಖ್ಯಾದೃಷ್ಟಿಯಿಂದ ಸ್ತ್ರೀಯರ ಹೆಸರು ಕಡಿಮೆ. ಕೊಡಗಿನ ಅರೆಭಾಷೆ ಗೌಡ ಜನರಲ್ಲಿರುವ ಸ್ತ್ರೀಯರ ಹೆಸರುಗಳು ಇಲ್ಲಿರುವ ಪುರುಷ ಹೆಸರುಗಳಿಗಿಂತ ಸಂಖ್ಯಾದೃಷ್ಟಿಯಿಂದ ಕಡಿಮೆಯಿದೆ.

ನಾಮಗಳು	=	**ನಿರ್ದಿಷ್ಟ**	+	**ವಾರ್ಗಿಕ.**
ಅಕ್ಕಮ್ಮ	=	ಅಕ್ಕ	+	ಅಮ್ಮ.
ಅಮ್ಮಕ್ಕ	=	ಅಮ್ಮ	+	ಅಕ್ಕ.
ಅಮ್ಮಕ್ಕಿ	=	ಅಮ್ಮ	+	ಅಕ್ಕಿ.
ಅಮ್ಮವ್ವ	=	ಅಮ್ಮ	+	ಅವ್ವ
ಅಕ್ಕಚ್ಚಿ	=	ಅಕ್ಕ	+	ಅಚ್ಚಿ.
ಉಮ್ಮವ್ವ	=	ಉಮ್ಮ	+	ಅವ್ವ

ಉಮ್ಮಕ್ಕ	=	ಉಮ್ಮ	+	ಅಕ್ಕ.
ಅಕ್ಕವ್ವ	=	ಅಕ್ಕ	+	ಅವ್ವ.
ಕಾವೇರಮ್ಮ	=	ಕಾವೇರಿ	+	ಅಮ್ಮ.
ಕಾಮವ್ವ	=	ಕಾಮ	+	ಅವ್ವ.
ಗೌರಮ್ಮ	=	ಗೌರಿ	+	ಅಮ್ಮ.
ಗಂಗಮ್ಮ	=	ಗಂಗೆ	+	ಅಮ್ಮ.
ಗಂಗವ್ವ	=	ಗಂಗೆ	+	ಅವ್ವ.
ಚಂಬವ್ವ	=	ಚಂಬೆ	+	ಅವ್ವ.
ಚಂಗವ್ವ	=	ಚಂಗ್	+	ಅವ್ವ.
ಚುಬ್ಬಕ್ಕಿ	=	ಚುಬ್ಬ	+	ಅಕ್ಕಿ.
ಚೊಂದಮ್ಮ	=	ಚೊಂದು	+	ಅಮ್ಮ.
ಚೊಂದವ್ವ	=	ಚೊಂದು	+	ಅವ್ವ.
ಚೊಂದಕ್ಕಿ	=	ಚೊಂದು	+	ಅಕ್ಕಿ.
ಚೋಮವ್ವ	=	ಚೋಮ	+	ಅವ್ವ.
ಚೊಮಕ್ಕ	=	ಚೋಮ	+	ಅಕ್ಕ.
ನಂಜವ್ವ	=	ನಂಜು	+	ಅವ್ವ.
ನಂಜಮ್ಮ	=	ನಂಜು	+	ಅಮ್ಮ.
ತಂಗವ್ವ	=	ತಂಗೆ	+	ಅವ್ವ.
ತಂಗಮ್ಮ	=	ತಂಗೆ	+	ಅಮ್ಮ.
ತಂಗಚ್ಚಿ	=	ತಂಗೆ	+	ಅಚ್ಚಿ.
ತಾಯಮ್ಮ	=	ತಾಯಿ	+	ಅಮ್ಮ.
ತಾಯವ್ವ	=	ತಾಯಿ	+	ಅವ್ವ.
ತಾಯಕ್ಕಿ	=	ತಾಯಿ	+	ಅಕ್ಕಿ.
ದೇಚವ್ವ	=	ದೇಚು	+	ಅವ್ವ.
ದೇವಕ್ಕಿ	=	ದೇವ	+	ಅಕ್ಕಿ.
ದೇವಮ್ಮ	=	ದೇವ	+	ಅಮ್ಮ.
ಪೂವಮ್ಮ	=	ಪೂವು	+	ಅಮ್ಮ.
ಪೊನ್ನವ್ವ	=	ಪೊನ್ನು	+	ಅವ್ವ.
ಪೊನ್ನಮ್ಮ	=	ಪೊನ್ನು	+	ಅಮ್ಮ.

ಪೊನ್ನಕ್ಕಿ	=	ಪೊನ್ನು	+	ಅಕ್ಕಿ.
ಮುತ್ತಮ್ಮ	=	ಮುತ್ತು	+	ಅಮ್ಮ.
ಮುತ್ತವ್ವ	=	ಮುತ್ತು	+	ಅವ್ವ.
ಮುತ್ತಕ್ಕಿ	=	ಮುತ್ತು	+	ಅಕ್ಕಿ.
ಸೀತವ್ವ	=	ಸೀತೆ	+	ಅವ್ವ.
ಸೀತಮ್ಮ	=	ಸೀತೆ	+	ಅಮ್ಮ.
ನೀಲಮ್ಮ	=	ನೀಲ	+	ಅಮ್ಮ.
ನೀಲವ್ವ	=	ನೀಲ	+	ಅವ್ವ.
ನೀಲಕ್ಕಿ	=	ನೀಲ	+	ಅಕ್ಕಿ.
ಮಾಯಮ್ಮ	=	ಮಾಯ	+	ಅಮ್ಮ.
ಮಾಚಮ್ಮ	=	ಮಾಚು	+	ಅಮ್ಮ.
ಸೋಮವ್ವ	=	ಸೋಮ	+	ಅವ್ವ.
ಸೋಮಕ್ಕ	=	ಸೋಮ	+	ಅಕ್ಕ.
ಬೊಳ್ಳಕ್ಕಿ	=	ಬೊಳ್ಳಿ	+	ಅಕ್ಕಿ.
ಬೆಳ್ಯವ್ವ	=	ಬೆಳ್ಳಿ	+	ಅವ್ವ.
ಬೊಳ್ಳಮ್ಮ	=	ಬೊಳ್ಳಿ (ಬೆಳ್ಳಿ)	+	ಅಮ್ಮ.
ಬೊಜಮ್ಮ	=	ಬೋಜಿ	+	ಅಮ್ಮ.
ಬೋಜಕ್ಕಿ	=	ಬೋಜಿ	+	ಅಕ್ಕಿ.

ಈ ಮೇಲಿನ ಸಂಬಂಧಸೂಚಕ ವಾರ್ಗಿಕಗಳು ಕೊಡಗಿನ ಅರೆಭಾಷೆ ಗೌಡರ ಬಂಧುವಾಚಿಗಳಿಗೆ ವಾರ್ಗಿಕಗಳಾಗಿ ಬಳಕೆಯಾಗಿ ವ್ಯಕ್ತಿನಾಮಗಳಾಗಿರುವುದನ್ನು ಇಲ್ಲಿ ಕಾಣಬಹುದು.

ಅಮ್ಮ + ಅವ್ವ = ಅಮ್ಮವ್ವ.

ಅಕ್ಕ + ಅಮ್ಮ = ಅಕ್ಕಮ್ಮ.

ಬೋಜ (ಚಿಕ್ಕಪ್ಪ) + ಅಪ್ಪ = ಬೋಜಪ್ಪ.

ಕುಞ (ಚಿಕ್ಕತಂಗಿ) + ಅಪ್ಪ = ಕುಞಪ್ಪ.

ಅಪ್ಪ + ಅಚ್ಚ = ಅಪ್ಪಚ್ಚ ಇತ್ಯಾದಿ.

ಸಂಕ್ಷಿಪ್ತತೆ:

ಜಗತ್ತಿನಲ್ಲಿ ಹಲವೆಡೆ ಉದ್ದವಾದ ಹೆಸರನ್ನಿಡುವ ಪರಿಪಾಠವು ಇದೆ. ಆದರೆ, ವ್ಯವಹರಿಸುವಾಗ

.ಸಂಕ್ಷಿಪ್ತ ಮಾಡುವುದಿದೆ. ಅಲ್ಲದೆ ಯಾವುದೇ ಘಟಕವಿರಲಿ ಕುಟುಂಬ ಮತ್ತು ಆತ್ಮೀಯ ನೆಲೆಯಲ್ಲಿ ಅದು ಸಂಕ್ಷಿಪ್ತವಾಗುವುದುಂಟು. ಕೊಡಗಿನ ಅರೆಭಾಷೆ ಗೌಡರಲ್ಲಿಯೂ ನಿಜನಾಮವನ್ನು ಸಂಕ್ಷಿಪ್ತಗೊಳಿಸಿ ಸಂಬೋಧನೆ ಮಾಡುವುದು ಇದೆ.

ಬೆಳ್ಯವ್ವ – ಬೆಳ್ಳಿ.

ಪೂವಮ್ಮ – ಪೂವಿ.

ನಾಣಯ್ಯ – ನಾಣಿ.

ಬೋಪಯ್ಯ – ಬೋಪು.

ಪೊನ್ನವ್ವ – ಪೊನ್ನು.

ಮುತ್ತಮ್ಮ – ಮುತ್ತು ಇತ್ಯಾದಿ.

ಈ ಸಂಕ್ಷಿಪ್ತತೆ ಕೆಲವೊಮ್ಮೆ ದೇಶಿಕೃತವಾಗುವವು. ವ್ಯಕ್ತಿನಾಮಗಳ ರಾಚನಿಕ ಸ್ವರೂಪದಲ್ಲಿ 'ನಿರ್ದಿಷ್ಟ' ಘಟಕವೇ ಮುಖ್ಯವಾಗಿದೆ. ಅದರ ಅರ್ಥವೇ ಗುರುತಿಸಲು ಅರ್ಹವಾದ ನಿರ್ದೇಶವಾಗುವುದು. ಅದು ವಾಚ್ಯಾರ್ಥವನ್ನು ಹಿಂದೆ ಹಾಕುವುದು. ಕೊಡಗಿನಂತಹ ಚಿಕ್ಕ ಭಾಷಾ ಪರಿಸರದಲ್ಲಿ ದೇಶಿ ಶಬ್ದಗಳ ಬಳಕೆ ಹೀಗಿದೆ. 'ಬೆಳ್ಳಿ', 'ಪೂವಿ', 'ನಾಣಿ', 'ಬೆಳ್ಳಿಯಪ್ಪ' ಎಂಬವುಗಳಾಗಿವೆ.

೪.೭.೪. ಪರ್ಯಾಯ ನಾಮ:

ಕೊಡಗು ಅರೆಭಾಷೆ ಗೌಡರಲ್ಲಿ ನಿಜನಾಮವನ್ನು ಬಿಟ್ಟು ಪರ್ಯಾಯ ನಾಮವನ್ನು ಸಂಬೋಧನೆಗೆ ಅಳವಡಿಸಿಕೊಳ್ಳುವುದು ರೂಢಿಯಲ್ಲಿದೆ. ನಿಜನಾಮವು ಹುಟ್ಟಿದ ನಕ್ಷತ್ರಕ್ಕೆ ಸಂಬಂಧಿಸಿದ 'ಜನ್ಮ ನಾಮ' ಇದು ಭವಿಷ್ಯ, ಜಾತಕ ಇತ್ಯಾದಿಗಳನ್ನು ನೋಡುವುದರ ಸಲುವಾಗಿ ಇರುವ ಹೆಸರು. ಕೆಲವೊಮ್ಮೆ ದಾಖಲೆಗಳಲ್ಲಿ 'ಜನ್ಮನಾಮ'ವೇ ಇರುತ್ತದೆ. ಆದರೆ, ಕೌಟುಂಬಿಕ ವಲಯದಲ್ಲಿ, ಸ್ನೇಹಿತರೊಂದಿಗೆ, ಪರ್ಯಾಯ ನಾಮ ಅಥವಾ ಅಡ್ಡ ಹೆಸರಿನಿಂದ ಸಂಬೋಧನೆ ಮಾಡಲಾಗುತ್ತದೆ. ನಾಮಕರಣದ ದಿನವೇ ಎರಡೂ ಹೆಸರನ್ನು ಮಗುವಿಗೆ ನಾಮಕರಣ ಮಾಡಲಾಗುತ್ತದೆ.

ಹಿಂದಿನ ತಲೆಮಾರು:

ನಿಜನಾಮಗಳು	–	**ಪರ್ಯಾಯ ನಾಮಗಳು.**
ಚಂಗಪ್ಪ	–	ಪುಟ್ಟು.
ಮಾಚಮ್ಮ	–	ಜಾಜಿ.
ಪೂಣಚ್ಚ	–	ರಾಜು.
ಕಾರ್ಯಪ್ಪ	–	ಸಾಬು.

ಉತ್ತಯ್ಯ	–	ಮಿಟ್ಟು.
ಸೀತವ್ವ	–	ರಾಣಿ.
ಕಾವೇರಮ್ಮ	–	ಪ್ರೇಮ.
ಅಚ್ಚಯ್ಯ	–	ರಘು.
ಕುಞಪ್ಪ	–	ಗಪ್ಪು.
ದೇವಕಿ	–	ರಾದ ಇತ್ಯಾದಿ.

ಇತ್ತೀಚಿನ ತಲೆಮಾರು:

ನಿಜನಾಮಗಳು	–	**ಪರ್ಯಾಯ ನಾಮಗಳು.**
ಉತ್ತಯ್ಯ	–	ರನ್ನು.
ಬೋಜಮ್ಮ	–	ಸೋನಿ.
ಬೋಪಣ್ಣ	–	ಡ್ಯಾನಿ.
ಸೋಮಣ್ಣ	–	ಸನ್ನಿ.
ಕುಶಾಲಪ್ಪ	–	ಪ್ರೀತಮ್.
ಪೊನ್ನಪ್ಪ	–	ಗೌತಮ್.
ಬಿದ್ದಪ್ಪ	–	ನಯನ್ ಇತ್ಯಾದಿ.

ಹೀಗೆ ಇಲ್ಲಿನ ವ್ಯಕ್ತಿನಾಮಗಳು ಸಂಬೋಧನಾ ನೆಲೆಯಲ್ಲಿ ವ್ಯಕ್ತಿಯ ಪೂರ್ಣಹೆಸರು ಬಳಕೆಯಾಗದೆ ಅಡ್ಡ ಹೆಸರೋ, ಮುದ್ದು ಹೆಸರೋ ಬಳಕೆಯಾಗುತ್ತಿದೆ.

ಒಮ್ಮೆ ಒಂದು ಹೆಸರು ಒಬ್ಬ ವ್ಯಕ್ತಿಯ ಮೂಲಕ ಒಂದು ಮನೆತನದಲ್ಲಿ ಸೇರಿಕೊಂಡಿತೆಂದರೆ ಅದನ್ನು ಹೊರಹಾಕುವುದು ಕಷ್ಟ. ಕೊಡಗಿನ ಅರೆಭಾಷೆ ಗೌಡರಲ್ಲಿ ಇವರ ಹೆಸರಿನ ನಿರ್ದಿಷ್ಟದೊಂದಿಗೆ ಕುಟುಂಬ ನಾಮಗಳು(ಮನೆಹೆಸರು) ಬಳಕೆಯಾಗುತ್ತವೆ. ಇಲ್ಲಿ ವ್ಯಕ್ತಿಯನ್ನು ಗುರುತಿಸುವಲ್ಲಿ ವ್ಯಕಿನಾಮದಷ್ಟೇ ಮಹತ್ವದ ಪಾತ್ರವನ್ನು ಕುಟುಂಬ ನಾಮಗಳು ವಹಿಸುತ್ತವೆ. ಕೊಡಗಿನ ಪರಿಸರದಲ್ಲಿ ಅರೆಭಾಷೆ ಗೌಡರು ಮಾತ್ರವಲ್ಲದೆ ಕೊಡವರೂ ಮನೆ ಹೆಸರುಗಳನ್ನು ಹೊಂದಿರುವರು. ಇಲ್ಲಿ ಕೊಡವರ ಮತ್ತು ಅರೆಭಾಷೆ ಗೌಡರ ಮನೆಹೆಸರುಗಳು ಬೇರೆ ಬೇರೆಯಾಗಿದ್ದರೂ ವ್ಯಕ್ತಿನಾಮಗಳು ಒಂದೇ ರೀತಿಯಲ್ಲಿವೆ. ಆದ್ದರಿಂದ ಹೆಸರಿನೊಂದಿಗೆ ಕುಟುಂಬ ನಾಮವು ಬಳಕೆಯಾಗುವುದರಿಂದ ವ್ಯಕ್ತಿಯನ್ನು ಗುರುತಿಸಬಹುದು. ಯಾವ ಮನೆತನಕ್ಕೆ ಸೇರಿದವನು ಎಂಬುದರ ಮೂಲಕ 'ಕೊಡವ' ಅಥವಾ 'ಗೌಡ' ಎಂಬುದನ್ನು ಗುರುತಿಸಬಹುದು.

ಮನೆಹೆಸರು	–	**ವ್ಯಕ್ತಿಯ ಹೆಸರು**
ಅಮೆ	–	ಉತ್ತಯ್ಯ.
ಮುಕ್ಕಾಟಿ	–	ಅಮ್ಮವ್ವ.

ಪಾಂಡನ	–	ಮುತ್ತಕ್ಕಿ.
ಬೈಮನ	–	ಯಾದವ.
ಚಂಡೀರ	–	ಪೂಣಚ್ಚ.
ಬಾರಿಕೆ	–	ಸುಬ್ಬಯ್ಯ ಇತ್ಯಾದಿ.

ಅಂದರೆ ಇಲ್ಲಿನ ಗೌಡ ಸಮುದಾಯದಲ್ಲಿ ಒಂದೇ ಹೆಸರನ್ನು ಹಲವರು ಹೊಂದಿರುವರು. ಆದ್ದರಿಂದ ಕುಟುಂಬನಾಮ(ಮನೆ ಹೆಸರು)ದೊಂದಿಗೆ ಅವರನ್ನು ಗುರುತಿಸಲಾಗುವುದು.

ಮನೆಹೆಸರುಗಳು	**–**	**ಹೆಸರುಗಳು.**
ಮುಕ್ಕಾಟಿ	–	ಚಂಗಪ್ಪ.
ಕುರುಂಜಿ	–	ಚಂಗಪ್ಪ.
ಯಂಕನ	–	ಚಂಗಪ್ಪ.
ಪಲ್ಲೇತಿ	–	ಚಂಗಪ್ಪ.
ಕೋಡಿಯಡ್ಕ	–	ಚಂಗಪ್ಪ.
ಉಳುವಾರನ	–	ಚಂಗಪ್ಪ ಇತ್ಯಾದಿ.

ಸಾಮಾನ್ಯವಾಗಿ ಹಲವು ಮನೆಗಳಲ್ಲಿ ಒಂದೇ ಹೆಸರು ಬಳಕೆಯಲ್ಲಿರುವುದು ಕಂಡುಬಂದಿದೆ. ಹಾಗೆಯೇ ಒಂದೇ ಕುಟುಂಬದಲ್ಲಿ ಒಂದೇ ಹೆಸರಿನ ಒಬ್ಬರಿಗಿಂತ ಹೆಚ್ಚು ವ್ಯಕ್ತಿಗಳಿದ್ದರೆ ಪ್ರತ್ಯೇಕಿಸುವ ದೃಷ್ಟಿಯಿಂದ ಅವರ ಪ್ರಿಯನಾಮದೊಂದಿಗೆ ಅವರನ್ನು ಕರೆಯಲಾಗುತ್ತದೆ.

ಉದಾ: ಪಾಪು – ಬೆಳ್ಳಿಯಪ್ಪ.

ರಾಜು – ಬೆಳ್ಳಿಯಪ್ಪ.

ಅಥವಾ ಅವರು ವಾಸಿಸುವ ಪ್ರದೇಶದ ಸ್ಥಳಗಳ ಮೂಲಕ ಅವರನ್ನು ಗುರುತಿಸಲಾಗುತ್ತದೆ.

ಉದಾ: ಕೆಳಗೆ ಮನೆ – ಉತ್ತಯ್ಯ.

ಮ್ಯಾಲೆಮನೆ – ಉತ್ತಯ್ಯ.

ಕೊಪ್ಪ – ಉತ್ತಯ್ಯ ಇತ್ಯಾದಿ.

ಹುಟ್ಟಿದ ಕೂಡಲೇ ಗಂಡು ಇಲ್ಲವೆ ಹೆಣ್ಣು ಕೂಸಿಗೆ ಇಟ್ಟ ಹೆಸರಿನ ಮುಂದೆ ಅದರ ತಂದೆಯ ಹೆಸರು, ಅಡ್ಡ ಹೆಸರುಗಳು ಬರುತ್ತವೆ. ಕೊಡಗಿನ ಗೌಡ ಜನರ ಹೆಸರಿನೊಂದಿಗೆ ಅವರ ಮನೆ ಹೆಸರು ಮತ್ತು ತಂದೆಯ ಹೆಸರು ಸೇರಿಕೊಳ್ಳುತ್ತವೆ.

ಉದಾ: ಮನೆಹೆಸರು + ತಂದೆಯ ಹೆಸರು + ಜನ್ಮನಾಮ = ವ್ಯಕ್ತಿನಾಮ

ಚಂಡೀರ + ಅಯ್ಯಪ್ಪ + ಮಾಯಮ್ಮ = ಚಂಡೀರ ಅಯ್ಯಪ್ಪ ಮಾಯಮ್ಮ.

ಉಳುವಾರನ + ಚಂಗಪ್ಪ + ಕಾರ್ಯಪ್ಪ = ಉಳುವಾರನ ಚಂಗಪ್ಪ . ಕಾರ್ಯಪ್ಪ.

ವ್ಯಕ್ತಿಯ ಹೆಸರಿನೊಂದಿಗಿರುವ ಈ ಮನೆ ಹೆಸರು ಮತ್ತು ತಂದೆಯ ಹೆಸರು ಆಂಗ್ಲೀಕರಣದ ಪ್ರಭಾವದಿಂದಾಗಿ ಸಂಕ್ಷಿಪ್ತಗೊಂಡು ಏಕಾಕ್ಷರಗಳಾಗಿ ಇವರ ವ್ಯಕ್ತಿನಾಮದೊಂದಿಗೆ ಬಳಕೆಯಾಗುತ್ತದೆ. ಉದಾಹರಣೆಗೆ

ಮನೆಹೆಸರು	+	**ತಂದೆಯ ಹೆಸರು**	+	**ಜನ್ಮನಾಮ**	=	**ವ್ಯಕಿನಾಮ.**		
ಮೇಡತನ	+	ಮೂವಯ್ಯ	+	ಕುಶಾಲಪ್ಪ	=	M.P. ಕುಶಾಲಪ್ಪ.		
ಯಂಕನ	+	ಮಂದಣ್ಣ	+	ಕರುಂಬಯ್ಯ	=	Y.M. ಕರುಂಬಯ್ಯ		
ಚಂಡೀರ	+	ಅಯ್ಯಪ್ಪ	+	ಪೂಣಚ್ಚ	=	C.A. ಪೂಣಚ್ಚ.		
ಮಂದ್ರೀರ	+	ರಾಮಪ್ಪ	+	ಬೆಳ್ಳಿಯಪ್ಪ	=	M.R. ಬೆಳ್ಳಿಯಪ್ಪ.		
ಬೊಮ್ಮಿಯನ	+	ದೇವಯ್ಯ	+	ಚೊಂದಮ್ಮ	=	B.D. ಚೋಂದಮ್ಮ.		

ಇಲ್ಲಿನ ಸ್ತ್ರೀಯರ ಹೆಸರು ವಿವಾಹದ ಮೊದಲು ತಂದೆಯ ಮನೆ ಹೆಸರು ಹಾಗೂ ತಂದೆಯ ಹೆಸರಿನೊಂದಿಗೆ ಇರುವುದು ಕಂಡುಬಂದರೆ ವಿವಾಹದ ನಂತರ ತಂದೆಯ ಹೆಸರಿಗೆ ಬದಲಾಗಿ ಗಂಡನ ಮನೆ ಹೆಸರು ಹಾಗೂ ಗಂಡನ ಹೆಸರಿನೊಂದಿಗೆ ಸೇರಿಕೊಳ್ಳುವುದು ಕಂಡುಬರುತ್ತದೆ. ಉದಾಹರಣೆಗೆ

ವಿವಾಹ ಪೂರ್ವ.

ತಂದೆಯ ಕುಲನಾಮ	+	ಪಿತೃನಾಮ	+	ನಿಜನಾಮ	=	ವ್ಯಕ್ತಿನಾಮ.
ಕೊಡಗನ	+	ರಾಮಯ್ಯ	+	ಸೀತಮ್ಮ	=	K.R.ಸೀತಮ್ಮ.
ಕಾಳೇರಮ್ಮನ	+	ಸುಬ್ಬಯ್ಯ	+	ಗಂಗಮ್ಮ	=	K.S.ಗಂಗಮ್ಮ.

ವಿವಾಹ ನಂತರ.

ಪತಿಯ ಕುಲನಾಮ	+	ಪತಿಯನಾಮ	+	ನಿಜನಾಮ	=	ವ್ಯಕ್ತಿನಾಮ.
ಬೈಮನ	+	ನಾಣಯ್ಯ	+	ದೇವಕಿ	=	B.N.ದೇವಕ್ಕಿ.
ಕೇಚಪ್ಪನ	+	ಸೋಮಯ್ಯ	+	ಪೊನ್ನಮ್ಮ	=	K.S.ಪೊನ್ನಮ್ಮ.

ಈ ರೀತಿಯ ಪ್ರತಿಷ್ಠೆಯ ದ್ಯೋತಕವಾಗಿ ಆಂಗ್ಲೀಕರಣದ ಪ್ರಭಾವದಿಂದ ವ್ಯಕ್ತಿನಾಮಗಳು ಸಂಕ್ಷಿಪ್ತವಾಗಿ ಏಕಾಕ್ಷರವಾಗುವುದನ್ನು ಕಾಣಬಹುದು.ಭಾರತದ ಉದ್ದಗಲಕ್ಕೂ ಈ ಸಂಕ್ಷಿಪ್ತ ಛಾಯೆ ವ್ಯಾಪಕವಾಗಿದೆ.

ಹೆಣ್ಣಿಗೆ ತವರು ಮನೆಯವರು ಇಟ್ಟ ಹೆಸರನ್ನು ಕೈ ಬಿಟ್ಟು ಗಂಡನ ಮನೆಯವರು ಮದುವೆಯ ನಂತರ ಬೇರೊಂದು ಹೆಸರನ್ನು ಅಂಟಿಸುವ ಪದ್ಧತಿ ಕೊಡಗಿನ ಗೌಡ ಜನಾಂಗದಲ್ಲಿ ಹಿಂದಿನಿಂದಲೂ ಇದೆ.

ಉದಾ:

ತಂದೆಯ ಮನೆಯವರು ಇಟ್ಟ ಹೆಸರು.	**ಗಂಡನ ಮನೆಯಲ್ಲಿಟ್ಟ ಬೇರೊಂದು ಹೆಸರು.**
ಸೀತಮ್ಮ	ಬೆಳ್ಯವ್ವ
ಗೌರಮ್ಮ	ರಾಣಿ
ಚೋಂದಮ್ಮ	ಚಿಮ್ಮಿ ಇತ್ಯಾದಿ.

ಆದರೆ, ಕಳೆದ ಎರಡು ದಶಕಗಳಿಂದೀಚೆಗೆ ಇದು ತೀರಾ ಕಡಿಮೆಯಾಗಿದ್ದು, ಹೆಣ್ಣಿಗೆ ತವರು ಮನೆಯವರು ಇಟ್ಟ ಹೆಸರನ್ನೇ ಗಂಡನ ಮನೆಯಲ್ಲೂ ಬಳಸಲಾಗುತ್ತಿದೆ.

ಕೊಡಗಿನ ಗೌಡರ ವ್ಯಕ್ತಿನಾಮಗಳನ್ನು ಸಂಬೋಧನಾ ನೆಲೆಯಲ್ಲಿ ಅಡ್ಡ ಹೆಸರುಗಳಿಂದ ಕರೆಯಲಾಗುತ್ತದೆ. ಕ್ರಮೇಣ ಇಷ್ಟದ ಆಧುನಿಕ ಹೆಸರನ್ನೇ ನಾಮಕರಣ ಮಾಡಲಾಗುತ್ತಿದೆ. ಆದರೆ, ಇತ್ತೀಚಿನ ಬೆಳವಣಿಗೆ ಎಂದರೆ ಪುರುಷ ನಾಮಗಳಲ್ಲಿ ಮತ್ತೆ ಹಳೆಯ ಮಾದರಿಯನ್ನೇ ಅನುಸರಿಸುತ್ತಿರುವುದು. ಮತ್ತೂ ಕಂಡು ಬಂದಿರುವ ಅಂಶವೆಂದರೆ, ಪ್ರಿಯನಾಮ ಅಥವಾ ಹೊಸ ಹೆಸರುಗಳ ಜೊತೆಗೆ ಸಾಂಪ್ರದಾಯಿಕ ನಾಮಗಳೂ ಸೇರಿ ವ್ಯಕ್ತಿನಾಮಗಳಾಗಿ ಬಳಕೆಯಲ್ಲಿರುವುದು. ಇವರಲ್ಲಿ ನಾಲ್ಕು ತಲೆಮಾರುಗಳನ್ನು ಗಮನಿಸಿದರೆ ಅವುಗಳು ಕಂಡು ಬರುವುದು.

ಇಂದು ಅನೇಕ ಕಾರಣಗಳಿಂದ ವ್ಯಕ್ತಿನಾಮಗಳು ಬದಲಾವಣೆಗೆ ಒಳಗಾಗುತ್ತಿವೆ. ಅದು ಅನಿವಾರ್ಯ ಕೂಡ. ವ್ಯಕ್ತಿಯು ವಾಸಿಸುವ ಸಮುದಾಯ ಆಧುನೀಕರಣಗೊಂಡಂತೆ ವ್ಯಕ್ತಿನಾಮಗಳು ಮೊದಲಿದ್ದ ಸ್ವರೂಪವನ್ನು ಬದಲಾಯಿಸಿಕೊಳ್ಳುತ್ತಿವೆ. ವ್ಯಕ್ತಿಯು ಶೈಕ್ಷಣಿಕವಾಗಿ ಮುಂದುವರಿದಂತೆಲ್ಲ ವ್ಯಕ್ತಿನಾಮಗಳನ್ನು ಪುನರ್ ಪರಿಶೀಲನೆಗೆ ಒಳಗು ಮಾಡುತ್ತಾನೆ. ಈ ವಿಚಾರವನ್ನು ಕೆಲವು ನಿದರ್ಶನಗಳೊಂದಿಗೆ ಪರಿಶೀಲಿಸಬಹುದು.

ಪುರುಷರಲ್ಲಿ:

ತಲೆಮಾರು–೧	**ತಲೆಮಾರು–೨**	**ತಲೆಮಾರು–೩**	**ತಲೆಮಾರು–೪**
ಮಂದಣ್ಣ	ಪೂಣಚ್ಚ	ಕಿಶೋರ್	ಮದನ್ ಮುತ್ತಣ್ಣ.
ಅಯ್ಯಪ	ತಿಮ್ಮಯ್ಯ	ದಯಾನಂದ	ಗೌತಮ್ ಕುಶಾಲಪ್ಪ.

ಕುಶಾಲಪ್ಪ	ಚಂಗಪ್ಪ	ರವಿಕುಮಾರ್	ಸೋನು ಸುಬ್ಬಯ್ಯ.
ಪೊನ್ನಪ್ಪ	ಅಚ್ಚಯ್ಯ	ನವೀನ್	ನಿತಿನ್ ಬೆಳ್ಳಿಯಪ್ಪ.
ಅಯ್ಯಮ್ಮ	ಬೆಳ್ಳಿಯಪ್ಪ	ರಚನ್	ಡೆರಿನ್ ಪೂವಯ್ಯ.

ವ್ಯಕ್ತಿನಾಮಗಳು ಪರಿವರ್ತನಶೀಲವಾಗಿರುವುದು ಮತ್ತು ಪ್ರಭಾವ ಬದ್ಧವಾಗಿರುವವು. ಸದಾಕಾಲ ಹೊಸತನದ ಮಿಡಿತವು ಅಲ್ಲಿ ಕಂಡುಬರುವುದು. ತಲೆಮಾರಿನಿಂದ ತಲೆಮಾರಿಗೆ ಅವು ಬದಲಾಗುತ್ತವೆ. ಇಲ್ಲಿ ಮತ್ತೆ ಹಳೆಯ ಮಾದರಿಗೆ ಹಿಂತಿರುಗುತ್ತಿರುವುದು ಗಮನಿಸುವಂತಹ ಅಂಶವಾಗಿದೆ. ಇಲ್ಲಿರುವ ಪುರುಷ ವ್ಯಕ್ತಿನಾಮಗಳನ್ನು ಗಮನಿಸಿದಾಗ ಮೊದಲನೇ ತಲೆಮಾರು ಮತ್ತು ತಲೆಮಾರು-೨ರಲ್ಲಿ ಅವರ ಸಾಂಪ್ರದಾಯಿಕ ಹೆಸರುಗಳೇ ಕಂಡುಬರುತ್ತವೆ. ತಲೆಮಾರು-೩ರಲ್ಲಿ ಸಾಮಾನ್ಯವಾದ ಪುರುಷರ ಹೆಸರುಗಳೇ ಕಂಡುಬರುತ್ತಿವೆ. ತಲೆಮಾರು-೪ರಲ್ಲಿ ಆಧುನಿಕ ಪ್ರಿಯನಾಮಗಳ ಜೊತೆಗೆ ಮೊದಲಿದ್ದ ಸಾಂಪ್ರದಾಯಿಕ ಹೆಸರನ್ನು ಸೇರಿಸಿ ಹೆಸರನ್ನು ಇಡಲಾಗಿದೆ. ಇದಕ್ಕೆ ಒಂದು ಕಾರಣ ಕೊಡವರಲ್ಲಿ ಇದೇ ಮಾದರಿಯಲ್ಲಿ ವ್ಯಕ್ತಿನಾಮಗಳಿವೆ. ಪ್ರಾದೇಶಿಕವಾಗಿ ಒಂದೇ ಸ್ಥಳದಲ್ಲಿರುವ ಕೊಡವರ ಪ್ರಭಾವದಿಂದ ಈ ರೀತಿಯ ವ್ಯಕಿನಾಮಗಳಿವೆ. ಇನ್ನೊಂದು ಕಾರಣವೆಂದರೆ, ಕಳೆದ ಒಂದು ದಶಕದಿಂದ ಗೌಡ ಸಮುದಾಯ ಗೌಡಕನ್ನಡ ಭಾಷೆ ಇವುಗಳ ಬಗೆಗೆ ಗೌಡರಿಗಿರುವ ಅಭಿಮಾನ ಮತ್ತು ಆಸಕ್ತಿ ಭಾಷೆಯನ್ನು ಬೆಳೆಸಬೇಕೆಂಬ ಹಂಬಲದೊಂದಿಗೆ ತಮ್ಮ ಸಂಸ್ಕೃತಿಯನ್ನು ಉಳಿಸಿಕೊಳ್ಳುವ ಉದ್ದೇಶ. ಹಾಗಾಗಿ ಹಳೆಯ ಮಾದರಿಯನ್ನೇ ಮತ್ತೆ ವ್ಯಕ್ತಿನಾಮಗಳಲ್ಲಿ ಉಳಿಸುವ ಪ್ರಯತ್ನ ಇದಾಗಿದೆ. ಆದರೆ ಸ್ತ್ರೀಯರಲ್ಲಿ ಇದು ಭಿನ್ನವಾಗಿದೆ.

ಸ್ತ್ರೀ ನಾಮಗಳು:

ತಲೆಮಾರು-೧	**ತಲೆಮಾರು-೨**	**ತಲೆಮಾರು-೩**	**ತಲೆಮಾರು-೪**
ಸೀತವ್ವ	ಜಾನಕಿ	ಸವಿತ	ನೀತು
ಚೊಂದಮ್ಮ	ಲೀಲಾವತಿ	ಕವಿ	ಪದವಿ ಪೊನ್ನಮ್ಮ
ನೀಲವ್ವ	ಸಾವಿತ್ರಿ	ವಿಮಲ	ಗ್ರಂಥ ಗೌರಮ್ಮ
ಸೋಮಕ್ಕ	ಕಾವೇರಮ್ಮ	ಸ್ವಾತಿ	ಜನನಿ.
ಬೆಳ್ಳಿಯವ್ವ	ಗೌರಮ್ಮ	ಪವಿತ್ರ	ಕಾವ್ಯ
ಮುತ್ತವ್ವ	ಮಾಚಮ್ಮ	ಸುಜಾತ	ರೀನಾ ಇತ್ಯಾದಿ

ಇಲ್ಲಿರುವ ಸ್ತ್ರೀ ನಾಮಗಳನ್ನು ಗಮನಿಸಿದಾಗ ತಲೆಮಾರು ಒಂದರಲ್ಲಿರುವ ಹೆಸರುಗಳಂತೆ ತಲೆಮಾರು ಎರಡರಲ್ಲಿ ಸುಮಾರು ಶೇಕಡಾ ೫೦ರಷ್ಟು ಕಂಡುಬರುತ್ತದೆ. ತಲೆಮಾರು-೩ರಲ್ಲಿ ಹಳೆಯ ಹೆಸರುಗಳು ಯಾವೂ ಕಂಡು ಬರುವುದಿಲ್ಲ. ತಲೆಮಾರು-೪ರಲ್ಲಿ ಪುರುಷನಾಮಗಳಂತೆ ಮತ್ತೆ ಹಳೆಯ ಮಾದರಿಗೆ ಹಿಂದಿರುಗಿರುವುದು ಅಲ್ಲಲ್ಲಿ ಕಂಡುಬರುತ್ತಿದೆ. ಜೊತೆಗೆ ಆಧುನಿಕವಾದ

ಪ್ರಿಯ, ಪ್ರಭಾವೀನಾಮಗಳು ಕಂಡುಬರುತ್ತವೆ. ಬದಲಾವಣೆಯಲ್ಲಿ ಪುರುಷನಾಮಗಳಲ್ಲಿ ಮಾತ್ರ ಹಳೆಯ ಹೆಸರುಗಳು ಹೆಚ್ಚಾಗಿ ಮತ್ತೆ ಬಳಕೆಯಾಗುತ್ತಿವೆ. ಆದರೆ ಸ್ತ್ರೀನಾಮಗಳಲ್ಲಿ ಇದು ಅಷ್ಟಾಗಿ ಇಲ್ಲ. ಇಂದು ನಾವು ಯಾಂತ್ರಿಕ ಯುಗದಲ್ಲಿದ್ದೇವೆ. ಇದರಿಂದಾಗಿ ಆಂತರಿಕ ಭಾವನೆಯಲ್ಲಿ ಬಾಹ್ಯ ಜೀವನದಲ್ಲಿ ವೇಗವಾದ ಬದಲಾವಣೆಗಳು ಸಂಭವಿಸುತ್ತವೆ. ಇದರ ಪರಿಣಾಮ ಸಹಜವಾಗಿ ಹೆಸರಿನ ಮೇಲೂ ಆಗುತ್ತದೆ. ಹೀಗಾಗಿ ಹೆಸರಿಡುವ ದೃಷ್ಟಿಕೋನದಲ್ಲಿ ಬದಲಾವಣೆಯಾಗುತ್ತಿದೆ. ಒಟ್ಟಿನಲ್ಲಿ ಕೊಡಗು ಅರೆಭಾಷೆ ಗೌಡರ ವ್ಯಕ್ತಿನಾಮಗಳ ಚಾರಿತ್ರಿಕತೆಯನ್ನು ಗಮನಿಸಿದಾಗ ಅವು ತಲೆಮಾರಿನಿಂದ ತಲೆಮಾರಿಗೆ ಬದಲಾವಣೆಯನ್ನು ಹೊಂದಿದೆ ಎಂಬುದನ್ನು ಕಾಣಬಹುದು.

ಕೊಡಗು ಅರೆಭಾಷೆ ಗೌಡರಲ್ಲಿ ವ್ಯಕ್ತಿನಾಮಗಳು ಹಿರಿಯರಿಂದ, ಕಿರಿಯರಿಂದ ಮತ್ತು ಸ್ನೇಹಿತರಿಂದ ಹೇಗೆ ಸಂಬೋಧನೆಗೊಳ್ಳುತ್ತದೆ ಎಂಬುದನ್ನು ಈ ಕೆಳಗಿನಂತೆ ನೋಡಲಾಗಿದೆ.

ಪೂರ್ಣಹೆಸರು	**ಹಿರಿಯರಿಂದ**	**ಕಿರಿಯರಿಂದ**	**ಸ್ನೇಹಿತರಿಂದ**
ಮಂದಣ್ಣ	ಮಂದಣ	ಮಂದುಮಾವ	ಮಂದು/ಮಂದಣ್ಣ.
ತಮ್ಮಯ್ಯ	ತಮ್ಮಿ/ತಮ್ಮಯ್ಯ	ತಮ್ಮಿ ಅಣ್ಣ	ತಮ್ಮಿ
ಬೀಮಯ್ಯ	ಬೀಮು/ಬೀಮಯ್ಯ	ಬೀಮುಮಾವ	ಬೀಮು
ಮುತ್ತಕ್ಕಿ	ಮುತ್ತು/ಮುತ್ತಕ್ಕಿ	ಮುತ್ತತ್ತೆ	ಮುತ್ತು
ಕಾಮವ್ವ	ಕಾಮಿ/ಕಾಮವ್ವ	ಕಾಮಿ ಅತ್ತೆ	ಕಾಮಿ
ಪೊನ್ನಣ್ಣ	ಪೊನ್ನು/ಪೊನ್ನಣ್ಣ	ಪೊನ್ನುಮಾವ	ಪೊನ್ನು
ನಾಣಯ್ಯ	ನಾಣಿ/ನಾಣಯ್ಯ	ನಾಣಿ ಅಣ್ಣ	ನಾಣಿ
ಕುಞಪ್ಪ	ಕುಞ/ಕುಞಪ್ಪ	ಕುಞ ಅಣ್ಣ	ಕುಞ
ಸೀತವ್ವ	ಸೀತೆ/ಸೀತವ್ವ	ಸೀತಕ್ಕ	ಸೀತೆ
ಬೋಜಮ್ಮ	ಬೋಜಿ/ಬೋಜಮ್ಮ	ಬೋಜತ್ತೆ	ಬೋಜಿ
ಪೂವಮ್ಮ	ಪೂವಿ/ಪೂವಮ್ಮ	ಪೂವಕ್ಕ	ಪೂವಿ
ಕಾವೇರಮ್ಮ	ಕಾವೇರಿ	ಕಾವೇರಕ್ಕ	ಕಾವೇರಿ. ಇತ್ಯಾದಿ.

ಒಟ್ಟಾರೆಯಾಗಿ ಕೊಡಗಿನಲ್ಲಿರುವ ವ್ಯಕ್ತಿಗಳ ಹೆಸರನ್ನು ನೋಡಿದಾಗ ಕೊಡಗು ಜಿಲ್ಲೆಯಲ್ಲಿ ಕೊಡವರು ಮತ್ತು ಅರೆಭಾಷೆ ಗೌಡರ ಹೆಸರುಗಳು ಒಂದೇ ರೀತಿಯಲ್ಲಿರುವುದು ತಿಳಿದು ಬರುತ್ತದೆ. ಇವುಗಳಲ್ಲಿ ಯಾವುದೇ ವ್ಯತ್ಯಾಸಗಳಿಲ್ಲ. ಇದು ಅರೆಭಾಷೆ ಗೌಡರ ವ್ಯಕ್ತಿನಾಮಗಳ ಮೇಲೆ ಕೊಡವ ವ್ಯಕ್ತಿನಾಮಗಳ ಪ್ರಭಾವವಾಗಿದೆ. ಏಕೆಂದರೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಅರೆಭಾಷೆ ಗೌಡರಲ್ಲಿ ಈ ರೀತಿಯ ಹೆಸರುಗಳಿಲ್ಲ. ಅಲ್ಲದೆ, ಕೊಡಗಿಗೆ ಗೌಡರು ಬಂದು ನೆಲೆಸುವ ಮೊದಲೇ ಇಲ್ಲಿ ಕೊಡವರು ಇದ್ದರು. ಹಾಗಾಗಿ ಕೊಡಗಿಗೆ ಬಂದ ನಂತರ ಕೊಡವರ ಹೆಸರನ್ನು ಗೌಡರು ತಮ್ಮ

ಮಕ್ಕಳಿಗೆ ಇಟ್ಟಿರಬಹುದು ಎಂದು ಊಹಿಸಲಾಗಿದೆ. ಗೌಡರಲ್ಲಿರುವ ಸ್ತ್ರೀನಾಮಗಳು ಹಿಂದೆ ಕೊಡವರ ಸ್ತ್ರೀ ನಾಮಗಳಂತೆಯೇ ಇದ್ದವು. ಆದರೆ ಆಧುನೀಕಣದ ಪ್ರಭಾವದಿಂದಾಗಿ ಈ ಹೆಸರುಗಳು ಕಡಿಮೆಯಾಗಿದ್ದವು, ಇತ್ತೀಚೆಗೆ ಪುನಃ ಹಳೆಯ ಸಾಂಪ್ರದಾಯಿಕ ಹೆಸರುಗಳನ್ನು ಮಗುವಿಗೆ ನಾಮಕರಣ ಮಾಡುತ್ತಿರುವರು. ಆದರೆ ಕೊಡವರಲ್ಲಿ ಅದೇ ಹಿಂದಿನಿಂದ ಬಂದಿರುವ ಹೆಸರುಗಳೇ ಇವೆ. ಕೊಡಗಿನ ಅರೆಭಾಷೆ ಗೌಡರು ಮತ್ತು ಕೊಡವರಲ್ಲಿ ಈ ಸಾಂಪ್ರದಾಯಿಕ ಹೆಸರುಗಳೊಂದಿಗೆ ಪ್ರಿಯನಾಮಗಳು ಇವೆ. ಇಲ್ಲಿ ಈ ಎರಡೂ ಭಾಷಿಕರ ವೇಷಭೂಷಣ ಮತ್ತು ಮನೆ ಹೆಸರುಗಳ ಮೂಲಕ ಗೌಡರು ಮತ್ತು ಕೊಡವರು ಎಂದು ಗುರುತಿಸುವರು.

ಉದಾ: ಕೊಡಗಿನಲ್ಲಿರುವ ಗೌಡರ ಮತ್ತು ಕೊಡವರ ಹೆಸರುಗಳು:

ಗೌ.ಕ.	**ಕೊಡವ**
ಸುಬ್ಬಯ್ಯ	ಸುಬ್ಬಯ್ಯ
ಸೋಮಣ್ಣ	ಸೋಮಣ್ಣ
ಪೂಣಚ್ಚ	ಪೂಣಚ್ಚ
ತಿಮ್ಮಯ್ಯ	ತಿಮ್ಮಯ್ಯ ಇತ್ಯಾದಿ.

ಕುಟುಂಬನಾಮಗಳೊಂದಿಗೆ ಕೊಡಗಿನ ಗೌಡರ ಮತ್ತು ಕೊಡವರ ವ್ಯಕ್ತಿನಾಮಗಳು:

ಗೌಡರ ವ್ಯಕ್ತಿನಾಮಗಳು: ಹೊಸೋಕ್ಲು ಸೋಮಣ್ಣ
ಚಂಡೀರ ಪೂಣಚ್ಚ
ತುಂತಜ್ಜೆ ತಿಮ್ಮಯ್ಯ
ಗೋವಿಂದಮ್ಮನ ಸುಬ್ಬಯ್ಯ

ಕೊಡವರ ವ್ಯಕ್ತಿನಾಮಗಳು: ಮಾತಂಡ ಸೋಮಣ್ಣ
ಪಳಂಗಂಡ ಪೂಣಚ್ಚ
ತೀತೀರ ತಿಮ್ಮಯ್ಯ
ಅಂಜಪರವಂಡ ಸುಬ್ಬಯ್ಯ

ಕೊಡಗಿನಲ್ಲಿ ಹೀಗೆ ಗೌಡರಲ್ಲಿ ಮತ್ತು ಕೊಡವರಲ್ಲಿ ಒಂದೇ ವ್ಯಕ್ತಿನಾಮಗಳಿದ್ದರೂ ಇದರಿಂದ ಇವರಲ್ಲಿ ಯಾವುದೇ ಸಮಸ್ಯೆಗಳಾಗಲಿ ಅಥವಾ ಗೊಂದಲಗಳಾಗಲೀ ಉಂಟಾಗಿಲ್ಲ. ತುಳು ಭಾಷಿಕರ ವ್ಯಕ್ತಿನಾಮಗಳಲ್ಲಿ ಈ ರೀತಿಯ ವ್ಯಕ್ತಿನಾಮಗಳು ಇಲ್ಲ. ಕೊಡಗಿನ ಅರೆಭಾಷೆ ಗೌಡರಲ್ಲಿ ಮಾತ್ರ ಈ ರೀತಿಯ ಹೆಸರುಗಳಿರುವುದು ವಿಶಿಷ್ಟವಾಗಿವೆ.

೪.೮. ಮನೆ ಹೆಸರುಗಳು:

ಒಂದು ಮನೆಯನ್ನು ಅಥವಾ ಕುಟುಂಬವನ್ನು ಮುಖ್ಯವಾಗಿಟ್ಟುಕೊಂಡು ಅದನ್ನು ಗುರುತಿಸುವುದಕ್ಕಾಗಿ ಹೆಸರುಗಳನ್ನು ಇಡುವ ಕ್ರಿಯೆಯು ಜಗದ್ವ್ಯಾಪಿಯಾಗಿರುವುದನ್ನು ಕಾಣಬಹುದು. ನಾಗರಿಕ ಜಗತ್ತಿನಲ್ಲಿ ಮನೆಯನ್ನು ಒಂದು ಘಟಕವಾಗಿಟ್ಟುಕೊಂಡು ಗುರುತಿಸುವಿಕೆ ವ್ಯಾಪಕವಾಗಿದೆ. ನಾಮವಿಜ್ಞಾನ ಕ್ಷೇತ್ರದಲ್ಲಿ ಸ್ಥಳನಾಮಗಳು, ಗ್ರಾಮನಾಮಗಳು, ವ್ಯಕ್ತಿನಾಮಗಳು, ಕುಟುಂಬನಾಮಗಳು ಮತ್ತು ಶಿರೋನಾಮಗಳು ಎಂಬ ಮಹತ್ವದ ಸಮಾಜೋಭಾಷಿಕ ರೂಪಗಳನ್ನು ಗುರುತಿಸಲಾಗಿದೆ. ಈ ನಾಲ್ಕೂ ಕ್ಷೇತ್ರಗಳು ಸಮಾಜೋಭಾಷಿಕ ರಚನೆಯನ್ನು ಹೊಂದಿದವುಗಳಾಗಿದ್ದು, ಸಾಮಾಜಿಕ ವ್ಯವಹಾರ ಇಲ್ಲಿ ಮುಖ್ಯವಾಗುವುದು.

ಪ್ರಾಚೀನ ಮಾನವನು ತನ್ನ ಮನದಲ್ಲಿ ಮೂಡುವ ಬಗೆಬಗೆಯ ಭಾವನೆಗಳನ್ನು ಅಭಿವ್ಯಕ್ತಪಡಿಸುವ ಸಾಧನವಾಗಿ ಭಾಷೆಯನ್ನು ಬಳಸಿಕೊಂಡನು. ಭಾಷೆ ಮಾನವನನ್ನು ಪ್ರಾಣಿಲೋಕದಿಂದ ಬೇರ್ಪಡಿಸುವ ದಾರಿಯಾಗಿದೆ. ನಂತರದಲ್ಲಿ ಮಾನವ ತನ್ನ ಹೊಟ್ಟೆಯ ಪೋಷಣೆಗಾಗಿ ಸ್ಥಳದಿಂದ ಸ್ಥಳಕ್ಕೆ ಅಲೆಯಲಾರಂಭಿಸಿದನು. ಈ ಮೂಲಕ ತಾನು ಬದುಕಲು ಆಹಾರವನ್ನು ಸಂಗ್ರಹಿಸಲಾರಂಭಿಸಿದನು. ಹೀಗೆ ಬಹಳಷ್ಟು ಕಾಲ ಅಲೆಮಾರಿಯಾಗಿ ಸಂಚರಿಸುತ್ತಾ ಕಾಲವನ್ನು ಕಳೆಯುತಿದ್ದನು. ನಂತರ ಆಸರೆಗಾಗಿ ತಾನೆ ಗುಹೆಗಳನ್ನು ನಿರ್ಮಿಸಿಕೊಂಡ. ಆತನ ಭೌಧ್ಧಿಕ ಚಿಂತನೆ ಹೆಚ್ಚು ಹೆಚ್ಚಾದಂತೆ ಆತ ಕಲ್ಲುಮಣ್ಣು ಬಳಸಿ ಮನೆ ಮಾಡಿಕೊಂಡು ಒಂದೆಡೆ ತನ್ನ ಜೀವನಕ್ಕೆ ಅನುಕೂಲವಾಗುವ ಸ್ಥಳದಲ್ಲಿ ನೆಲೆನಿಂತು ಬದುಕಲಾರಂಭಿಸಿದನು. ಮನೆವಾಸಿಯಾಗಿ ಬದುಕನ್ನು ಬೆಳೆಸಿದ. ಹೀಗೆ ಮನುಷ್ಯ ಮನೆಯನ್ನು ಆಸರೆಯ ಮಖ್ಯ ಮಹತ್ವದ ನೆಲೆಯಾಗಿಸಿದ. ಈ ಆಸರೆಯೇ ವಸತಿಗಳಾದವು. ಈತನ ಸಂತತಿಯು ಬೆಳೆದಂತೆ ಪ್ರತ್ಯೇಕ ಕುಟುಂಬಗಳಾದವು. ಈ ಕುಟುಂಬಗಳನ್ನು ಗುರುತಿಸಲು ಅವುಗಳಿಗೆ ಹೆಸರನ್ನಿಟ್ಟುಕೊಂಡರು. ಇವೇ ಕುಟುಂಬನಾಮಗಳು ಅಥವಾ ಮನೆ ಹೆಸರುಗಳು.

ಕುಟುಂಬನಾಮಗಳ ವರ್ಗೀಕರಣ:

ಕೊಡಗಿನ ಗೌಡ ಸಮುದಾಯದಲ್ಲಿ ಗೋತ್ರ ಅಥವಾ ಬಳಿ ಪದ್ಧತಿ ಇದೆ. ಒಂದು ಕುಟುಂಬ ಬೆಳೆದು ದೊಡ್ಡದಾದಾಗ ಕುಟುಂಬದ ಸದಸ್ಯರು ಒಂದೇ ಕಡೆ ನಿಲ್ಲದೆ ಬೇರೆ ಬೇರೆ ಸ್ಥಳಗಳಿಗೆ ವಲಸೆ ಹೋಗುತ್ತಾರೆ. ಈ ರೀತಿ ವಲಸೆ ಹೋದ ಕುಟುಂಬಗಳು ಕವಲೊಡೆದು ಬೇರೆ ಬೇರೆ ಕುಟುಂಬಗಳಾಗುತ್ತವೆ. ಹೀಗೆ ಕವಲೊಡೆದು ಬೇರೆಯಾದ ಕುಟುಂಬಗಳ ಗಂಡು ಹೆಣ್ಣುಗಳಲ್ಲಿ ವಿವಾಹ ನಿಷೇಧ. ಇಂತಹ ಕವಲೊಡೆದ ಕುಟುಂಬಗಳಿಗೆ ಬೇರೆ ಬೇರೆ ಹೆಸರುಗಳಿದ್ದರೂ ಅವರುಗಳೆಲ್ಲರೂ ಒಂದೇ ರಕ್ತ ಸಂಬಂಧಿಕರಾದುದರಿಂದ ಆ ಸಂಬಂಧವನ್ನು ಗುರುತಿಸುವುದಕ್ಕಾಗಿ ಅವರನ್ನು ಒಂದೇ ಗೋತ್ರದವರೆಂದು ಕರೆಯುತ್ತಾರೆ. ಈ ಗೋತ್ರಕ್ಕೆ ಒಂದು ಹೆಸರನ್ನಿಡುತ್ತಾರೆ.

೪.೮.೧. ಕೊಡಗು ಮತ್ತು ದಕ್ಷಿಣಕನ್ನಡ ಜಿಲ್ಲೆಗಳ ಗೌಡರ ಗೋತ್ರದ ಪ್ರಕಾರ ಮನೆಯ ಹೆಸರುಗಳು:

ನಂದರ ಗೋತ್ರ: ಪುದಿನೆರವನ, ಪೋರೆಯನ, ಪಾರೇರ, ಪರಮಲೆ, ಪನ್ನೆಡ್ಕ, ಪಡ್ಪು, ಪೈಕೆ, ಪಲ್ಲತಡ್ಕ, ಪಪ್‌ಜೋಡು, ಪೆರ್ಮೊಗರ್, ಪಿಲಿಗುಂದ, ಮೆರ್ಕಜೆ, ಮಾವಾಜಿ, ಮೇಚನ, ಮೂರ್ಚೆ, ಮುಕ್ಕಾಟಿ (ಕಿರುಂದಾಡು), ಮುಕ್ಕಾಟಿ (ಕಡಿಯತ್ತೂರು), ಮಾಗುಲು, ಮೂಲೆಮಜಲು, ಮಜ್ಞಪುರ, ಮಳ್ಳರ, ಮುಂಡರ(ಬಾರಿಕೆ), ಮಳುವೇಲು, ಮಾಡಾವು(ಸಂಪಾಜೆ), ಕುದುಕುಳಿ, ಕೋಡಿ, ಕೊಡಪಾಲು, ಕುರಿಯ, ಕುಕ್ಕೇಟಿ, ಕುಂದಲ್ಪಾಡಿ, ಕಾಯರ, ಕುಣಿಯನ, ಕಾಸ್ಪಾಡಿ, ಕಾನಡ್ಕ, ಕನಕಮಜಲು, ಕೋರನ, ಕನ್ನಡ್ಕ, ಕಟ್ಟೆಪುಣಿ, ಕುಯ್ಯಮುಡಿ, ಕುಳ, ಕುಂಬ್ಲಾಡಿ, ಕುಂಬಳಚೇರಿ, ಕೊಂಬನ, ಕಲ್ಲುಗದ್ದೆ, ಕೆಮ್ಮಾರನ, ಕುಂಜಿಲನ, ಕೊಡಂಬೂರು, ನೂಜಿ, ನಿಡುಬ್ಬೆ, ನೆರಿಯನ, ನೂಜಿಲಮನೆ, ನಿಡ್ಯಮಲೆ, ನೆಲ್ಲಿಪುರ, ಅಡ್ಕಾರು, ಅತ್ತೇಡಿ, ಆನೇರ, ಅಂಬ್ರಾಟಿ, ಅಮೆಚೂರ್, ಅನಂತಾಡಿ, ತೋರೆರ, ತುಮತಜೆ, ತೋಟಂಬೈಲು, ಬೈಮನ, ಬೈಚನ, ಬೊಬ್ಬೆಕೇರಿ, ಬೆಳ್ಳಿಪಾಡಿ, ಬಿಳಿಯಾರು, ಬಿಟ್ಟಂಗಿಲು, ಬೆಳಿಮನೆ, ಬಾಕಿಲನ, ಬೈಲೊಳ್ಳೀರ, ಬೊಳ್‌ಕ್ಕಜೆ, ಬೊಳ್ತಜ್ಜೀರ, ಬೊಳ್ಳೂರು, ಬಲ್ಯಮನೆ, ಬಂಗಾರಕೋಡಿ, ಗೌಡ್ಲ, ಗುಡ್ಯ, ದೇವರಗುಂಡ, ದಬ್ಬಡ್ಕ, ಸೂದನ, ಉಳುವಾರನ, ಉಳಿಯಡ್ಕ, ಚೀಯಪ್ಪನ, ಚೆರಿಯಮನೆ.

ಬಂಗಾರ ಗೋತ್ರ: ಪಡಿಕಲ್ಲು, ಪರಮಲೆ, ಪೆರುಮುಂಡ, ಪೊಕ್ಕುಲಂಡ್ರ, ಪೊನ್ನಚನ, ಅಂಚೆಕಲ್ಲು, ಅಜ್ಜಿಪಟ್ಟೀರ, ಅಮ್ಮಾಜೀರ, ಅರಂಬೂರು, ಅಯ್ಯೇಟಿ, ಕೊಂಪುಳೀರ, ಕೂರನ, ಕೋಚನ, ಕುಯಿಂತೋಡು, ಕೈಬಿಲಿ, ಬೈನೆರವನ, ಬಿರುಮಣ್ಣನ, ಬಿದುರುಪಣೆ, ಬೊಳುಗಲ್ಲು, ಬನ್ನೂರು, ಮುದ್ಯೆನ, ಮರದಾಳು, ಮಲ್ಲರ, ಮಳ್ಳಂದಿರ, ಮೂಂಗ್ಲಿಮನೆ, ಮರುದೂರು, ಮಲ್ಲರಮನೆ, ಮೂಲೆಮನೆ, ಮಲೆಅಡ್ತಲೆ, ತೂಟೇರ, ಗುಂಡ್ಯ, ಗೂಡಂಜಿರ, ಗೋವಿಂದಮ್ಮನ, ನಾಟೋಳನ, ನೀರ್ಪಾಡಿ, ನೆರಿಯನ, ನರುಳು, ಚೆಟ್ಟಿಮಾಡ, ಚಿಟ್ಯನ ಮನೆ, ಹೊಳೆಕರೆ, ಹುದೇರಿ, ಎರ್‌ಡಡ್ಕ, ಸಣ್ಣಮನೆ, ಬೆಟ್ಟನಮನೆ, ಸಾಂತಿತಟ್ಕ, ಶಿರ್ವಾಜೆ, ಉಲುಪ್ಪ, ಹೊಸೋಕ್ಲು, ಹುಲಿಮನೆ, ಲಕ್ಕಂಡ್ರ ಕೊಟ್ಟಕೇರಿಯನ.

ಹೆಮ್ಮನ ಗೋತ್ರ: ಅಮೆ, ಅಯ್ಯಂಡ್ರ, ಅಮ್ಮೆ, ಅಚ್ಚಲ್ಪಾಡಿ, ಅಣ್ಣೆಚ್ಚೀರ, ಅಚ್ಚಂಪಾಲು, ಅಡ್ಕಬಳೆ, ಪಡ್ಡು, ಪಲ್‌ತ್ತಕಲ್ಲು, ಪಲ್ತಾಡಿ, ಪಲ್ತಾಡ್, ನಂಗಾರು, ನಡುಬೆಟ್ಟು, ಮೊಟ್ಟೀರ, ಮುಕ್ಕಾಟಿ (ಆಲೂರು ಸಿದ್ಧಾಪುರ), ಮೊಂಟಡ್ಕ, ಮೊಟ್ಟನ, ಮುರಳ್ಯ, ಮತ್ಲಾಜೆ. ಮಡ್ತಿಲ, ಮಡಪ್ಪಾಡಿ, ಮಂಞಂಡ್ರ, ಮೂವನ, ಮಜಲುಗದ್ದೆ, ಮಜಲುಮನೆ, ಮುಳ್ಳು ಬಾಗಿಲು, ಮಿತ್ತೂರು, ತಳೂರು, ತೆಕ್ಕಡೆ, ತಡಿಯಪ್ಪನ, ಗುಡ್ಡೆಮನೆ, ಗೂನಡ್ಕ, ಕಾಂಗೀರ, ಕಿರ್‌ಬಂಗ, ಕೋಟೆರ, ಕೊಪ್ಪಡ್ಕ, ಕನಿಚಾರ್, ಕುಂಬನ, ಕೆಡುಮಾಲೆ, ಕಾಯರ, ಕಟ್ಟೆಪುಣಿ, ಕೇವಳ, ಕಡ್ಯದ, ಕೂಪೇರ, ಕುಂಟಿಕಾನ,

ಕಂಡಲಜಿ, ಕುಯಂತೋಡು, ಕಡಂಬಡ್ಕ, ಕಲ್ಲಡ್ಕ, ಕತ್ರಿಕೊಲ್ಲಿ, ಕೊಡಿಪಾಡಿಗುತ್ತು, ಕೊಡ್ತುಗುಳಿ, ಕಾಳೆಯಂಡ್ರ, ಕುಞ್ಞಳಿ, ಹಾರಂಬಿ, ಹೊದ್ದೇಟಿ, ಹೊಸೋಳಿಕೆ, ಹೊಸೋಕ್ಲು, ಹಸಿಯಟ್ಕ, ಹುಲಿಮನೆ, ಹೊಸಮನೆ (ಅಳಿಕೆ), ಹುಲಿಮನೆ, ಎಣ್ಣೆ ಮಜಲು, ಉದಿಯನ, ಊರುಬೈಲು,ಒಕ್ಕೆತ್ತೂರು, ದೇರಜಿರ, ದಂಡಿನ, ದೋಲನ, ದೇವಂಗೋಡಿ, ಬೈತಡ್ಕ, ಬೆಳ್ಯನ, ಪಂಜದ, ಪೂಜಾರಿರ, ಬೊಳ್ಳೂರು, ಬಿಟ್ಟೀರ, ಜೋಗಿಮಲೆ, ಶಿರಕಜೆ, ಚಾಂಗನ, ಚಂಡೀರ, ಗೂಂಡಡ್ಕ, ನಡುಮನೆ, ಲಕ್ಕಪ್ಪನ ಮನೆ.

ಕಬರ್‌ಗೋತ್ರ : ಮುಕ್ಕಾಟಿ, ಪರಿವಾರ, ಪೆರಪ್ಪಾಡಿ, ಪಾರ್‌ಪ್ಪಾಡಿ, ಕೊಡೆಕಲ್ಲು, ಕೆದಂಬಾಡಿ, ಕೋಳಿಬೈಲು, ಕುದುಪಜೆ, ಕಾನೆಹಿತ್ಲು, ಕೊಯಿಗಾಜೆ, ದಂಬೆಕೋಡಿ, ಚಿಲ್ತ್‌ಡ್ಕ, ಚೆಟ್ಟಿಜನ, ಮೂಟೇರ, ನಡುಮನೆ, ಸುಳ್ಯಕೋಡಿ, ಬಳ್ಳಡ್ಕ, ಚೋಂಡಿರ, ತಿರೋಡಿ, ಪದ್ಮಬೈಲು.

ನಾಯರ್ ಗೋತ್ರ: ಕಾಳೇರಮ್ಮನ, ಸೋಮಗೌಡನ, ಕಲ್ಲಮುಟ್ಲು, ಕುಂಜತ್ತಾಡಿ, ಕುಳ್ಳಂಪಾಡಿ, ಕುಂಬಗೌಡನ, ಕಡುಪಂಜ, ಕಾಯರ್ಮಾರ್, ಕಣಿಸೀರು, ಕಮಿಲ ಮನೆ, ಕಾಯರ ಕಟ್ಟೆ, ಕೂಜುಗೋಡು, ಕೋಡಿಂಬಲ, ಎಡಿಕೇರಿ, ಗೋಲತಡ್ಕ, ಮಡಿಯನ, ಮಾಡ್ತಾರು, ಬಾರಿಕೆ, ತೊತ್ತಿಯನ, ಪೊಡನೋಳನ, ಚೆರಿಯಮನೆ, ಗಡಿಮಾರು, ಪೊಲ್ಯ, ಗುಂಡಿಮಜಲು, ಕೋಳುಮುಡಿಯನ, ತಳೂರು, ಮಡ್ತಾರ್.

ಸಾಲೆ ಗೋತ್ರ (ಹಾಲು ಗುಂಡರ ಗೋತ್ರ) : ಪೇರಿಯನ, ಸೆಟ್ಟಿಜನ, ಸೂನ್‌ತ್ತೋಡು, ಸೂರ್ತಲೆ, ಅಂಜೆಟ್ಟೀರ, ಅತ್ತೇಡಿ, ಕಿರಿಯಮನೆ, ಉಡುದೊಳಿರ, ತೆಂಕೀಲ, ಕೋಳಿಬೈಲು, ಕುರುಂಜಿ, ನಿನ್ನಿಕಲ್, ಮುಕ್ಕಾಟಿ (ಬೇತು), ಚಾತುರನ, ಪೆರನಾ.

ಮುಲ್ಯರ ಗೋತ್ರ: ಪಡೇಲ, ಪರ್ಲಕೋಟಿ, ಪಸಂದೋಡಿ, ಪಿಂಡಿಮನೆ, ಕೈಕೇರಿ, ಕಕ್ಕೆ ಬೆಟ್ಟು, ಕುಳುವಾಜೆ, ಕೆಮ್ಮಟ್ಟೆ, ಕಲ್ಲಂಬಿ, ನಾಲ್ಯಾರ್, ನಿಂಗಪ್ಪನ ಮನೆ, ಅಡ್ತಲೆ, ಅಮೆಮನೆ, ಬೆಪ್ಪುರನ, ಬೈಲಾಡಿ, ಮಾತಾವು, ಮಣಿಬೈಲು, ದಬ್ಬಡ್ಕ, ಪೂಜಾರಿರ, ಮಾಲಿಮನೆ, ಕುಟ್ಟನ, ಪುಳಕಂಡ, ಕಂಬಳ, ಪುಳಂಜನ.

ಚಾಲ್ಯರ ಗೋತ್ರ: ಕೆಮ್ಮಟ್ಟೆ, ತೊತ್ತಿಯನ, ಪಲ್ಲತ್ತಡ್ಕ, ಉಡುದೋಳಿ, ದೇರಳಮನೆ, ಕುರುಂಬಿ, ಬಿಳಿಯನ, ಸೂಣ್ತ್ತೋಡ್, ಏನೆಕಲ್, ಉಡುದಳಿ.

ಬಳಸನ್ನ ಗೋತ್ರ: ಕಟ್ರತನ, ಕೋಲ್ಚಾರು, ಬಾರನ, ಕೊಂಬಾರನ, ಮುದ್ಯನ, ಕೊಳಂಬೆ, ಕರ್ಣೇಯನ, ಲಕ್ಕಪ್ಪನ, ಮರದಾಳು, ಬಡ್ಡನ.

ಸೆಟ್ಟಿ ಗೋತ್ರ: ಕಲ್ಲಂಬಿರ, ಕೆಂಜನ, ಕಳ್‌ಗದ್ದೆ, ದೊಡ್ಡೇರ, ಕುಂಚಡ್ಕ, ಮುಕ್ಕಾಟಿ, ಹೋಸೋಕ್ಲು, ಪಂಜಿಪಳ್ಳ, ದಾಯನ, ನಡುಬೆಟ್ಟು, ಕರಕರನ, ಮೂಡಗದ್ದೆ.

ಗುಂಡರ ಗೋತ್ರ: ನಾನಿಲ, ಕುಂಜೇಲು, ಕೊಂಗುಜೆ, ಕೋಳಿಬೈಲು, ಪಿಲಿಗುಂಡ, ಅಮೆ (ವಿಟ್ಲ), ಅಡ್ಯಡ್ಕ.

ಗೋಳಿ ಗೋತ್ರ: ಹೊಸೂರು, ಕೈಬಿಲಿ, ಮುಂಡೋಡಿ, ಗುಡ್ಡಂಡ, ಪೊನ್ನಚನ, ಮದುವೆಗದ್ದೆ ವಾಲ್ತಾಜಿ.

ಗೌಡ/ ದೇವರ ಗೋತ್ರ: ಪಾಣತ್ತಲೆ, ಕೂಡಕಂಡಿ, ಕಾವೇರಿರ, ಕಡ್ಲೇರ, ಕೊಂಪುಳಿರ, ಕುಂಜಿಲನ, ನಡುಮನೆ, ಕುಡ್ವ, ಕುಂಡ್ಯನ, ಮಂದ್ರೀರ, ಮಡಪ್ಪಾಡಿ, ಚೆಲ್ಲ್ತಡ್ಕ, ಕೇಪಲ ಕಜೆ, ಪೂಂಬಾಡಿ, ಮುಂಡೋಡಿ, ಅಚ್ಚಾಂಡಿರ, ದೇವಜನ, ಮುಳುಗಾಡು, ಕುಕ್ಕನೂರು, ಪಳ್ಳಿಪುರ, ಕಾಯರ ಮನೆ, ಹೋಸೋಕ್ಲು.

ಚಿತ್ತೇರ್ ಗೋತ್ರ : ಗುರುಂ ಪುತ್ತರ್, ನಾಯಿತೊಟ್ಟು, ಚೋಜರ, ಪಂಗಲ್ಯ, ಮುದ್ದಾಜಿ.

ಕರಂಬರ್ ಗೋತ್ರ: ಪೆಜಕಲ.

ಲಿಂಗಾಯಿತ ಗೋತ್ರ, ಕರ್ಬನ್ನ ಗೋತ್ರ, ಔದರ್ನ ಗೋತ್ರ.

ಗೌಡರು ಮೊತ್ತ ಮೊದಲು ಹತ್ತು ಕುಟುಂಬದವರಾಗಿದ್ದು, ಕಾಲಕ್ರಮೇಣ ಅವು ಬೆಳೆದು ಒಡೆದು ಹದಿನೆಂಟು ಗೋತ್ರಗಳಾಗಿ ವಿಂಗಡಿಸಲ್ಪಟ್ಟವು ಎಂದು ಊಹಿಸಲಾಗಿದೆ. ಕೊಡಗಿನ ನೆಲೆಯಲ್ಲಿ ನೆಲೆಸಿರುವ ಅರೆಭಾಷೆ ಗೌಡರ ಮದುವೆಯಲ್ಲಿ 'ಹತ್ತು ಕುಟುಂಬ ಹದಿನೆಂಟು ಗೋತ್ರ'ವನ್ನು ಉಚ್ಚರಿಸಿಯೇ ಕಾರ್ಯವನ್ನು ಪ್ರಾರಂಭಿಸುತ್ತಾರೆ. ಕೊಡಗು ಪ್ರದೇಶದಲ್ಲಿರುವ ಗೌಡ ಸಮುದಾಯದಲ್ಲಿ ಸುಮಾರು ಮುನ್ನೂರ ಐವತ್ತಕ್ಕೂ ಹೆಚ್ಚಿನ ಮನೆ ಹೆಸರುಗಳಿವೆ. ಆ ಕುಟುಂಬಗಳ ಹೆಸರುಗಳ ಆಧಾರದ ಮೇಲೆ ಅವುಗಳನ್ನು ಈ ರೀತಿ ವರ್ಗೀಕರಿಸಿಕೊಳ್ಳಲಾಗಿದೆ.

೪.೮.೧. ವ್ಯಕ್ತಿವಾಚಿ:

ವ್ಯಕ್ತಿನಾಮಗಳೇ ಕುಟುಂಬನಾಮವಾಗುವುದನ್ನು 'ವ್ಯಕ್ತಿವಾಚಿ ಕುಟುಂಬನಾಮಗಳು' ಎಂದು ಕರೆಯುವರು. ಆ ವ್ಯಕ್ತಿಯ ಪ್ರಸಿದ್ಧಿ ಅವನನ್ನು ಎದ್ದು ಕಾಣುವಂತೆ ಮಾಡುವುದು. ಆತನ ಹೆಸರಿನಿಂದ ಆತನ ಮನೆತನವನ್ನು ಗುರುತಿಸುವುದರ ಮೂಲಕ ಪ್ರಸಿದ್ಧಿ ಪಡೆಯುವುದು. ಈ ರೀತಿ ಮನೆತನಕ್ಕೆ ವ್ಯಕ್ತಿಯ ಹೆಸರೇ ಕುಟುಂಬನಾಮವಾಗಿರುವುದನ್ನು ಸಾಮಾನ್ಯವಾಗಿ ಕಾಣುತ್ತೇವೆ. ಕೊಡಗಿನ ಗೌಡ ಜನಾಂಗದ ಪರಿಸರದಲ್ಲಿಯೂ 'ವ್ಯಕ್ತಿವಾಚಿ' ಮನೆತನಗಳಿವೆ. ಒಬ್ಬ ವ್ಯಕ್ತಿಯ ಹೆಸರಿನಿಂದ ಆತನ ಮನೆಯನ್ನು ಮೊದಲಿಗೆ ಗುರುತಿಸಲಾಗುತ್ತಿದ್ದು, ನಂತರದಲ್ಲಿ ಆತನ ಕುಟುಂಬವನ್ನೆಲ್ಲಾ ಅದೇ ಹೆಸರಿನಿಂದ ಗುರುತಿಸುವುದರ ಮೂಲಕ ಆ ಮನೆಯವರಿಗೆಲ್ಲಾ ಆತನ ಹೆಸರಿನ ಮನೆ ಹೆಸರಿರುವುದನ್ನು ಇಲ್ಲಿ ಕಾಣಬಹುದು.

ಚಿಂಡನ ಮನೆ:

ಈ ಕುಟುಂಬನಾಮವು ವ್ಯಕ್ತಿವಾಚಿಯಾದುದಾಗಿದೆ. 'ಚಿಂಡ' ಎಂಬುವವನು ಕುಟುಂಬದ ಮುಖ್ಯಸ್ಥನು. ಆ ವ್ಯಕ್ತಿಯು ವಾಸಿಸುವ ಆತನ ಮನೆಯನ್ನು ಗುರುತಿಸಲು 'ಚಿಂಡ ಎಂಬುವವನ

ಮನೆ' ಎಂದು ಹೇಳಲಾಯಿತು. ನಂತರ 'ಚಿಂಡನ ಮನೆ' ಎಂದೂ, ಮುಂದೆ ಆತನ ಕುಟುಂಬವು 'ಚಿಂಡನ' ಎಂದೇ ಗುರುತಿಸಿಕೊಂಡಿತು.

ಪಡೆಯುವ ಹಂತ	ಪಸರಣ ಹಂತ	ಪ್ರಚಲನ ಹಂತ
ವ್ಯಕ್ತಿವಾಚಿ	ವ್ಯವಹಾರಾರ್ಥಬೆಳವಣಿಗೆ	ಕುಡುಂಬನಾಮ
ಚಿಂಡ	ಚಿಂಡನ	ಚಿಂಡನಮನೆ

ಚೆಟ್ಟಿಮಾಡ ಮನೆ:

ಅಚ್ಚೆನಾಡು (ಈಗಿನ ಈಚೂರು) ಎಂಬಲ್ಲಿ ಚೆಟ್ಯಮ್ಮ (ಮಾಯಮುಡಿಯವನು) ಎಂಬ ಅಮ್ಮ ಕೊಡವನು ರಾಜನಾಗಿದ್ದನು. ಈ ಸಮಯದಲ್ಲಿ ಕೊಡಗಿನಲ್ಲಿ 'ಲಿಂಗರಾಜನು' ಆಳ್ವಿಕೆ ನಡೆಸುತಿದ್ದನು. ಆ ವೇಳೆಯಲ್ಲಿ ಅಚ್ಚೆನಾಡುವಿನ ಮೇಲೆ ಟಿಪ್ಪುಸುಲ್ತಾನನು ದಾಳಿ ಮಾಡಿದನು. ಆ ಸಂದರ್ಭದಲ್ಲಿ 'ಚೆಟ್ಯಮ್ಮ' 'ಲಿಂಗರಾಜ'ನಲ್ಲಿ ಸೈನ್ಯ ಸಹಾಯ ಕೇಳಿದನು. ಆದರೆ, ಚೆಟ್ಯಮ್ಮನಿಗೆ ಲಿಂಗರಾಜನಿಂದ ಯಾವುದೇ ಸಹಾಯ ದೊರೆಯಲಿಲ್ಲ. ನಂತರ ಚೆಟ್ಯಮ್ಮನು 'ಕರ್ಣಬಾಯಿ' ಎಂಬ ರಾಜನಲ್ಲಿ ಸಹಾಯ ಕೇಳಿದನು. ಅಲ್ಲಿಯೂ ಚೆಟ್ಯಮ್ಮನಿಗೆ ಸಹಾಯ ದೊರೆಯಲಿಲ್ಲ. ಅಲ್ಲಿಂದ ಚೆಟ್ಯಮ್ಮನು ಕಲ್ಲುಗುಂಡಿ ಎಂಬಲ್ಲಿ ಒಂದು ಮನೆತನದ ಸಹಾಯ ಕೇಳಿದನು. ಅವರು ಅವನಿಗೆ ಸಹಾಯ ನೀಡಲು ಸಿದ್ಧರಾದರು. ಹೀಗೆ ತನ್ನ ಸೈನ್ಯವನ್ನು ಚೆಟ್ಯಮ್ಮನು ಅಲ್ಲಿ ನಿಲ್ಲಿಸಿದನು. ಚೆಟ್ಯಮ್ಮ ಕರೆದುಕೊಂಡು ಬಂದ ಯುವಕರು ಶೂರರು, ನಿಷ್ಟರೂ, ಸೌಜನ್ಯವಂತರೂ ಆಗಿದ್ದರಿಂದ ಈ ಜನರ ಬಗ್ಗೆ ಅವನಿಗೆ ಸಂತೋಷವಾಗಿ ಅವರಿಗೆ 'ಮೂರ್ನಾಡು'ವಿನ 'ಹೊದ್ದೂರು ಮತ್ತು ಕೋಡಂಬೂರು'ಗಳ ಗದ್ದೆ ಹಾಗೂ ಸ್ಥಳಗಳನ್ನು ನೀಡಿದನು. ಇವರನ್ನು 'ಚೆಟ್ಯಮ್ಮಂಡ' ಎಂದು ಕರೆಯಲಾಯಿತು. ಅಂದರೆ ಚೆಟ್ಯಮ್ಮನಿಗೆ ಸಂಬಂಧಿಸಿದವರು ಎಂದರ್ಥ. ಇದು ನಂತರ ಬಳಕೆಯಲ್ಲಿ 'ಚೆಟ್ಟಿಮಾಡ' ಎಂದು ಪರಿವರ್ತನೆಯಾಗಿದೆ. ನಂತರ ಅಲ್ಲಿರುವ ಕುಟುಂಬವು 'ಚೆಟ್ಟಿಮಾಡ' ಎಂದೇ ಗುರುತಿಸಿಕೊಂಡಿತು.

ಕಳೆದ ಶತಮಾನದ ಮೊದಲಲ್ಲಿ ಈ ಮನೆತನವು ಒಂಬತ್ತು ಪಾಲಾಗಿ ಒಡೆದುಕೊಂಡು ಇಂದು ಇದು ಸುಮಾರು ನಾನ್ನೂರಕ್ಕಿಂತಾ ಹೆಚ್ಚು ಸದಸ್ಯರಿರುವ ಕುಟುಂಬವಾಗಿದೆ.

ಗೌಡುದಾರೆ ಮನೆ:

ಕೊಡಗಿನ ಅರಸ 'ದೊಡ್ಡ ವೀರ ರಾಜೇಂದ್ರ'ನು ಅಮರ ಸುಳ್ಯದಿಂದ ಗೌಡ ಜನಾಂಗವನ್ನು ಕೊಡಗಿಗೆ ಕರೆತಂದು ನೆಲೆಸುವಂತೆ ಮಾಡಿದನು. ಈ ಗೌಡ ಜನಾಂಗದವರಿಗೆ ಒಬ್ಬ ಮುಖಂಡನು ಇದ್ದನು. ಆ ಮುಖಂಡನನ್ನು ಜನರು ಗೌರವ ದಿಂದ 'ದೊರೆ' ಎಂದು ಸಂಬೋಧಿಸುತಿದ್ದರು. ಮುಂದೆ ಕೊಡಗಿನಲ್ಲಿ ನೆಲೆಸಿದ ನಂತರ ಆತನ ಕುಟುಂಬದವರನ್ನು ಗೌಡ ದೊರೆಯ ಮನೆಯವರೆಂದೇ ಗುರುತಿಸಲಾಯಿತು. ಮುಂದೆ ಜನರ ಬಳಕೆಯಲ್ಲಿ 'ಗೌಡು ದೊರೆ–ಗೌಡುದಾರೆ' ಎಂದಾಗಿ 'ಗೌಡುದಾರೆ

ಮನೆ' ಎಂದೇ ಇಂದು ಗುರುತಿಸಿಕೊಳ್ಳುತ್ತಿದೆ.

ಈ ರೀತಿಯಲ್ಲಿ ಹಲವು ಕಾರಣಗಳಿಂದ ವ್ಯಕ್ತಿವಾಚಿಯು ಕುಟುಂಬನಾಮ ಅಥವಾ ಮನೆಹೆಸರಾಗಿರುವ ನಿದರ್ಶನಗಳು ಕೊಡಗಿನ ಅರೆಭಾಷೆ ಮಾತನಾಡುವ ಗೌಡ ಸಮುದಾಯದಲ್ಲಿದೆ. ಉದಾಹರಣೆಗೆ:

ವ್ಯಕ್ತಿನಾಮ	**ಕುಟುಂಬನಾಮ**
ಅಚ್ಚು	ಅಚ್ಚುಡ
ಅಜ್ಜೆಗೌಡ	ಅಜ್ಜೆಗೌಡನ
ಅಣ್ಣಚ್ಚಿ	ಅಣ್ಣಚ್ಚಿರ
ಅಮ್ಮವ್ವ	ಅಮ್ಮವ್ವನ
ಸೋಮಗೌಡ	ಸೋಮಗೌಡನ
ಜತ್ತಣ್ಣ	ಜತ್ತಣ್ಣನ
ಕೇಚಪ್ಪ	ಕೇಚಪ್ಪನ
ಚಿಂಡ	ಚಿಂಡನ ಇತ್ಯಾದಿ

೪.೮.೨. ಸ್ಥಳವಾಚಿಗಳು

ಸ್ಥಳವಾಚಿಗಳು ವ್ಯಾಪಕವಾಗಿ ಕುಟುಂಬನಾಮವಾಗಿರುವುದನ್ನು ಕಾಣಬಹುದು. ಸ್ಥಳವಾಚಿಗಳಲ್ಲಿ ಸಸ್ಯ ನಿರ್ದೇಶ, ವಸ್ತು ನಿರ್ದೇಶ, ಪ್ರಕೃತಿ ನಿರ್ದೇಶಗಳನ್ನು ಕಾಣಬಹುದು. ಜೊತೆಗೆ ಕೆಲವು ಕುಟುಂಬವು ಮೂಲದಲ್ಲಿ ವಾಸವಿದ್ದ ಸ್ಥಳದ ಹೆಸರನ್ನೇ (ಮಣ್ಣಿನ ಹೆಸರು) ಮನೆ ಹೆಸರಾಗಿ ಹೊಂದಿವೆ. ಇದನ್ನು ಅವರು ನಮ್ಮ 'ಮಣ್ಣ್'ನ (ಸ್ಥಳದ) ಹೆಸರೇ ಮನೆಹೆಸರು ಎಂದು ಸೂಚಿಸುವರು. ಸ್ಥಳವಾಚಿಗಳು ಕುಟುಂಬನಾಮವಾಗಿರುವುದಕ್ಕೆ ಕೆಲವು ನಿದರ್ಶನಗಳು ಇಲ್ಲಿವೆ.

ಬಾರಿಕೆ:

ಕೊಡಗು ಜಿಲ್ಲೆಯಲ್ಲಿ ಕೃಷಿಗೆ ಮೊದಲ ಆದ್ಯತೆಯಿದೆ. ಭತ್ತ ಇಲ್ಲಿನ ಪ್ರಮುಖ ಬೆಳೆಗಳಲ್ಲೊಂದು. ಇಲ್ಲಿ ತೋಟಗಳಲ್ಲಿ, ಗದ್ದೆಯ ಬದಿಗಳಲ್ಲಿ ಮನೆಗಳನ್ನು ನಿರ್ಮಿಸಿಕೊಂಡು ವಾಸಮಾಡುತ್ತಾರೆ. ಇಲ್ಲಿನ ಗದ್ದೆಗಳ ಕೊನೆಯ ಮೂಲೆಯಲ್ಲಿ ಮೈದಾನ(ಬಾಣೆ)ದಂತಹಾ ಸ್ಥಳಗಳಿರುವುದನ್ನು ಕಾಣಬಹುದು. ಅಂತಹಾ ಸ್ಥಳಗಳಿಗೆ 'ಬಾರಿಕೆ' ಎಂದು ಗುರುತಿಸುವರು. ಆ ಮೈದಾನಗಳಲ್ಲಿ ಮನೆಯನ್ನು ಹೊಂದಿರುವ ಕುಟುಂಬವಿದೆ. ಆ ಮನೆಯನ್ನು 'ಬಾರಿಕೆ'ಯಲ್ಲಿರುವ ಮನೆ ಬಾರಿಕೆ ಮನೆ ಎಂದು, ಆ ಮನೆಯವರನ್ನು ಹಾಗೂ ಆ ಕುಟುಂಬದವರನ್ನು 'ಬಾರಿಕೆ' ಮನೆಯವರು ಎಂದು ಗುರುತಿಸಲಾಗಿದೆ.

ಹೊಳೆಕರೆ:

ಈ ಮನೆಯು ಮೂಲದಲ್ಲಿ ಇದ್ದಂತಹಾ ಸ್ಥಳದ ಹೆಸರನ್ನೇ ಮನೆ ಹೆಸರಾಗಿ ಹೊಂದಿದೆ.

ಈ ಮನೆಯು ಹೊಳೆಯ(ನದಿಯ) ಬದಿಯಲ್ಲಿ ಇದ್ದುದರಿಂದ ಆ ಮನೆಯನ್ನು ಹೊಳೆಯ ಕರೆಯಲ್ಲಿ (ದಡದಲ್ಲಿ) ಇರುವ ಮನೆ ಎಂದು ಗುರುತಿಸಲಾಯಿತು.

ಕಲ್ಲುಗದ್ದೆ:

ಗದ್ದೆಯಲ್ಲಿ ದೊಡ್ಡ ಗಾತ್ರದ ಕಲ್ಲು ಬಂಡೆಗಳಿದ್ದು, ಆ ಗದ್ದೆಯನ್ನು ಹೊಂದಿದವರ ಒಂದು ಮನೆಯನ್ನು ಕಲ್ಲುಗದ್ದೆ ಇರುವ ಮನೆ ಎಂದು ಗುರುತಿಸಲಾಯಿತು. ಈ ಮನೆಯೇ ಮುಂದೆ ಕಲ್ಲುಗದ್ದೆ ಮನೆ ಎಂದು ಹೆಸರಾಯಿತು. ಈ ರೀತಿ ಸ್ಥಳವಾಚಿಗಳು ಮನೆ ಹೆಸರಾಗಿರುವ ಕೊಡಗಿನ ಅರೆಭಾಷೆ ಗೌಡರ ಇತರ ಮನೆ ಹೆಸರುಗಳು ಇಂತಿವೆ.

ಮನೆ ಹೆಸರುಗಳು	**ಸ್ಥಳಗಳು**
ತೋಟಂಬೈಲು	ತೋಟದ ಬಯಲು
ಮೊಟ್ಟೇರ	ಎತ್ತರದ ಸ್ಥಳದಲ್ಲಿದ್ದ ಮನೆ
ನೂಜುಬೈಲು	ಪೈರು ಬೆಳೆಯುವ ಬಯಲಿನ ಪಕ್ಕ ಇದ್ದಮನೆ
ಪಾರೆಮಜಲು	ಹಾಸುಗಲ್ಲು
ಪೂಜಾರಿಗದ್ದೆ	ಗದ್ದೆಯ ಹೆಸರು
ಬಾಳೆಹಿತ್ಲು	ಬಾಳೆಗಿಡದ ಹಿತ್ತಲು
ಮೂಡಗದ್ದೆ	ಮೂಡಲ ದಿಕ್ಕಿನಲ್ಲಿರುವ ಗದ್ದೆ
ಕತ್ರಿಕೊಲ್ಲಿ	ಎರಡು ತೊರೆ ಕತ್ರಿಯಾಕಾರದಲ್ಲಿ ಹರಿಯುವ ಸ್ಥಳ
ಕಲ್ಲುಗದ್ದೆ	ಗದ್ದೆಗಳಲ್ಲಿ ಕಲ್ಲುಗಳಿರುವ ಸ್ಥಳದಲ್ಲಿರುವ ಮನೆ.

ಇದೇ ರೀತಿ ಕೋಳಿಬೈಲು, ಊರುಬೈಲು, ಕುಯಿಂತೋಡು, ಕೆರೆಮನೆ, ನಂಜನಮಲೆ ಇತ್ಯಾದಿ ಮನೆಹೆಸರುಗಳು ಸ್ಥಳವಾಚಿಗಳಾಗಿವೆ. ಆದರೆ ಇವುಗಳು ಈಗಲೂ ಇದೇ ಸ್ಥಳಗಳಲ್ಲಿ ಇಲ್ಲ. ಏಕೆಂದರೆ ಈ ಮನೆಗಳಿಗೆ ಈ ಹೆಸರುಗಳು ಬರಲು ಕಾರಣ ಹಿಂದೆ ಗೌಡರು ಕೊಡಗಿಗೆ ಬಂದು ನೆಲೆಸಿದಾಗ ಹಿಂದೆ ತಾವು ವಾಸವಿದ್ದ ಸ್ಥಳಗಳ ಹೆಸರನ್ನೇ ತಮ್ಮ ಮನೆ ಹೆಸರಾಗಿ ಇಟ್ಟುಕೊಂಡರು ಎಂಬ ಮಾತೂ ಇದೆ.

ಕೊಡಗಿನ ಗೌಡ ಜನಾಂಗದವರಲ್ಲಿ ಮನೆಯನ್ನು ಮುಖ್ಯವಾಗಿಟ್ಟುಕೊಂಡು ಅದರ ಉಪಭಾಗಗಳನ್ನು ಬಹಳ ವೈವಿದ್ಯಮಯವಾಗಿ ಹೊಂದಿರುವ ಕುಟುಂಬನಾಮಗಳಿವೆ. ಅಂಚೆ, ಅಮೆ, ಕೆರೆ, ಕೋಟೆ, ಕೆಳಗೆ, ಗುಡ್ಡೆ, ಚರಿಯ, ಪೀಚೆ, ನಡು, ಪಡ್ಡೆ, ಬೊಡ್ಡು, ಬೊಳ್ಳು, ಸುರುಳಿ, ಹುಲಿ, ಹೊಸ ಇವೆಲ್ಲ ನಿರ್ದಿಷ್ಟಗಳೊಂದಿಗೆ 'ಮನೆ' ಎಂಬ ವಾರ್ಗಿಕವು ಕೂಡಿ ಬಂದಿರುವ ಕುಡುಂಬನಾಮಗಳಿವೆ.

ಹೊಸಮನೆ, ಬೊಟ್ಟುಮನೆ, ಹುಲಿಮನೆ, ಕಾವೇರಿಮನೆ, ಸುರುಳಿಮನೆ, ಅಮೆಮನೆ, ಬೊಳ್ಳುಮನೆ, ಕೋಟೆಮನೆ, ಬೊಟ್ಟುಮನೆ, ಗುಡ್ಡೆಮನೆ, ಪೀಚೆಮನೆ, ಕೆಳಗೆಮನೆ, ಪಡ್ಡೆಮನೆ, ಕೆರೆಮನೆ, ನಡುಮನೆ, ಅಂಚೆಮನೆ, ಚೆರಿಯಮನೆ ಇತ್ಯಾದಿ.

೪.೮.೩. ವಸ್ತುವಾಚಿ ಕುಡುಂಬನಾಮಗಳು:

ವಸ್ತುವಾಚಿಗಳು ಬಹುಪಾಲು ಸಾಮಾಜಿಕವಾದ ವ್ಯವಹಾರಕ್ಕೆ ಸಂಬಂಧಿಸಿವೆ. ಕೊಡಗು ಅರೆಭಾಷೆ ಕುಟುಬನಾಮಗಳಲ್ಲಿ ವಸ್ತುವಾಚಿಗಳು ನಿರ್ದಿಷ್ಟವಾಗಿರುವುದನ್ನು ಕಾಣಬಹುದು.

ಉದಾ:	ಕುಕ್ಕೇರ	ಕಲ್ಲುಗದ್ದೆ
	ಕಲ್ಲೆಮ್ಮನ	ಕಲ್ಲುಮುಟ್ಲು
	ನಾರುಕೋಡಿ	ಎಣ್ಣೆಕಾಳು
	ಬೊಟ್ಟುಮನೆ	ಉಪ್ಪುಂಡಿರ
	ಕೊಳ್ಳೀರ	ಉಪ್ಪುಕುಳಿ

ಕೊಡಗು ಅರೆಭಾಷೆ ಗೌಡರ ಮನೆ ಹೆಸರುಗಳು ಹುಟ್ಟಿಕೊಂಡಿರುವ ಬಗೆಗೆ ದೊರೆತಿರುವ ಮಾಹಿತಿಗಳಾಧಾರದ ಮೇಲೆ ಅವುಗಳನ್ನು ಈ ರೀತಿ ಗುರುತಿಸಲಾಗಿದೆ.

ಮುಕ್ಕಾಟಿ ಮನೆ:

ಕೊಡಗಿನಲ್ಲಿ 'ಮುಕ್ಕಾಟಿ' ಮನೆಯು ಹಲವು ಕಡೆಗಳಲ್ಲಿ ಇದೆ. ಇವು ಇರುವ ಸ್ಥಳದ ಹೆಸರಿನೊಂದಿಗೆ ಇವು ಗುರುತಿಸಿಕೊಳ್ಳುತ್ತವೆ. ಪಾಕ ಮುಕ್ಕಾಟಿ, ಬೇತು ಮುಕ್ಕಾಟಿ, ಮರಂದೋಡ ಮುಕ್ಕಾಟಿ ಇತ್ಯಾದಿ. ಈ ಕುಟುಂಬಗಳು ಒಂದೇ ಕುಟುಂಬಕ್ಕೆ ಸೇರಿದವುಗಳಲ್ಲ. ಇವುಗಳ ಮಧ್ಯೆ ವಿವಾಹ ಸಂಬಂಧವು ಏರ್ಪಡುತ್ತದೆ. 'ಮುಕ್ಕಾಟಿ' ಎಂದರೆ 'ದೇವಸ್ಥಾನಗಳಲ್ಲಿ ದೀಪ ಹಿಡಿಯುವವನು' ಎಂಬ ಅರ್ಥವಿದೆ. ಆಯಾ ಗ್ರಾಮದ ದೇವರ ಸನ್ನಿಧಿಯಲ್ಲಿ ನಡೆಯುವ ಹಬ್ಬ ಆಚರಣೆಗಳಲ್ಲಿ ಮೊದಲು ಮುಂದೆ ಹಣತೆ ಹಿಡಿದು ನಡೆಯುವವರು 'ಮುಕ್ಕಾಟಿ' ಮನೆಯವರು. ಹಾಗೆಯೆ ದೇವಸ್ಥಾನದ ಕಾಣಿಕೆಯನ್ನು 'ಮುಕ್ಕಾಟಿ'ಯ 'ಐನ್‌ಮನೆ' (ದೊಡ್ಡಮನೆ)ಯಲ್ಲಿಡುವರು. ಹಿಂದೆ ಗೌಡರು ಬಂದು ನೆಲೆನಿಂತ ಸಂದರ್ಭದಲ್ಲಿ ದೇವರ ಸನ್ನಿಧಿಯಲ್ಲಿ ದೀಪ ಹಿಡಿದು ನಡೆಯುವವನು ಮತ್ತು ದೇವರ ಹುಂಡಿಯನ್ನು ರಕ್ಷಿಸುವವನ ಕುಟುಂಬವು 'ಮುಕ್ಕಾಟಿ' ಎಂದು ಗುರುತಿಸಿಕೊಂಡಿತು ಎಂಬುದಾಗಿ ವಿಚಾರವಿದೆ.

ಬೈಮನ ಮನೆ:

'ಬೈಮನ' ಮನೆ ಅಥವಾ ಕುಟುಂಬವು ದಕ್ಷಿಣಕನ್ನಡ ಜಿಲ್ಲೆಯಲ್ಲಿದ್ದಿತು. ಈ ಕುಟುಂಬದ ಒಬ್ಬ ಯುವಕನು ಕೆಲಸವನ್ನು ಹುಡುಕುತ್ತಾ ಕೊಡಗು ಜಿಲ್ಲೆಯ 'ಕೊಟ್ಟೂರು' ಗ್ರಾಮಕ್ಕೆ ಬಂದು ಅಲ್ಲಿ ವಾಸವಿದ್ದ ಒಂದು ಅಮ್ಮಕೊಡವರ ಮನೆಯಲ್ಲಿ ಕೂಲಿಯವನಾಗಿದ್ದನು. ಒಂದು ನಿರ್ದಿಷ್ಟ ದಿನದಂದು ಬೈತೂರಪ್ಪ ದೇವನು ಆ ಗ್ರಾಮದವರ ಮನೆಗೆ ಭೇಟಿ ನೀಡುವನು. ಅಂದಿನ ದಿನ ಬೈತೂರಪ್ಪನನ್ನು ಬಹಳ ಸಂಭ್ರಮದಿಂದ ಬರಮಾಡಿಕೊಳ್ಳುವರು. ಈ ಪದ್ಧತಿಯು ಮೊದಲಿನಿಂದಲೂ ನಡೆದುಕೊಂಡು ಬಂದಿದೆ. ಒಮ್ಮೆ ದೇವನು ಮನೆಗೆ ಬರುವ ಸಂದರ್ಭದಲ್ಲಿ ದೇವರನ್ನು ಭಯ ಭಕ್ತಿಯಿಂದ ಬರಮಾಡಿಕೊಂಡು ಜೊತೆಯಲ್ಲಿ ಬಂದವರಿಗೂ ಫಲಾಹಾರ ನೀಡುವ ಬದಲಿಗೆ

ಕಾರಣಾಂತರಗಳಿಂದ ಮಾಡಿದ ಅಡುಗೆ ಪದಾರ್ಥಗಳನ್ನು ಒಬ್ಬರ ಮೇಲೊಬ್ಬರು ಎರಚಾಡುತ್ತಾ ಜಗಳವಾಡುತ್ತಿದ್ದರು. ಇದನ್ನು ಕಂಡು ಬೈತೂರಪ್ಪನು ಕೋಪಗೊಂಡು "ಇನ್ನು ಮುಂದೆ ನಿಮ್ಮ ಮನೆಯಲ್ಲಿ ಮಕ್ಕಳು ಹುಟ್ಟದೆ ನಿಮ್ಮ ವಂಶವು ನಾಶವಾಗಲಿ" ಎಂದು ಶಾಪ ನೀಡಿದನು. ಕೆಲ ವರ್ಷಗಳಲ್ಲಿ ಇವರ ಕುಟುಂಬದ ಸದಸ್ಯರುಗಳು ತೀರಿಕೊಂಡರು. ಆದರೆ ಒಬ್ಬ ಯುವತಿಯು ಮಾತ್ರ ಉಳಿದಳು. ಆಸರೆಯಿಲ್ಲದ ಈಕೆಯನ್ನು ದಕ್ಷಿಣಕನ್ನಡ ಜಿಲ್ಲೆಯಿಂದ ಬಂದಿರುವ 'ಬೈಮನ' ಮನೆಯ ಯುವಕನು ವಿವಾಹವಾದನು. ನಂತರದಲ್ಲಿ ಇವರ ಕುಟುಂಬವು ಬೆಳೆದು ಅವರೆಲ್ಲರೂ 'ಬೈಮನ' ಮನೆಯವರೆಂದು ಗುರುತಿಸಿಕೊಂಡರು.

ದಂಡಿನ ಮನೆ:

ಅಮರ ಸುಳ್ಯದ ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಬ್ರಿಟೀಷರ ವಿರುದ್ಧವಾಗಿ ಕ್ರಾಂತಿಕಾರ ಕಲ್ಯಾಣಪ್ಪನಿಗೆ ಸಹಾಯ ನೀಡುವುದಕ್ಕೆ ಮುಂದೆ ಬಂದ ಹಲವರಲ್ಲಿ 'ಕೂಜುಗೋಡು'ವಿನ ಗೌಡ ಮನೆತನದವರೂ ಒಬ್ಬರು. ಕ್ರಾಂತಿಕಾರರು ಕೂಜುಗೋಡಿನ ಪಟೇಲ ಮಲ್ಲಪ್ಪಗೌಡರ ಮುಂದಾಳತ್ವದಲ್ಲಿ ಇನ್ನೂ ಹೆಚ್ಚಿನ ಜನರನ್ನು ಸೇರಿಸಿಕೊಂಡು 'ಗುತ್ತಿಗಾರು'ವಿನಲ್ಲಿರುವ ಒಂದು ಮನೆಯಲ್ಲಿ ಸೇರಿ ಸಮಾಲೋಚನೆ ನಡೆಸಿ ಆತಿಥ್ಯ ಸ್ವೀಕರಿಸಿದ್ದರಿಂದ ಈ ಮನೆಯು ದಂಡು ಬಂದು ಹೋದ ಮನೆ ಎಂಬುದಾಗಿ ಗುರುತಿಸಿಕೊಂಡಿತು. ಇದೇ ಕಾಲಕ್ರಮೇಣ ದಂಡು ಬಂದ ಮನೆ, ದಂಡು ಮನೆ, ದಂಡಿನ ಮನೆ ಎಂದಾಯಿತು ಎಂಬ ವಿಚಾರವಿದೆ.

ತುಪ್ಪದ ಮನೆ:

ಅಮರ ಸುಳ್ಯದ ಕ್ರಾಂತಿಯಾದ ಸಂದರ್ಭದಲ್ಲಿ 'ಗುತ್ತಿಗಾರು'ವಿಗೆ ಬಂದ ಕ್ರಾಂತಿಕಾರರು (ಯುದ್ಧದ ದಂಡು) 'ಕಮಿಲ' ಎಂಬ ಸ್ಥಳದಲ್ಲಿರುವ ಒಂದು ಮನೆಯಲ್ಲಿ ವಿಶ್ರಾಂತಿ ಪಡೆಯಿತಂತೆ. ಆ ಮನೆಯವರು ದಂಡಿನ ಸೈನಿಕರಿಗೆ ಊಟವನ್ನು ನೀಡಿ ತೆಂಗಿನಕಾಯಿಯ ಗೆರಟೆಯ ಸೌಟಿನಲ್ಲಿ ತುಪ್ಪವನ್ನು ಬಡಿಸಿದರಂತೆ. ಇಷ್ಟೊಂದು ತುಪ್ಪವನ್ನು ಉಣಬಡಿಸಿದ ಕಾರಣ ಆ ಮನೆಗೆ 'ತುಪ್ಪದಮನೆ' ಎಂದು ಹೆಸರು ಬಂದಿದೆ ಎಂಬ ಮಾಹಿತಿ ಇದೆ. ಇವರು ಮುಂದೆ ಕೊಡಗು ಜಿಲ್ಲೆಯಲ್ಲೂ ಬಂದು ನೆಲೆನಿಂತ ನಂತರ ಅದೇ ಹೆಸರಿನಿಂದ ಗುರುತಿಸಿಕೊಂಡರು.

ಹೀಗೆ ಕೊಡಗಿನಲ್ಲಿ ಹಲವು ಕಾರಣಗಳಿಂದ ಕುಟುಂಬಗಳು ತಮ್ಮನ್ನು ಗುರುತಿಸಿಕೊಳ್ಳಲು ಮನೆ ಹೆಸರನ್ನು ಹೊಂದಿವೆ.

ಕೊಡಗು ಅರೆಭಾಷೆ ಗೌಡರ ಸಮುದಾಯದ ಪ್ರತಿಯೊಂದು ಕುಟುಂಬವೂ ತನ್ನ ಹೆಸರಿನಿಂದ ಗುರುತಿಸಿಕೊಳ್ಳುತ್ತದೆ. ಹಾಗೆಯೇ ಪ್ರತಿ ವ್ಯಕ್ತಿಯೂ ತನ್ನ ಕುಟುಂಬದ ಹೆಸರಿನಿಂದ ಗುರುತಿಸಿಕೊಳ್ಳುತ್ತಾನೆ. ಗ್ರಾಮನಾಮಗಳು ಒಂದು ರಾಷ್ಟ್ರದ ಒಳಭಾಗವನ್ನು ಗುರುತಿಸುವ ಸಾಧನವಾದರೆ, ಕುಟುಂಬನಾಮಗಳು ಒಂದು ಗ್ರಾಮದ ಒಳಭಾಗವನ್ನು ಗುರುತಿಸುವ ಸಾಧನವಾಗಿದೆ.

೪.೮. ಕೊಡಗಿನ ಗೌಡ ಸಮುದಾಯದ ಮನೆಹೆಸರುಗಳು

ಅಂಚೆಮನೆ
ಅಂಚೇರ
ಅಂಬ್ರಾಟಿ
ಅಂಬೆಕಲ್ಲು
ಅಕ್ಕಾರಿ
ಅಚ್ಚಲ್ಪಾಡಿ
ಅಚ್ಚಪಟ್ಟೀರ
ಅಚ್ಚಾಂಡಿರ
ಅಚ್ಚುಡ
ಅಜ್ಜಗೌಡನ
ಅಣ್ಣಚ್ಚಿರ
ಅತ್ತೇಡಿ
ಅರ್ಪೆಗಟ್ಟೆ
ಅಮ್ಮವ್ವನ
ಅಮೆಚೂರು
ಅಮೆಮನೆ
ಅಯ್ಯಂಡ್ರ
ಅಯ್ಯೇಟಿ
ಅರಂಬೂರು
ಅಳಿಕೆ
ಆಜಡ್ಕ
ಆಜೀರ
ಇಟ್ಟಣಿಕೆ
ಇಡ್ಯಡ್ಕ
ಉಗ್ರಾಣಿರ
ಉಡುದೋಳಿ
ಉದಿಯನ
ಉಪ್ಪಂಡಿರ
ಉಪ್ಪುಕುಳಿ
ಊರುಬೈಲು
ಉಳುವಾರನ
ಎಡಕೇರಿ
ಎಣಿಯೂರು
ಎಣ್ಣೆಕಾಳು
ಎರ್ಮೆಕಾಲು
ಓಡಿಯನ
ಓಡಿಯಪ್ಪನ
ಕಟ್ಟಕೋಡಿ
ಕಟ್ಟೆಪುರ
ಕಟ್ರತ್ತನ
ಕಡ್ಯಡ
ಕಡವಡೀರ
ಕತ್ರಿಕೊಲ್ಲಿ
ಕತ್ರೀರ
ಕನ್ನಡ್ಕ
ಕರಕರನ
ಕರುಂಬಿ
ಕರುಣಯ್ಯನ
ಕಲ್ಲುಗದ್ದೆ
ಕಲ್ಲುಗುಡ್ಡೆ
ಕಲ್ಲುಮುಟ್ಲು
ಕಲ್ಲೆಂಬಿ
ಕಲ್ಲೆಮ್ಮನ
ಕಳಂಜನ
ಕಳವಾಜೆ
ಕಾಂಗೀರ

ಕಾನಡ್ಕ
ಕಾನೆಹಿತ್ಲು
ಕಾಚಲು
ಕಾಚೀಲು
ಕಾಯರ
ಕಾಲಮಂದಿರ
ಕಾಲ್ಯನ
ಕಾವೇರಿ ಮನೆ
ಕಾಸ್ಪಾಡಿ
ಕಾಳಿಯಂಡ
ಕಾಳೇರಮ್ಮನ
ಕೀಜನ
ಕೀಲಾರು
ಕುಞ್ಯಳಿ
ಕುಂಚಡ್ಕ
ಕುಂಜಿಲನ
ಕುಂಡ್ಯನ
ಕುಂದನ
ಕುಂದಲ್ಪಾಡಿ
ಕುಂಬನ
ಕುಂಬಳಚೇರಿ
ಕುಂಬುಗೌಡನ
ಕುಕ್ಕನೂರು
ಕುಕ್ಕೇರ
ಕುಟ್ಟನ
ಕುಟ್ಲಮನಿಯನ
ಕುತ್ಯಾಡಿ
ಕುತ್ತಿಯಾಡಿ
ಕುದನೆ ಕೋಡಿ
ಕುದುಕುಳಿ
ಕುದುಪಜೆ
ಕುಯ್ಯಮುಡಿ
ಕುಯಿಂತೋಡು
ಕುರ್ನೇರಿ
ಕುರಿಕಡ
ಕುರುಂಜಿ
ಕುಲ್ಲಚನ
ಕುಲ್ಲಚೆಟ್ಟೀರ
ಕುವೆಂಡ್ರ
ಕೂಡಕಂಡಿ
ಕೂಪೇರ
ಕೂರಂಬಡ್ಕ
ಕೂರನ
ಕೆಂಜನ
ಕೆಕಾರೀರ
ಕೆಂದಬಾಡಿ
ಕೆಮ್ಮಾರನ
ಕೆರೆಮನೆ
ಕೇಕಡ
ಕೇಚಪ್ಪನ
ಕೇಟೋಳಿರ
ಕೇನೇರ
ಕೊಂಪುಳೀರ
ಕೊಂಬಂಡ್ರ
ಕೊಂಬನ
ಕೊಂಬಾರನ
ಕೊಟ್ಟಂಗೇರಿ
ಕೊಟ್ಟಕೇರಿಯನ
ಕೊಡಗದ್ದೆ
ಕೊಡಗನ

ಕೊಡಪಾಲ
ಕೊಡೆಕಲ್ಲು
ಕೊತ್ತೋಳಿರ
ಕೊಳಂಗಾಯ
ಕೊಳ್ತಿಗೆ
ಕೊಳ್ಳೀರ
ಕೊಳುಂಬೆ
ಕೊಯಾಂಗಜ್ಜೆ
ಕೊರಿಯನ
ಕೊಲ್ಯದ
ಕೊಲ್ಯನ
ಕೋಚನ
ಕೋಟುಮಾಂಡ
ಕೋಡಿ
ಕೋಡಿಯಡ್ಕ
ಕೋಪನ
ಕೋರನ
ಕೋಲ್ಚಾರು
ಕೋಳಿಬೈಲು
ಕೋಳುಮಾಡನ
ಕೈಬಿಲ್ಲಿರ
ಕಂಡಿಗೆ
ಗುಡ್ಡನ
ಗುಡ್ಡೆಮನೆ
ಗುಡ್ಡೇರ
ಗುತ್ತಿಮುಂಡನ
ಗುತ್ತಿಯೇಟ
ಗುತ್ತು
ಗೂಡಂಜಿ
ಗೋಣಿಗಾರ
ಗೋವಿಂದಮ್ಮದ
ಗೌಡುದಾರೆ
ಚಂಗರಿ
ಚಂಡೀರ
ಕೋಪಂಡ್ಕ
ಚಟ್ಟಡ್ಕ
ಚಟ್ಟನೆರವನ
ಚೆರಿಯಮನೆ
ಚಾಂಗನ
ಚೆಲ್ಲನ
ಚೆಯಂಡಿರ
ಚೀಯಪ್ಪನ
ಚೂದಾಡಮ್ಮನ
ಚೆಟ್ಟಿಮಾಡ
ಚೆದುಕಾರು
ಚೆಳ್ಳಂಗಾರು
ಚೊಕ್ಕಾಡಿ
ಚೊಟ್ಟಂಡ
ಚೋಂಡಿರ
ಜತ್ತಣ್ಣನ
ಜಪ್ಪೆಕೋಡಿ
ಜಪ್ಪೆಗೋವೆ
ಜೈನೀರ
ತಂಟೆಪಾಡಿ
ತಡಿಯಪ್ಪನ
ತಮ್ಮಚ್ಚನ
ತಳೂರು
ತಿರೋಡಿ
ತುಮ್ತಜೆ
ತುಪ್ಪದಮನೆ

ತೂಟೇರ
ತೆಕ್ಕಡೆ
ತೇನನ
ತೇಲಪ್ಪನ
ತೊಕ್ಕುಳಿ
ತೊತ್ಯನ
ತೊರೆಮನೆ
ತೋಟಂಬೈಲು
ದಂಡಿನ
ದಬ್ಬಡ್ಕ
ದಾಯನ
ದೇರಣ್ಣನ
ದೇರಾಜೆ
ದೇವಂಗೋಡಿ
ದೇವಜನ
ದೇವಾಯಿರ
ದೇಶಕೋಡಿ
ದೊಡ್ಡಡ್ಕ
ದೊಡ್ಡೇರ
ದೋಲ್‌ಪಾಡಿ
ನಂಗಾರು
ನಂಜನಮಲೆ
ನಂಬುಡಿರ
ನಡುಗಲ್ಲು
ನಡುಬೆಟ್ಟು
ನಡುಮನೆ
ನಡುಮುಟ್ಲು
ನಡುವಟ್ಟಿರ
ನೆರಿಯನ
ನಾರ್ಕೋಡು

ನಾಟೋಳನ
ನಾಡ್ಯನ
ನಾಡಯ್ಯನ
ನಾರುಕೋಡಿ
ನಿಡಬ್ಬೆ
ನಿಡಂಜಿ
ನಿಡ್ಯಮಲೆ
ನೂಜುಬೈಲು
ನೆಕ್ಕಿಲ
ನೆಡಿಗಿಲು
ನೆಡ್‌ಬ್ಬು
ನೆಯ್ಯೇಣಿರ
ನೆಲ್ಲಿಪುಣಿ
ನೆಲ್‌ತಡ್ಕ
ಪಂಜರ
ಪಂಜಿಪಳ್ಳ
ಪಟ್ಟಡ
ಪಟ್ಟತಿ
ಪಟ್ಟಾಂದಿರ
ಪಡ್ಡಂಬೈಲು
ಪಡಿಕಲ್
ಪಡ್ಡುಮನೆ
ಪಣಲೆ
ಪನಿಯಡ್ಕ
ಪನಿಯೋಡಿ
ಪರ್ಲಕೋಟಿ
ಪರಿಚನ
ಪರಿವಾರ
ಪಲ್ಲೇತಿ
ಪಳಂಗಾಯ

ಪಳಂಗೋಟು
ಪಾಂಡನ
ಪಾಂಡಿ
ಪಾಡಿ
ಪಾಡಿಚೆಟ್ಟಿರ
ಪಾರೆಕೋಡಿ
ಪಾಣತ್ತಲೆ
ಪಾರೆಪ್ಪಾಡಿ
ಪಾರೆಮಜಲು
ಪಾರೇರ
ಪೀಚೆಮನೆ
ಪುದಿಯನೆರವನ
ಪುಳಂಜನ
ಪುಳಕಂಡ್ರ
ಪೂಜಾರಿ
ಪೂಜಾರಿಗದ್ದೆ
ಪೆಮ್ಮೇಟಿ
ಪೆರುಮುಂಡ
ಪೆಲ್‌ತಡ್ಕ
ಪೆರುಬಾಯಿ
ಪೇರಿಯನ
ಪೈಕೇರ
ಪೊಕ್ಕುಳಂಡ್ರ
ಪೊಡುನೋಳನ
ಪೊನ್ನಚ್ಚನ
ಪೊನ್ನೇಟಿ
ಪೊಯ್ಯಕಂಡೀರ
ಪೋತಾಂಡ್ರ
ಪೋರೆಯನ
ಬಟ್ಯನ

ಬಡ್ಡನ
ಬಬ್ಬೀರ
ಬಳಪದ
ಬಳ್ಕಡ್ಕ
ಬಾಕಿಲನ
ಬಾಡನ
ಬಾರನ
ಬಾರಿಕೆ
ಬಾರಿಯಂಡ
ಬಾಳೇಡಿ
ಬಿಟ್ಟೀರ
ಬಿದ್ರುಪಣೆ
ಬಿರುಮಣನ
ಬೆಪ್ಪುರನ
ಬೆಳ್ಯನ
ಬೆಳ್ಳಿಪಾಡಿ
ಬೇಕಲ್
ಬೇರಿಕೆ
ಬೈಚನ
ಬೈತಡ್ಕ
ಬೈನೆರೆವನ
ಬೈಮನ
ಬೈಲೇರ
ಬೈಲೊಳೀರ
ಬಾಳಜಿ
ಬಾಳೆಹಿತ್ಲು
ಬೊಟ್ಟುಮನೆ
ಬೊಮ್ಮಿಯನ
ಬೊಮ್ಮೆಗೌಡನ
ಬೋಳನ

ಬೊಳ್ತಜ್ಜೀರ
ಬೊಳ್ಳಮನೆ
ಬೊಳ್ಳೂರು
ಮಂಡೀರ
ಮಂದ್ರೀರ
ಮುಂದೇಡಿರ
ಮಜ್ಜಿಗೆ ಗೌಡನ
ಮಡತ್ತಿಲ
ಮತ್ತಾರಿ
ಮಳ್ಳಾಂದಿರ
ಮಾಡೆನ
ಮಿತ್ತೂರು
ಮುಂಡೋಡಿ
ಮುಕ್ಕಾಟಿರ
ಮುದ್ದೈನ
ಮೂಟೇರ
ಮೂಡಗದ್ದೆ
ಮೂಲೆಮಜಲು
ಮೂವನ
ಮೇಚನ
ಮೇಡತನ
ಮೇರಜೆ
ಮೊಟ್ಟನ
ಮೊಟ್ಟೇರ
ಮೋಂಟಡ್ಕ
ಮೋಗೇರ
ಯಂಕನ
ಯಾಲದಾಳು
ಯಾಪರೆ
ರಾಮಕಜೆ

ಲಕ್ಕಂಡ್ರ
ವಾಟೇರಿರ
ಸಣ್ಣಜನ
ಸಣ್ಣಮ್ಮನ
ಸಬ್ಬಂಡ್ರ
ಸುರುಳಿಮನೆ
ಸುಳ್ಯಕೋಡಿ
ಸಿರಕಜೆ
ಸೂರ್ತಲೆ
ಸೂದಾಡಮ್ಮನ
ಸೋಣಂಗೇರಿ
ಸೋಮೇಟಿರ
ಹಂಡನ
ಹುದೇರಿ
ಹುಲಿಮನೆ
ಹುಲ್ಲುಬೆಂಕಿ
ಹೆಮ್ಮನ
ಹೊದ್ದೇಟಿ
ಹೊಸಗದ್ದೆ
ಹೊಸಮನೆ
ಹೊಸೂರು
ಹೊಸೋಕಲ್ಲು
ಹೊಳೆಕರೆ
ಹೊಸೋಳಿಕೆ

ಈ ಮೇಲಿನ ಮನೆಹೆಸರುಗಳೊಂದಿಗೆ ಗುರುತಿಸಲ್ಪಡುವ ಕೊಡಗಿನ ಅರೆಭಾಷೆ ಗೌಡ ಸಮುದಾಯದ ಈ ಎಲ್ಲಾ ಕುಟುಂಬದವರಲ್ಲಿಯೂ ಅರೆಭಾಷೆ ಮತ್ತು ಕನ್ನಡ ಬಾಷೆ ಕೌಟುಂಬಿಕ ವಲಯದಲ್ಲಿ ಬಳಕೆಯಾಗುತ್ತದೆ. ಜೊತೆಗೆ ಇಲ್ಲಿ ಗೌಡ ಕುಟುಂಬವೆಂದೇ ಗುರುತಿಸಿಕೊಂಡಿರುವ 'ಜೈನೀರ' ಎಂಬ ಕುಟುಂಬದಲ್ಲಿ 'ಕೊಡವ' ಬಾಷೆಯನ್ನು ಬಳಸುವುದು ಕಂಡು ಬಂದಿದೆ. ಜೊತೆಗೆ ಇವರ ಕೆಲವೊಂದು ಆಚರಣೆಗಳೂ ಉಳಿದ ಗೌಡ ಕುಟುಂಬದವರಿಗಿಂತ ವಿಶಿಷ್ಟವಾಗಿ ಇರುವುದನ್ನು ಕಾಣಬಹುದು. ಈ ಕುರಿತು ಕ್ಷೇತ್ರ ಕಾರ್ಯದಲ್ಲಿ ಲಭಿಸಿದ ಮಾಹಿತಿಯ ಅನುಸಾರ ಇಲ್ಲಿ ಅದನ್ನು ವಿವರಿಸಲಾಗಿದೆ.

ಕೊಡಗು ಅರೆಭಾಷೆ ಗೌಡ ಮನೆಗಳಲ್ಲಿ ಒಂದಾದ 'ಜೈನೀರ' ಮನೆಯು ಇಲ್ಲಿನ ಇತರ ಗೌಡ ಮನೆಯವರಿಗಿಂತ ಭಿನ್ನವಾಗಿದೆ. ಇವರು ಗೌಡ ಕುಟುಂಬದವರಾಗಿದ್ದರೂ ಇವರ ಮನೆಮಾತು 'ಕೊಡವ' ಭಾಷೆಯಾಗಿದೆ. ಈ ಮನೆಯವರಲ್ಲಿ ಕೆಲವರು ಸ್ವಂತ ಆಸ್ತಿಯನ್ನು ಗಳಿಸಿ ಕೊಡಗು ಜಿಲ್ಲೆಯ ಬೇರೆ ಬೇರೆಸ್ಥಳಗಳಲ್ಲಿ ವಾಸವಾಗಿರುವವರೂ ಇರುವರು. ಆದರೆ ಇದು ಇತ್ತೀಚೆಗಿನ ಬೆಳವಣಿಗೆಯಾಗಿ ಕಂಡುಬಂದಿದೆ. ಇವರ ಮೂಲಮನೆಯು ಕೊಡಗು ಜಿಲ್ಲೆಯ 'ವೀರರಾಜಪೇಟೆ' ತಾಲ್ಲೂಕಿನ 'ಚೇಲಾವರ' ಗ್ರಾಮದಲ್ಲಿದೆ. ಇಲ್ಲಿರುವವರು ತಮ್ಮ ಮನೆಯಲ್ಲಿ ಕೊಡವ ಭಾಷೆಯನ್ನು ಮಾತನಾಡುತ್ತಾರೆ. ಕಾರಣ ಹಿಂದೆ ಈ ಕುಟುಂಬದ ಮೂಲ ಪುರುಷನು ಜೈನನಾಗಿದ್ದನು ಎಂದು ತಿಳಿದುಬಂದಿದೆ. ಈತನು ಕೊಡಗು ಜಿಲ್ಲೆಗೆ ಬಂದು ನೆಲೆ ನಿಂತನು. ಇಲ್ಲಿನ ಜನರೊಂದಿಗೆ ಬೆರೆತು ಬಾಳುವ ಸಂದರ್ಭದಲ್ಲಿ ಸಂವಹನಕ್ಕಾಗಿ 'ಕೊಡವ' ಭಾಷೆಯನ್ನು ಕಲಿತು ಬಳಸಲಾರಂಭಿಸಿದನು. ಮತ್ತೊಂದು ವಿಚಾರವೆಂದರೆ ಈತನು ಕೊಡಗಿನಲ್ಲಿ 'ಅಮ್ಮಕೊಡವ' ಕನ್ಯೆಯನ್ನು ವಿವಾಹವಾದನು. 'ಅಮ್ಮಕೊಡವರು' ಕೊಡಗಿನ ಮೂಲ ಅರ್ಚಕರೆನ್ನುವ ಅಭಿಪ್ರಾಯವಿದೆ. ದಂತ ಕಥೆಯೊಂದರ ಪ್ರಕಾರ ಇವರು ಬ್ರಾಹ್ಮಣ ಸ್ತ್ರೀ ಕೊಡವ ಪುರುಷನ ಸಂತತಿಯವರು. ವೈನಾಡಿನ 'ತಂಬಿಕಟ್' 'ತಂಬಿರಾನ್' ಎಂಬುವವನು ತನ್ನ ಮಗಳಿಗೆ ಋತುಮತಿಯಾಗುವುದಕ್ಕೂ ಮಂಚೆ ಮದುವೆ ಮಾಡಲು ಸಾಧ್ಯವಿಲ್ಲವಾಗಿ ಆ ಹುಡುಗಿಯನ್ನು ಕಾಡಿಗೆ ಬಿಟ್ಟನು. ಕಾಡಿನಲ್ಲಿ 'ಕೊಡವ' ಯುವಕನಿಗೆ ಆ ಕನ್ಯೆಯು ಸಿಕ್ಕಿ ಅವರು ವಿವಾಹವಾದರು. ಅವರ ಸಂತತಿಯೇ 'ಅಮ್ಮ ಕೊಡವರು' ಎಂದು ಅಭಿಪ್ರಾಯವಿದೆ. ಇವರ ಉಡುಗೆ ತೊಡುಗೆ ಕೊಡವರಂತೆಯೇ ಇದ್ದು, ಸ್ತ್ರೀಯರು ನಿರಿಗೆಯನ್ನು ಮುಂದೆ ಬಿಟ್ಟು ಸೀರೆ ಉಡುವರು(ಗೌಡರಂತೆ). ಇವರ ಭಾಷೆ ಕೊಡವ. ಆದರೆ ಇವರ ವಿವಾಹದ ವಿಧಿಗಳು ಗೌಡರ ವಿವಾಹದ ವಿಧಿಗಳಂತೆ ಇದೆ. ಇವರು ಗೌಡರಂತೆ ವೆಂಕಟರಮಣ ದೇವರ ಹರಿಸೇವೆಯನ್ನು(ಗೌಡರ ಪ್ರಮುಖ ಆಚರಣೆ) ಮಾಡುವರು. ಇವರಲ್ಲಿ ಗೌಡರಂತೆ ಮಾಂಗಲ್ಯಧಾರಣೆ ಪದ್ಧತಿ ಇದೆ. ಇತ್ತೀಚೆಗೆ ಇವರು ಮಾಂಸಾಹಾರಗಳನ್ನು ಸೇವಿಸಿದರೂ ತಮ್ಮ ದೇವರ ಮೂಲಮನೆಗೆ ಮಾಂಸಾಹಾರಗಳನ್ನು ಸೇರಿಸುವುದಿಲ್ಲ. ದೇವರ ನೈವೇದ್ಯಕ್ಕೆ, ಎಡೆಗೆ ಸಿಹಿ ಭಕ್ಷ್ಯಗಳನ್ನೇ ಇಡುವರು.

ಇಂತಹ ಅಮ್ಮಕೊಡವರ ಕನ್ಯೆಯನ್ನು ಜೈನ ಯುವಕನು ಮದುವೆಯಾದನು ಇದರಿಂದ ಮಾಂಸಾಹಾರ ನಿಷಿದ್ಧವಾಯಿತು. ಆದರೆ ನಂತರದಲ್ಲಿ ಇವರು ಸಂತತಿ ಮಾಂಸಾಹಾರಗಳನ್ನು ಸೇವಿಸಿದರೂ ದೇವರಿಗೆ ಎಡೆ ಇಡುವಾಗ ಸಸ್ಯಹಾರಗಳನ್ನು ಮಾತ್ರ ಬಳಸಿದರು. ಈಗಲೂ ಇದೇ ರೂಢಿಯಲ್ಲಿದೆ. ಇಬ್ಬರೂ ಕೊಡವ ಭಾಷೆಯನ್ನೇ ಮಾತನಾಡಲಾರಂಭಿಸಿದರು. ಹೀಗಾಗಿ ಇವರ ಮನೆಮಾತು ಕೊಡವ ಭಾಷೆಯಾಯಿತು. ಆತನ ಮನೆಯನ್ನು ಜೈನನ ಮನೆ ಎಂದು ಗುರುತಿಸಲಾಯಿತು. ಕ್ರಮೇಣ ಇದು ಜೈನನ ಮನೆ, ಜೈನರ ಮನೆ, ಜೈನೀರ ಎಂದು ಹೆಸರಾಗಿದೆ ಎಂಬುದು ತಿಳಿದುಬಂದಿದೆ. ಇವರು ಮೊದಲಿನಿಂದಲೂ ಇಲ್ಲಿನ ಗೌಡರೊಂದಿಗೆ ವೈವಾಹಿಕ ಸಂಬಂಧವನ್ನು ಹೊಂದುತ್ತಾ ಪೂರ್ತಿಯಾಗಿ ಗೌಡ ಕುಟುಂಬವೆಂದೇ ಗುರುತಿಸಿಕೊಂಡಿತು ಎಂಬ ವಿಚಾರವಿದೆ.

ಕೊಡಗಿನಲ್ಲಿ 'ಇಗ್ಗುಡ' ಎಂಬ ಹೆಸರನ್ನು ಹೊಂದಿದ ಕುಟುಂಬವಿದ್ದು ಇವರು ಹಿಂದೆ ಕೊಡಗಿನ ರಾಜರ ಕಾಲದಲ್ಲಿ ಅರಮನೆಯಲ್ಲಿ ಎಣ್ಣೆ ತೆಗೆಯುವ(ಗಾಣಿಗ) ಹಾಗೂ ಇತರ ಕೆಲಸಗಳನ್ನು ಮಾಡುತ್ತಿದ್ದರೆಂದು ರಾಜನು ಇವರಿಗೆ ಜಮ್ಮ ಭೂಮಿಯನ್ನು ನೀಡಿದನು. ಇವರ ಸಂಖ್ಯೆ ಬಹಳ ಕಡಿಮೆ. ಈಗಲೂ ಇವರು ವಿರಾಜಪೇಟೆ ತಾಲ್ಲೂಕಿನ ಪಾರಾಣೆ, ಹಾಲುಗುಂದ ಮತ್ತು ಬೇತು ಹಾಗೂ ಅಮ್ಮತ್ತಿ ಎಂಬ ಊರುಗಳಲ್ಲಿ ಒಂದೊಂದು ಕುಟುಂಬ ಮಾತ್ರ ವಾಸವಿರುವರು. ಇವರ ಸಂಖ್ಯೆ ಕಡಿಮೆ ಇದ್ದ ಕಾರಣ ಇವರು ಗೌಡ ಜನಾಂಗದವರೊಂದಿಗೆ ವೈವಾಹಿಕ ಸಂಬಂಧವನ್ನು ಹೊಂದಿರುವರು. ಇವರ ಉಡುಗೆ ತೊಡುಗೆ ಕೊಡವರಂತೆಯೇ ಇದೆ. ಇವರು ಹಿಂದೆ ಕೊಡವರ ಆಚರಣೆ, ವಿಧಿವಿಧಾನಗಳನ್ನು ಅನುಸರಿಸುತಿದ್ದರು. ಇತ್ತೀಚೆಗೆ ಗೌಡ ಜನಾಂಗದವರೊಂದಿಗಿನ ವೈವಾಹಿಕ ಸಂಬಂಧದ ಕಾರಣದಿಂದಾಗಿ, ಗೌಡರ ವಿವಾಹದ ರೀತಿಗಳನ್ನೇ ಅನುಸರಿಸಿ ಅವರ ಪದ್ಧತಿಯಿಂದಲೇ ವಿವಾಹವನ್ನು ಮಾಡುತಿದ್ದರು. ಇವರ ಗಾಣಿಗರ ಪದ್ಧತಿಗಳನ್ನು ದೇವರಿಗೆ ಸಂಬಂಧಿಸಿದ ಆಚರಣೆಗಳಲ್ಲಿ ಮಾತ್ರ ಅನುಸರಿಸುತಿದ್ದರು. ಬರಬರುತ್ತಾ ಸಂಪೂರ್ಣವಾಗಿ ಕೊಡವರ ಪದ್ಧತಿಯನ್ನು ತ್ಯಜಿಸಿ ಗೌಡರನ್ನು ಅನುಸರಿಸಿದರು. ಇವರ ಉಡುಗೆ ತೊಡುಗೆ ಕೊಡವರಂತಿದೆ. ಮನೆಯಲ್ಲಿ ಕೊಡವ ಮತ್ತು ಅರೆಭಾಷೆಯನ್ನು ಮಾತನಾಡುತ್ತಾರೆ. ಮನೆಯಿಂದ ಹೊರಗೆ ಕನ್ನಡ ಮಾತನಾಡುತ್ತಾರೆ. ಇವರಲ್ಲಿ ಪಾರಾಣೆ ಮತ್ತು ಅಮ್ಮತ್ತಿಯಲ್ಲಿ ವಾಸಿಸುವ 'ಇಗ್ಗುಡ' ಮನೆಯ ಒಂದು ಭಾಗ ಮಾತ್ರ ಈಗಲೂ ಕೊಡವ ಪದ್ಧತಿಯನ್ನೇ ಅನುಸರಿಸುತ್ತಿರುವರು.

೪.೮.೫. ಮನೆಹೆಸರುಗಳ ಬದಲಾವಣೆ:

ಕುಟುಂಬನಾಮಗಳು ಕೆಲಹಂತದಲ್ಲಿ ಬದಲಾವಣೆ ಹೊಂದುವುದನ್ನು ಕಾಣುತ್ತೇವೆ. ಬಹು ಸಂದರ್ಭಗಳಲ್ಲಿ ಇವುಗಳನ್ನು ಬದಲು ಮಾಡಲಾಗುವುದಿಲ್ಲ. ಕೊಡಗಿನ ಗೌಡ ಜನಾಂಗದ ಸ್ತ್ರೀಯರ ಮನೆ ಹೆಸರು ವಿವಾಹದ ನಂತರ ಸಾಮಾನ್ಯವಾಗಿ ಎಲ್ಲಾ ಸಮುದಾಯಗಳಲ್ಲಿರುವಂತೆ ಗೌಡ ಸಮುದಾಯದ ಸ್ತ್ರೀಯರು ಬದಲಾಗುತ್ತದೆ. ವಿವಾಹದ ನಂತರ ತಂದೆಯ ಮನೆಯ ಹೆಸರಿಗೆ ಬದಲಾಗಿ ಗಂಡನ ಮನೆಯ ಹೆಸರಿನೊಂದಿಗೆ ಗುರುತಿಸಿಕೊಳ್ಳುತ್ತಾಳೆ.

ಎರಡು ಹೆಸರನ್ನು ಹೊಂದಿದ ಮನೆಗಳು:

ಕೊಡಗು ಗೌಡ ಸಮುದಾಯದ ಪರಿಸರದಲ್ಲಿ ಇರುವ ಕುಟುಂಬಗಳಲ್ಲಿ ಕೆಲವು ಕುಟುಂಬಗಳು ಎರಡು ಹೆಸರುಗಳಿಂದಲೂ ಗುರುತಿಸಿಕೊಳ್ಳುತ್ತವೆ. ಇದು ಈ ಹಿಂದೆ ಹೇಳಿರುವಂತೆ ಅವರ ಕುಟುಂಬದ ಮೂಲ ಮನೆಯಿದ್ದ ಸ್ಥಳದ ಹೆಸರು. ಅಥವಾ ಅವರ ಆಸ್ತಿಯು ಇರುವ ಸ್ಥಳದ ಹೆಸರು ಅವರ ಮನೆಹೆಸರಾಗಿರುವುದು ಕಂಡುಬರುತ್ತದೆ. ಗ್ರಾಮದಲ್ಲಿ ಅವರಿಗೆ ವಹಿಸಿರುವ ಕೆಲವು ಕಾರ್ಯಗಳಿಂದಲೂ ಅದು ಅವರ ಮನೆಹೆಸರಾಗಿರುವುದು ಕಂಡು ಬಂದಿದೆ. ಅಂತಹಾ ಕೆಲವು ಮನೆ ಹೆಸರುಗಳನ್ನು ಇಲ್ಲಿ ಪಟ್ಟಿ ಮಾಡಲಾಗಿದೆ.

ಮನೆಹೆಸರು–೧	**ಮನೆಹೆಸರು–೨**
ಪಲ್ಲೇತಿ	ಮುಕ್ಕಾಟಿ
ಚಿಂಡನ	ಮುಕ್ಕಾಟಿ
ನಿಂಗಪ್ಪನ	ಬಾಳೆಹಿತ್ಲು
ಓಡೆಪ್ಪನ	ಕಾನೆಹಿತ್ಲು
ಪಳಿಯನ	ಬೊಳ್ಳೂರು
ಕೂಡಕಂಡಿ	ಪಂಜಿಕೋಡಿ
ಕೆಮ್ಮಾರ	ಪೊಕ್ಕುಳಂಡ್ರ
ಕುಲ್ಲಚೆಟ್ಟಿ	ಕುತ್ತುಚ್ಚಿ
ಕೋಳಿಮಾಡು	ಹೊಸೋಕ್ಲು
ಕಾಳೆಕೋಟಿ	ಕಾಳೆಯಂಡ
ನಿಡ್ಯಮಲೆ	ಗಿರಿಯಪ್ಪನ
ಕುಂಬಜನ	ಕಡವಡೀರ
ಗೊವಿಂದಮ್ಮನ	ಪರಮೇಶ್ವರನ
ಕೊಟ್ಟಕೇರಿಯನ	ಕೊಟ್ಟಂಗೇರಿ
ದೇವಜನ	ಹೊಸೋಳಿಕೆ
ಬೊಳಿಯನ	ಬೊಳ್ಳಿಯಂಡ್ರ
ಅಯ್ಯಂಡ್ರ	ಬೆಳ್ಯನ ಇತ್ಯಾದಿ

ಹೀಗೆ ಕೊಡಗು ಜಿಲ್ಲೆಯಲ್ಲಿರುವ 'ಅರೆಭಾಷೆ' ಮಾತನಾಡುವ ಗೌಡ ಸಮುದಾಯದಲ್ಲಿ ಕುಟುಂಬ ಅಥವಾ ಮನೆಯನ್ನು ಗುರುತಿಸಲು ಪ್ರತಿ ಕುಟುಂಬಕ್ಕೂ ಒಂದೊಂದು ಹೆಸರು ಇದೆ. ಒಂದೇ ಕುಟುಂಬಕ್ಕೆ ಸೇರಿದ ವ್ಯಕ್ತಿಗಳು ಆ ಕುಟುಂಬದ ಮೂಲಮನೆ(ದೊಡ್ಡಮನೆ)ಯಿಂದ

ದೂರದಲ್ಲಿ ವಾಸಿಸಿದರೂ ಕೊಡಗು ಅಥವಾ ಬೇರೆಡೆ ಎಲ್ಲೇ ನೆಲೆಸಿದರೂ ಆತನನ್ನು ಇಲ್ಲಿ ಆತನ ಕುಟುಂಬದ ಹೆಸರಿನೊಂದಿಗೆ ಗುರುತಿಸಲಾಗುತ್ತದೆ. ಕೊಡಗು ಜಿಲ್ಲೆಯಿಂದ ಹೊರ ಭಾಗದಲ್ಲಿ ನೆಲೆಸಿರುವ ಕೊಡಗು ಗೌಡ ಕುಟುಂಬವು ಅವರ ಕುಟುಂಬದ ಹೆಸರಿನಿಂದ ಕೊಡಗಿನ ಗೌಡರೆಂದು ಗುರುತಿಸಿಕೊಂಡಿದೆ. ಒಟ್ಟಿನಲ್ಲಿ ಮುಖ್ಯವಾಗಿ ಸಾಮಾಜಿಕ ವ್ಯವಹಾರಕ್ಕಾಗಿ 'ಗುರುತಿಸುವಿಕೆ' ಎಂಬ ತತ್ವದಿಂದ ಅದಕ್ಕೆ ಹೊಂದುವ ಭಾಷಿಕ ಸಾಮಗ್ರಿಯನ್ನು (ಶಬ್ಧ) ಬಳಸಿ, ಹುಟ್ಟಿಕೊಂಡ ಮನೆಹೆಸರುಗಳು ಸಾಮಾಜಿಕ ಅರ್ಥವನ್ನು ಪಡೆದಿರುವುದನ್ನು ಕಾಣಬಹುದು.

ಒಟ್ಟಿನಲ್ಲಿ ಹೇಳುವುದಾದರೆ ಕೊಡಗಿನ ಗೌಡ ಸಮುದಾಯದವರ ಮನೆ ಹೆಸರುಗಳು ವಿಶಿಷ್ಟವಾಗಿವೆ. ಕೊಡವರಲ್ಲೂ ಕುಟುಂಬವನ್ನು ಗುರುತಿಸಲು ಮನೆ ಹೆಸರುಗಳು ಇವೆ. ಹಾಗೆಯೇ ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಗೌಡರಲ್ಲೂ ಮನೆ ಹೆಸರುಗಳಿವೆ. ಅಲ್ಲಿಂದ ಇಲ್ಲಿ ಬಂದು ನೆಲೆ ನಿಂತವರು ಅದೇ ಮನೆ ಹೆಸರಿನಿಂದ ಗುರುತಿಸಿಕೊಳ್ಳುವರು. ಕೊಡಗಿನಲ್ಲಿರುವ ಕೊಡವ ಮತ್ತು ಗೌಡರಲ್ಲಿ ಅನೇಕ ಮನೆ ಹೆಸರುಗಳು ಒಂದೇ ತೆರನಾಗಿವೆ. ಇವುಗಳನ್ನು ಮನೆ ಹೆಸರಿನ ಪದಾಂತ್ಯದಿಂದ ಗೌಡರ ಮನೆಹೆಸರು ಅಥವಾ ಕೊಡವರ ಮನೆ ಹೆಸರು ಎಂದು ಗುರುತಿಸಲಾಗುತ್ತದೆ.

ಉದಾ:	ಗೌಡರ ಮನೆಹೆಸರು	ಕೊಡವರ ಮನೆಹೆಸರು
	ಪೊನ್ನಚನ	ಪೊನ್ನಚಂಡ
	ಪುದಿಯನೆರವನ	ಪುದಿಯನೆರವಂಡ
	ನಾಟೋಳನ	ನಾಟೋಳಂಡ
	ತಿರೋಡಿ	ತಿರೋಡಿರ
	ಕುಟ್ಟನ	ಕುಟ್ಟಂಡ
	ಕುಯ್ಯಮುಡಿ	ಕುಯ್ಯಮುಡಿಯಂಡ
	ಕೋರನ	ಕೋರಂಡ
	ಕೋಡಿ	ಕೋಡಿರ
	ಕೊಂಪುಳಿ	ಕೊಂಪುಳಿರ
	ಉಳುವಾರನ	ಉಳುವಾರಂಡ
	ಉದಿಯನ	ಉದಿಯಂಡ
	ಪೋರೆ	ಪೋರೆರ
	ಪೈಕೆ	ಪೈಕೇರ
	ಪಾಡಿಚೆಟ್ಟಿ	ಪಾಡಿಚೆಟ್ಟೀರ
	ಪೊಡನೋಳನ	ಪೊಡನೋಳಂಡ
	ನೆಯ್ಯಣಿ	ನೆಯ್ಯಣೀರ
	ನಡುವಟ್ಟಿ	ನಡುವಟ್ಟೀರ

. ಇತ್ಯಾದಿ ಒಂದೇ ರೀತಿಯ ಮನೆಹೆಸರುಗಳು ಕೊಡಗಿನಲ್ಲಿರುವ ಕೊಡವರು ಮತ್ತು ಗೌಡ ಸಮುದಾಯದಲ್ಲಿದೆ. ಆದರೆ ಇಲ್ಲಿರುವ ತುಳು ಭಾಷಿಕರಲ್ಲಿ ಕೊಡವ ಮತ್ತು ಗೌಡರ ರೀತಿಯ ಮನೆಹೆಸರುಗಳಿಲ್ಲ.

೪.೯. ವಿವಿಧ ವಲಯಗಳಲ್ಲಿ ಭಾಷಾಬಳಕೆ:

ಒಂದೊಂದು ಬಾಷೆಯೂ ತನ್ನದೇ ಆದ ವ್ಯವಸ್ಥಿತವಾದ ಕ್ರಮವನ್ನು ಹೊಂದಿರುತ್ತದೆ. ಸಮಾಜದಲ್ಲಿ ವ್ಯಕ್ತಿಯ ಅವಶ್ಯಕತೆಗಳಿಗೆ ಅನುಗುಣವಾಗಿ ಭಾಷೆ ಜನ್ಮತಾಳುತ್ತದೆ. ಆದ್ದರಿಂದ ಪ್ರತಿಯೊಂದು ಸಮಾಜವೂ ತನ್ನದೇ ಆದ ಭಾಷೆಯನ್ನು ಸಂಪಾದಿಸಿಕೊಂಡಿದೆ. ಭಾಷೆಯಿಲ್ಲದೆ ಸಮಾಜದಲ್ಲಿ ಮನುಷ್ಯ ಬಾಳಲಾರ. ಮನುಷ್ಯ ತನ್ನ ಅನಿಸಿಕೆ ಆಲೋಚನೆಗಳನ್ನು ವ್ಯಕ್ತಪಡಿಸುವುದು ಭಾಷೆಯ ಮೂಲಕವೇ. ಸಮಾಜದಲ್ಲಿ ಮನುಷ್ಯನು ಭಾಷೆಯ ಮೂಲಕ ಸಹಕಾರ, ಒಗ್ಗಟ್ಟು, ಅಭಿಮಾನ, ವಿಶ್ವಾಸಗಳಿಂದ ಬದುಕಲು ಸಾಧ್ಯ.

ಒಂದು ಸಮಾಜದ ಶಕ್ತಿಯಾದ ಭಾಷೆಗೆ ವ್ಯಕ್ತಿಯ ಪಾತ್ರ ಮುಖ್ಯವಾಗಿರುತ್ತದೆ. ವ್ಯಕ್ತಿಯು ಬದಲಾದಂತೆ ಭಾಷೆಯೂ ಬದಲಾಗುತ್ತಿರುತ್ತದೆ. ಸಮಾಜ, ಸಂಸ್ಕೃತಿ ಬದಲಾಗುತ್ತದೆ. ಇವುಗಳನ್ನು ಅನುಸರಿಸಿ ಭಾಷೆಯು ಬದಲಾಗುತ್ತದೆ. ಭಾಷೆಯನ್ನು ಆದಷ್ಟು ಸರಳಗೊಳಿಸುವುದು ಈ ಬದಲಾವಣೆಯ ಉದ್ದೇಶವಾಗಿದೆ. ಭಾಷೆ ಮತ್ತು ಸಂಸ್ಕೃತಿಯು ನಿಖಟವಾದ ಸಂಬಂಧವನ್ನು ಹೊಂದಿವೆ. ಇವೆರಡೂ ಒಂದಕ್ಕೊಂದು ಅನುಸರಿಸಿ ಬೆಳೆದು ಬಂದಿದ್ದು ಪರಸ್ಪರ ಪೂರಕವಾಗಿವೆ. ಮಾನವನ ಎಲ್ಲಾ ಚಟುವಟಿಕೆಗಳಿಗೂ ಸಮಾಜ ಮತ್ತು ಸಂಸ್ಕೃತಿಗಳೇ ಮೂಲ. ಒಂದು ಭಾಷೆಯಲ್ಲಿ ಕಂಡುಬರುವ ಶಬ್ಧ ಸಮೂಹ, ಆ ಭಾಷೆಯ ಪರಿಸರ ಹಾಗೂ ಪರಿಸ್ಥಿತಿಗಳಿಗೆ ಅನುಗುಣವಾಗಿ ಆ ಭಾಷೆ ಸಿದ್ಧವಾಗುತ್ತದೆ ಅಥವಾ ಬೇರೆ ಭಾಷೆಗಳಿಂದ ಬಂದ ಪದಗಳಾಗಿರುತ್ತದೆ. ಈ ರೀತಿಯಲ್ಲಿ ಸಮಾಜ, ಸಂಸ್ಕೃತಿ, ಭಾಷೆ ಒಂದನ್ನೊಂದು ಬೆಸೆದುಕೊಂಡಿರುತ್ತದೆ.

ಕನ್ನಡದ ಉಪಭಾಷೆಯೆಂದು ಭಾಷಾ ವೈಜ್ಞಾನಿಕ ವಿಶ್ಲೇಷಣೆ ಸಂದರ್ಭದಲ್ಲಿ ಗುರುತಿಸಿಕೊಂಡಿರುವ ಗೌಡಕನ್ನಡವು ಭಿನ್ನತೆ ಮತ್ತು ವೈವಿಧ್ಯಗಳಿಂದ ವೈಶಿಷ್ಟ್ಯಪೂರ್ಣವಾಗಿದೆ. ಅನ್ಯಭಾಷಾ ಸಂಪರ್ಕ, ಪರಿಸರ ಮತ್ತು ಸಂಸ್ಕೃತಿಯ ಪ್ರಭಾವ, ಸಾಮಾಜಿಕ, ಭೌಗೋಳಿಕ ಕಾರಣಗಳಿಂದಾಗಿ ಉಪಭಾಷೆಯು ಹುಟ್ಟಿಕೊಳ್ಳುತ್ತದೆ. ಗೌಡಕನ್ನಡವು ಸಾಂಸ್ಕೃತಿಕವಾಗಿ ಅನನ್ಯತೆಯನ್ನು ಹೊಂದಿರುವ ಉಪಭಾಷೆಯಾಗಿದೆ. ಪ್ರತಿಯೊಂದು ಜನಾಂಗವೂ ಮಾತನಾಡುವಾಗ ತನ್ನದೇ ರೀತಿಯಾದ ನಿಯಮಗಳನ್ನು ರೂಪಿಸಿಕೊಂಡಿರುತ್ತದೆ. ಈ ನಿಯಮಗಳು ಆ ಜನಾಂಗದ ಸಾಮಾಜಿಕ ವ್ಯವಸ್ಥೆಗಳಿಗೆ ಅವರ ಸಾಂಸ್ಕೃತಿಕ ಆಚರಣೆಗಳಿಗೆ ತಕ್ಕಂತೆ ಇರುತ್ತದೆ. ಕೊಡಗಿನ ಗೌಡಜನಾಂಗದವರ ಮಾತಿನಲ್ಲಿಯೂ ಕೂಡ ಅಲ್ಲಿನ ಸಾಮಾಜಿಕ ಮತ್ತು ಸಾಂಸ್ಕೃತಿಕ ಆಚಾರಗಳಿಗೆ ತಕ್ಕ ನಿಯಮಗಳನ್ನು ಕಾಣಬಹುದು.

ಕೊಡಗಿನ ಗೌಡಜನಾಂಗದವರಲ್ಲಿ ಯಾರಾದರೂ ಸಂಬಂಧಿಕರು, ತಮಗಿಂತಲೂ ಹಿರಿಯರನ್ನು ಕಾಣುವಾಗ 'ನಮಸ್ತೆ, ಸೌಕ್ಯ' (ನಮಸ್ತೆ ಸೌಖ್ಯವೇ?) ಎಂದು ಕ್ಷೇಮ ಸಮಾಚಾರವನ್ನು ವಿಚಾರಿಸಿ ಕಾಲಿಗೆ ನಮಸ್ಕರಿಸುವ ಪದ್ಧತಿ ಇದೆ. ತಲತಲಾಂತರದಿಂದಲೂ ಬಂದಿರುವ ಈ ಪದ್ಧತಿ ದಕ್ಷಿಣಕನ್ನಡ ಜಿಲ್ಲೆಯಲ್ಲಿರುವ ಗೌಡರಲ್ಲಿಲ್ಲ. ಹಾಗೆಯೇ ಹೊರಡುವಾಗ ಕಿರಿಯರಿಗೆ 'ನಾ ಬನ್ನೆ ಬಲರಿಯಾ' ಎಂದು ಹೇಳುತ್ತಾರೆ. ಈ 'ಬಲರಿಯಾ' ತುಳು ಭಾಷೆಯ ಪದವಾಗಿದ್ದು, 'ಮಗು' ಎಂಬ ಅರ್ಥದಲ್ಲಿ ಬಳಕೆಯಾಗುತ್ತದೆ.

ಇವರಲ್ಲಿ ಮತ್ತೊಬ್ಬರಿಗೆ ಕೆಡುಕಾಗಲಿ ಎಂಬ ಬಯಕೆಯಿಂದ ಬಳಸುವ ಮಾತಿನ ಭಾಷಿಕ ರೂಪವನ್ನು 'ಸಾಪ ಹಾಕುದು' (ಶಾಪ ಹಾಡುವುದು) ಎನ್ನುವರು. ಸಾಮಾಜಿಕವಾಗಿ ಜನರು ಇದನ್ನು ಮಾತಿನಲ್ಲಿ ಪ್ರಯೋಗಿಸುತ್ತಾರೆ. ತಮ್ಮ ಶತ್ರುಗಳಿಗೆ ಅಥವಾ ತಮಗೆ ಆಗಿ ಬಾರದವರ ಮೇಲೆ ಮಾತಿನ ರೂಪದಲ್ಲಿ ಹಗೆ ತೀರಿಸಿಕೊಳ್ಳುವುದನ್ನು ಇಲ್ಲಿ ಕಾಣಬಹುದು. ಕೊಡಗಿನ ಗೌಡಜನಾಂಗದವರ ಶಾಪದ ನುಡಿಗಳ ಭಾಷಿಕ ರೂಪಗಳು ಕೆಳಗಿನಂತಿವೆ.

ನಿನ್ನ ಬಾಯಿಗೆ ಮಣ್ಣಾಕಿಕೆ (ನಿನ್ನ ಬಾಯಿಗೆ ಮಣ್ಣು ಹಾಕ)

ನೀ ಮಣ್ಣ್ ತಿಂದೇ ಹೋಗು (ನೀನು ಮಣ್ಣಾಗಿ ಹೋಗು)

ನಿನ್ನ ದೊಂಡೆ ಕಟ್ಟಿಯೇ ಹೋಗಲಿ (ನಿನ್ನ ಗಂಟಲು ಕಟ್ಟಿ ಹೋಗಲಿ)

ನೀ ಉದ್ದಾರ ಆಕಿಲೆ (ನೀನು ಉದ್ಧಾರ ಆಗುವುದಿಲ್ಲ)

ನಿನ್ನ ಹೊಟ್ಟೆ ಇಳ್ದೋಗಲಿ (ನಿನ್ನ ಬಸಿರು ನಾಶವಾಗಲಿ) ಇತ್ಯಾದಿ

ಈ ಮೇಲಿನ ರೂಪಗಳಲ್ಲಿ ಶಿಷ್ಟಕನ್ನಡದ ಬೈಗುಳಗಳನ್ನು ಗೌಡಕನ್ನಡಕ್ಕೆ ಮಾರ್ಪಾಡು ಮಾಡಿಕೊಂಡು ಇವರು ಬಳಸುತ್ತಿರುವುದು ಕಂಡುಬರುತ್ತದೆ. ಒಬ್ಬರಿಂದೊಬ್ಬರು ಜಗಳ ಮಾಡುವಾಗ, ಪರಸ್ಪರ ಮಾತಿನಲ್ಲಿ ಬೈಯುವಾಗ ಗೌಡಕನ್ನಡದಲ್ಲಿ ಇರುವ ಬೈಗುಳದ ರೂಪಗಳು ಇಂತಿವೆ.

ಆ ದೇವರ ಸತ್ಯ ಇದ್ದರೆ, ಅದರ ಪಲ ನೀ ಕಾಂಬದಿರ್‌ಕಿಲೆ (ಆ ದೇವರು ಇರುವುದು ನಿಜವಾದರೆ ನೀನು ಮಾಡಿದ್ದರ ಫಲ ನಿನಗೆ ಕಾಣುತ್ತದೆ)

ನಮ್ಮ ದೇವರ ಸತ್ಯ ಇದ್ದರೆ ನಿನ್ನ ನಾಲಿಗೆ ಬಿದ್ದೋದು (ನಮ್ಮ ದೇವರು ಇರುವುದು ನಿಜವಾದಲ್ಲಿ ನಿನ್ನ ನಾಲಿಗೆ ಬಿದ್ದು ಹೋಗುತ್ತದೆ)

ಜೀವನದಲ್ಲಿ ತಮಗೆ ಹಲವು ರೀತಿಯಾಗಿ ತೊಂದರೆ ಹಾಗೂ ಕೆಡುಕನ್ನು ಉಂಟುಮಾಡಿದವರ ಮೇಲೆ ದೈಹಿಕವಾಗಿ ಪ್ರತೀಕಾರ ತೀರಿಸಿಕೊಳ್ಳಲು ಸಾಧ್ಯವಿಲ್ಲದಿದ್ದಾಗ ಈ ರೀತಿಯ ಶಾಬ್ದಿಕ ರೂಪದಲ್ಲಿ ಶಾಪ ಹಾಕುವುದರ ಮೂಲಕ ಅವರಿಗೆ ಕೇಡನ್ನು ಬಯಸುವುದು ಸಾಮಾನ್ಯವಾಗಿ ಎಲ್ಲಾ ಜನಾಂಗದಲ್ಲಿರುವಂತೆ ಕೊಡಗಿನ ಗೌಡರಲ್ಲಿಯೂ ಇದೆ.

ಆಣೆ ಪ್ರಮಾಣ ಮಾಡುವಾಗ:

ಆಣೆಗಳು: ತಾವು ನೋಡಿರುವ ಘಟನೆ, ಆಡುವ ಮಾತು, ಕೇಳಿದ ವಿಷಯ ಇವುಗಳು ನಿಜವೆಂದು ಇನ್ನೊಬ್ಬರಿಗೆ ಮನವರಿಕೆ ಮಾಡಲು, ಭರವಸೆಗಳನ್ನು ನೀಡುವಾಗ ಮಾತಿನಲ್ಲಿ ಆಣೆ ಮಾಡುವುದು ಸಾಮಾನ್ಯವಾಗಿ ಎಲ್ಲೆಲ್ಲಿಯೂ ಇರುವಂತೆ ಇವರಲ್ಲಿಯೂ ಇದೆ.

ಉದಾ: ದೇವರ ಸತ್ಯ (ದೇವರ ಆಣೆ)
ಮಕ್ಕಳ ಸತ್ಯ (ಮಕ್ಕಳ ಆಣೆ)
ಅವ್ವನ ಸತ್ಯ (ತಾಯಿಯ ಆಣೆ)ಇತ್ಯಾದಿ.

ಭರವಸೆಗಳನ್ನು ನೀಡುವಾಗ ಆಣೆಯ ರೂಪ:

ಉದಾ: ಆ ದೇವರ ಸತ್ಯ ಮಾಡಿಕೊಟ್ಟನೆ (ದೇವರ ಆಣೆಯಾಗಿ ಮಾಡಿಕೊಡುತ್ತೇನೆ).
ನಿನ್ನ ಸತ್ಯ ತಂದ್ ಕೊಟ್ಟನೆ (ನಿನ್ನಾಣೆ ತಂದು ಕೊಡುತ್ತೇನೆ) ಇತ್ಯಾದಿ.

ತನ್ನ ಮೇಲೆ ಬಂದಿರುವ ಆಪಾದನೆ ಸುಳ್ಳು ಎಂದು ನಂಬಿಸಲು ಪ್ರಮಾಣ ಮಾಡುವುದಕ್ಕೂ **'ಸತ್ಯ'** ಎನ್ನುವರು.

ಉದಾ: ದೇವರ ಮುಂದೆ ಸತ್ಯ ಮಾಡಿ ಹೇಳಿನೆ (ದೇವರ ಮುಂದೆ ಪ್ರಮಾಣ ಮಾಡಿ ಹೇಳುತ್ತೇನೆ).

ನಾ ಎಲ್ಲಿ ಬೇಕಾರೂ ಸತ್ಯ ಮಾಡಿನೆ (ನಾನು ಎಲ್ಲಿ ಬೇಕಾದರೂ ಪ್ರಮಾಣ ಮಾಡುತ್ತೇನೆ). ಇಲ್ಲಿ 'ಸತ್ಯ' ಎಂಬ ಪದವನ್ನು ಗೌಡ ಕನ್ನಡದಲ್ಲಿ 'ನಿಜ', 'ಆಣೆ', 'ಪ್ರಮಾಣ' ಎಂಬ ಮೂರೂ ಅರ್ಥಗಳಲ್ಲಿ ಬಳಸುತ್ತಾರೆ.

ಉದಾ: ಅವ್ವನ **ಸತ್ಯ** ಮಾಡಿ ಹೇಳ್‌ನೆ, ನಾ ಹೇಳ್‌ದು **ಸತ್ಯ,** ಬೇಕಾರೆ ನಾ ದೇವರ ಮುಂದೆ **ಸತ್ಯ** ಮಾಡ್‌ನೆ. (ತಾಯಿಯ ಆಣೆ ಮಾಡಿ ಹೇಳುತ್ತೇನೆ, ನಾಹೇಳುತ್ತಿರುವುದು ನಿಜ, ಬೇಕಾದರೆ ನಾನು ದೇವರ ಮುಂದೆ ಪ್ರಮಾಣ ಮಾಡುತ್ತೇನೆ).

ಒಬ್ಬ ವ್ಯಕ್ತಿ ಶೈಕ್ಷಣಿಕವಾಗಿ, ಸಾಮಾಜಿಕವಾಗಿ, ಆರ್ಥಿಕವಾಗಿ ಮೇಲೇರುತ್ತಾ ಹೋದಂತೆ ಆತನ ಭಾಷೆಯ ಬಳಕೆಯಲ್ಲಿ ವ್ಯತ್ಯಾಸವಾಗುತ್ತದೆ. ಇವೆಲ್ಲವೂ ಆತನ ಭಾಷೆಯ ಮೇಲೆ ಪ್ರಭಾವ ಬೀರುತ್ತದೆ. ಕೊಡಗಿನ ಗೌಡ ಕನ್ನಡಿಗರಲ್ಲಿಯೂ ಈ ವ್ಯತ್ಯಾಸಗಳಿರುವುದನ್ನು ಕಾಣಬಹುದು. ನಗರವಾಸಿಯವರು, ಆರ್ಥಿಕವಾಗಿ ಶೈಕ್ಷಣಿಕವಾಗಿ ಉನ್ನತ ಮಟ್ಟದಲ್ಲಿರುವವರು ಗೌಡ ಕನ್ನಡದ ಮೂಲ ರೂಪದ ಬದಲು ಕನ್ನಡದ ಪದಗಳನ್ನು ತಮ್ಮ ಮಾತಿನಲ್ಲಿ ಬಳಸುವರು. ಅವುಗಳನ್ನು ಕೆಲವು ಪದಗಳ ಮೂಲಕ ಇಲ್ಲಿ ತಿಳಿಸಲಾಗಿದೆ.

ಗೌಡಕನ್ನಡದ ಮೂಲ ಪದಗಳು ಆರ್ಥಿಕ, ಶೈಕ್ಷಣಿಕ ಹಾಗೂ ಸಾಮಾಜಿಕವಾಗಿ ಉನ್ನತ ಶ್ರೇಣಿಯಲ್ಲಿರುವವರಲ್ಲಿ:

ಮೂಲಪದ	**ಬದಲಾವಣೆಯ ರೂಪಗಳು**
ಹುಗ್ಗೆ	ಅನ್ನ
ಗೆಯಿಪು	ಸಾರ್
ಆಂಬರ	ಸಾರ್
ಅಯ್ಯೆ	ಅಮ್ಮ
ಹಾಂಟ್	ಹೆಡ್ಗ್
ನಿಲ್ಗ್	ಮಲ್ಗ್
ಹಞ	ಸೊಪ್ಪು
ಬೆಳಿ	ಬಿಳಿ
ಕರಿ	ಕಪ್ಪ್
ಎಲಿ	ಇಲಿ
ಮಂಡೆ	ಹಂಡೆ
ಬಾಮಿ	ಬಾವಿ
ಕೆಮಿ	ಕಿವಿ
ಬೀಲ	ಬಾಲ ಇತ್ಯಾದಿ.

ಸೀನು ಬಂದರೆ ಅದನ್ನು ಕೇವಲ ದೈಹಿಕ ಚಟುವಟಿಕೆ ಎಂದು ಮಾತ್ರ ತಿಳಿಯದೆ ಅದಕ್ಕೆ ವಿಶೇಷ ಅರ್ಥವನ್ನು ನೀಡುವುದು ಹಲವು ಜನಾಂಗದವರಲ್ಲಿ ಬೇರೆ ಬೇರೆ ರೀತಿಯಲ್ಲಿದೆ. ಕಾಂಗೋದ ಬೆಂಟೆ ಬಾಷಿಕರು ಸೀನುವಾಗ 'ಒಳ್ಳೆಯದಾಗಲಿ' ಎಂದು, ಮೆಂಡೆ ಭಾಷೆಯನ್ನಾಡುವ ಜನರು 'ವಂದನೆಗಳು' ಎಂದು, ಜರ್ಮನ್ ಭಾಷೆಯಲ್ಲಿ 'ಆರೋಗ್ಯವಾಗಿರು' ಎಂದು ಹೇಳುತ್ತಾರೆ[೧]. ಗೌಡ ಕನ್ನಡದ ಸಾಮಾಜಿಕ ವಲಯದಲ್ಲಿಯೂ ಸೀನಿದಾಗ ಯಾರೋ ನೆನಪಿಸಿಕೊಡರು ಎಂದು ತಿಳಿಯುತ್ತಾರೆ. ಹಾಗೂ ಸೀನಿದಾಗ 'ಬಾಳ್' ಎಂದು ಇತರರು ಹೇಳುವರು. ಅಂದರೆ 'ನೂರು ಕಾಲ ಬಾಳು' ಎಂದು ಹರಸುವುದೇ ಆಗಿದೆ.

ನಿಷೇಧಿತ ಪದಗಳ ಬಳಕೆ ಸರ್ವತ್ರವಾಗಿರುವಂತೆ ಕೆಲವೊಮ್ಮೆ ನಿರ್ದಿಷ್ಟ ಸಂದರ್ಭಗಳಿಗೆ ಸೀಮಿತವಾಗಿರುತ್ತದೆ. ಗೌಡ ಕನ್ನಡದ ನೆಲೆಯಲ್ಲಿ ಬೆಳೆದ ಧಾನ್ಯಗಳನ್ನು ಅಳತೆ ಮಾಡುವಾಗ ಮೊದಲ ಸಂಖ್ಯೆಯನ್ನು ಹೇಳುವುದಿಲ್ಲ. ಉದಾ: ಲಾಬ, ಎರ್ಡ್, ಮೂರ್, ನಾಲ್ಕ್ ಇತ್ಯಾದಿಯಾಗಿ ಎಣಿಸಲಾಗುತ್ತದೆ.

ಹಾಗೆಯೇ ಇವರಲ್ಲಿ ಯಾರಾದರೂ ಮನೆಯಿಂದ ಹೊರಗೆ ಹೊರಟಾಗ, ದಾರಿಯಲ್ಲಿ ಪರಿಚಯದವರು ಎದುರಾದಾಗ 'ಎಲ್ಲಿಗೆ/ಎತ್ತ್' (ಎಲ್ಲಿಗೆ) ಎಂದು ಕೇಳುವಂತಿಲ್ಲ. ಆ ರೀತಿ ಕೇಳಿದರೆ ಹೋದ ಕೆಲಸ ಆಗುವುದಿಲ್ಲವೆಂದೂ, ಅಪಶಕುನವೆಂದೂ, ಅಥವಾ ಏನಾದರೂ ತೊಂದರೆಯಾಗುವುದೆಂದು ನಂಬಿಕೆ ಇದೆ. ಇದಕ್ಕೆ ಬದಲಾಗಿ 'ದೂರ' ಎಂಬ ಪದವಿದೆ.

ಕೊಡಗಿನ ಗೌಡ ಜನಾಂಗದವರ ಅಳತೆಯ ಪ್ರಮಾಣಗಳ ರೂಪಗಳು:

ಪಾವು	:	ಕಾಲು ಸೇರು
ಮಾನ	:	ಅರ್ಧ ಸೇರು
ಸೇರು	:	ಒಂದು ಸೇರು
ಹಾನಿ	:	ಎರಡು ಸೇರು
ಒಂದು ಪರೆ	:	ಐದು ಹಾನಿ (ಹತ್ತು ಸೇರು)
ಒಂದು ಬಟ್ಟಿ	:	ಎಂಟು ಪರೆ (ಎಂಬತ್ತು ಸೇರು)
ಒಂದು ಗಾಡಿ	:	ಹದಿನೈದು ಬಟ್ಟಿ (೧೨೦೦ ಸೇರು)

ಈ ಅಳತೆಯು ಭತ್ತ ಮತ್ತು ಅಕ್ಕಿಯನ್ನು ಅಳೆಯುವುದಾಗಿದೆ. ಕೆಲವು ಜನಾಂಗಗಳಲ್ಲಿ ಮಕ್ಕಳಿಗೆ ಯಾವುದೇ ಬಗೆಯ ಅಪಾಯಗಳು ಆಗಬಾರದು ಎಂದು ಸಾಮಾನ್ಯವಾಗಿ ಇಡುವ ಹೆಸರುಗಳ ಬದಲಿಗೆ 'ಗುಂಡ, ತಿಪ್ಪ' ಮುಂತಾದ ಹೆಸರುಗಳನ್ನು ಇಡುವುದುಂಟು[೨]. ಇದೇ ರೀತಿಯ ನಂಬಿಕೆಯಿಂದ ಕೊಡಗಿನ ಗೌಡರ ಸಾಮಾಜಿಕ ನೆಲೆಯಲ್ಲಿ ಸಾಕು ಪ್ರಾಣಿಗಳಿಗೆ ಈ ರೀತಿಯ ವಿಚಿತ್ರವಾದ ಹೆಸರುಗಳನ್ನು ಇಡುವರು.

ಉದಾ: ಸೋಮಾರಿ, ಮೊಂಡ, ಮೊಣ್ಣ, ಬೊಳ್ಳು, ಕರ್ಪಿ, ಗೊದ್ದ ಇತ್ಯಾದಿ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಅರೆಭಾಷೆ ಗೌಡರಲ್ಲಿ ದೂರವಾಣಿಯಲ್ಲಿ ಸಂಭಾಷಣೆ ಮುಗಿದ ನಂತರ 'ಬುಟ್ಟನೆ'(ಬಿಡುತ್ತೇನೆ) ಅಥವಾ 'ಬುಡ್ಲಾ'(ಬಿಡಲಾ) ಎಂಬ ಶಬ್ಧಗಳನ್ನು ಬಳಸುವರು. ಈ ಜಿಲ್ಲೆಯ ಗಡಿಯಲ್ಲಿರುವ ಕೊಡಗು ಜಿಲ್ಲೆಯ ಪ್ರದೇಶಗಳಲ್ಲಿಯೂ ಈ ಮೇಲಿನ ಶಬ್ಧವನ್ನು ಬಳಸಲಾಗಿತ್ತದೆ.

ಧಾರವಾಡದ ಕಡೆಯಲ್ಲಿನ ಭಾಷೆಯಲ್ಲಿ 'ಅವರ್ ಮನೀಗ್ ಹೋಗ್‌ಬಿಟ್ಟು, ಇದನ್ನ್ ಕೊಟ್ಟ್‌ಬಿಟ್ಟು, ಹೇಳ್‌ಬಿಟ್ಟು' ಮುಂತಾದ ಶಬ್ಧಗಳಿವೆ. ಕೊಡಗಿನ ಗೌಡಕನ್ನಡ ಭಾಷೆಯಲ್ಲಿ ಈ ರೂಪಗಳು 'ಕೊಟ್ಟ್ ಬುಟ್ಟ್, ನೋಡಿಬುಟ್ಟ್, ಹೋಗಿಬುಟ್ಟ್' ಎಂಬ ಶಬ್ಧಗಳು ಬಳಕೆಯಲ್ಲಿದೆ.

ಉದಾ: ನಾ ಪ್ಯಾಟೆಗೆ ಹೋಗಿಬುಟ್ಟ್ ಬನ್ನೆ(ನಾನು ಪೇಟೆಗೆ ಹೋಗಿ ಬರುತ್ತೇನೆ) ಅವು ಬಂದ್ ನೋಡಿಬುಟ್ಟ್ ಹೋದೋ(ಅವರು ಬಂದು ನೋಡಿ ಹೋದರು) ಇತ್ಯಾದಿ.

ಒಂದು ಭಾಷೆಯಲ್ಲಿ ಗೌರವ ಸೂಚಕ ಪದಗಳ ನಿರ್ಧಿಷ್ಟ ರೂಪಗಳಿರುತ್ತವೆ. ಇವು ಬಳಕೆಯಾಗುವ ಸಂಧರ್ಭ, ಪ್ರಯೋಗಿಸುವ ಮತ್ತು ಸ್ವೀಕರಿಸುವ ವ್ಯಕ್ತಿಗಳನ್ನು ಅವಲಂಬಿಸಿರುತ್ತದೆ. ಮತ್ತು ವ್ಯಕ್ತಿಗಳ ನಡುವಿನ ಸಾಮಾಜಿಕ ಅಂತರ, ಸಾಮೀಪ್ಯ, ವಯಸ್ಸು, ಲಿಂಗ, ಜಾತಿ, ರಕ್ತ ಸಂಬಂಧ, ಧಾರ್ಮಿಕ, ಆರ್ಥಿಕ ಸ್ಥಾನಮಾನ ಇತ್ಯಾದಿಗಳಿಂದ ಪ್ರೇರಿತವಾಗಬಹುದು. ಭಾಷೆಯಲ್ಲಿನ ಸಂಭೋಧನಾ ಮಾದರಿಗಳು ಸಾಮಾಜಿಕ ಅಂಶಗಳಾದ ವಯಸ್ಸು, ಆರ್ಥಿಕತೆ, ಸಾಮಾಜಿಕ ಸ್ಥಾನಮಾನದಂತಹ ಅಂಶಗಳಲ್ಲಿ ಭಿನ್ನವಾಗಿ ಕಾಣಿಸಿಕೊಳ್ಳುತ್ತದೆ. ಕೊಡಗಿನ ಗೌಡ ಜನಾಂಗದವರಲ್ಲಿ ಈ ರೀತಿಯ ಮೇಲುವರ್ಗ, ಕೆಳವರ್ಗ ಎಂಬ ಭೇಧ ಭಾಷೆಯಲ್ಲಿ ಕಂಡು ಬರುವುದಿಲ್ಲ. ಇಲ್ಲಿ ಸಂಬಂಧಗಳ ಮೂಲಕ ಗೌರವ ನೀಡಲಾಗುತ್ತದೆ. ಇಲ್ಲಿ ಆರ್ಥಿಕ, ಸಾಮಾಜಿಕ, ಧಾರ್ಮಿಕ ಸ್ಥಾನಮಾನಗಳಿಂದಲ್ಲದೆ, ಸಂಬಂಧ, ವಯಸ್ಸು ಇವುಗಳನ್ನು ಗಮನದಲ್ಲಿರಿಸಲಾಗುತ್ತದೆ. ಆರ್ಥಿಕವಾಗಿ ತೀರಾ ಕೆಳಮಟ್ಟದಲ್ಲಿದ್ದವನಿಗೆ ಉನ್ನತ ಸ್ಥಿತಿಯಲ್ಲಿರುವವನು ಗೌರವದಿಂದಲೇ ಮಾತನಾಡಿಸುವುದು ಇವರಲ್ಲಿದೆ.

ಅಡಿಟಿಪ್ಪಣಿಗಳು

೧. ಭಾಷೆ ವಿಶ್ವಕೋಶ ಪುಟ:೧೧

೨. ಅದೇ ಪುಟ:೧೨

ಅಧ್ಯಾಯ–೫

ಗೌಡಕನ್ನಡದ ಮೇಲೆ ಇತರ ಭಾಷೆಗಳ ಪ್ರಭಾವ.

ಅಧ್ಯಾಯ ಐದು

ಗೌಡಕನ್ನಡದ ಮೇಲೆ ಇತರ ಭಾಷೆಗಳ ಪ್ರಭಾವ.

ಭಾಷೆ ಎಂಬುದು ಮನುಷ್ಯನ ಭಾವನೆಗಳನ್ನು ವಿನಿಮಯಗೊಳಿಸಲು, ಸಂವಹನಗೊಳಿಸಲು ಇರುವ ಅಸದೃಶ ಸಾಧನ, ಭಾಷೆ ಕೂಡ ಬದುಕಿನ ಒಂದು ರೀತಿ, ಮನುಷ್ಯನ ಸರ್ವಸ್ವವನ್ನೂ ಆವರಿಸಿಕೊಂಡಿರುವಂತದ್ದು. ಭಾಷೆಯ ಹೊರತಾಗಿ ಮನುಷ್ಯನನ್ನು ಕಲ್ಪಿಸಿಕೊಳ್ಳಲಾಗುವುದಿಲ್ಲ. ಮಾನವನನ್ನು ಪ್ರಾಣಿಗಳಿಂದ ಬೇರ್ಪಡಿಸಿರುವ ಪ್ರಮುಖ ಅಂಶವೇ ಭಾಷೆ. ಭಾಷಾ ಸಂಪರ್ಕದಿಂದಾಗಿ ಮತ್ತು ಸಾಮಾಜಿಕ ಸಂದರ್ಭಗಳಿಂದಾಗಿ ಒಂದು ಭಾಷೆಯನ್ನು ಬಲ್ಲ ಜನರು ಇನ್ನೊಂದು ಭಾಷೆಯನ್ನು ಕಲಿಯುವುದು ಅನಿವಾರ್ಯವಾಗುತ್ತದೆ. ಹಲವಾರು ಸಾಮಾಜಿಕ ವ್ಯವಹಾರಗಳನ್ನು ನಡೆಸಲು, ವೃತ್ತಿ ಜೀವನವನ್ನು ನಿರ್ವಹಿಸಲು, ಆಡಳಿತ ಕ್ರಿಯೆಯಲ್ಲಿ ಭಾಗಿಗಳಾಗಲು ವ್ಯಕ್ತಿಗಳು ಒಂದಕ್ಕಿಂತ ಹೆಚ್ಚು ಭಾಷೆಗಳನ್ನು ಕಲಿತು ಬಳಸಬೇಕಾದ ಸಂದರ್ಭಗಳು ನಿರ್ಮಾಣವಾಗುತ್ತವೆ.

ಮನುಷ್ಯ ಸಮಾಜಜೀವಿ. ಅವನು ತನ್ನ ಸುತ್ತ–ಮುತ್ತಣ ಜನರೊಡನೆ ಒಂದಲ್ಲ ಒಂದು ರೀತಿಯ ಸಂಪರ್ಕವನ್ನಿಟ್ಟು ಕೊಳ್ಳಬೇಕಾಗುತ್ತದೆ. ಹಾಗೆಯೇ ಒಂದು ಸಮಾಜವೂ ಕೂಡ. ಒಂದು ಸಮಾಜ ಅಥವಾ ಒಂದು ಸಂಸ್ಕೃತಿಯು ಇತರ ಸಮಾಜ ಅಥವಾ ಸಂಸ್ಕೃತಿಗಳೊಡನೆ ಒಂದಲ್ಲ ಒಂದು ರೀತಿಯಲ್ಲಿ ಸಂಪರ್ಕವನ್ನಿಟ್ಟುಕೊಂಡಿರುತ್ತದೆ. ಎರಡು ಸಂಸ್ಕೃತಿಗಳು ಒಂದನ್ನೊಂದು ಅರಿಯುವ ಪ್ರಸಂಗ ಒದಗಿದಾಗ ಒಂದು ಮತ್ತೊಂದರಿಂದ ಅನೇಕ ಹೊಸ ಭಾವನೆಗಳನ್ನೂ, ಹೊಸ ವಸ್ತುಗಳನ್ನೂ ಸ್ವೀಕರಿಸುತ್ತದೆ. ಆ ಹೊಸ ಭಾವನೆಗಳ ಮತ್ತು ಹೊಸ ವಸ್ತುಗಳ ಜೊತೆಯಲ್ಲಿ ಅವುಗಳಿಗೆ ಆ ಭಾಷೆಯಲ್ಲಿರುವ ಹೆಸರುಗಳೂ ಪ್ರಯಾಣ ಮಾಡಿ ಹೊಸ ಭಾಷೆಯನ್ನು ಪ್ರವೇಶಿಸುತ್ತವೆ.

೫.೧. ನುಡಿಬೆರಕೆ–ನುಡಿಜಗಿತ

ಕೊಡಗು ಜಿಲ್ಲೆ ಒಂದು ಬಹು ಭಾಷಿಕ ಪ್ರದೇಶವಾಗಿದೆ. ಇಲ್ಲಿ 'ಕೊಡವ' ಭಾಷೆ ಮತ್ತು 'ಗೌಡಕನ್ನಡ' ಭಾಷೆ ಪ್ರಮುಖ ಭಾಷೆಗಳಾಗಿವೆ. ಜನಾಂಗೀಯ ದೃಷ್ಟಿಯಿಂದ ನೋಡಿದರೆ ಇಲ್ಲಿ

ವಿವಿಧ ಗುಂಪಿನ ಜನರು ಬುಡಕಟ್ಟು ಗುಂಪುಗಳು ಇರುವುದು ಕಂಡುಬರುತ್ತವೆ. ಇಲ್ಲಿ ಎಲ್ಲಾ ವರ್ಗಗಳ ಜನರೂ ಕಂಡುಬರುತ್ತಾರೆ. ಕೊಡವರು, ಗೌಡರು, ಮಾಪಿಳ್ಳೆಗಳು ವಿವಿಧ ಪರಿಶಿಷ್ಟ ಜಾತಿ–ವರ್ಗಗಳ ಜನರು ತಮ್ಮದೇ ಆದ ಧಾರ್ಮಿಕ–ಸಾಮಾಜಿಕ, ಸಾಂಸ್ಕೃತಿಕ ಪದ್ಧತಿಗಳು, ಆಚಾರ ವಿಚಾರಗಳು ಹಾಗೂ ಭಾಷೆಗಳನ್ನು ಹೊಂದಿದ್ದು, ಕೊಡಗಿನಲ್ಲಿ ವಾಸವಾಗಿರುವುದು ಕಂಡುಬರುತ್ತದೆ. ಇಂತಾ ಬಹು ಭಾಷಿಕ ಸನ್ನಿವೇಶಗಳಲ್ಲಿ ಒಂದು ಭಾಷೆಯನ್ನು ಮಾತನಾಡುವಾಗ ಮತ್ತೊಂದು ಭಾಷೆಯ ಪದಗಳನ್ನು, ನುಡಿಗಟ್ಟುಗಳನ್ನು ಬೆರೆಸಿ ಮಾತನಾಡುವುದು ಸಾಮಾನ್ಯ ಪ್ರಕ್ರಿಯೆ. ಬಹು ಭಾಷಿಕ ಪರಿಸರಗಳಲ್ಲಿ ಭಾಷಿಕ ವ್ಯವಹಾರದಲ್ಲಿ ಕಂಡುಬರುವ ಮುಖ್ಯ ಭಾಷಿಕ ಪ್ರಕ್ರಿಯೆಗಳು ನುಡಿಬೆರಕೆ ಮತ್ತು ನುಡಿಜಿಗಿತಗಳು.

ಇಂಗ್ಲಿಷ್‌ನ **Code Mixing** ಗೆ ಸಂವಾದಿಯಾಗಿ ನುಡಿಬೆರಕೆ, ನುಡಿ ಮಿಶ್ರಣ, **Code Switching**ಗೆ ಸಂವಾದಿಯಾಗಿ ನುಡಿಜಿಗಿತ, ನುಡಿಪಲ್ಲಟ ಎಂಬ ಪದಗಳು ಕನ್ನಡ ಭಾಷಾಶಾಸ್ತ್ರದಲ್ಲಿ ಬಳಕೆಯಲ್ಲಿದೆ. ಒಂದು ಭಾಷೆಯ ವಾಕ್ಯವನ್ನು ಆಡುವಾಗ/ಬರೆಯುವಾಗ ಇನ್ನೊಂದು ಭಾಷೆಯ ಭಾಷಾಂಶಗಳನ್ನು ಬೆರೆಸುವುದು ನುಡಿಬೆರಕೆ. ಇಡೀ ವಾಕ್ಯದ ಹಿಂದಿನ ನಿಯಮ ಒಂದು ಭಾಷೆಯದಾಗಿದ್ದು, ವಾಕ್ಯಾಂಶಗಳು ಮಾತ್ರ ಕೆಲವು ಇನ್ನೊಂದು ಭಾಷೆಯಿಂದ ಬಂದು ಸೇರುತ್ತವೆ. ನುಡಿಜಿಗಿತದಲ್ಲಿ ಒಂದು ವಾಕ್ಯವನ್ನು ಒಂದು ನಿಯಮಾನುಸಾರ ರಚಿಸಿ ಮುಗಿಸಿ ಅನಂತರ ಹೊಸ ವಾಕ್ಯವನ್ನು ಇಡಿಯಾಗಿ ಇನ್ನೊಂದು ಭಾಷೆಯಲ್ಲಿ ರಚಿಸಿ ಬಳಸಲಾಗುತ್ತದೆ. ಕೊಡಗು ಗೌಡ ಜನಾಂಗದವರು ಕೌಟುಂಬಿಕ ವಲಯದಲ್ಲಿ ಗೌಡಕನ್ನಡವನ್ನು ಮಾತನಾಡುವರು. ವ್ಯವಹಾರಿಕ ವಲಯದಲ್ಲಿ ಗೌಡಕನ್ನಡದೊಂದಿಗೆ ಹೆಚ್ಚಾಗಿ ಕೊಡವ ಭಾಷೆಯನ್ನು ಬಳಸುವರು. ಇಲ್ಲಿನ ಕೆಲವು ಪ್ರದೇಶಗಳಲ್ಲಿ ಇದು ಭಿನ್ನವಾಗಿದೆ. ಮಡಿಕೇರಿ ತಾಲ್ಲೂಕಿನ ಕೆಲವು ಭಾಗಗಳಲ್ಲಿ ವ್ಯವಹಾರಿಕ ವಲಯಗಳಲ್ಲಿ ಗೌಡಕನ್ನಡವನ್ನೇ ಬಳಸುತ್ತಾರೆ. ಅಂದರೆ, ಆ ಭಾಗಗಳಲ್ಲಿ ಇತರ ಭಾಷಿಕರು ಮನೆಯಿಂದ ಹೊರಭಾಗದಲ್ಲಿ ಗೌಡ ಜನರೊಂದಿಗೆ 'ಗೌಡಕನ್ನಡ'ವನ್ನೇ ಮಾತನಾಡುತ್ತಾರೆ. ಇದು ಮಡಿಕೇರಿ ತಾಲ್ಲೂಕಿನ ಕರಿಕೆ, ಭಾಗಮಂಡಲ, ಪೆರಾಜೆ, ಸಂಪಾಜೆ ಇನ್ನೂ ಮುಂತಾದೆಡೆಗಳಲ್ಲಿ ಕಂಡುಬಂದಿದೆ. ವೀರರಾಜಪೇಟೆ, ಮಡಿಕೇರಿ, ಗೋಣಿಕೊಪ್ಪ, ಬಿರುನಾಣಿ, ಬಾಳೆಲೆ ಮುಂತಾದೆಡೆ ಕನ್ನಡ ಮತ್ತು ಕೊಡವ ಭಾಷೆ ಹೆಚ್ಚಾಗಿ ವ್ಯವಹಾರಿಕ ಭಾಷೆಯಾಗಿ ಬಳಕೆಯಲ್ಲಿರುವುದು ಕಂಡುಬಂದಿದೆ. ಅಲ್ಲದೆ, ಇಲ್ಲಿನ ಜನರು ಸಾಮೂಹಿಕ ಸಮಾರಂಭಗಳು, ಆಚರಣೆಗಳು ಇತ್ಯಾದಿ ಕಡೆಗಳಲ್ಲಿ ಇತರ ಭಾಷಿಕರೊಂದಿಗೆ ಗುಂಪುಗೂಡಿ ಸಂಭಾಷಿಸುವ ಸಂದರ್ಭದಲ್ಲಿ ಹಾಗೂ ತಮ್ಮನ್ನು ಇತರರೊಡನೆ ಗುರುತಿಸುಕೊಳ್ಳುವಲ್ಲಿ ಒಂದಿಲ್ಲೊಂದು ರೀತಿಯಲ್ಲಿ ನುಡಿಬೆರಕೆ, ನುಡಿಜಿಗಿತಕ್ಕೆ ಅವಕಾಶವಾಗಿರುವ ಸಂದರ್ಭಗಳನ್ನು ಸಾಕಷ್ಟು ಇಲ್ಲಿ ಕಾಣಬಹುದು. ಬಹಳಷ್ಟು ಸಂದರ್ಭಗಳಲ್ಲಿ ತಮಗೆ ತಿಳಿದಿರುವ ಮತ್ತೊಂದು ಭಾಷೆಯ ಭಾಷಾಂಶಗಳನ್ನು ಬಳಸಿ ಮಾತನಾಡುವುದನ್ನು ಕಾಣಬಹುದು. "ಕೆಲವರಿಗಂತೂ ಇಂಗ್ಲೀಷ್ ವ್ಯಾಮೋಹ ಎಷ್ಟು ಎಂದರೆ ಆ ಭಾಷೆಯನ್ನು ಮಾತನಾಡಲು

ಬಾರದಿದ್ದರೂ ಅದರ ಪದಗಳನ್ನಾದರೂ ಮಾತಿನ ನಡುವೆ ಬಳಸಬೇಕು. ಇಲ್ಲವಾದಲ್ಲಿ ಅವರ ಮಾತು ಪೂರ್ಣವಾಗಿಲ್ಲ ಎನ್ನುವ ಭ್ರಮೆ ಅವರಿಗೆ. ಹೀಗಾಗಿ ಮಾತು ಮಾತಿಗೂ ಇಂಗ್ಲೀಷ್ ಬಳಸುವರು Time ಎಷ್ಟು? Marketಗೆ ಹೋಗಿದ್ದೀರಾ? ಆ Film ನೋಡಿದ್ದೀರಾ? ಇತ್ಯಾದಿ. ಇದಕ್ಕೆ ಕೊಡಗಿನ ಗೌಡ ಜನಾಂಗದವರು ಹೊರತಾಗಿಲ್ಲ.

ಉದಾ: ಬನ್ನಿ ಬನ್ನಿ ಕುದ್ದ್‌ಕಣಿ ಪ್ಲೀಸ್, ಆಗಳೆಂದೇ ನಿಮ್ಮನ್ನ ವೇಯ್ಟ್‌ಮಾಡ್ತಾ ಒಳೊ.(ಬನ್ನಿ ಬನ್ನಿ ಕುಳಿತುಕೊಳ್ಳಿ ಪ್ಲೀಸ್, ಆಗಿನಿಂದಲೂ ನಿಮ್ಮನ್ನೂ ವೇಯ್ಟ್ ಮಾಡುತ್ತಾ ಇದ್ದಾರೆ).

ಮನೆಲಿ ಗೆಸ್ಟ್ ಒಳೊ, ಡಿನ್ನರ್‌ಗೆ ಗದ್ದಳ ಮಾಡೋಕು.

(ಮನೆಯಲ್ಲಿ ಗೆಸ್ಟ್ ಇದ್ದಾರೆ, ಡಿನ್ನರ್‌ಗೆ ವಿಶೇಷ ಅಡಿಗೆ ಮಾಡಬೇಕು).

ಬಸ್ಸ್ ಮಿಸ್ ಆಬುಟ್ಟತ್, ಅರ್ಜೆಂಟ್ ಹೋಗಿ ಎತ್ತೋಕು.

(ಬಸ್ಸು ಮಿಸ್ ಆಗಿಬಿಟ್ಟಿತು, ಅರ್ಜೆಂಟ್ ಹೋಗಿ ತಲುಪಬೇಕು) ಇತ್ಯಾದಿ.

ನಾವು ಪೋಯಿ, ಬಾರಿ ಬಾರಿ.

(ನಾವು ಹೋಗೋಣ, ಬನ್ನಿ ಬನ್ನಿ)

ಇಲ್ಲೆ ಆಲೆಪ್ಪ, ಅದ್‌ಕಯ್ಯ.

(ಇಲ್ಲ ಆಗುವುದಿಲ್ಲ, ಅದು ಆಗದು).

ಇಲ್ಲಿರುವ ವಾಕ್ಯಗಳಲ್ಲಿ ಒಂದೇ ವಾಕ್ಯದಲ್ಲಿ ಕೊಡವ ಮತ್ತು ಗೌಡ ಕನ್ನಡ ಎರಡೂ ಭಾಷೆಯ ಬಳಕೆಯಾಗಿದೆ. ಎರಡೂ ಭಾಷೆಯನ್ನು ತಿಳಿದ ಗೌಡ ವ್ಯಕ್ತಿಯು, ತಾನು ಕೊಡವ ಮತ್ತು ಗೌಡ ವ್ಯಕ್ತಿಗಳೊಂದಿಗೆ ಹೇಳಿದ ಮಾತಾಗಿದೆ. ಇಲ್ಲಿ 'ನಾವು ಪೋಯಿ', 'ಇಲ್ಲೆ ಆಲೆಪ್ಪ' ಎಂಬುದು ಗೌಡಕನ್ನಡದಲ್ಲಿದೆ. 'ಬಾರಿ ಬಾರಿ', 'ಅದ್ ಕಯ್ಯ' ಎಂಬುದು ಕೊಡವ ಭಾಷೆಯಲ್ಲಿದೆ. ಇದು ಕೊಡಗಿನ ಸಾಮಾಜಿಕ ಪರಿಸರದಲ್ಲಿ ಕಂಡುಬಂದಿರುವ ನುಡಿಜಿಗಿತಗಳು. ಸಾಮಾನ್ಯವಾಗಿ ಕೊಡಗಿನ ಪರಿಸರದಲ್ಲಿ ಇಲ್ಲಿನ ಕೊಡವ ಸಮುದಾಯ ಮತ್ತು ಗೌಡ ಸಮುದಾಯದ ನಡುವೆ ಯಾವುದೇ ಅಧಿಕಾರದ ಅಥವಾ ಉಚ್ಚ-ನೀಚ ಎಂಬ ತಾರತಮ್ಯಗಳಿಲ್ಲದಿರುವುದು ಕಂಡುಬಂದಿದೆ. ಇಲ್ಲಿ ಭಾಷೆಗಳ ನಡುವೆ ಮೇಲು-ಕೀಳು ಎಂಬ ಭಾವನೆಗಳಿಲ್ಲ. ಎಲ್ಲಾ ಸ್ಥಳಗಳಲ್ಲೂ, ಎಲ್ಲಾ ಸಂದರ್ಭಗಳಲ್ಲೂ ಎರಡೂ ಭಾಷೆಗಳನ್ನು ಬಳಸುವ ಅವಕಾಶವಿದೆ. ಅಂದರೆ, ಇಲ್ಲಿ ಸಮಾಂತರ ದ್ವಿಭಾಷಿಕ ಸನ್ನಿವೇಶ ಕಂಡುಬರುತ್ತದೆ. ಭಾಷಾ ಸಂಪರ್ಕದಿಂದಾಗಿ ಮತ್ತು ಸಾಮಾಜಿಕ ಸಂದರ್ಭಗಳಿಂದಾಗಿ ಗೌಡ ಕನ್ನಡ ಭಾಷಿಕರು ಕೊಡವ ಭಾಷೆಯನ್ನು ಕಲಿತಿರುವುದು, ಹಾಗೆಯೇ ಕೊಡವ ಭಾಷಿಕರು ಗೌಡಕನ್ನಡ ಭಾಷೆಯನ್ನು ಕಲಿತಿರುವುದು ಕೊಡಗಿನಲ್ಲಿ ಕಾಣಿಸಿಗುತ್ತದೆ.

೧. ಒಳ್ಳ ಲಾಯಕ ಉಟ್ಟು, ಯಡ್‌ತಮುಡಿ ಚಾಯಿ ಕಾಂಬ.

(ತುಂಬಾ ಚೆನ್ನಾಗಿದೆ, ತೆಗೆದುಕೊ ಹುಡುಗಿ ಚೆನ್ನಾಗಿ ಕಾಣುತ್ತದೆ).

೨. ಎನ್ನ ಕುಞ ಚಾಯಿಲ್ ಉಳ್ಳಿಯಾ? ಎತ್ತ ಹೊರ್ಪದ್? ಅಪ್ಪ ಉಟ್ಟು? (ಏನು ಮಗು ಚೆನ್ನಾಗಿದ್ದೀಯಾ? ಯಾವ ಕಡೆ ಹೊರಟಿದ್ದು? ಅಪ್ಪ ಇದ್ದಾರಾ?) ಇತ್ಯಾದಿ.

ಮೇಲಿನ ವಾಕ್ಯಗಳಲ್ಲಿ ಮೊದಲನೆಯ ವಾಕ್ಯ ಕೊಡವ ಮಹಿಳೆ ಗೌಡ ಮಹಿಳೆಗೆ ಹೇಳಿದ್ದಾಗಿದೆ. ಇಲ್ಲಿ “ಒಳ್ಳ ಲಾಯಕ ಉಟ್ಟು” ಎಂಬುದು ಗೌಡಕನ್ನಡದ ವಾಕ್ಯ ಹಾಗೂ “ಯಡ್‌ತ ಮುಡಿ ಚಾಯಿ ಕಾಂಬ” ಎಂಬುದು ಕೊಡವ ವಾಕ್ಯವಾಗಿದೆ.

ಎರಡನೆಯ ವಾಕ್ಯದಲ್ಲಿ ಕೊಡವ ವ್ಯಕ್ತಿ ಗೌಡ ಮಗುವಿಗೆ ಹೇಳಿದ ವಾಕ್ಯವಾಗಿದೆ. ಇಲ್ಲಿ “ಎನ್ನ ಕುಞ ಚಾಯಿಲ್ ಉಳ್ಳಿಯಾ” ಎಂಬುದು ಕೊಡವ ವಾಕ್ಯವಾಗಿದೆ. ಹಾಗೂ “ಎತ್ತ ಹೊರ್ಪದ್? ಅಪ್ಪ ಉಟ್ಟಾ?” ಎಂಬುದು ಗೌಡಕನ್ನಡದ ವಾಕ್ಯವಾಗಿದೆ. ಇದೇ ಅಲ್ಲದೆ, ಸ್ನೇಹಿತರೂ ಕೂಡ ಮಾತನಾಡುವಾಗ ಈ ಮೇಲಿನಂತೆ ನುಡಿ ಜಿಗಿತಗಳು ಉಂಟಾಗುವುದನ್ನು ಕಾಣಬಹುದು.

ಕೊಡಗಿನ ಪೇಟೆಗಳಲ್ಲಿ, ಅಂಗಡಿಗಳಲ್ಲಿ, ಮಾರುಕಟ್ಟೆಗಳಲ್ಲಿ ಇವೇ ಮುಂತಾದ ಸ್ಥಳಗಳಲ್ಲಿ ಹೆಚ್ಚಾಗಿ ಬಹುಭಾಷಿಕ ಪರಿಸರ ಕಂಡುಬರುತ್ತದೆ. ಇಲ್ಲಿ ಮಲಯಾಳಂ, ಕೊಡವ, ಗೌಡಕನ್ನಡ, ತುಳು ಮತ್ತು ಶಿಷ್ಟಕನ್ನಡ ಭಾಷೆಗಳನ್ನು ಗೌಡ ಜನಾಂಗದವರು ಮಾತನಾಡುತ್ತಾರೆ. ಇಲ್ಲಿ ಇವರು ಕೇವಲ ತಮ್ಮ ಭಾಷೆಯಲ್ಲಿ ಮಾತ್ರವಲ್ಲದೆ ಇತರ ಭಾಷೆಗಳಲ್ಲೂ ವ್ಯವಹರಿಸುವುದನ್ನು ಕಾಣುತ್ತೇವೆ. ಕೊಡಗಿನಲ್ಲಿರುವ ಗೌಡ ಜನಾಂಗದವರು ಕೊಡವ, ತುಳು ಮತ್ತು ಮಲಯಾಳಂ ಭಾಷೆಗಳಲ್ಲಿ ವ್ಯವಹರಿಸಬಲ್ಲರು. ಇದನ್ನು ಗಮನಿಸಿದಾಗ ಗೌಡಕನ್ನಡದ ಮೇಲೆ ಈ ಭಾಷೆಗಳ ಪ್ರಭಾವವನ್ನು ಕಾಣಬಹುದು. ಗೌಡಕನ್ನಡದಲ್ಲಿ ಕೊಡವ, ತುಳು, ಮಲಯಾಳಂ ಭಾಷೆಯ ಕೆಲವು ಪದಗಳು ಅದೇ ಅರ್ಥದಲ್ಲಿ ಬಳಕೆಯಾಗುತ್ತದೆ. ಕೊಡಗಿನಾದ್ಯಂತ ನೆಲೆಸಿರುವ, ಮಡಿಕೇರಿ ತಾಲ್ಲೂಕಿನಲ್ಲಿ ಅತ್ಯಂತ ಸಾಂದ್ರವಾಗಿರುವ ಗೌಡ ಸಮುದಾಯದ ಜನರ ಮಾತೃಭಾಷೆಯಾದ ಗೌಡಕನ್ನಡದ ವ್ಯಾಪ್ತಿ ಕೊಡಗಿನಾಚೆಗೂ ಚಾಚಿಕೊಂಡಿದೆ.

ಕೊಡಗಿಗೆ ಹೊಂದಿಕೊಂಡಿರುವ ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲ್ಲೂಕಿನಲ್ಲಿ ಗೌಡಕನ್ನಡ ಭಾಷೆಯದ್ದೇ ಪ್ರಾಧಾನ್ಯತೆ. ಗಡಿ ಪ್ರದೇಶವಾದ ಕೇರಳ ರಾಜ್ಯದ ಕಾಸರಗೋಡು ಜಿಲ್ಲೆಯ ಬಂದಡ್ಕ ಹಾಗೂ ಕಲ್ಲಪಳ್ಳಿಗಳಲ್ಲಿಯೂ ಗೌಡಕನ್ನಡಿಗರಿದ್ದಾರೆ. ಸುಳ್ಯ ಪರಿಸರದಲ್ಲಿ ಈ ಭಾಷೆ ಗಡುಸಾದ, ಅಧಿಕಾರಯುಕ್ತವಾದ ಅಭಿವ್ಯಕ್ತಿಯನ್ನು ಹೊಂದಿದ್ದರೆ, ಕೇರಳದ ಬಂದಡ್ಕ ಮತ್ತು ಕಲ್ಲಪಳ್ಳಿಗಳಲ್ಲಿನ ಗೌಡಕನ್ನಡವು ತನ್ನದೇ ಆದ ವಿಶಿಷ್ಟ ಸೊಗಡಿನಿಂದ ಕೂಡಿದೆ. ಮಡಿಕೇರಿ ಸುತ್ತಮುತ್ತಲಿನ ಗೌಡ ಕನ್ನಡದ ಮೇಲೆ ಕೊಡವ ಭಾಷೆಯ ಪ್ರಭಾವ ದಟ್ಟವಾಗಿದ್ದರೆ, ಕಲ್ಲಪಳ್ಳಿಯ ಭಾಷೆಯ ಮೇಲೆ ಮಲೆಯಾಳಂ ಭಾಷೆಯ ಸಂಬಂಧ ನಿಚ್ಚಳವಾಗಿದೆ.

ಈ ಭಾಷೆಯ ಜನರು ಮಡಿಕೇರಿ ತಾಲ್ಲೂಕಿನ ಒಟ್ಟು ಜನಸಂಖ್ಯೆಯ ಪ್ರಮುಖ ಭಾಗಗಳಾಗಿರುವ ಕಾರಣದಿಂದ ಈ ಪರಿಸರದ ಎಲ್ಲಾ ಸಮುದಾಯದ ಜನರಿಗೂ ಈ ಭಾಷೆ ಚೆನ್ನಾಗಿ ತಿಳಿದಿದೆ;

ಮಾತ್ರವಲ್ಲ ಹಲವು ಕಡೆಗಳಲ್ಲಿ ವ್ಯಾವಹಾರಿಕ ಭಾಷೆಯಾಗಿಯೂ ಬಳಸಲ್ಪಡುತ್ತದೆ. ಸಾಂದ್ರ ಜನಸಂಖ್ಯೆಯೊಂದಿಗೆ ಆರ್ಥಿಕ ಸಶಕ್ತತೆಯೂ ಜೊತೆ ಸೇರಿ ಈ ಭಾಷೆ ಕೊಡಗು ಜಿಲ್ಲೆಯಲ್ಲಿ ಒಂದು ಮುಖ್ಯ ಭಾಷೆಯಾಗಿ ರೂಪುಗೊಂಡಿದೆ. ಕೊಡಗು ಜಿಲ್ಲೆಯಲ್ಲಿ ದೊಡ್ಡ ಸಂಖ್ಯೆಯಲ್ಲಿರುವ ಗೌಡರು ಕೊಡವ ಸಂಸ್ಕೃತಿಯಲ್ಲಿ ಸಂಪೂರ್ಣವಾಗಿ ಬೆರೆತು ಹಬ್ಬ ಜಾತ್ರೆಗಳಲ್ಲಿ ಒಂದಾಗಿ ಭಾಗವಹಿಸುತ್ತಿದ್ದಾರೆ. ಜನಾಂಗ ಜಾತಿ ವರ್ಗಗಳ ನಡುವೆ, ಭಾಷೆ, ಜಾತಿ ಸಂಸ್ಕೃತಿಗಳ ತಳಹದಿಯ ಮೇಲೆ ವೈಷಮ್ಯ, ಕಲಹಗಳು ಇಲ್ಲಿ ನಡೆದಿರುವುದು ಕಂಡುಬರುವುದಿಲ್ಲ. ಕೊಡಗಿನಲ್ಲಿ ಗೌಡಕನ್ನಡದ ಮೇಲೆ ಹೆಚ್ಚಾಗಿ ಕೊಡವ ಭಾಷೆಯ ಪ್ರಭಾವ ಕಂಡುಬರುತ್ತದೆ. ಕೊಡವ ಭಾಷೆಯಲ್ಲಿರುವ ಅನೇಕ ಪದಗಳು ಕೊಡಗಿನ ಗೌಡಕನ್ನಡ ಭಾಷೆಯಲ್ಲಿದೆ.

ಎಲ್ಲಿ ನುಡಿಬೆರಕೆ ಕಂಡು ಬರುತ್ತಿದೆ:

ಕೊಡಗಿನಲ್ಲಿ ಗೌಡ ಕನ್ನಡಿಗರು ಮಡಿಕೇರಿ ತಾಲ್ಲೂಕಿನ ಒಟ್ಟು ಜನಸಂಖ್ಯೆಯ ಪ್ರಮುಖ ಭಾಗವಾಗಿರುವುದರಿಂದ ಈ ಪರಿಸರದ ಎಲ್ಲ ಸಮುದಾಯದ ಜನರಿಗೂ ಈ ಭಾಷೆ ಚೆನ್ನಾಗಿ ತಿಳಿದಿದೆ; ಮಾತ್ರವಲ್ಲ ಹಲವು ಕಡೆಗಳಲ್ಲಿ ವ್ಯಾವಹಾರಿಕ ಭಾಷೆಯಾಗಿಯೂ ಬಳಸಲ್ಪಡುತ್ತದೆ.

ಕೊಡಗು ಜಿಲ್ಲೆಯ ಸಾಮಾಜಿಕ ಪರಿಸರದಲ್ಲಿರುವ ಗ್ರಾಮಗಳಲ್ಲಿ ಗೌಡರು ಮತ್ತು ಕೊಡವರು ಒಟ್ಟಾಗಿ ಸಹಬಾಳ್ವೆ ನಡೆಸುವರು. ಇದರಿಂದಾಗಿ ಇವರು ಕೃಷಿ ಸಂಬಂಧಿತ ಕೆಲಸಗಳಲ್ಲಿ ಒಟ್ಟಾಗಿ ಕೆಲಸಗಳನ್ನು ಮಾಡುತ್ತಾರೆ. ಈ ಸಂದರ್ಭಗಳಲ್ಲಿ ನುಡಿಬೆರಕೆ, ನುಡಿಜಿಗಿತಗಳಾಗುತ್ತವೆ.

ಗ್ರಾಮಗಳಲ್ಲಿ ದೇವಸ್ಥಾನಗಳಲ್ಲಿ ಪೂಜೆ, ಹಬ್ಬ ಇತ್ಯಾದಿ ನಡೆಯುವಾಗ ಎಲ್ಲರೂ ಸೇರುವಾಗ ಇಲ್ಲಿ ನುಡಿಬೆರಕೆ, ನುಡಿಜಿಗಿತಗಳಾಗುತ್ತವೆ. ಇಲ್ಲಿ ಕೊಡವ ಮತ್ತು ಗೌಡ ಕನ್ನಡ ಭಾಷೆ ಮಾತ್ರವಲ್ಲದೆ ಮಲೆಯಾಳಂ ಮತ್ತು ತುಳು ಭಾಷೆಯ ಪ್ರಯೋಗವೂ ಕೆಲವೆಡೆ ಕಂಡು ಬರುತ್ತದೆ. ಕೊಡಗಿನ ಕೆಲವು ದೇವಾಲಯಗಳಲ್ಲಿ ದೇವರು ದರ್ಶನ ನೀಡುವುದು ವಾಡಿಕೆಯಲ್ಲಿದೆ. ಇಲ್ಲಿ ಕೊಡವ ಅಥವಾ ಗೌಡ ವ್ಯಕ್ತಿಯ ಮೈಮೇಲೆ ದೇವರು ಬರುತ್ತದೆ. ನಂತರ ಅವರು ಮಲಯಾಳಂ ಭಾಷೆಯಲ್ಲಿ ಭಕ್ತರೊಂದಿಗೆ ಮಾತನಾಡುತ್ತಾರೆ. ಈ ದೇವರ ನೆಲೆಯು ಕೇರಳವಾಗಿದ್ದು, ಕೆರಳದಿಂದ ಬಂದು ಕೊಡಗಿನಲ್ಲಿ ಈ ದೇವತೆಗಳು ನೆಲೆ ನಿಂತಿರುವರೆಂದು ತಿಳಿದುಬಂದಿದೆ.

ಕೊಡಗಿನ ಪ್ರಮುಖ ಆಚರಣೆಯಾದ ಹರಿಸೇವೆ, ತಿರುಪತಿ ವೆಂಕಟರಮಣ ದೇವರನ್ನು ಆರಾಧಿಸುವ ಆಚರಣೆಯಾಗಿದೆ. ಇದರೊಂದಿಗೆ ಕುಟುಂಬದಲ್ಲಿ ಭೂತದ ಕೋಲಗಳನ್ನು ಮಾಡಿಸುತ್ತಾರೆ. ಆಗ ಈ ಕೋಲಗಳು ತುಳು ಭಾಷೆಯಲ್ಲಿ ಮಾತನಾಡುತ್ತದೆ. ಭಕ್ತರು ಕೂಡ ಅದರೊಂದಿಗೆ ತುಳುವಿನಲ್ಲಿ ಮಾತನಾಡುತ್ತಾರೆ. ಈ ಭೂತದ ಮೂಲ ದಕ್ಷಿಣ ಕನ್ನಡ ಜಿಲ್ಲೆ ಎಂದು ತಿಳಿದು ಬಂದಿದೆ.

ಸಮಾರಂಭಗಳಲ್ಲಿ ಎಲ್ಲರೂ ಸೇರುವ ಸಂದರ್ಭಗಳಲ್ಲಿ ನುಡಿಬೆರಕೆ, ನುಡಿಜಿಗಿತಗಳು ಕಂಡು ಬರುತ್ತದೆ. ಮದುವೆ ಸಮಾರಂಭಗಳಿಗೆ ಎಲ್ಲ ಭಾಷಿಕರನ್ನೂ ಆಹ್ವಾನಿಸುವ ಸಾದ್ಯತೆಗಳಿರುವಾಗ ಅಲ್ಲಿ ನುಡಿಬೆರಕೆ, ನುಡಿಜಿಗಿತಗಳು ಕಂಡು ಬರುತ್ತದೆ. ಶೈಕ್ಷಣಿಕವಾಗಿ ಮುಂದಿರುವವರು ಮಾತ್ರವಲ್ಲದೆ ಇತರರ ಮಾತಿನಲ್ಲೂ ಇಂಗ್ಲಿಶ್ ಸಾಮಾನ್ಯವಾಗಿರುವುದು ಕಂಡು ಬಂದಿದೆ.

ಪರಸ್ಪರ ಬೇರೆ ಭಾಷಿಕರೊಂದಿಗೆ ಜಗಳ, ಕಲಹಗಳು ನಡೆದಾಗ ಬೈಗುಳಗಳು ಎರಡೂ ಭಾಷೆಗಳಲ್ಲಿ ಕೇಳಿ ಬಂದಿದೆ. ಜೊತೆಗೆ ಇಂಗ್ಲಿಶ್ ಇತ್ಯಾದಿ ಭಾಷೆಗಳಲ್ಲೂ ಇರುತ್ತದೆ.

ಗೌಡ ಕನ್ನಡವನ್ನು ಸಂಪೂರ್ಣವಾಗಿ ಬಿಟ್ಟು ಬೇರೆ ಭಾಷೆಯನ್ನು ಬಳಸುವ ಸಂದರ್ಭಗಳು:

ಕಛೇರಿಗಳಲ್ಲಿ ವ್ಯವಹರಿಸುವ ಸಂದರ್ಭಗಳಲ್ಲಿ ಕನ್ನಡವನ್ನು ಬಳಸುವರು. ಅಧಿಕಾರಿಗಳು ಕೊಡವರಾದರೆ ಕೊಡವ ಭಾಷೆಯಲ್ಲಿಯೇ ಮಾತನಾಡುವರು. ಮಲೆಯಾಳಿಯಾದರೆ ಭಾಷೆ ಗೊತ್ತಿದ್ದಲ್ಲಿ ಮಲಯಾಳಂ ಭಾಷೆಯಲ್ಲಿಯೇ ಮಾತನಾಡುತ್ತಾರೆ. ಕೊಡಗಿನಿಂದ ಬೇರೆ ಊರಿಗೆ ಹೋದಾಗ ಬೇರೆ ಭಾಷೆಯನ್ನು ಬಳಸುತ್ತಾರೆ.

ಗೌಡ ಕನ್ನಡ ಭಾಷೆಯನ್ನು ಮಾತನಾಡಲು ಬಾರದವರೊಂದಿಗೆ, ಅವರಿಗೆ ಬರುವ ಭಾಷೆಯಲ್ಲಿ ಅಥವಾ ಕನ್ನಡದಲ್ಲಿ ಮಾತನಾಡುತ್ತಾರೆ.

ಮಾರುಕಟ್ಟೆಗಳಲ್ಲಿ, ಸಾರ್ವಜನಿಕ ಸಭೆ ಸಮಾರಂಭಗಳಲ್ಲಿ, ಸಾರ್ವಜನಿಕ ಸ್ಥಳಗಳಾದ ಹೋಟೆಲ್ಲುಗಳಲ್ಲಿ, ಅಂಗಡಿಗಳಲ್ಲಿ ಗೌಡ ಕನ್ನಡವನ್ನು ಬಿಟ್ಟು ಬೇರೆ ಭಾಷೆಯನ್ನು ಇವರು ಬಳಸಿರುವುದು ಕಂಡು ಬಂದಿದೆ.

ವಿವಾಹಗಳ ವಿದಿವಿಧಾನಗಳಾದ ಶಾಸ್ತ್ರ ಕಾರ್ಯಗಳಲ್ಲಿ ಹಾಡುವ ಸೋಬಾನೆ ಹಾಡುಗಳು ಕನ್ನಡದಲ್ಲಿವೆ. ಹಲವು ದಶಕಗಳ ಹಿಂದೆ ಗೌಡ ಕನ್ನಡದಲ್ಲಿ ಹಾಡುತಿದ್ದರೆಂದು ತಿಳಿದು ಬಂದರೂ ಆ ಬಗ್ಗೆ ಯಾವುದೇ ಮಾಹಿತಿ ಇಲ್ಲ. ವಧುವನ್ನು ವರನಿಗೆ ಒಪ್ಪಿಸುವ ಸಂದರ್ಭದಲ್ಲಿಯೂ ಕನ್ನಡವನ್ನೇ ಬಳಸಲಾಗುತ್ತಿದೆ. ಇವರಲ್ಲಿ ಸಾವಿನ ಸಂದರ್ಭದಲ್ಲಿ ಸ್ಮಶಾನದಲ್ಲಿ 'ಒಪ್ಪ ಹೇಳುವುದು' ಎಂಬ ರಿವಾಜಿನಲ್ಲಿ ಕನ್ನಡವನ್ನು ಹೆಚ್ಚು ಬಳಸಲಾಗುತ್ತದೆ.

ಕೊಡಗಿನ ಗೌಡಕನ್ನಡ ಭಾಷೆಯ ಮೇಲೆ ಕೊಡವ ಭಾಷೆಯ ಪ್ರಭಾವ:

ಗೌಡಕನ್ನಡದ ಮೇಲೆ ರಾಜಕೀಯ, ಆರ್ಥಿಕ, ಸಾಮಾಜಿಕ ಮತ್ತು ಪ್ರಾದೇಶಿಕ ಕಾರಣಗಳಿಂದ ಕೊಡವ ಭಾಷೆಯು ಪ್ರಭಾವ ಬೀರಿರುವುದನ್ನು ಕಾಣುತ್ತೇವೆ. ಅವುಗಳನ್ನು ಈ ಕೆಳಗಿನಂತೆ ಚರ್ಚಿಸಲಾಗಿದೆ. ಇಲ್ಲಿ ಕೊಡವ ಭಾಷೆಯ ಪದಗಳು ಗೌಡ ಕನ್ನಡದಲ್ಲಿ ಅದೇ ಅರ್ಥದಲ್ಲಿ ಬಳಕೆಯಲ್ಲಿರುವುದನ್ನು ಕಾಣಬಹುದು.

ಶಿ.ಕ.	**ಕೊಡವ**	**ಗೌ.ಕ**
ದಪ್ಪ ಹೆಂಗಸು	ದೊಳ್ಳಿ	ದೊಳ್ಳಿ

ಕೊಡವ ಭಾಷೆಯ 'ದೊಳ್ಳಿ' ಎಂಬ ಪದವು ಕೊಡಗಿನ ಗೌಡಕನ್ನಡದಲ್ಲಿ 'ದೊಳ್ಳಿ' ಎಂದೇ ಬಳಕೆಯಲ್ಲಿದೆ. ದಕ್ಷಿಣ ಕನ್ನಡ ಜಿಲ್ಲೆಯ ಗೌಡಕನ್ನಡದಲ್ಲಿ ಶಿಷ್ಟಕನ್ನಡದ ರೂಪವಾದ 'ದಪ್ಪ ಹೆಂಗಸು' ಎಂದೇ ಬಳಕೆಯಲ್ಲಿದೆ. ಇದೇ ರೀತಿಯಲ್ಲಿ 'ದೊಳ್ಳ' ಎಂಬ ಪದವೂ 'ದಪ್ಪ ಗಂಡಸು ಎಂಬರ್ಥದಲ್ಲಿ ಬಳಕೆಯಲ್ಲಿದೆ. ಉದಾಹರಣೆ:

ಉದಾ: ಕೊಡವ : ಅವೊ ದೊಳ್ಳಿ.

ಗೌ.ಕ. : ಅದ್ ದೊಳ್ಳಿ.

ಶಿ.ಕ. : ಅವಳು ದಪ್ಪ ಹೆಂಗಸು.

ಶಿ.ಕ.	**ಕೊಡವ**	**ಗೌ.ಕ.**
ಹೊಸಸಂಬಂಧ	ತಂದ್	ತಂದ್

ಶಿಷ್ಟ ಕನ್ನಡದಲ್ಲಿರುವ ಹೊಸ ಸಂಬಂಧ ಎಂಬ ಪದವು ಕೊಡಗಿನ ಗೌಡಕನ್ನಡದಲ್ಲಿ 'ತಂದ್' ಎಂದಿದೆ. ಕೊಡವ ಭಾಷೆಯಲ್ಲಿಯೂ 'ತಂದ್' ಎಂಬ ರೂಪವೇ ಬಳಕೆಯಲ್ಲಿದೆ. ದಕ್ಷಿಣ ಕನ್ನಡ ಜಿಲ್ಲೆಯ ಗೌಡಕನ್ನಡದಲ್ಲಿ 'ಹೊಸನೆಂಟರು' ಎಂದಿದೆ.

ಉದಾ: ಕೊಡವ : ರಾಣಿ ಮೂಡಿಕ್ ತಂದ್ ಬಂತ್‌ಲೊ

ಗೌ.ಕ. : ರಾಣಿ ಗೂಡೆಗೆ 'ತಂದ್' ಬಂದುಟ್ಟು ಗಡ.

ಶಿ.ಕ. : ರಾಣಿ ಹುಡುಗಿಗೆ 'ಹೊಸ ಸಂಬಂಧ' ಬಂದಿದೆಯಂತೆ.

ಶಿ.ಕ.	**ಕೊಡವ**	**ಗೌ.ಕ.**
ಮೈಮೇಲೆ ಎಚ್ಚರವಿಲ್ಲದ	ಪೊಟ್ಟ	ಪೊಟ್ಟ

'ಮೈಮೇಲೆ ಪ್ರಜ್ಞೆಯಿಲ್ಲದ' ಅಥವಾ 'ಹೆಡ್ಡತನ' ದಿಂದ ಇರುವವರಿಗೆ ಕೊಡವ ಭಾಷೆಯಲ್ಲಿ 'ಪೊಟ್ಟ' ಪದವಿದೆ. ಕೊಡಗಿನ ಗೌಡಕನ್ನಡದಲ್ಲಿಯೂ 'ಪೊಟ್ಟ' ಪದವಿದೆ. ದಕ್ಷಿಣಕನ್ನಡ ಜಿಲ್ಲೆಯ ಗೌಡಕನ್ನಡದಲ್ಲಿ 'ಬೋದಾಳ' ಎಂಬ ಪದ ಬಳಕೆಯಲ್ಲಿದೆ.

ಉದಾ: ಕೊಡವ : ಅವೊ ಓರ್ ಪೊಟ್ಟ.

ಗೌ.ಕ. : ಅಂವ ಒಬ್ಬ ಪೊಟ್ಟ.

ಶಿ.ಕ. : ಅವನು ಒಬ್ಬ ಹೆಡ್ಡ.

ಶಿ.ಕ.	**ಕೊಡವ**	**ಗೌ.ಕ.**
ಬೆಳ್ಳಕ್ಕಿ	ಮೋಳೆ	ಮೋಳೆ

'ಬೆಳ್ಳಕ್ಕಿ'ಗೆ ಕೊಡವ ಮತ್ತು ಕೊಡಗಿನ ಗೌಡಕನ್ನಡ ಭಾಷೆಯಲ್ಲಿ 'ಮೋಳೆ' ಎಂದು ಬಳಸುವರು. ದಕ್ಷಿಣ ಕನ್ನಡ ಜಿಲ್ಲೆಯ ಗೌಡಕನ್ನಡದಲ್ಲಿ 'ಕೊಚ್ಚ' ಎಂಬ ಪದವಿದೆ.

ಉದಾ: ಕೊಡವ: ಬೇಲ್‌ಲ್ ಎಚ್ಚಕ್ ಮೋಳೆ!

ಗೌ.ಕ.: ಗದ್ದೆಲಿ ಎಸ್ಟ್ ಮೋಳೆಗ!

ಶಿ.ಕ. : ಗದ್ದೆಯಲ್ಲಿ ಎಷ್ಟೊಂದು ಬೆಳ್ಳಕ್ಕಿಗಳಿವೆ!

ಶಿ.ಕ.	**ಕೊಡವ**	**ಗೌ.ಕ.**
ಸಿಂಬಳ	ಮೂಕ್‌ಚಾರ್	ಮೂಕ್‌ಚಾರ್

'ಸಿಂಬಳ' ಎಂಬ ಪದಕ್ಕೆ ದಕ್ಷಿಣಕನ್ನಡ ಜಿಲ್ಲೆಯ ಗೌಡಕನ್ನಡದಲ್ಲಿ 'ನೆಗಡಿ' ಎಂಬ ಪದವಿದೆ. ಕೊಡಗಿನಲ್ಲಿ 'ಕೊಡವ' ಮತ್ತು ಗೌಡಕನ್ನಡದಲ್ಲಿ 'ಮೂಕ್‌ಚಾರ್' ಎಂಬ ಒಂದೇ ಪದ ಬಳಕೆಯಲ್ಲಿದೆ.

ಉದಾ: ಕೊಡವ : ಕುಞೆರ ಮೂಕ್‌ಲ್ ಚಾರ್‌ಉಂಡು.

ಗೌ.ಕ. : ಕೂಸ್‌ಇನ ಮೂಕ್‌ಲಿ ಚಾರ್‌ಉಟ್ಟು.

ಶಿ.ಕ. : ಮಗುವಿನ ಮೂಗಿನಲ್ಲಿ ಸಿಂಬಳವಿದೆ.

ಶಿ.ಕ.	**ಕೊಡವ**	**ಗೌ.ಕ.**
ಉಗ್ರಾಣ	ಪತ್ತಾಯ	ಪತ್ತಾಯ

ಭತ್ತ ತುಂಬುವ ಉಗ್ರಾಣ. ಇದಕ್ಕೆ ಗೌಡ ಕನ್ನಡದಲ್ಲಿ 'ಕಡಿಕೆ' ಎಂಬ ಪದವಿದೆ. ಆದರೆ ಕೊಡಗಿನ ಗೌಡಕನ್ನಡದಲ್ಲಿ 'ಕಡಿಕೆ'ಯೊಂದಿಗೆ 'ಪತ್ತಾಯ' (ಕೊಡವಪದ) ಎಂಬ ಪದವೂ ಬಳಕೆಯಲ್ಲಿದೆ. ಇಲ್ಲಿ ಕಡಿಕೆಯು ಬಿದಿರಿನಿಂದ ನೇಯ್ದಿರುವುದಾಗಿದೆ. 'ಪತ್ತಾಯ' ಎಂದರೆ ಗೋಡೆಯನ್ನು ಕಟ್ಟಿ ಭತ್ತವನ್ನು ಸಂಗ್ರಹಿಸಲಾಗುತ್ತದೆ.

ಉದಾ: ಕೊಡವ : ಪತ್ತಾಯಂಜ ನೆಲ್ಲ್ ಎಡ್ಕೊಂಡು.

ಗೌ.ಕ. : ಪತ್ತಾಯಂದ ಬತ್ತ ತೆಗಿಯೊಕು.

ಶಿ.ಕ. : ಉಗ್ರಾಣದಿಂದ ಭತ್ತವನ್ನು ತೆಗೆಯಬೇಕು.

ಶಿ.ಕ.	ಕೊಡವ	ಗೌ.ಕ.
ಕುಟುಂಬದ ಯಜಮಾನ	ಪಟ್ಟೆದಾರ	ಪಟ್ಟೆದಾರ

ಗೌಡ ಜನಾಂಗದವರಲ್ಲಿ ಪ್ರತಿ ಕುಟುಂಬಕ್ಕೂ ಒಬ್ಬ ಹಿರಿಯ ಯಜಮಾನ ಇರುವರು. ಕೊಡವ ಕುಟುಂಬಕ್ಕೂ ಯಜಮಾನನಿರುವರು. ದಕ್ಷಿಣಕನ್ನಡ ಜಿಲ್ಲೆಯ ಗೌಡರು 'ಕುಟುಂಬದ ಯಜಮಾನ' ಎಂದು ಗುರುತಿಸುವರು ಆದರೆ, ಕೊಡಗಿನ ಗೌಡರಲ್ಲಿ ಕೊಡವ ಭಾಷೆಯ 'ಪಟ್ಟೆದಾರ' ಎಂಬ ಪದ ಬಳಕೆಯಲ್ಲಿದೆ.

ಉದಾ: ಕೊಡವ : ಐಂಗಡ ಪಟ್ಟೆದಾರ ಚತ್ತ್‌ಪೋಚಿ.

ಗೌ.ಕ. : ಅವರ ಪಟ್ಟೆದಾರ ಸತ್ತೋತ್.

ಶಿ.ಕ. : ಅವರ ಕುಟುಂಬದ ಯಜಮಾನ ಸತ್ತು ಹೋದರು.

ಶಿ.ಕ.	ಕೊಡವ	ಗೌ.ಕ.
ಖಡ್ಗ	ಬಾಳ್‌ಕತ್ತಿ	ಬಾಳ್‌ಕತ್ತಿ

ದಕ್ಷಿಣಕನ್ನಡ ಜಿಲ್ಲೆಯ ಗೌಡರು 'ಖಡ್ಗ'ವನ್ನು 'ತಳವಾರ್' ಎಂದು ಗುರುತಿಸುವರು. ಕೊಡಗಿನಲ್ಲಿ ಗೌಡರು ಕೊಡವ ಭಾಷೆಯಲ್ಲಿರುವ 'ಬಾಳ್‌ಕತ್ತಿ' ಎಂಬ ಪದವನ್ನು ಅದೇ ಅರ್ಥದಲ್ಲಿ ಬಳಸುವರು.

ಉದಾ: ಕೊಡವ : ನಂಗಡಲ್ಲಿ 'ಬಾಳ್‌ಕತ್ತಿ' ಉಂಡು.

ಗೌ.ಕ. : ನಮ್ಮಲ್ಲಿ 'ಬಾಳ್‌ಕತ್ತಿ' ಉಟ್ಟು.

ಶಿ.ಕ. : ನಮ್ಮ ಮನೆಯಲ್ಲಿ ಖಡ್ಗ ಇದೆ.

ಶಿ.ಕ.	ಕೊಡವ	ಗೌ.ಕ.
ಪುಕ್ಕಟೆ	ಬಣ್ಣೆ	ಬಣ್ಣೆ

'ಪುಕ್ಕಟೆ' ಎಂಬುದಕ್ಕೆ ದಕ್ಷಿಣಕನ್ನಡ ಜಿಲ್ಲೆಯ ಗೌಡಕನ್ನಡದಲ್ಲಿ ಧರ್ಮಕೆ' ಎಂಬ ಪದವನ್ನು ಬಳಸುವರು. ಕೊಡಗಿನಲ್ಲಿ ಕೊಡವ ಭಾಷೆಯ ಪದವಾದ 'ಬಣ್ಣೆ' ಎಂಬುದನ್ನೇ ಗೌಡಕನ್ನಡದಲ್ಲಿ ಬಳಸುತ್ತಾರೆ.

ಉದಾ: ಕೊಡವ : ಅವೊ ಬಣ್ಣೆ ತಿಂಬೊಕ್ ಬಪ್ಪೊ.

ಗೌ.ಕ. : ಅವ ಬಣ್ಣೆ ತಿಂಬಕೆ ಬಾದು.

ಶಿ.ಕ. : ಅವನು ಪುಕ್ಕಟೆ ತಿನ್ನಲು ಬರುವುದು.

ಶಿ.ಕ. ಕೊಡವ ಗೌ.ಕ.

ದರ್ಶನ ತಿರೋಳ ತಿರೋಳ

ದೇವರು ಮೈಮೇಲೆ ಬರುವುದು ಇದಕ್ಕೆ ಶಿಷ್ಟಕನ್ನಡದ 'ದರ್ಶನ' ಪದವು ದಕ್ಷಿಣಕನ್ನಡ ಜಿಲ್ಲೆಯ ಗೌಡರಲ್ಲಿಯೂ ಇದೆ. ಕೊಡಗಿನಲ್ಲಿ ಕೊಡವ ಭಾಷೆಯ ಪದವಾದ 'ತಿರೋಳ' ಎಂದೇ ಗೌಡರ ಅರೆಭಾಷೆಯಲ್ಲಿಯೂ ಬಳಕೆಯಲ್ಲಿದೆ.

ಉದಾ: ಕೊಡವ : ದೇವ ತಿರೋಳ ಬಾತ್.

ಗೌ.ಕ. : ದೇವ ತಿರೋಳ ಬಾತ್.

ಶಿ.ಕ. : ದೇವರು ದರ್ಶನ ನೀಡಿದೆ.

ಶಿ.ಕ. ಕೊಡವ ಗೌ.ಕ.

– ಬಾರಿಕೆ ಬಾರಿಕೆ

ಕೊಡವ ಭಾಷೆಯಲ್ಲಿ ಗದ್ದೆಯ ಕೊನೆಯ ಮೂಲೆ ಮೈದಾನವನ್ನು 'ಬಾರಿಕೆ' ಎಂಬ ಪದದಿಂದ ಗುರುತಿಸಲಾಗುತ್ತದೆ. ದಕ್ಷಿಣಕನ್ನಡ ಜಿಲ್ಲೆಯ ಗೌಡಕನ್ನಡದಲ್ಲಿ ಈ ಪದವಿಲ್ಲ. ಕೊಡಗಿನ ಗೌಡಕನ್ನಡದಲ್ಲಿ ಅದೇ ಅರ್ಥದಲ್ಲಿ ಈ ಪದ ಬಳಕೆಯಲ್ಲಿದೆ. ಅಲ್ಲದೆ, ಕೊಡಗಿನಲ್ಲಿ ಗದ್ದೆ ಬಯಲಿನ ಮೂಲೆ ಮೈದಾನದಲ್ಲಿರುವ 'ಗೌಡರ' ಮನೆಯು ಬಾರಿಕೆ' ಮನೆ ಎಂದು ಗುರುತಿಸಿಕೊಂಡಿದೆ.

ಉದಾ: ಕೊಡವ: ಬಾರಿಕೆಂಡಲ್ಲಿಕ್ ಪೋಂಡು.

ಗೌ.ಕ. : ಬಾರಿಕೆಯಲ್ಲಿಗೆ ಹೋಕು.

ಶಿ.ಕ. : ಗದ್ದೆಯ ಕೊನೆಯ ಮೂಲೆ ಮೈದಾನದ ಮನೆಗೆ ಹೋಗಬೇಕು.

ಶಿ.ಕ. ಕೊಡವ ಗೌ.ಕ.

ಅದೃಷ್ಟ ಬರ್‌ಕತ್ತ್ ಬರ್‌ಕತ್ತ್

ಕೊಡವ ಭಾಷೆಯ 'ಬರ್‌ಕತ್' ಪದವು ಇಲ್ಲಿನ ಗೌಡಕನ್ನಡದಲ್ಲಿದೆ. ಶಿಷ್ಟಕನ್ನಡದ ಅದೃಷ್ಟ ಪದದ ಅರ್ಥವನ್ನು ಹೊಂದಿದ ಈ ಪದವು ದಕ್ಷಿಣಕನ್ನಡ ಜಿಲ್ಲೆಯ ಗೌಡಕನ್ನಡದಲ್ಲಿ ಇಲ್ಲ.

ಕೊಡವ : ನಂಗಡ ಬರ್‌ಕತ್ತ್ ಕುಞ

ಗೌ.ಕ. : ನಮ್ಮ ಬರ್‌ಕತ್ತ್ ಕೂಸು

ಶಿ.ಕ. : ನಮ್ಮ ಅಖಿಲಿ೧ದೃಷ್ಟದ ಮಗು

ಶಿ.ಕ. **ಕೊಡವ** **ಗೌ.ಕ.**

ಮೇವು ಮೇಚಿ ಮೇಚಿ

ಪ್ರಾಣಿಗಳಿಗೆ ಕೊಡುವ ಮೇವಿಗೆ ಕೊಡಗಿನ 'ಗೌಡಕನ್ನಡದಲ್ಲಿ ಕೊಡವ ಭಾಷೆಯ 'ಮೇಚಿ' ಎಂಬ ರೂಪವಿದೆ.

ಉದಾ: ಕೊಡವ: ಕೋಳಿಕ್ ಮೇಚಿ ಕೊಡ್ತಿತ್ ಆಚಿ.

ಗೌ.ಕ. : ಕೋಳಿಗೆ ಮೇಚಿ ಹಾಕಿ ಆತ್.

ಶಿ.ಕ. : ಕೋಳಿಗೆ ಮೇವು ಹಾಕಿ ಆಯಿತು.

ಶಿ.ಕ **ಕೊಡವ** **ಗೌ.ಕ.**

ಅವಳಿಮಕ್ಕಳು ಎಣೆಮಕ್ಕ ಎಣೆಮಕ್ಕ

ಅವಳಿ ಮಕ್ಕಳನ್ನು ಸೂಚಿಸಲು 'ಎಣೆಮಕ್ಕ' ಎಂಬ ಪದ ಕೊಡವ ಭಾಷೆಯಲ್ಲಿದೆ. ಕೊಡಗಿನ ಗೌಡಕನ್ನಡದಲ್ಲಿಯೂ ಇದೇ ಅರ್ಥದಲ್ಲಿ ಈ ಪದವಿದೆ. ದಕ್ಷಿಣಕನ್ನಡ ಜಿಲ್ಲೆಯ ಗೌಡಕನ್ನಡದಲ್ಲಿ 'ಅವಳಿಮಕ್ಕ' ಎಂದೇ ಇದೆ.

ಉದಾ: ಕೊಡವ : ಅಯಿಂಗ ಎಣೆಮಕ್ಕ.

ಗೌ.ಕ. : ಅವು ಎಣೆಮಕ್ಕ.

ಶಿ.ಕ. : ಅವರು ಅವಳಿ ಮಕ್ಕಳು.

ಶಿ.ಕ. **ಕೊಡವ** **ಗೌ.ಕ.**

ಬಾಮಿ ಕಣತ್ತರೆ ಕಣತ್ತರೆ

ದಕ್ಷಿಣಕನ್ನಡ ಜಿಲ್ಲೆಯ ಗೌಡಕನ್ನಡದಲ್ಲಿ 'ಬಾವಿ' ಯನ್ನು ಸೂಚಿಸಲು 'ಬಾಮಿ' ಎಂಬ ಪದವಿದೆ. ಕೊಡಗಿನ ಗೌಡಕನ್ನಡದಲ್ಲಿ 'ಬಾಮಿ' ಎಂಬ ಪದದೊಂದಿಗೆ ಕೊಡವ ಭಾಷೆಯ 'ಕಣತ್ತರೆ' ಪದವೂ ಬಳಕೆಯಲ್ಲಿದೆ.

ಉದಾ: ಕೊಡವ : ಕಣತ್ತರೆಲ್ ನೀರ್ ದುಂಬ ಉಂಡು.

ಗೌ.ಕ. : ಕಣತ್ತರೆಲಿ ನೀರ್ ತುಂಬ ಉಟ್ಟು.

ಶಿ.ಕ. : ಬಾವಿಯಲ್ಲಿ ನೀರು ತುಂಬ ಇದೆ.

ಶಿ.ಕ. **ಕೊಡವ** **ಗೌ.ಕ.**

ಶತಮೂರ್ಖ ಅಡ್ಡಿಮುಟ್ಟಾಳ ಅಡ್ಡಿಮುಟ್ಟಾಳ

‘ಶತಮೂರ್ಖ’ ಶಿಷ್ಟಕನ್ನಡದ ಪದಕ್ಕೆ ಕೊಡವ ಭಾಷೆಯಲ್ಲಿ ‘ಅಡ್ಡಿ ಮುಟ್ಟಾಳ’ ಎಂಬ ಪದವಿದೆ. ಮೂರ್ಖ ಅಥವಾ ಮುಠ್ಠಾಳ ಎಂಬುದನ್ನು ಸೂಚಿಸಲು ಗೌಡಕನ್ನಡದಲ್ಲಿಯೂ ‘ಅಡ್ಡಿ ಮುಟ್ಟಾಳ’ ಎಂಬ ಪದವಿದೆ.

ಉದಾ: ಕೊಡವ: ನೀ ಒರ್ ಅಡ್ಡಿಮುಟ್ಟಾಳ.
ಗೌ.ಕ. : ನೀ ಒಬ್ಬ ಅಡ್ಡಿಮುಟ್ಟಾಳ.
ಶಿ.ಕ. : ನೀನೊಬ್ಬ ಶತಮೂರ್ಖ.

ಶಿ.ಕ.	**ಕೊಡವ**	**ಗೌ.ಕ.**
–	ಕೊಪ್ಪ	ಕೊಪ್ಪ

ಸ್ವಂತ ಆಸ್ತಿಯನ್ನು ಗಳಿಸಿ ಅವಿಭಕ್ತ ಕುಟುಂಬದ ಮನೆಯಿಂದ ಸ್ವಲ್ಪ ದೂರದಲ್ಲಿ ವಾಸಿಸುವುದು. ಆ ಸ್ಥಳಕ್ಕೆ ‘ಕೊಪ್ಪ’ ಎಂಬ ಪದ ಗೌಡಕನ್ನಡದಲ್ಲಿದೆ. ಈ ‘ಕೊಪ್ಪ’ ಎಂಬ ಪದವು ಅದೇ ಅರ್ಥದಲ್ಲಿ ಕೊಡವ ಭಾಷೆಯಲ್ಲಿಯೂ ಇದೆ. ದಕ್ಷಿಣಕನ್ನಡ ಜಿಲ್ಲೆಯ ಗೌಡಕನ್ನಡದಲ್ಲಿ ಈ ಪದವಿಲ್ಲ.

ಉದಾ: ಕೊಡವ : ನಂಗಡ ಮನೆಕಾರ ಕೊಪ್ಪತ್‌ಲ್ ಉಂಡು.
ಗೌ.ಕ. : ನಮ್ಮ ಮನೆಯವು ಕೊಪ್ಪಲಿ ಒಳೊ.
ಶಿ.ಕ. : ನಮ್ಮ ಮನೆಯವರು ‘ಕೊಪ್ಪ’ದಲ್ಲಿ ಇರುವರು.

ಶಿ.ಕ.	**ಕೊಡವ**	**ಗೌ.ಕ.**
–	ಊರೊರ್ಮೆ	ಊರೊರ್ಮೆ

ಕೊಡಗಿನಲ್ಲಿ ಊರ ಜನರ ವಾರ್ಷಿಕ ಸಭೆ, ಊಟ, ಆಟೋಟ ಇತ್ಯಾದಿ ಸಂತೋಷ ಕೂಟವನ್ನು ಸೂಚಿಸಲು ಕೊಡವ ಭಾಷೆಯಲ್ಲಿ ‘ಊರೊರ್ಮೆ’ ಎಂಬ ಪದವಿದೆ. ಕೊಡಗಿನ ಗೌಡಕನ್ನಡದಲ್ಲಿಯೂ ‘ಊರೊರ್ಮೆ’ ಪದವಿದೆ. ದಕ್ಷಿಣಕನ್ನಡ ಜಿಲ್ಲೆಯ ಗೌಡ ಸಮುದಾಯದಲ್ಲಿ ಈ ರೀತಿಯ ಸಭೆಯಾಗಲೀ, ಈ ಪದವಾಗಲಿ ಇರುವುದಿಲ್ಲ.

ಉದಾ: ಕೊಡವ : ಮತ್ಯಾಂದ್ ಪುತ್ತೇರಿ ಊರೊರ್ಮೆ ಉಂಡು.
ಗೌ.ಕ. : ನಾಡ್‌ದ್ ಹುತ್ತರಿ ಊರೊರ್ಮೆ ಉಟ್ಟು.
ಶಿ.ಕ. : ನಾಡಿದ್ದು ಹುತ್ತರಿಯ ಊರಿನ ಸಭೆ ಇದೆ.

ಶಿ.ಕ.	**ಕೊಡವ**	**ಗೌ.ಕ.**
–	ಮದ್ದ್‌ಕೂಳ್	ಮದ್ದ್‌ಕೂಳ್

ಕೊಡಗು ಜಿಲ್ಲೆಯಲ್ಲಿ ಆಷಾಡ (ಆಟಿ) ತಿಂಗಳಿನ ಹದಿನೆಂಟನೇ ದಿವಸ ಹದಿನೆಂಟು ಔಷಧೀಯ ಗುಣವುಳ್ಳ ಸೊಪ್ಪಿನಿಂದ ತಯಾರಿಸಿರುವ ಖಾದ್ಯ. ಇದಕ್ಕೆ ಮದ್ದ್‌ಕೂಳ್ (ಮದ್ದ್ ಔಷಧಿ + ಕೂಳ್ – ಅನ್ನ) ಎನ್ನುವರು. (ಔಷಧೀಯ ಸೊಪ್ಪನ್ನು ಬೇಯಿಸಿ ನೀರನ್ನು ಬಸಿದು ಆ ನೀರಿಗೆ ಅಕ್ಕಿ, ಬೆಲ್ಲ, ತೆಂಗಿನಕಾಯಿ, ಏಲಕ್ಕಿ ಹಾಕಿ ಪಾಯಸವನ್ನು ತಯಾರಿಸಿ ಸೇವಿಸಲಾಗುತ್ತದೆ) ಕೊಡವ ಭಾಷೆಯಲ್ಲಿರುವ 'ಮದ್ದ್‌ಕೂಳ್' ಪದ ಕೊಡಗಿನ ಗೌಡಕನ್ನಡದಲ್ಲಿ 'ಮದ್ದ್‌ಕೂಳ್ ಪಾಯಸ' ಎಂದಿದೆ. ದಕ್ಷಿಣಕನ್ನಡ ಜಿಲ್ಲೆಯಲ್ಲಿ ಇದು ಇಲ್ಲ.

ಉದಾ: ಕೊಡವ : ನಾಳೆ ಕಕ್ಕಡ ಪದ್‌ನೆಟ್ಟ್ ಮದ್ದ್‌ಕೂಳ್ ಮಾಡೊಂಡು.

ಗೌ.ಕ. : ನಾಳೆ ಆಟಿ ಹದ್‌ನೆಂಟ್, ಮದ್ದ್‌ಕೂಳ್–ಪಾಯಸ ಮಾಡೋಕು

(ನಾಳೆ ಆಷಾಡ ಹದಿನೆಂಟು ಮದ್ದುಅನ್ನ ಪಾಯಸ ಮಾಡಬೇಕು).

ಶಿ.ಕ.	**ಕೊಡವ**	**ಗೌ.ಕ.**
ಪಿತ್ತಕೋಶ	ಕೈಪೆ	ಕೈಪೆ

'ಪಿತ್ತಕೋಶ' ಎಂಬುದನ್ನು ಸೂಚಿಸಲು ಕೊಡವ ಮತ್ತು ಗೌಡಕನ್ನಡದಲ್ಲಿ 'ಕೈಪೆ' ಪದವಿದೆ. ದಕ್ಷಿಣಕನ್ನಡ ಜಿಲ್ಲೆಯ ಗೌಡಕನ್ನಡದಲ್ಲಿ 'ಕೈಂಪೆ' ಎಂದಿದೆ.

ಶಿ.ಕ.	**ಕೊಡವ**	**ಗೌ.ಕ.**
ನಾಗರಹಾವು	ಕಾಟುಮೂರ್ಕ	ಕಾಟುಮೂರ್ಕ

ದಕ್ಷಿಣಕನ್ನಡ ಜಿಲ್ಲೆಯ ಗೌಡ ಕನ್ನಡದಲ್ಲಿ 'ನಾಗರ ಹಾವು' ಎಂದೇ ಗುರುತಿಸಲ್ಪಡುವ ಜೀವಿಗೆ ಕೊಡವ ಮತ್ತು ಕೊಡಗಿನ ಗೌಡಕನ್ನಡದಲ್ಲಿ 'ಕಾಟುಮೂರ್ಕ' ಎಂಬ ಒಂದೇ ಪದವಿದೆ.

ಉದಾ: ಕೊಡವ : ಕಾಟುಮೂರ್ಕ ಪಾಂಬು ಕಚ್ಚಿತ್.

ಗೌ.ಕ. : ಕಾಟುಮೂರ್ಕ ಹಾವು ಕಚ್ಚಿಟ್ಟು.

ಶಿ.ಕ. : ನಾಗರ ಹಾವು ಕಚ್ಚಿದೆ.

ಶಿ.ಕ.	**ಕೊಡವ**	**ಗೌ.ಕ.**
ಕಾಡುಕುರಿ	ಕ್ಯಾಮ	ಕ್ಯಾಮ

'ಕಾಡುಕುರಿ'ಗೆ ಕೊಡವ ಭಾಷೆಯಲ್ಲಿ 'ಕ್ಯಾಮ' ಎಂಬ ಪದವಿದೆ. ಇಲ್ಲಿನ ಗೌಡಕನ್ನಡದಲ್ಲಿಯೂ 'ಕ್ಯಾಮ' ಎಂಬ ಕೊಡವ ಪದವೇ ಬಳಕೆಯಲ್ಲಿದೆ. ದಕ್ಷಿಣ ಕನ್ನಡ ಜಿಲ್ಲೆಯ ಗೌಡಕನ್ನಡದಲ್ಲಿ 'ಕೆಂಪ' ಪದವಿದೆ. 'ಕೆಂಪ' ಪದವು ಕೊಡಗಿನ ಗೌಡಕನ್ನಡದಲ್ಲಿಯೂ ಬಳಕೆಯಲ್ಲಿದೆ.

ಉದಾ: ಕೊಡವ : ಕಾಪಿತೋಟಕ್ ಕ್ಯಾಮ ಬಂತ್.

ಗೌ.ಕ. : ಕಾಪಿತೋಟಕೆ ಕ್ಯಾಮ ಬಂದ್‌ಉಟ್ಟು.

ಶಿ.ಕ. : ಕಾಫಿ ತೋಟದಲ್ಲಿ ಕಾಡುಕುರಿ ಬಂದಿದೆ.

ಶಿ.ಕ.	**ಕೊಡವ**	**ಗೌ.ಕ.**
ತರಗೆಲೆ	ಕೊಕ್ಕಲೆ	ಕೊಕ್ಕಲೆ

ಶಿಷ್ಟಕನ್ನಡದಲ್ಲಿರುವ 'ತರಗೆಲೆ' ಪದಕ್ಕೆ ಕೊಡವ ಭಾಷೆಯಲ್ಲಿ ಕೊಕ್ಕಲೆ' ಎಂಬ ಪದವು ಬಳಕೆಯಲ್ಲಿದೆ. ದಕ್ಷಿಣಕನ್ನಡ ಜಿಲ್ಲೆಯ ಗೌಡಕನ್ನಡದಲ್ಲಿ 'ದರ್‌ಗು' ಎಂಬ ಪದವಿದೆ. ಕೊಡಗಿನ ಗೌಡಕನ್ನಡದಲ್ಲಿ 'ದರ್‌ಗು' ಹಾಗೂ 'ಕೊಕ್ಕಲೆ' ಎರಡೂ ಪದಗಳು ಬಳಕೆಯಲ್ಲಿದೆ. ಇದು ಕೊಡವ ಭಾಷೆಯಿಂದಾದ ಪ್ರಭಾವವೆನ್ನಬಹುದು.

ಉದಾ: ಕೊಡವ : ಕೊಟ್ಟ್‌ಕ್ ಕೊಕ್ಕಲೆ ಇಡೊಂಡು.

ಗೌ.ಕ. : ಹಟ್ಟಿಗೆ ಕೊಕ್ಕಲೆ/ದರ್‌ಗ್ ಹಾಕೋಕು.

ಶಿ.ಕ. : ದನದ ಕೊಟ್ಟಿಗೆಗೆ ತರಗೆಲೆ ಹಾಕಬೇಕು.

ಶಿ.ಕ.	**ಕೊಡವ**	**ಗೌ.ಕ.**
ಉಪಾಯ	ಕೆಣಿ	ಕೆಣಿ

'ಉಪಾಯ' ಎಂಬ ಪದಕ್ಕೆ ದಕ್ಷಿಣಕನ್ನಡ ಜಿಲ್ಲೆಯ ಗೌಡಕನ್ನಡದಲ್ಲಿಯೂ 'ಉಪಾಯ' ಎಂಬ ಪದವೇ ಇದೆ. ಕೊಡಗಿನಲ್ಲಿರುವ ಕೊಡವ ಭಾಷೆ ಹಾಗೂ ಗೌಡಕನ್ನಡ ಭಾಷೆಯಲ್ಲಿ 'ಕೆಣಿ' ಎಂಬ ಪದ ಬಳಕೆಯಲ್ಲಿದೆ. ಜೊತೆಗೆ ಕೊಡಗಿನ ಗೌಡಕನ್ನಡದಲ್ಲಿ 'ಉಪಾಯ' ಎಂಬ ಪದವೂ ಅಲ್ಲಲ್ಲಿ ಬಳಕೆಯಲ್ಲಿದೆ.

ಉದಾ: ಕೊಡವ : ಅವಂಡ ಕೆಣಿನೋಟ್.

ಗೌ.ಕ. : ಅವನ ಕೆಣಿ ನೋಡ್.

ಶಿ.ಕ. : ಅವನ ಉಪಾಯ ನೋಡು.

ಶಿ.ಕ.	**ಕೊಡವ**	**ಗೌ.ಕ.**
ಹಾವ್ರಾಣಿ	ಎರ್‌ಣೆ	ಎರ್‌ಣೆ

'ಹಾವ್ರಾಣಿ'ಯನ್ನು ಸೂಚಿಸಲು ಕೊಡಗಿನಲ್ಲಿರುವ ಕೊಡವ ಮತ್ತು ಗೌಡಕನ್ನಡದಲ್ಲಿ 'ಎರ್‌ಣೆ' ಎಂಬ ಒಂದೇ ಪದ ಬಳಕೆಯಲ್ಲಿದೆ. ಆದರೆ ದಕ್ಷಿಣಕನ್ನಡ ಜಿಲ್ಲೆಯಲ್ಲಿನ ಗೌಡಕನ್ನಡದಲ್ಲಿ 'ಆರಾಣಿ' ಎಂಬ ಪದವಿದೆ.

ಉದಾ: ಕೊಡವ : ಈಲೆ ಎರ್ಣೆ ಪೋಚಿ.

ಗೌ.ಕ. : ಇಲ್ಲೆ ಎರ್ಣೆ ಹೋತು.

ಶಿ.ಕ. : ಇಲ್ಲಿಂದಲೇ ಹಾವ್ರಾಣಿ ಹೋಯಿತು.

ಶಿ.ಕ.	**ಕೊಡವ**	**ಗೌ.ಕ.**
ಮುಳ್ಳುಹಂದಿ	ಎಪ್ಪಂದಿ	ಎಪ್ಪಂದಿ

ಕೊಡವ ಭಾಷೆಯಲ್ಲಿ ಮುಳ್ಳುಹಂದಿಯನ್ನು ಸೂಚಿಸಲು 'ಎಪ್ಪಂದಿ' ಪದವನ್ನು ಬಳಸಲಾಗುತ್ತದೆ. ಕೊಡಗಿನ ಗೌಡಕನ್ನಡದಲ್ಲಿಯೂ 'ಎಪ್ಪಂದಿ' ಹಾಗೂ ಮುಳ್ಳುಹಂದಿ ಎರಡೂ ರೂಪವಿದೆ. ದಕ್ಷಿಣಕನ್ನಡ ಜಿಲ್ಲೆಯಲ್ಲಿರುವ ಗೌಡರ ಗೌಡಕನ್ನಡದಲ್ಲಿ 'ಏಪಂಜಿ' ಎಂಬ ಪದವಿದೆ. 'ಏಪಂಜಿ' ತುಳು ಭಾಷೆಯ ಪದವಾಗಿದೆ.

ಉದಾ: ಕೊಡವ : ಅಯಿಂಗಕ್ ಎಪ್ಪಂದಿ ಕ್ಟ್ಟಿತ್.

ಗೌ.ಕ. : ಅವುಕೆ ಎಪ್ಪಂದಿ/ಮಳ್ಳಂದಿ ಸಿಕ್ಕಿಉಟ್ಟು.

ಶಿ.ಕ. : ಅವರಿಗೆ ಮುಳ್ಳುಹಂದಿ ಸಿಕ್ಕಿದೆ.

ಶಿ.ಕ.	**ಕೊಡವ**	**ಗೌ.ಕ.**
ಕೊರೆ	ಕೊರಂಡ್	ಕೊರಂಡ್

'ಕೊರೆ' ಎಂಬ ಕ್ರಿಯಾಪದಕ್ಕೆ ಕೊಡಗಿನ ಗೌಡಕನ್ನಡದಲ್ಲಿ ಕೊರಂಡ್' ಎಂಬ ಪದವಿದೆ. ಕೊಡವ ಭಾಷೆಯಲ್ಲೂ 'ಕೊರಂಡ್' ಎಂಬ ಪದವಿದೆ. ದಕ್ಷಿಣಕನ್ನಡ ಜಿಲ್ಲೆಯ ಗೌಡರಲ್ಲಿ 'ತೋಂಡ್' ಎಂದಿದೆ. ಈ 'ತೋಂಡ್' ಪದವು ಕೊಡಗಿನ ಕೆಲವೆಡೆ 'ತೋಡು' ಎಂಬರ್ಥದಲ್ಲಿ ಬಳಕೆಯಲ್ಲಿದೆ.

ಉದಾ: ಕೊಡವ : ಆನ ಕೊರ್ಂಡಿತ್ ಯಡ್.

ಗೌ.ಕ. : ಅದನ ಕೊರ್ಂಡಿ ತೆಗಿ.

ಶಿ.ಕ. : ಅದನ್ನು ಕೊರೆದು ತೆಗೆ.

ಶಿ.ಕ.	**ಕೊಡವ**	**ಗೌ.ಕ.**
ಹುರುಳಿಕಾಳು	ಕುಡು	ಕುಡು

ಶಿಷ್ಟಕನ್ನಡದಲ್ಲಿರುವ 'ಹುರುಳಿಕಾಳು' ಎಂಬ ಪದವು ದಕ್ಷಿಣಕನ್ನಡ ಜಿಲ್ಲೆಯ ಗೌಡಕನ್ನಡದಲ್ಲಿಯೂ ಅದೇ ರೂಪದಲ್ಲಿದೆ. ಧಾನ್ಯವನ್ನು ಸೂಚಿಸುವ ಈ ಪದಕ್ಕೆ ಕೊಡವ ಭಾಷೆಯಲ್ಲಿ 'ಕುಡು' ಎಂಬ

ಪದವಿದ್ದು, ಕೊಡಗಿನ ಗೌಡಕನ್ನಡದಲ್ಲಿಯೂ 'ಕುಡು' ಎಂಬ ಪದವಿದೆ. ಇದು ಕೊಡವ ಭಾಷೆಯ ಪ್ರಭಾವದಿಂದ ಆಗಿದೆ.

ಉದಾ: ಕೊಡವ : ನಂಗಡಲ್ಲಿ ಒಟ್ಟಿ ಕುಡುನ ಪಜ್ಜಿ.

ಗೌ.ಕ. : ನಮ್ಮಲ್ಲಿ ರೊಟ್ಟಿ ಕುಡುನ ಪೊಜ್ಜಿ.

ಶಿ.ಕ. : ನಮ್ಮ ಮನೆಯಲ್ಲಿ ರೊಟ್ಟಿ, ಹುರುಳಿಕಾಳು ಚಟ್ನಿ.

ಶಿ.ಕ.	**ಕೊಡವ**	**ಗೌ.ಕ.**
ನರಿ	ಕುದುಕ	ಕುದುಕ

ನರಿ ಎಂಬ ಪ್ರಾಣಿಯನ್ನು ಸೂಚಿಸಲು ಕೊಡವ ಭಾಷೆಯಲ್ಲಿ 'ಕುದುಕ' ಎಂಬ ಪದವಿದೆ. ಕೊಡಗಿನ ಗೌಡಕನ್ನಡದಲ್ಲಿಯೂ 'ಕುದುಕ' ಎಂಬ ರೂಪವೇ ಬಳಕೆಯಲ್ಲಿದೆ. ದಕ್ಷಿಣಕನ್ನಡ ಜಿಲ್ಲೆಯ ಗೌಡಕನ್ನಡದಲ್ಲಿ 'ನರಿ' ಎಂಬ ಶಿಷ್ಟ ಕನ್ನಡದ ರೂಪವೇ ಇದೆ.

ಉದಾ: ಕೊಡವ : ಕುದುಕ ಕೋಳಿನ ಪುಡ್‌ಚಿತ್.

ಗೌ.ಕ. : ಕುದುಕ ಕೋಳಿನ ಹಿಡ್‌ತ್.

ಶಿ.ಕ. : ನರಿಯು ಕೋಳಿಯನ್ನು ಹಿಡಿಯಿತು.

ಶಿ.ಕ.	**ಕೊಡವ**	**ಗೌ.ಕ.**
ಅಳಿಲು	ಕುಂಡತ್ತ	ಕುಂಡತ್ತ

ಕೊಡವ ಭಾಷೆಯಲ್ಲಿರುವ 'ಕುಂಡತ್ತ' ಪದವು ಅಳಿಲನ್ನು ಸೂಚಿಸುವ ಪದವಾಗಿದೆ. ಕೊಡಗಿನ ಗೌಡಕನ್ನಡದಲ್ಲಿಯೂ ಇದೇ ರೂಪವಿದೆ. ದಕ್ಷಿಣಕನ್ನಡ ಜಿಲ್ಲೆಯ ಗೌಡಕನ್ನಡದಲ್ಲಿ 'ಅಳಿಲು' ಎಂದೇ ಬಳಕೆಯಲ್ಲಿದೆ.

ಉದಾ: ಕೊಡವ : ಕುಂಡತ್ತ ಅಪ್ಪರ ಪೋಚಿ.

ಗೌ.ಕ. : ಕುಂಡತ್ತ ಅಲ್ಲಿ ಹೋತು.

ಶಿ.ಕ. : ಅಳಿಲು ಅಲ್ಲಿ ಹೋಯಿತು.

ಶಿ.ಕ.	**ಕೊಡವ**	**ಗೌ.ಕ.**
ಗಡಾರಿ	ಇರ್‌ಂಬಾರೆ	ಇರ್‌ಂಬಾರೆ

'ಗಡಾರಿ' ಎಂಬ ಪದಕ್ಕೆ ಕೊಡವ ಮತ್ತು ಕೊಡಗಿನ ಗೌಡ ಕನ್ನಡ ಭಾಷೆಯಲ್ಲಿ 'ಇರ್‌ಂಬಾರೆ' ಎಂಬ ಪದವಿದೆ. ಆದರೆ ದಕ್ಷಿಣ ಕನ್ನಡ ಜಿಲ್ಲೆಯ ಗೌಡ ಕನ್ನಡದಲ್ಲಿ 'ಹಾರೆ' ಎಂಬ ಪದವಿದೆ.

ಆದ್ದರಿಂದ ಕೊಡಗಿನ ಗೌಡ ಕನ್ನಡದಲ್ಲಿ ಇರುವ 'ಇರ್‌ಂಬಾರೆ' ಪದವು ಕೊಡವ ಭಾಷೆಯ ಪದವಾಗಿದೆ.

ಉದಾ: ಕೊಡವ : ಬೇಲ್‌ಕ್ ಇರ್‌ಂಬಾರೆ ಯಡ್ತಂಡ್ ಪೋಂಡು.

ಗೌ.ಕ. : ಗದ್ದೆಗೆ ಇರ್‌ಂಬಾರೆ ತಕಂಡ್ ಹೋಕು

ಶಿ.ಕ. : ಗದ್ದೆಗೆ ಗಡಾರಿ ತೆಗೆದುಕೊಂಡು ಹೋಗಬೇಕು.

ಕೊಡಗಿನಲ್ಲಿ ಗೌಡ ಕನ್ನಡದ ಮೇಲೆ ಕೊಡವ ಭಾಷೆಯ ಪ್ರಭಾವ ಕೇವಲ ಪದಗಳ ಹಂತದಲ್ಲಿ ಮಾತ್ರವಲ್ಲದೆ ಗಾದೆಗಳು, ಒಗಟುಗಳು ಹಾಗೂ ನುಡಿಗಟ್ಟುಗಳ ಹಂತದಲ್ಲಿಯೂ ಆಗಿರುವುದು ಕಂಡು ಬಂದಿದೆ. ಗೌಡ ಕನ್ನಡದಲ್ಲಿರುವ ವಿಶಿಷ್ಟವಾದ ಗಾದೆಗಳಲ್ಲಿ ಕೆಲವು ಕೊಡವ ಭಾಷೆಯಲ್ಲಿರುವುದು ಕಂಡು ಬಂದಿದೆ.

ಉದಾ: ಗೌ.ಕ. : ಒಂದ್ ಮಳೆಗೆ ಒಂದ್ ಕೊಡೆ.

ಕೊಡವ: ಒರ್ ಮಳೆಕ್ ಒರ್ ಕೊಡೆ.

ಗೌ.ಕ. : ನಿನ್ನೆನ ಮಳೆಗೆ ಇಂದ್ ಹುಟ್ಟಿದ ಚಗ್‌ತೆ.

ಕೊಡವ: ನಿನ್ನಾಂದ್‌ತರ ಮಳೆಕ್ ಇಂದ್ ಪುಟ್ಟ್‌ನ ತಾತೆ.

ಗೌ.ಕ. : ಕಾಣದ ನಾಯಿ ಕಡುಂಬುಟ್ಟು ತಿಂದಂಗೆ.

ಕೊಡವ: ಕಾಣತ ನಾಯಿ ಕಡುಂಬುಟ್ಟು ತಿಂದನ್ನಕೆ.

ಗೌ.ಕ. : ಮಾಣೆ ಮಾಣೆ ಹುತ್ತೇರಿ

ಕೊಡವ: ಮಾಣೆ ಮಾಣೆ ಪುತ್ತೇರಿ/ಅಪ್ಪ ಅಪ್ಪಲೂ ಪುತ್ತೇರಿಯಾ?

ಗೌ.ಕ. : ಕಳ್‌ದ ಹುತ್ತೇರಿನ ಹಾಡಿ ಏನ್ ಸುಕ.

ಕೊಡವ: ಕಯಿಂಜ ಪುತ್ತರಿನ ಪಾಡಿತ್ ಎನ್ನ ಸುಕ ಇತ್ಯಾದಿ.

ಗೌಡ ಕನ್ನಡದಲ್ಲಿರುವ ನುಡಿಗಟ್ಟುಗಳು ಅದೇ ಅರ್ಥದಲ್ಲಿ ಕೊಡವ ಭಾಷೆಯಲ್ಲಿಯೂ ಇದೆ.

ಉದಾ: ಗೌ.ಕ. : ಕೋಳಿ ನಿದ್ದೆ. (ಸಣ್ಣ ನಿದ್ರೆ)

ಕೊಡವ: ಕೋಳಿ ವರ್‌ಕ್.

ಗೌ.ಕ. : ಮಲ್‌ಗಿದಲ್ಲಿ ಉಟ್ಟು. (ಹಾಸಿಗೆ ಹಿಡಿ)

ಕೊಡವ: ಬುದ್ದಂಡಲ್ಲಿ ಉಂಡು.

ಗೌ.ಕ. : ಪದ್ರಾಡ್. (ಓಡಿ ಹೋಗು/ಜಾಗ ಖಾಲಿ ಮಾಡು).

ಕೊಡವ: ಪದ್ರಾಡಾರ್ಥ್.

ಗೌ.ಕ. : ಬಳ್ಳಾಸ್. (ಒಣ ಹರಟೆ).

ಕೊಡವ: ಬಳ್ಳಾಸ್.

ಗೌ.ಕ. : ಲಾಯ್ಕ ಕೊಡ್. (ಚೆನ್ನಾಗಿ ಕೊಡು)

ಕೊಡವ: ಚಾಯ್‌ತೆ ಕೊಡ್.

ಗೌ.ಕ. : ಕೊದಿ ಕೂಸು. (ಮುದ್ದಿನ ಮಗು)

ಕೊಡವ: ಕೊದಿ ಕುಞ ಇತ್ಯಾದಿ.

ಒಗಟುಗಳು:

ಉದಾ: ಗೌ.ಕ. :ಕಣ್ಣ್ ಕಾಣದ ಅಜ್ಜ ಪಾಲ ದಾಟುದು.

ಕೊಡವ: ಕಣ್ಣ್ ಕಾಣತ ಅಜ್ಜ ಪಾಲ ದಾಟುವೊ.

ಗೌ.ಕ. : ಎಪ್ಪಂದಿ ಹೊಟ್ಟೆಲಿ ಮುನ್ನೂರ್ ಮಕ್ಕ.

ಕೊಡವ: ಎಪ್ಪಂದಿ ಪೊಟ್ಟೆಲ್ ಮುನ್ನೂರ್ ಮಕ್ಕ.

ಇವುಗಳಲ್ಲದೆ ಕೊಡವ ಭಾಷೆಯ ಸಂಬಂಧವಾಚಕ ಹಾಗೂ ಸಂಬೋಧನಾ ರೂಪಗಳಾದ 'ಕುಞಪ್ಪ, ಕುಞವ್ವ, ಬೋಜವ್ವ, ಬೋಜಪ್ಪ' ಇವುಗಳು ಕೊಡಗಿನ ಗೌಡ ಜನಾಂಗದ ಸಂಬಂಧವಾಚಕಗಳು ಹಾಗೂ ಸಂಬೋಧನಾ ರೂಪಗಳಾಗಿವೆ.

ಕೊಡಗಿನ ಗೌಡ ಕನ್ನಡ ಮತ್ತು ಹವ್ಯಕ ಕನ್ನಡದ ಸಾಮ್ಯತೆ: ಕನ್ನಡದ ಒಂದು ಪ್ರಬೇಧವಾದ ಹವ್ಯಕ ಭಾಷೆಯು ಬ್ರಾಹ್ಮಣರ ಒಂದು ಒಳ ಜಾತಿಯಾದ ಹವ್ಯಕರು ಮಾತನಾಡುವ ಭಾಷೆಯಾಗಿದೆ. ಆದರೆ ಹವ್ಯಕರೆಲ್ಲರೂ ಒಂದೇ ಭಾಷೆ ಮಾತನಾಡುತ್ತಾರೆಂದು ತಿಳಿದರೆ ತಪ್ಪಾಗುತ್ತದೆ. ಕನ್ನಡ ಕರಾವಳಿಯ ದಕ್ಷಿಣ ಕನ್ನಡ, ಉತ್ತರ ಕನ್ನಡ, ಕಾಸರಗೋಡು ಮತ್ತು ಶಿವಮೊಗ್ಗ ಜಿಲ್ಲೆಯಲ್ಲಿರುವ ಹವ್ಯಕರು ಮಾತನಾಡುವ ಹವ್ಯಕ ಭಾಷೆಯಲ್ಲಿ ಅನೇಕ ವೈವಿದ್ಯಗಳಿವೆ. ಇದು ಎಷ್ಟೆಂದರೆ, ಕುಂಬಳೆ ಸೀಮೆಯ ಹವ್ಯಕ ಪದಗಳು ಪಂಜ ಸೀಮೆಗೆ ಅರ್ಥವಾಗುವುದಿಲ್ಲ. ಪಂಜ ಸೀಮೆಯಲ್ಲಿರುವ ಹವ್ಯಕರು ಮಾತನಾಡುವ ಭಾಷೆಯು ಗೌಡ ಕನ್ನಡಕ್ಕೆ ಹತ್ತಿರವಾಗಿದೆ. ಗೌಡ ಕನ್ನಡದ ಲಿಂಗ ವ್ಯವಸ್ಥೆ ಮತ್ತು ಹವ್ಯಕ ಕನ್ನಡದ ಲಿಂಗ ವ್ಯವಸ್ಥೆ ಒಂದೇ ರೀತಿಯಾಗಿದೆ. ಹವ್ಯಕ ಕನ್ನಡದಲ್ಲಿಯೂ ಗೌಡ ಕನ್ನಡದಂತೆಯೇ ಪುಲ್ಲಿಂಗ ಪುಲ್ಲಿಂಗೇತರ ಸರ್ವನಾಮಗಳಲ್ಲಿ ಸ್ತ್ರೀಲಿಂಗಕ್ಕೆ ಪ್ರತ್ಯೇಕ ಪದವಿಲ್ಲ.

ಉದಾ: ಗೌ.ಕ. : ಅಂವ (ಅವನು), ಅದ್ (ಅವಳು ಅಥವಾ ಅದು) .

ಹ.ಕ. : ಅಂವ (ಅವನು), ಅದ್ (ಅವಳು ಅಥವಾ ಅದು).

ಹವ್ಯಕ ಕನ್ನಡದಲ್ಲಿ ಗೌಡ ಕನ್ನಡದ ಮಕ್ಕಳು ಪದದ ಬಹುವಚನ ರೂಪ 'ಮಕ್ಕ' ಎಂಬುದಕ್ಕೆ 'ಮಕ್ಕೊ' ಎಂದಿದೆ. ಆದರೆ ಕೊಡವ ಭಾಷೆಯಲ್ಲಿ 'ಮಕ್ಕ' ಎಂಬ ರೂಪವೇ ಇರುವುದರಿಂದ ಇಲ್ಲಿ ಹವ್ಯಕ ಭಾಷೆಯ ಪ್ರಭಾವದ ಸಾದ್ಯತೆ ಇಲ್ಲ ಎಂದು ಹೇಳಬಹುದು. ಶಿಷ್ಟ ಕನ್ನಡದ 'ಹೋದನು, ಹೋದಳು, ಹೋಯಿತು' ಎಂಬ ಪದಗಳಿಗೆ ಗೌಡ ಕನ್ನಡ ಮತ್ತು ಹವ್ಯಕ ಕನ್ನಡದಲ್ಲಿ 'ಹೋತ್' ಎಂಬ ಒಂದೇ ಪದವಿದೆ. ಹವ್ಯಕ ಕನ್ನಡದಲ್ಲಿರುವ 'ಉಂಬಲೆ' ಎಂಬ ಪದ ಗೌಡ ಕನ್ನಡದಲ್ಲಿದೆ. ಆದರೆ ಬಳಕೆಯಲ್ಲಿ ಅರ್ಥ ವ್ಯತ್ಯಾಸವಿದೆ.

ಉದಾ: ಗೌ.ಕ. : ಉಂಬಲೆ–ಊಟ ಮಾಡುವುದಿಲ್ಲ/ಊಟಮಾಡುವುದಿಲ್ಲವೇ?

ಹ.ಕ. : ಉಂಬಲೆ–ಊಟ ಮಾಡಲು/ಊಟ ಮಾಡುವುದಕ್ಕೆ.

ಆದ್ದೆ (ಆಗುತ್ತದೆ) ಎಂಬ ಗೌಡ ಕನ್ನಡದ ಪದವು ಹವ್ಯಕದಲ್ಲಿ 'ಆವುತ್ತು' ಎಂದಿದೆ. ಇದಕ್ಕೆ ಸಮೀಪವಾದ 'ಆವುಟ್ಟು' ಪದ 'ಆಗಿದೆ' ಎಂಬರ್ಥದಲ್ಲಿ ಗೌಡ ಕನ್ನಡದಲ್ಲಿದೆ. ಗೌಡ ಕನ್ನಡದ ಅಂತೆ ಅರ್ಥದ '–ಗಡ' ಎಂಬುದು ಹವ್ಯಕದಲ್ಲಿ '–ಡ' ಎಂದಿದೆ. ಉದಾ: ಗೌ.ಕ.: ಹೋತ್‌ಗಡ (ಹೋಯಿತಂತೆ). ಹ.ಕ.: ಹೋಯಿದಡ (ಹೋಯಿತಂತೆ) ಇತ್ಯಾದಿ. ಇಲ್ಲಿರುವ 'ಹೋತ್' ಪದ ಹವ್ಯಕದಿಂದ ಬಂದುದಾಗಿದೆ. ಹೆರ್ಕು (ಹೆಕ್ಕು), ಕೂಸು ಇತ್ಯಾದಿ ಅನೇಕ ಪದಗಳು ಹವ್ಯಕದಿಂದ ಬಂದವುಗಳಾಗಿವೆ. ಆದರೆ ಹವ್ಯಕದ ಈ ಪದಗಳು ಹಳಗನ್ನಡದ ಪದಗಳು ಕೂಡ ಆಗಿರುವುದರಿಂದ ಗೌಡ ಕನ್ನಡಕ್ಕೆ ಅವು ನೇರ ಹಳಗನ್ನಡದಿಂದ ಬಂದಿರುವ ಸಾಧ್ಯತೆಯೂ ಇದೆ.

ಗೌಡ ಕನ್ನಡದ ಕ್ರಿಯಾರಚನೆಗಳಲ್ಲಿ ಮೊದಲ ಸ್ವರ 'ಓ' ಇದ್ದುದು ಹವ್ಯಕದಲ್ಲಿಯೂ ಕೆಲವೊಂದು ಇದೇ ರೂಪದಲ್ಲಿ ಕಂಡುಬಂದಿದೆ.

ಗೌ.ಕ.	**ಹ.ಕ.**	**ಶಿ.ಕ.**
ಕೊಣಿ	ಕೊಣಿ	ಕುಣಿ
ಹೊರಿ	ಹೊರಿ	ಹುರಿ
ಹೊಯಿ	ಹೊಯಿ	ಹುಯಿ ಇತ್ಯಾದಿ

ಗೌಡ ಕನ್ನಡ ಮತ್ತು ತುಳು ಭಾಷೆ:

ತುಳು ಮತ್ತು ಗೌಡ ಕನ್ನಡ ಒಂದೇ ಪರಿಸರದಲ್ಲಿ ಬಳಕೆಯಲ್ಲಿರುವ ಭಾಷೆಯಾದರೂ, ಗೌಡ ಕನ್ನಡಕ್ಕೆ ತುಳುವಿನೊಂದಿಗಿನ ಸಾದೃಶ್ಯ ಕಡಿಮೆಯೆನ್ನಬಹುದು. ಗೌಡ ಕನ್ನಡದಲ್ಲಿ ಬಳಕೆಯಲ್ಲಿರುವ

ಅನೇಕ ಪದಗಳು ತುಳು ಪದಗಳು ಕೂಡ ಆಗಿವೆ. ಆದರೆ ಅದು ತುಳುವಿನ ಪದಗಳೇ ಎಂದು ಗುರುತಿಸುವುದು ಕಷ್ಟ. ಯಾಕೆಂದರೆ ತುಳುವು ಕೂಡ ದ್ರಾವಿಡ ಭಾಷೆಯಾದ್ದರಿಂದ ಅದರಲ್ಲಿರುವ ಪದಗಳು ಕೂಡ ಮೂಲದಲ್ಲಿ ಕನ್ನಡವೇ ಮೊದಲಾದ ದ್ರಾವಿಡ ಭಾಷೆಗಳ ಪದಗಳೇ ಆಗಿವೆ.

ತುಳು ಮತ್ತು ಗೌಡಕನ್ನಡದಲ್ಲಿ ಬಹುಸಂಖ್ಯೆಯ ಪದಗಳು ರೂಪ ಸಾದೃಶ್ಯ ಮತ್ತು ಅರ್ಥ ಸಾದೃಶ್ಯದಿಂದ ಒಂದೇ ಬಗೆಯಾಗಿ ಬಳಕೆಯಲ್ಲಿದೆ.

ಉದಾ:	**ಶಿ.ಕ.**	**ತುಳು**	**ಗೌ.ಕ.**
	ಗುದ್ದಲಿ	ಗುದ್ದೊಲಿ	ಗುದ್ದೊಲಿ
	ಇರುವೆ	ಪಿಜಿನ್	ಪಿಜಿನ್
	ಗೆರಟೆ	ಚಿಪ್ಪಿ	ಚಿಪ್ಪಿ
	ಕಸಪೊರಕೆ	ಮಾಯ್ಪು	ಮಾಯ್ಪು
	ಕಡೆಗೋಲು	ಮಂತ್	ಮಂತ್
	ಕಂಬ	ಕಬೆ	ಕಬೆ
	ಕಣಜ	ಕದಿಕೆ	ಕದಿಕೆ
	ಬೆಳಗ್ಗೆ	ಬೊಳ್ಪು	ಬೊಳ್ಪು
	ಭತ್ತದ ಹೊಟ್ಟು	ಉಮಿ	ಉಮಿ
	ಅಂದ	ಪೊರ್ಲು	ಪೊರ್ಲು
	ಹೇಲುವುದು	ಉರ್ಚು	ಉರ್ಚು
	ಅಮಾವಾಸ್ಯೆ	ಅಮಾಸೆ	ಅಮಾಸೆ

ಗೌಡ ಕನ್ನಡದಲ್ಲಿ ಇಂತಹಾ ಸಾವಿರಾರು ಪದಗಳು ಪರಸ್ಪರವಾಗಿವೆ.

ಒಗಟುಗಳು: ತುಳು: ಅಪ್ಪೆ ಕೊರಿ ಪಜೆ ಮಡಿಪರೆ ಬಲ್ಲಿ

ಅಮ್ಮೆ ಕೊರಿ ಪಣವು ಲೆಕ್ಕ ಮಲ್ಪರೆ ಬಲ್ಲಿ.

ಗೌ.ಕ.: ಅವ್ವ ಕೊಟ್ಟ ಸೀರೆ ಮಡ್ಚಿಕೆ ಆದುಲೆ

ಅಪ್ಪ ಕೊಟ್ಟ ದುಡ್ಡುನ ಲೆಕ್ಕ ಮಾಡಿಕೆ ಆದುಲೆ.

(ಅವ್ವ ಕೊಟ್ಟ ಸೀರೆ ಮಡಚಲು ಸಾಧ್ಯವಿಲ್ಲ, ಅಪ್ಪ ಕೊಟ್ಟ ಹಣ ಎಣಿಸಲು ಸಾಧ್ಯವಿಲ್ಲ ಉತ್ತರ: ಆಕಾಶ ಮತ್ತು ನಕ್ಷತ್ರ).

ತಿಂಗಳ ಹೆಸರುಗಳು:

ತುಳು	ಗೌ.ಕ.
ಪಗ್ಗು	ಪಗ್ಗು (ಏಪ್ರಿಲ್-ಮೇ)
ಬೇಷ	ಬೇಸ (ಮೇ-ಜೂನ್)
ಕಾರ್ತೆಲ್	ಕಾರ್ತಿಂಗ (ಜೂನ್ ಜುಲೈ)
ಆಟಿ	ಆಟಿ (ಜುಲೈ-ಆಗಸ್ಟ್)
ಸೋಣ	ಸೋಣ (ಆಗಸ್ಟ್-ಸೆಪ್ಟೆಂಬರ್)
ಕನ್ಯಾ	ನಿರ್ನಾಲ್ (ಸೆಪ್ಟೆಂಬರ್-ಅಕ್ಟೋಬರ್)
ಬೊಂತೆಲ್	ಬೆಳ್ತಿಂಗ (ಅಕ್ಟೋಬರ್-ನವೆಂಬರ್)
ಜಾರ್ದೆ	ಜಾರ್ದೆ (ನವೆಂಬರ್-ಡಿಸೆಂಬರ್)
ಪೆರಾರ್ದೆ	ಪೆರಾರ್ದೆ (ಡಿಸೆಂಬರ್-ಜನವರಿ)
ಪುಯೆಂತೆಲ್	ಪೊನ್ನಿ (ಜನವರಿ-ಫೆಬ್ರವರಿ)
ಮಾಹಿ	ಮಾಹಿ (ಫೆಬ್ರವರಿ-ಮಾರ್ಚ್)
ಸುಗ್ಗಿ	ಸುಗ್ಗಿ (ಮಾರ್ಚ್-ಏಪ್ರಿಲ್).

ಇವರಲ್ಲಿ ಒಂದು ಸಂಕ್ರಮಣದಿಂದ ಇನ್ನೊಂದು ಸಂಕ್ರಮಣದವರೆವಿಗೆ ತಿಂಗಳುಗಳನ್ನು ಗುರುತಿಸುವರು. ಮೇಲಿನ ತಿಂಗಳುಗಳ ಹೆಸರುಗಳಲ್ಲಿ ಇವು ಶಿಷ್ಟ ಕನ್ನಡದ ಮಾಸಗಳ ಹೆಸರುಗಳಿಗಿಂತ (ಚೈತ್ರ, ವೈಶಾಖ..ಇತ್ಯಾದಿ) ಭಿನ್ನವಾಗಿದೆ. ಆದರೆ ತುಳು ಭಾಷೆಯಲ್ಲಿರುವ ಮಾಸಗಳ ಹೆಸರಿನೊಂದಿಗೆ ಸಾಮ್ಯತೆ ಇರುವುದು ಕಂಡು ಬರುತ್ತದೆ.

ಗೌಡ ಕನ್ನಡ ಮತ್ತು ಮಲಯಾಳಂ:

ಕೊಡಗು ಜಿಲ್ಲೆಯಲ್ಲಿ ಮಲೆಯಾಳಿಗಳು ಕೂಡ ವಾಸಿಸುತ್ತಾರೆ. ಕ್ರಿ.ಶ. ೧೭೭೨ರಲ್ಲಿ ಹೈದರಾಲಿಯು ಕೊಡಗಿಗೆ ಬಂದು ಮಡಿಕೇರಿ ಕೋಟೆಯನ್ನು ಕಟ್ಟಿಸಿದನು. ಕ್ರಿ.ಶ.೧೭೭೩ರಲ್ಲಿ ಸಾಮ್ರಾಜ್ಯ ವಿಸ್ತರಣರಣೆಯನ್ನು ಮಾಡುವಾಗ ಕೇರಳವನ್ನು ಗೆದ್ದುಕೊಂಡನು. ಇದು ಮಲೆಯಾಳಿಗಳು ಕೊಡಗಿಗೆ ವಲಸೆ ಬರಲು ಕಾರಣವಾಯಿತು ಎಂದಿದೆ. ಕೊಡಗಿನ ಆರಾಧ್ಯ ದೇವತೆ 'ಭಗವತಿ' ಓರ್ವ ಮಲೆಯಾಳಿ ದೇವತೆ ಎಂಬ ಮಾಹಿತಿ ಇದೆ. ಕೊಡಗಿನ ಹಬ್ಬವಾದ 'ಕೈಲು ಮುಹೂರ್ತ'ಕ್ಕೆ ಕೇರಳದ 'ಓಣಂ' ಪ್ರೇರಣೆ ನೀಡಿದೆ. ಕೇರಳದ 'ಪುತ್ತರಿ ಪೊಳ್ಳು'ವಿನಲ್ಲಿ ಹೊಸ ಅಕ್ಕಿ ಊಟದ ಆಚರಣೆ ಇದೆ. ಅದೇ ರೀತಿ ಗೌಡರ 'ಹುತ್ತರಿಯು' ಇದರ ರೂಪದಂತಿದೆ. ಏಕೆಂದರೆ ಹುತ್ತರಿ ಹಬ್ಬದಂದು ಕೊಡಗಿನಲ್ಲಿ ಹೊಸ ಭತ್ತವನ್ನು ಮನೆಗೆ ತರುವುದು ವಿಶೇಷವಾಗಿದೆ.

ಕೊಡಗಿನ ಗೌಡ ಜನಾಂಗದವರಲ್ಲಿ ನಡೆಸುವ ಶ್ರೀ ವೆಂಕಟರಮಣ ದೇವರ ಹರಿಸೇವೆಯಲ್ಲಿ ಭೂತದ ಕೋಲವನ್ನು ಕಟ್ಟುವ ಪದ್ಧತಿಯಿದೆ. ಈ ಸಂದರ್ಭದಲ್ಲಿ ಭೂತದ ನುಡಿಯು ಮಲೆಯಾಳಿ ಭಾಷೆಯಲ್ಲಿರುತ್ತದೆ. ಮಲೆಯಾಳಿಗಳಲ್ಲಿ ಕಂಡುಬರುವ ಸಾಂಪ್ರದಾಯಿಕ 'ತೂಗು ದೀಪ'ವು ಕೊಡಗಿನ ಗೌಡರಲ್ಲಿಯೂ ಪ್ರಮುಖವಾಗಿದೆ.

ಮಲೆಯಾಳಿಗಳಲ್ಲಿ ಕುಟುಂಬದ ಹಿರಿಯರನ್ನು 'ಕಾರಣೋರೆ' ಎಂದು ಕರೆಯುವರು. ಕೊಡವರು ಮತ್ತು ಕೊಡಗಿನ ಗೌಡರಲ್ಲಿಯೂ 'ಕಾರಣೋರ' ಆರಾಧನೆಯು ಇದ್ದು, ಈ ಸಂಪ್ರದಾಯವು ಕೇರಳದಿಂದಲೇ ಬಂದದ್ದು ಎಂದು ಗುರುತಿಸಲಾಗಿದೆ.

ಮೂಲ ದ್ರಾವೀಡ ಪದಗಳು ಯಾವುದೇ ಬದಲಾವಣೆಯಿಲ್ಲದೆ ಮಲಯಾಳಂ ಭಾಷೆಯಲ್ಲಿವೆ. ಅವುಗಳಲ್ಲಿ ಕೆಲವು ಕೊಡಗಿನ ಗೌಡ ಕನ್ನಡದಲ್ಲಿಯೂ ಅದೇ ರೂಪದಲ್ಲಿದೆ.

ಮೂಲದ್ರಾವಿಡ	**ಮಲಯಾಳಂ**	**ಗೌ.ಕ.**	**ಶಿ.ಕ.**
ಆರ್	ಆರ್	ಆರ್	ಆರು
ಕರಿ	ಕರಿ	ಕರಿ	ಕರಿ
ಕಾಲ್	ಕಾಲ್	ಕಾಲ್	ಕಾಲು
ಉಗ್ರ್	ಉಗ್ರ್/ನಖಂ	ಉಗ್ರ್	ಉಗ್ರ್
ಎಲಿ	ಎಲಿ	ಎಲಿ	ಇಲಿ
ನೀ	ನೀ	ನೀ	ನೀನು
ಆಡ್	ಆಡ್	ಆಡ್	ಆಡು
ಯಾರ್	ಯಾರ್	ಯಾರ್	ಯಾರು
ಕುಞ	ಕುಞ	ಕುಞ	ವ್ಯಕ್ತಿಯ ಹೆಸರು/ಚಿಕ್ಕ
ಮೂಕ್	ಮೂಕ್	ಮೂಕ್	ಮೂಗು ಇತ್ಯಾದಿ.

ಹೀಗೆ ಕೊಡವ ಭಾಷೆಯ ಮೇಲೆ ಕೊಡವ, ತುಳು, ಹವ್ಯಕ ಮತ್ತು ಮಲಯಾಳಂ ಭಾಷೆಗಳ ಪ್ರಭಾವವನ್ನು ಗುರುತಿಸಲಾಗಿದೆ.

ಅಧ್ಯಾಯ–೬

ಉಪಸಂಹಾರ

ಅಧ್ಯಾಯ ಆರು

ಉಪಸಂಹಾರ

ಕೊಡಗಿನ ಗೌಡಕನ್ನಡವು ಕರಾವಳಿ ಕನ್ನಡಕ್ಕೆ ಸೇರಿದ ಭಾಷೆಯಾಗಿದೆ. ಕರಾವಳಿ ಕನ್ನಡದ ಶಬ್ದಗಳಲ್ಲಿ ವಿಶಿಷ್ಟವಾಗಿರುವ ನಾಸಿಕ್ಯ ಧ್ವನಿಯ ಬಳಕೆ ಕೊಡಗಿನ ಗೌಡ ಕನ್ನಡದಲ್ಲಿಯೂ ವಿಶಿಷ್ಟವಾಗಿದೆ.

ಕೊಡಗಿನ ಗೌಡ ಜನಾಂಗದವರು ಮಾತನಾಡುವ ಗೌಡಕನ್ನಡ ಭಾಷೆಯು 'ಅರೆಭಾಷೆ, ಅರೆಗನ್ನಡ' ಎಂಬೆಲ್ಲಾ ಹೆಸರುಗಳನ್ನು ಹೊಂದಿದೆ. ಈ ಭಾಷೆಯ ಸಾಹಿತ್ಯವು ಕನ್ನಡ ಲಿಪಿಯಲ್ಲಿಯೇ ಇದೆ. ಶಿಷ್ಟ ಕನ್ನಡಕ್ಕಿಂತ ಅನೇಕ ರೀತಿಯಲ್ಲಿ ಭಿನ್ನತೆಯನ್ನು ಹೊಂದಿದ ಇದು ಕನ್ನಡದ ಒಂದು ಪ್ರಭೇಧವೆನ್ನಿಸಿಕೊಂಡಿದೆ.

ಪ್ರಾದೇಶಿಕತೆಯ ಆಧಾರದ ಮೇಲೆ ಗೌಡಕನ್ನಡ (ಅರೆಭಾಷೆ) ಮಾತನಾಡುವ ಗೌಡರಲ್ಲಿ ಎರಡು ಪ್ರಭೇಧಗಳು ಇರುವುದು ಕಂಡುಬಂದಿದೆ. ಅವುಗಳಲ್ಲಿ ಒಂದು ಸುಳ್ಯ ಹಾಗೂ ಕಾಸರಗೋಡಿಗೆ ಸೇರಿದ ತುಳು ಮಾತನಾಡುವ ಭಾಷೆಯಲ್ಲಿ ವ್ಯತ್ಯಾಸವು ಕಂಡುಬಂದಿದ್ದು ಅದನ್ನು ಮೊದಲನೇ ಅಧ್ಯಾಯದಲ್ಲಿ ಹೇಳಲಾಗಿದೆ.

ಈ ಅಧ್ಯಯನವು ಕೇವಲ ಕೊಡಗು ಜಿಲ್ಲೆಯ ಗೌಡ ಜನಾಂಗದವರು ಮಾತನಾಡುವ ಭಾಷಾ ಪ್ರಭೇಧಕ್ಕೆ ಸೀಮಿತವಾಗಿದೆ.

ಗೌಡ ಕನ್ನಡದಲ್ಲಿ ಮಹಾಪ್ರಾಣಾಕ್ಷರಗಳ ಬಳಕೆ ಇರುವುದಿಲ್ಲ (ಹಠ–ಹಟ). ಶಿಷ್ಟ ಕನ್ನಡದ ಅವರ್ಗೀಯ ವ್ಯಂಜನಗಳಲ್ಲಿ ಇರುವ 'ಶ,ಷ,ಸ' ಎಂಬವುಗಳ ಬದಲಿಗೆ ಗೌಡ ಕನ್ನಡದಲ್ಲಿ ಸಂಘರ್ಷ ದಂತ್ಯ ಅಘೋಷ ಧ್ವನಿಮಾ 'ಸ' ಮಾತ್ರ ಬಳಕೆಯಲ್ಲಿದೆ.

ಗೌಡ ಕನ್ನಡದಲ್ಲಿ ಶಿಷ್ಟ ಕನ್ನಡದಲ್ಲಿ ಇರುವ ಸ್ವರಗಳೊಂದಿಗೆ ಕೆಲವು ವಿಶಿಷ್ಟ ಸ್ವರಗಳೂ ಇವೆ. ಇವುಗಳನ್ನು ತೋರಿಸಲು ಕನ್ನಡದಲ್ಲಿ ಲಿಪಿ ಸಂಜ್ಞೆ ಇಲ್ಲದ ಕಾರಣ ಇದನ್ನು ಅಂತಾರಾಷ್ಟ್ರೀಯ ಧ್ವನಿ ಲಿಪಿಯ ಸಂಜ್ಞೆಯಿಂದ ತೋರಿಸಲಾಗಿದೆ.

ಗೌಡ ಕನ್ನಡದ ಸರ್ವನಾಮಗಳಲ್ಲಿ ಪುಲ್ಲಿಂಗ ಮತ್ತು ಪುಲ್ಲಿಂಗೇತರ ಎಂಬ ಎರಡು ವಿಧಗಳಿದ್ದು, ಸ್ತ್ರೀಲಿಂಗಕ್ಕೆ ಪ್ರತ್ಯೇಕ ಪದವಿಲ್ಲ. ಗೌಡ ಕನ್ನಡದ ಸರ್ವನಾಮಗಳಲ್ಲಿ ಪುಲ್ಲಿಂಗ ಮತ್ತು ಪುಲ್ಲಿಂಗೇತರಗಳಿಗೆ ಸಂವಾದಿಯಾಗಿ ಬರುವ ಕ್ರಿಯಾಪದಗಳಲ್ಲಿ ಯಾವುದೇ ವ್ಯತ್ಯಾಸವಿಲ್ಲದೆ ಏಕ ರೀತಿಯ ನಪುಂಸಕ ಪ್ರತ್ಯಯಾಂತ ರೂಪ ಬರುತ್ತದೆ. ಸರ್ವನಾಮಗಳಲ್ಲಿ ಸ್ತ್ರೀಲಿಂಗಕ್ಕೆ ಸ್ಥಾನವಿಲ್ಲದಿದ್ದರೂ ತದ್ಧಿತಾಂತಗಳಲ್ಲಿ ಸ್ತ್ರೀಲಿಂಗ ಪ್ರತ್ಯಯಗಳಿರುವುದು ಕಂಡು ಬರುತ್ತದೆ (ಕಳ್ಳಿ, ನಂಟತಿ, ಮೊಡ್ಡೋಳತಿ).

ಗೌಡ ಕನ್ನಡದ ವಿಭಕ್ತಿ ಪ್ರತ್ಯಯಗಳು ಕೂಡ ಶಿಷ್ಟ ಕನ್ನಡಕಿಂತ ವಿಭಿನ್ನವಾಗಿದೆ ಎಂದು ಕಂಡುಕೊಳ್ಳಲಾಗಿದೆ. ಇಲ್ಲಿ ದ್ವಿತೀಯ ಮತ್ತು ಷಷ್ಠಿ ವಿಭಕ್ತಿ ಪ್ರತ್ಯಯಗಳು ಹಾಗೂ ತೃತೀಯ ಮತ್ತು ಪಂಚಮಿ ವಿಭಕ್ತಿ ಪ್ರತ್ಯಯಗಳು ಏಕ ರೂಪದಲ್ಲಿರುವುದನ್ನು ಕಾಣುತ್ತೇವೆ.

ಗೌಡ ಕನ್ನಡದಲ್ಲಿರುವ ವಿಶೇಷಣಗಳು ಶಿಷ್ಟ ಕನ್ನಡದಲ್ಲಿರುವ ವಿಶೇಷಣಗಳೊಂದಿಗೆ ಕೆಲವು ಭಿನ್ನತೆಯಿಂದ ಕೂಡಿದ್ದು ವಿಶಿಷ್ಟವಾಗಿದೆ (ಲಾಚಾರ್, ತೋರ, ತೆಳ್ಳಂಗೆ).

ಗೌಡ ಕನ್ನಡದಲ್ಲಿ ಶಿಷ್ಟ ಕನ್ನಡಕ್ಕಿಂತ ಬಹಳಷ್ಟು ಭಿನ್ನವಾದ ಕ್ರಿಯಾರಚನೆಗಳಿವೆ. ಶಿಷ್ಟ ಕನ್ನಡದ 'ಉ'ಕಾರಾಂತ ಕ್ರಿಯಾರಚನೆಗಳು ಗೌಡ ಕನ್ನಡದ ಕ್ರಿಯಾರಚನೆಗಳ ಅಂತ್ಯದಲ್ಲಿ 'ಇ' ಧ್ವನಿಮಾದ ಉಪಧ್ವನಿಯಾಗಿದೆ. 'ಇ'ಕಾರಾಂತ ಪದಗಳು 'ಎ'ಕಾರಾಂತವಾಗಿ ಬಳಕೆಯಾಗುತ್ತವೆ. ಶಿಷ್ಟ ಕನ್ನಡದ ಕ್ರಿಯಾರಚನೆಗಳ ಪದಾದಿಯ ಸ್ವರ 'ಅ' ಗೌಡ ಕನ್ನಡದಲ್ಲಿ 'ಒ' ಆಗುತ್ತದೆ. ಗೌಡ ಕನ್ನಡಕ್ಕೆ ವಿಶೇಷವಾಗಿರುವ ಹಾಗೂ ಗೌಡ ಕನ್ನಡದಲ್ಲಿ ಮಾತ್ರ ಬಳಕೆಯಲ್ಲಿರುವ ಕ್ರಿಯಾರಚನೆಗಳನ್ನು ಗುರುತಿಸಲಾಗಿದೆ. ಯಾವುದೇ ಬದಲಾವಣೆ ಹೊಂದದೆ ಶಿಷ್ಟ ಕನ್ನಡದಂತೆಯೇ ಇರುವ ಕ್ರಿಯಾರಚನೆಗಳು ಗೌಡ ಕನ್ನಡದಲ್ಲಿದೆ.

ಕೆಲವು ಕ್ರಿಯಾರಚನೆಗಳು ಶಿಷ್ಟ ಕನ್ನಡದ ಕ್ರಿಯಾರಚನೆಗಳಿಗೆ ಸಮೀಪವಾಗಿದ್ದು, ಇವುಗಳಲ್ಲಿರುವ ಕೆಲವು ಧ್ವನಿಗಳ ಆದಿ ಅಂತ್ಯ ಸ್ವರಗಳಲ್ಲಿ ವ್ಯತ್ಯಾಸವಿದೆ (ಕಡೆ-ಕಡಿ). ಕೆಲವು ಶಿಷ್ಟ ಕನ್ನಡದ ಕ್ರಿಯಾರಚನೆಗಳಿಗೆ ಪ್ರತಿಯಾಗಿ ಗೌಡ ಕನ್ನಡದಲ್ಲಿ ಭಿನ್ನವಾದ ಕ್ರಿಯಾರಚನೆಗಳನ್ನು ಕಾಣಬಹುದು (ಅದ್ದು-ಕಂತ್‌ಸ್, ಎರಚು-ಚೋಂಪ್).

ಈ ಅಧ್ಯಯನದ ಮುಖ್ಯ ಭಾಗವಾದ ಗೌಡ ಕನ್ನಡದ ಭಾಷಿಕ ನೆಲೆಗಳನ್ನು ಗಮನಿಸಿದಾಗ ಕೊಡಗಿನಲ್ಲಿ ಗೌಡ ಕನ್ನಡ ಭಾಷೆಯನ್ನಾಡುವ ಜನರ ಸಾಮಾಜಿಕ ಲಕ್ಷಣ, ಸಾಂಸ್ಕೃತಿಕ ಹಿನ್ನೆಲೆ ಹಾಗೂ ಬದುಕಿನ ಪರಿಸರದಲ್ಲಿ ಅವರು ನಡೆಸುವ ಚಟುವಟಿಕೆಗಳಲ್ಲಿ ಇರುವ ಭಾಷಿಕ ವೈವಿಧ್ಯಗಳನ್ನು ಭಾಷಿಕ ನೆಲೆಗಳಾದ ಗಾದೆಗಳು, ಒಗಟುಗಳು, ಸಂಬಂಧವಾಚಕಗಳು, ಸಂಬೋಧನಾ ರೂಪಗಳು, ಬಾಲಭಾಷೆ, ವ್ಯಕ್ತಿನಾಮಗಳು ಹಾಗೂ ಕುಟುಂಬ ನಾಮಗಳು ಇವುಗಳ ಅಧ್ಯಯನದ ಮೂಲಕ ಕೊಡಗಿನ ಗೌಡ ಜನಾಂಗದವರ ಸಮಾಜ, ಸಂಸ್ಕೃತಿ ಮತ್ತು ಭಾಷೆಯ ಸಂಬಂಧವನ್ನು ಕಂಡುಕೊಳ್ಳಲಾಗಿದೆ.

ಇತರ ಭಾಷೆಗಳಲ್ಲಿರುವ ಗಾದೆಗಳಿಗೆ ಸಮಾನ ಗಾದೆಗಳು ಗೌಡ ಕನ್ನಡದಲ್ಲೂ ಕಂಡುಬರುತ್ತವೆ. ಗೌಡ ಕನ್ನಡದಲ್ಲಿರುವ ಗಾದೆಗಳನ್ನು ಅವುಗಳ ವಸ್ತು ವಿಷಯಗಳಿಗೆ ಅನುಗುಣವಾಗಿ ಬೇಸಾಯ, ಗಿಡಮರ, ಸಂಬಂಧವಾಚಿಗಳು, ವೃತ್ತಿ, ವರ್ಗ, ಆಹಾರ ಪದಾರ್ಥ, ಮಳೆ, ಬೆಂಕಿ, ಪ್ರಾಣಿಪಕ್ಷಿ ಇತ್ಯಾದಿಗಳಿಗೆ ಸಂಬಂಧಿಸಿದ ಗಾದೆಗಳನ್ನು ಪಟ್ಟಿ ಮಾಡಲಾಗಿದೆ.

ಎಲ್ಲೆಡೆಯಲ್ಲೂ ಕಾಣುವ ಗಾದೆಗಳ ಲಕ್ಷಣಗಳು ಕೊಡಗಿನ ಗೌಡ ಜನಾಂಗದವರ ಭಾಷೆಯಾದ ಗೌಡ ಕನ್ನಡದಲ್ಲೂ ಇದೆ. ರಚನೆಯನ್ನು ಗಮನಿಸಿದರೆ ಪ್ರಾಸ ಅನುಪ್ರಾಸ ಇತ್ಯಾದಿಗಳು ಇಲ್ಲೂ ಇವೆ. ಇಲ್ಲಿನ ಅನೇಕ ಗಾದೆಗಳು ಬೇರೆಡೆ ಇರುವಂತಹದ್ದೇ ಆದರೂ ಇಲ್ಲಿನ ಭೌಗೋಳಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಲಕ್ಷಣಗಳನ್ನು ಒಳಗೊಂಡಿದೆ. ಈ ಗಾದೆಗಳು ಇಲ್ಲಿ ವಿಶಿಷ್ಟವಾದುದಾಗಿದೆ.

ಕೊಡಗಿನ ಗೌಡ ಕನ್ನಡ ಭಾಷೆಯಲ್ಲಿ ಒಗಟುಗಳನ್ನು 'ಒಡ್ಸಕತೆ, ಎದ್‌ರ್ ಕತೆ' ಎಂದು ಹೇಳುವರು. ಗೌಡ ಕನ್ನಡದಲ್ಲಿ ಶಿಷ್ಟ ಕನ್ನಡದಲ್ಲಿರುವ ಒಗಟುಗಳು ಹೆಚ್ಚಿನ ಸಂಖ್ಯೆಯಲ್ಲಿವೆ. ಅಲ್ಲದೇ ಪ್ರಾದೇಶಿಕ ಭಿನ್ನತೆ ಹಾಗೂ ಸಾಮಾಜಿಕ ಹಿನ್ನೆಲೆಯಲ್ಲಿರುವ ಶಿಷ್ಟ ಕನ್ನಡದಲ್ಲಿಲ್ಲದ ವಿಶಿಷ್ಟವಾದ ಒಗಟುಗಳು ಇಲ್ಲಿವೆ (ಕಣ್ಣ್ ಕಾಣದ ಅಜ್ಜ ಪಾಲ ದಾಟುದು–ಉಂಬುಳು). ಕೊಡಗಿನಲ್ಲಿ ಗೌಡ ಕನ್ನಡದಲ್ಲಿ ಬಳಸಲಾಗುವ ಒಗಟುಗಳನ್ನು ಅದರ ಅರ್ಥದೊಂದಿಗೆ ತಿಳಿಸಲಾಗಿದೆ.

ಕೊಡಗಿನ ಗೌಡ ಸಮುದಾಯದಲ್ಲಿ ಅಭಿವ್ಯಕ್ತಗೊಳ್ಳುವ ಸಂಬಂಧವಾಚಕಗಳ ಸ್ವರೂಪ ಮತ್ತು ಬಳಕೆಯ ವಿಧಾನಗಳನ್ನು ಇಲ್ಲಿ ನೋಡಲಾಗಿದೆ. ಇವರಲ್ಲಿರುವ ಸಂಬಂಧವಾಚಕಗಳನ್ನು ರಕ್ತ ಸಂಬಂಧದಿಂದ ಉಂಟಾಗುವ ಸಂಬಂಧವಾಚಕಗಳು, ವೈವಾಹಿಕ ಸಂಬಂಧದಿಂದ ಉಂಟಾಗುವ ಸಂಬಂಧವಾಚಕಗಳು ಅಥವಾ ಇತರೆ ಸಂಬಂಧವಾಚಕಗಳು ಎಂದು ವರ್ಗೀಕರಿಸಿಕೊಂಡು ಅವುಗಳನ್ನು ಚರ್ಚಿಸಲಾಗಿದೆ. ರಕ್ತಸಂಬಂಧದಿಂದ ಉಂಟಾಗುವ ಸಂಬಂಧವಾಚಕಗಳು ಹಿಂದಿನ ಸಂತತಿ, ಮುಂದಿನ ಸಂತತಿ ಹಾಗೂ ಸಮಕಾಲೀನ ಆಪ್ತ ಸಂತತಿಗಳಲ್ಲಿ ಯಾವ ರೂಪಗಳಲ್ಲಿದೆ ಎಂಬುದನ್ನು ಕಂಡುಕೊಳ್ಳಲಾಗಿದೆ.

ಕೊಡಗಿನ ಗೌಡರಲ್ಲಿನ ಸಂಬಂಧವಾಚಕಗಳಲ್ಲಿ ಅಯ್ಯೆ (ತಾಯಿ), ತಾವ (ಅಜ್ಜಿ), ಕುಞಪ್ಪ (ಚಿಕ್ಕಪ್ಪ), ಕುಞವ್ವ (ಚಿಕ್ಕಮ್ಮ), ಬೋಜಪ್ಪ (ಚಿಕ್ಕಪ್ಪ), ಬೋಜವ್ವ (ಚಿಕ್ಕಮ್ಮ) ಇವುಗಳು ವಿಶಿಷ್ಟ ರೂಪಗಳಾಗಿವೆ.

ಮಗನು ಮಜ, ಮಗಳು ಮಗ, ಮೊಮ್ಮಗ/ಮೊಮ್ಮಗಳು ಪಿಳ್ಳಿ ಎನ್ನಿಸಿಕೊಳ್ಳುತ್ತಾರೆ. ಇವೂ ಕೂಡ ಇಲ್ಲಿನ ವಿಶಿಷ್ಟ ಸಂಬಂಧವಾಚಕಗಳಾಗಿವೆ. ಇವರಲ್ಲಿ ಕನ್ನಡದ 'ಸವತಿ' ಎಂಬ ಪದ ಅಥವಾ ಅದಕ್ಕೆ ಸಂವಾದಿಯಾದ ಪದವಿಲ್ಲ. ಬದಲಿಗೆ ಸವತಿಯು ಗಂಡನ 'ಇನ್ನೊಬ್ಬ ಹೆಣ್ಣ್' ಅಥವಾ 'ಎರಡನೇ ಹೆಣ್ಣ್' ಎಂದಾಗುವಳು.

ವೈವಾಹಿಕ ಸಂಬಂದದಿಂದ ಉಂಟಾದ ಸಂಬಂಧವಾಚಕಗಳಲ್ಲಿ ಹೆಂಡತಿಯನ್ನು 'ಹೆಣ್ಣ್' (ಹೆಣ್ಣು) ಎಂದು ಹೇಳುವರು. ಆಂಶಿಕ ರಕ್ತ ಸಂಬಂಧಗಳಾದ ಮಲತಾಯಿ, ಮಲತಂದೆ, ಮಲಮಕ್ಕಳು ಇವರಿಂದ ಉಂಟಾದ ಸಂಬಂಧವಾಚಕಗಳು ಮತ್ತು ಅಳವಡಿಕೆಯಿಂದ ಆದ ಸಂಬಂಧಗಳಾದ ಸಾಕುತಂದೆ, ಸಾಕುತಾಯಿ, ಸಾಕು ಮಕ್ಕಳು ಇವರಿಂದ ಉಂಟಾದ ಸಂಬಂಧವಾಚಕಗಳನ್ನು ಈ ಅಧ್ಯಯನದಲ್ಲಿ ಕಂಡುಕೊಳ್ಳಲಾಗಿದೆ.

ಆಧುನೀಕತೆಯ ಪ್ರಭಾವದಿಂದಾಗಿ ಫಾದರ್, ಮದರ್, ಅಂಕಲ್, ಆಂಟಿ, ಫಾದರ್-ಇನ್-ಲಾ, ಮದರ್-ಇನ್-ಲಾ, ಡಾಟರ್-ಇನ್-ಲಾ, ಕೋ ಸಿಸ್ಟರ್, ಕೋ ಬ್ರದರ್ ಮುಂತಾದ ಸಂಬಂಧವಾಚಕಗಳು ಬಳಕೆಯಲ್ಲಿವೆ.

ಕೊಡಗು ಗೌಡ ಸಮುದಾಯದಲ್ಲಿರುವ ಸಂಬೋಧನಾ ರೂಪಗಳಲ್ಲಿ 'ನೇ' ಸ್ತ್ರೀ ಸಂಬೋಧನಾ ರೂಪವಾಗಿದೆ ಮತ್ತು 'ರಾ' ಪುರುಷ ಸಂಬೋಧನಾ ರೂಪವಾಗಿದೆ (ಬಾನೇ-ಬಾರೇ, ನಾ ಬಾಲೆರಾ-ನಾನು ಬರುವುದಿಲ್ಲ ಕಣೋ) ಇತ್ತೀಚಿನ ದಿನಗಳಲ್ಲಿ ಆಧುನಿಕತೆಯ ಪರಿಣಾಮವಾಗಿ 'ನೇ' 'ರಾ' ಎಂಬುದು ಎರಡೂ ಲಿಂಗಗಳಲ್ಲಿ ಬಳಕೆ ಮಾಡಿರುವುದನ್ನು ಕಾಣಬಹುದು.

ಸಂಬೋಧನಾ ರೂಪಗಳಲ್ಲಿ ಸಂಬೋಧಿಸುವ ಬಗೆಗಳನ್ನು ಪಟ್ಟಿ ಮಾಡಿಕೊಂಡು ವಿವರಿಸಲಾಗಿದೆ. ಇವುಗಳಲ್ಲಿ ಹಿರಿಯರು ಕಿರಿಯರನ್ನು ಸಂಬೋಧಿಸುವ ರೂಪಗಳು, ಕಿರಿಯರು ಹಿರಿಯರನ್ನು ಸಂಬೋಧಿಸುವ ರೂಪಗಳು, ವೈವಾಹಿಕ ಸಂಬಂಧಗಳಲ್ಲಿ ಸಂಬೋಧನಾ ರೂಪಗಳು, ಪುರುಷನಿಂದ ಸಂಬೋಧನಾ ರೂಪಗಳು, ಸ್ತ್ರೀ ಸಂಬೋಧನಾ ರೂಪಗಳು ಹಾಗೂ ಸಾಮಾಜಿಕ ಅವಳಿ ಸಂಬಂಧಗಳಲ್ಲಿ ಸಂಬೋಧನಾ ರೂಪಗಳು ಎಂದು ವಿಂಗಡಿಸಿಕೊಂಡು ಪಟ್ಟಿ ಮಾಡಲಾಗಿದೆ.

ಸಾಮಾಜಿಕ ಅವಳಿ ಸಂಬಂಧಗಳಾದ ಬಾಲಕ-ಬಾಲಕಿಯರು, ಮಾಲೀಕ-ನೌಕರರ ನಡುವಿನ ಪರಸ್ಪರ ಸಂಬೋಧನಾ ರೂಪಗಳನ್ನು ತಿಳಿಸಲಾಗಿದೆ. ಚಿಕ್ಕ ಮಕ್ಕಳು ಪರಿಚಿತ ಹಾಗು ಅಪರಿಚಿತ ಹಿರಿಯರನ್ನು ಸಂಬೋಧಿಸುವ ಬಗೆ ಮತ್ತು ಪರಿಚಿತ ಹಾಗೂ ಅಪರಿಚಿತ ಹಿರಿಯರು ಚಿಕ್ಕ ಮಕ್ಕಳನ್ನು ಸಂಬೋಧಿಸುವ ಬಗೆಗಳ ರೂಪಗಳನ್ನು ಕಂಡುಕೊಳ್ಳಲಾಗಿದೆ. ರಕ್ತ ಸಂಬಂಧಿಗಳಲ್ಲದವರಲ್ಲಿ ಸಂಬೋಧನಾ ರೂಪಗಳು ಎಂಬುದಾಗಿ ಭಾಗ ಮಾಡಿಕೊಂಡು ಅದರಲ್ಲಿ ಸ್ತ್ರೀ ಪುರುಷರು, ಗೆಳೆಯ ಗೆಳತಿಯರು, ಪೂಜಾರಿ ಭಕ್ತರು, ಅಪರಿಚಿತ ಸ್ತ್ರೀ ಪುರುಷರು, ಮಾರುಕಟ್ಟೆ ಹಾಗೂ ಇತರ ಸ್ಥಳಗಳಲ್ಲಿ ಪರಸ್ಪರ ಸಂಬೋಧನಾ ರೂಪಗಳನ್ನು ಕ್ಷೇತ್ರಕಾರ್ಯದಿಂದ ಗುರುತಿಸಿಕೊಂಡು ದಾಖಲಿಸಲಾಗಿದೆ. ಜೊತೆಗೆ ಕೌಟುಂಬಿಕ ಅವಳಿ ಸಂಬಂಧಗಳಾದ ತಂದೆ ತಾಯಿ, ಗಂಡ ಹೆಂಡತಿ, ಮಗ ಮಗಳು, ಸಹೋದರ ಸಹೋದರಿಯರು, ಬಾವ ಮೈದುನ, ಅತ್ತಿಗೆ ನಾದಿನಿ, ಷಡ್ಡಕ ಓರಗಿತ್ತಿ ಇವರ ಸಂಬಂಧಗಳಿಂದಾದ ಸಂಬೋಧನಾ ರೂಪಗಳನ್ನು ಕಂಡುಕೊಳ್ಳಲಾಗಿದೆ.

ಕುಟುಂಬದ ಹಿರಿಯ ಪುರುಷನು 'ಚಾಂಪ/ಚಾಮೆಪ್ಪ', ಕುಟುಂಬದ ಹಿರಿಯ ಸ್ತ್ರೀ 'ಚಾಮೆವ್ವ', ಚಿಕ್ಕಪ್ಪನು ಸಣ್ಣಪ್ಪ, ಕುಞಪ್ಪ, ಬೋಜ, ಚಿಕ್ಕಯ್ಯ ಎಂದು, ಚಿಕ್ಕಮ್ಮ ಕುಞವ್ವ, ಸಣ್ಣವ್ವ ಎಂದು ಸಂಬೋಧಿಸಲ್ಪಡುವರು. ಇವರ ಸಂಬೋಧನಾ ರೂಪಗಳ ಮೇಲೆ ಆಧುನೀಕತೆಯು ಸಾಕಷ್ಟು ಪ್ರಭಾವ ಬೀರಿದೆ. ಇದರಿಂದಾಗಿ ಇವರಲ್ಲಿ ಮಮ್ಮಿ, ಡ್ಯಾಡಿ, ಅಂಕಲ್, ಆಂಟಿ, ಗ್ರಾಂಡ್ ಮಾ, ಮತ್ತು ಗ್ರಾಂಡ್ ಪಾ ಎಂಬ ಸಂಬೋಧನಾ ರೂಪಗಳು ಬಳಕೆಯಲ್ಲಿದೆ.

ಕೊಡಗಿನ ಗೌಡರಲ್ಲಿ ಬೋಜಣ್ಣ ಮತ್ತು ಬೋಜಕ್ಕ ಎಂಬ ಸಂಬೋಧನಾ ರೂಪದಿಂದ ವಿಶೇಷವಾಗಿ ಎರಡನೇ ಅಣ್ಣ ಹಾಗೂ ಎರಡನೇ ಅಕ್ಕಳನ್ನು ಮಾತ್ರ ಸಂಬೋಧಿಸಲಾಗುತ್ತದೆ. ಅಕ್ಕಳನ್ನು ಅಕ್ಕಯ್ಯ, ತಂಗಿಯನ್ನು ತಂಗೆ, ಅಣ್ಣನನ್ನು ಅಣ್ಣಯ್ಯ, ಅಜ್ಜಿಯನ್ನು ಅವ್ವ/ಅವ್ವಯ್ಯ ಎಂದು ಸಂಬೋಧಿಸಲಾಗುತ್ತದೆ.

ಕೊಡಗಿನ ಗೌಡ ಜನಾಂಗದವರ ಮಕ್ಕಳ ಭಾಷೆಯಲ್ಲಿ ಶಿಷ್ಟ ಕನ್ನಡದ ಬಾಲಭಾಷೆಯಲ್ಲಿರುವ ಪದಗಳು ಇವೆ. ಜೊತೆಗೆ ವಿಶಿಷ್ಟವಾದ ರೂಪಗಳೂ ಇವೆ (ತೊಡುವ ಬಟ್ಟೆ–ಕುಪ್ಪ, ರೊಟ್ಟಿ–ಅಪ್ಪಿ, ಸುಂದರ–ಪೊವ್ವ, ಸ್ನಾನ–ಜಿಜ್ಜಿಮೀಯಿ, ದನ–ಬೊಬ್ಬ, ಮೊಲೆಹಾಲು–ಬೋಬು).

ಇಲ್ಲಿರುವ ಶಿಶು ಗೀತೆಗಳು ಹಿರಿಯರು ಮಕ್ಕಳಿಗೆ ಕಲಿಸಿರುವ ಹಾಡುಗಳು. ಇವು ಇಲ್ಲಿನ ಸಾಮಾಜಿಕ, ಭೌಗೋಳಿಕ, ಸಾಂಸ್ಕೃತಿಕ ಅಂಶಗಳ ಹಿನ್ನೆಲೆಯಲ್ಲಿ ರಚನೆಯಾಗಿವೆ. ಇವು ಗೌಡಕನ್ನಡದಲ್ಲಿದೆ. ಮಗುವಿನ ನಾಮಕರಣದಲ್ಲಿ ಹಾಡುವ ಹಾಡುಗಳು ಶಿಷ್ಟ ಕನ್ನಡದಲ್ಲಿದೆ.

ಕೊಡಗಿನ ಗೌಡ ಜನಾಂಗದವರ ವ್ಯಕ್ತಿನಾಮಗಳು ವಿಶಿಷ್ಟವಾಗಿವೆ. ಇವರಲ್ಲಿ ಒಂದು ಬಾರಿ ಹೆಸರು ಒಬ್ಬ ವ್ಯಕ್ತಿಯ ಮೂಲಕ ಒಂದು ಮನೆತನದಲ್ಲಿ ಸೇರಿಕೊಂಡಿತೆಂದರೆ ಅದನ್ನು ಹೊರಹಾಕುವುದು ಕಷ್ಟ. ಇವರ ವ್ಯಕ್ತಿನಾಮಗಳು ಏಕ ಘಟಕ (ಕಾವೇರಿ) ಮತ್ತು ದ್ವಿಘಟಕಗಳಲ್ಲಿವೆ (ಕಾವೇರಿ+ಅಮ್ಮ). ಇವರ ವ್ಯಕ್ತಿನಾಮಗಳಲ್ಲಿ ವಾರ್ಗಿಕಗಳು ನಿರ್ದಿಷ್ಟ ವಾಚಿನಾಮ ಹಾಗೂ ನಿರ್ದಿಷ್ಟ+ವಾರ್ಗಿಕ ವಾಚಿನಾಮ ಎಂದು ಎರಡು ಬಗೆಯ ವಿನ್ಯಾಸದಲ್ಲಿದೆ.

ಕೊಡಗಿನ ವ್ಯಕ್ತಿನಾಮಗಳಲ್ಲಿ ಇರುವ ವಿಶಿಷ್ಟತೆ ಎಂದರೆ ಇವರ ಹೆಸರುಗಳಲ್ಲಿ ಕೇವಲ ಸಂಬಂಧವಾಚಕಗಳು ಮಾತ್ರ ವಾರ್ಗಿಕಗಳಾಗಿವೆ (ಅಪ್ಪ, ಅವ್ವ, ಅಮ್ಮ, ಅಕ್ಕ, ಅಣ್ಣ, ಅಯ್ಯ). ಸಂಬಂಧಸೂಚಕ ವಾರ್ಗಿಕಗಳು ಬಂಧುವಾಚಿಗಳಿಗೆ ವಾರ್ಗಿಕಗಳಾಗಿ ಬಳಕೆಗೊಂಡಿರುವ ವ್ಯಕ್ತಿನಾಮಗಳು ಇವರಲ್ಲಿದೆ (ಅಕ್ಕ+ಅವ್ವ=ಅಕ್ಕವ್ವ, ಕುಞಿ+ಅಪ್ಪ=ಕುಞಪ್ಪ).

ವ್ಯಕ್ತಿಯ ನಿಜನಾಮವನ್ನು ಸಂಕ್ಷಿಪ್ತಗೊಳಿಸಿ ಸಂಬೋಧನೆ ಮಾಡುವದು ಇವರಲ್ಲಿದೆ (ಬೋಪಯ್ಯ–ಬೋಪು, ಪೊನ್ನವ್ವ–ಪೊನ್ನು). ಇವರಲ್ಲಿ ನಿಜನಾಮಗಳೊಂದಿಗೆ ಪರ್ಯಾಯ ನಾಮಗಳನ್ನು ನಾಮಕರಣ ಮಾಡುವರು (ಕಾರ್ಯಪ್ಪ–ಚಾಮಿ). ಹೊಸತನದ ಪ್ರಭಾವದಿಂದಾಗಿ ಸಾಂಪ್ರದಾಯಿಕ ಹೆಸರಿನೊಂದಿಗೆ ಪ್ರಿಯನಾಮಗಳು ಇವರ ವ್ಯಕ್ತಿನಾಮಗಳಲ್ಲಿದೆ (ದಿನು ಚಂಗಪ್ಪ).

ಕೊಡಗಿನ ಅರೆಭಾಷೆ ಗೌಡರಲ್ಲಿ ಇವರ ಹೆಸರಿನ ನಿರ್ದಿಷ್ಟದೊಂದಿಗೆ ಕುಟುಂಬ ನಾಮಗಳು ಬಳಕೆಯಾಗುತ್ತವೆ (ಅಮೆ ಉತ್ತಯ್ಯ). ಒಂದೇ ವ್ಯಕ್ತಿನಾಮವನ್ನು ಹಲವರು ಹೊಂದಿರುವುದು ಇಲ್ಲಿ ಕಂಡು ಬಂದಿದೆ. ಕುಟುಂಬ ನಾಮಗಳ ಮೂಲಕ ಅವರನ್ನು ಗುರುತಿಸಲಾಗುತ್ತದೆ (ಮುಕ್ಕಾಟಿ ಚಂಗಪ್ಪ, ಕುರುಂಜಿ ಚಂಗಪ್ಪ). ಒಂದೇ ಕುಟುಂಬದಲ್ಲೂ ಒಂದೇ ಹೆಸರಿನ ಹಲವು ವ್ಯಕ್ತಿಗಳು ಇರುವುದೂ ಕಂಡುಬಂದಿದೆ. ಇವರನ್ನು ಅವರ ಪ್ರಿಯನಾಮಗಳಿಂದ ಗುರುತಿಸಲಾಗುತ್ತದೆ (ರಾಜು ಬೆಳ್ಳಿಯಪ್ಪ, ಮಿಟ್ಟು ಬೆಳ್ಳಿಯಪ್ಪ). ಹಾಗೂ ಅವರು ವಾಸಿಸುವ ಸ್ಥಳದ ಆಧಾರದ ಮೇಲೂ ಅವರನ್ನು ಗುರುತಿಸಲಾಗುತ್ತದೆ (ಕೆಳಗೆಮನೆ ಉತ್ತಯ್ಯ, ಕೊಪ್ಪದ ಉತ್ತಯ್ಯ, ದೊಡ್ಡಮನೆ ಉತ್ತಯ್ಯ).

ಕೊಡಗಿನ ಗೌಡರಲ್ಲಿ ಮಗುವಿಗೆ ಇಟ್ಟ ಹೆಸರಿನ ಮುಂದೆ ತಂದೆಯ ಹೆಸರು, ಮನೆ ಹೆಸರು ಸೇರಿ ಕೊಳ್ಳುತ್ತದೆ (ಚಂಡೀರ ಅಯ್ಯಪ್ಪ ಪೂಣಚ್ಚ). ಆಂಗ್ಲೀಕರಣದ ಪ್ರಭಾವದಿಂದಾಗಿ ಮನೆಹೆಸರು ಮತ್ತು ತಂದೆಯ ಹೆಸರು ಸಂಕ್ಷಿಪ್ತಗೊಂಡು ಏಕಾಕ್ಷರಗಳಾಗಿ ವ್ಯಕ್ತಿನಾಮದೊಂದಿಗೆ ಬಳಕೆಯಾಗುತ್ತದೆ (ಸಿ.ಎ. ಪೂಣಚ್ಚ). ಹೆಣ್ಣು ಮಕ್ಕಳಿಗೆ ವಿವಾಹದ ನಂತರ ಪತಿಯ ಮನೆಯಲ್ಲಿ ಕರೆಯಲು ಹೊಸ ಹೆಸರನ್ನು ಇಡುವ ಪದ್ಧತಿ ಇವರಲ್ಲಿದೆ. ಇದು ಹಿಂದಿನಿಂದ ನಡೆದು ಬಂದಿದ್ದರೂ ಇತ್ತೀಚೆಗೆ ಇದು ಬೆರಳೆಣಿಕೆಯಷ್ಟು ಮಾತ್ರ ಕಂಡುಬಂದಿದೆ. ಕೊಡಗು ಗೌಡರ ಹೆಸರುಗಳ ಅರ್ಥಗಳನ್ನು ಕಂಡುಕೊಳ್ಳಲಾಗಿದೆ.

ಕೊಡಗು ಜಿಲ್ಲೆಯಲ್ಲಿ ಕೊಡವರ ಮತ್ತು ಗೌಡರ ಹೆಸರುಗಳು ಒಂದೇ ರೀತಿಯಾಗಿ ಇರುವುದು ಕಂಡು ಬಂದಿದೆ. ಗೌಡರ ಪುರುಷರ ವ್ಯಕ್ತಿನಾಮಗಳಲ್ಲಿ ಇವುಗಳು ತಲೆಮಾರಿನಿಂದ ತಲೆಮಾರಿಗೆ ಗಣನೀಯವಾಗಿ ಪರಿವರ್ತನೆಯಾಗಿದೆ. ತಲೆಮಾರು ೧-೨ರಲ್ಲಿ ಇದ್ದ ಹೆಸರುಗಳು ತಲೆಮಾರು ೩ರಲ್ಲಿ ಕಾಣೆಯಾಗಿ, ಆಧುನಿಕ ಪ್ರಿಯನಾಮಗಳು ವ್ಯಕ್ತಿನಾಮಗಳಾಗಿವೆ (ಸೀತೆ, ದೇವರಾಜು). ತಲೆಮಾರು ೪ರಲ್ಲಿ ಪ್ರಿಯನಾಮದೊಂದಿಗೆ ಇವರ ಸಾಂಪ್ರದಾಯಿಕ ಹೆಸರುಗಳು ಜೊತೆಯಾಗಿ ಕಾಣಿಸಿಕೊಂಡಿವೆ (ಗೌತಮ್ ಕುಶಾಲಪ್ಪ, ಯಜ್ಞ ಬೋಪಣ್ಣ). ಆದರೆ ಸ್ತ್ರೀ ನಾಮಗಳಲ್ಲಿ ತಲೆಮಾರು ೧ರಲ್ಲಿದ್ದ ಸಾಂಪ್ರದಾಯಿಕ ಹೆಸರುಗಳು ತಲೆಮಾರು ೨ರಲ್ಲಿ ಅಲ್ಲಲ್ಲಿ ಕಂಡುಬಂದರೆ ತಲೆಮಾರು ೩ರಲ್ಲಿ ಸಂಪೂರ್ಣ ಕಾಣೆಯಾಗಿ ೪ರಲ್ಲಿ ಅಲ್ಲಲ್ಲಿ ಕಂಡುಬಂದಿದೆ. ಕೊಡಗು ಅರೆಭಾಷೆ ಗೌಡರ ವ್ಯಕ್ತಿನಾಮಗಳು ಹಿರಿಯರಿಂದ, ಕಿರಿಯರಿಂದ ಮತ್ತು ಸ್ನೇಹಿತರಿಂದ ಸಂಬೋಧನೆಗೊಳ್ಳುವ ರೂಪಗಳನ್ನು ಸಂಗ್ರಹಿಸಲಾಗಿದೆ.

ಕೊಡಗಿನಲ್ಲಿ ಗೌಡ ಕುಟುಂಬಗಳನ್ನು ಗುರುತಿಸಲು ಅವುಗಳಿಗೆ ಹೆಸರುಗಳನ್ನು ಇಡಲಾಗಿದೆ. ಈ ಕುಟುಂಬ ನಾಮಗಳನ್ನು ಕೊಡಗಿನಲ್ಲಿ ಮನೆಹೆಸರುಗಳು ಎಂದು ಕರೆಯುತ್ತಾರೆ. ಇಲ್ಲಿ ಪ್ರತಿಯೊಂದು ಅರೆಭಾಷೆ ಗೌಡ ಕುಟುಂಬಕ್ಕೂ ಒಂದೊಂದು ಹೆಸರು ಇದೆ. ಇವರಲ್ಲಿರುವ ಹದಿನೆಂಟು ಗೋತ್ರ ಅಥವಾ ಬಳಿಗಳಿಗೆ ತಲಾ ಒಂದೊಂದಕ್ಕೂ ಹಲವು ಕುಟುಂಬಗಳು

ಒಳಪಡುತ್ತವೆ. ಈ ಒಂದೇ ಗೋತ್ರಕ್ಕೆ ಸೇರಿದ ಕುಟುಂಬಗಳ ಹೆಣ್ಣು ಗಂಡುಗಳಲ್ಲಿ ವಿವಾಹ ನಿಷೇಧ. ಮೊತ್ತ ಮೊದಲು ಕೊಡಗಿನ ಗೌಡರು ಹತ್ತು ಕುಟುಂಬದವರಾಗಿದ್ದು, ಕಾಲಕ್ರಮೇಣ ಅವು ಬೆಳೆದು ಒಡೆದು ಹದಿನೆಂಟು ಗೋತ್ರಗಳಾಗಿ ವಿಂಗಡಿಸಲ್ಪಟ್ಟವು.

ಕೊಡಗು ಗೌಡ ಸಮುದಾಯದಲ್ಲಿ ಸುಮಾರು ಮುನ್ನೂರ ಐವತ್ತಕ್ಕೂ ಹೆಚ್ಚು ಗೌಡ ಕುಟುಂಬಗಳಿದ್ದು, ಅವುಗಳಿಗೆ ಮನೆಹೆಸರುಗಳಿವೆ. ಇವುಗಳನ್ನು ಸಂಗ್ರಹಿಸಿ ಅಕಾರಾದಿಯಾಗಿ ತಿಳಿಸಲಾಗಿದೆ. ಆ ಕುಟುಂಬಗಳ ಹೆಸರುಗಳ ಆಧಾರದ ಮೇಲೆ ಅವುಗಳನ್ನು ವ್ಯಕ್ತಿವಾಚಿ ಕುಟುಂಬ ನಾಮಗಳು, ವಸ್ತುವಾಚಿ ಕುಟುಂಬ ನಾಮಗಳು ಮತ್ತು ಸ್ಥಳವಾಚಿ ಕುಟುಂಬ ನಾಮಗಳು ಎಂಬುದಾಗಿ ವಿಂಗಡಿಸಿಕೊಂಡು ಅದರ ಹಿನ್ನೆಲೆಯನ್ನು ಉದಾಹರಣೆಯ ಮೂಲಕ ತಿಳಿಸಲಾಗಿದೆ.

ಕೊಡಗು ಜಿಲ್ಲೆಯ ವೀರರಾಜೇಂದ್ರ ಪೇಟೆ ತಾಲ್ಲೂಕಿನ ಚೇಲಾವರ ಎಂಬ ಗ್ರಾಮದಲ್ಲಿರುವ 'ಜೈನೀರ' ಎಂಬ ಗೌಡ ಕುಟುಂಬವು ಭಾಷೆ ಮತ್ತು ಆಚರಣೆಯಲ್ಲಿ ಉಳಿದ ಗೌಡರಿಗಿಂತ ಭಿನ್ನವಾಗಿದೆ. ವ್ಯಕ್ತಿವಾಚಿಯಾದ ಈ ಕುಟುಂಬವು ಆ ವ್ಯಕ್ತಿಯ ಮೂಲಕ್ಕೆ ಸಂಬಂಧಿಸಿದ ಆಚರಣೆಯನ್ನೇ ನಡೆಸಿಕೊಂಡು ಬಂದಿದೆ. ಅಮ್ಮ ಕೊಡವ ಕನ್ಯೆಯನ್ನು ವರಿಸಿ ಆಕೆಯ ಭಾಷೆ ಮತ್ತು ಪ್ರಾದೇಶಿಕ ಭಾಷೆ ಕೊಡವ ಭಾಷೆಯನ್ನೇ ಮನೆಮಾತಾಗಿ ಇವರು ಉಳಿಸಿಕೊಂಡಿದ್ದಾರೆ. ಗೌಡ ಕುಟುಂಬವಾದ್ದರಿಂದ ಜನಾಂಗದ ಜೊತೆ ಗೌಡ ಕನ್ನಡವನ್ನೇ ಬಳಸುವರು.

ಕೊಡಗಿನ ಗೌಡ ಕುಟುಂಬಗಳಲ್ಲಿ ಕೆಲವು ಕುಟುಂಬಗಳಿಗೆ ಎರಡು ಮನೆ ಹೆಸರುಗಳಿವೆ. ಇದರಲ್ಲಿ ಒಂದು ಹೆಸರು ಸ್ಥಳನಾಮವು ಕುಟುಂಬ ನಾಮವಾಗಿರುವುದಾಗಿದೆ. ಇವರಲ್ಲಿ ಒಂದು ಕುಟುಂಬಕ್ಕೆ ಸೇರಿದ ಒಬ್ಬ ವ್ಯಕ್ತಿಯು ಎಲ್ಲೇ ಇದ್ದರೂ ಜನಾಂಗದ ನೆಲೆಯಲ್ಲಿ ಆತನು ತನ್ನ ಮನೆ ಹೆಸರಿನಿಂದ ಗುರುತಿಸಿಕೊಳ್ಳುತ್ತಾನೆ.

ಕೊಡಗಿನ ಗೌಡರ ಭಾಷೆಯಾದ ಗೌಡ ಕನ್ನಡದಲ್ಲಿ ನುಡಿಗಟ್ಟುಗಳನ್ನು 'ಒಡ್ಸಕತೆ' ಎನ್ನುವರು. ಇವರಲ್ಲಿರುವ ಒಡ್ಸಕತೆಗಳನ್ನು ಅವುಗಳ ಅರ್ಥ ಮತ್ತು ಬಳಕೆಯನ್ನು ವಿವರಿಸಲಾಗಿದೆ. ಇಲ್ಲಿ ಒಂದು ಪದ (ಕಿಚ್ಚ್), ಎರಡು ಪದ (ಉರಿ ಕೊಳ್ಳಿ) ಮತ್ತು ಮೂರು ಪದ (ಕೋಳಿ ತಲೆಗೆ ನೀರಾಕಂವ)ಗಳಿರುವ ನುಡಿಗಟ್ಟುಗಳು ಬಳಕೆಯಲ್ಲಿವೆ. ಇಲ್ಲಿ ಗೌಡ ಕನ್ನಡದ ನುಡಿಗಟ್ಟುಗಳೊಂದಿಗೆ ಶಿಷ್ಟ ಕನ್ನಡದಲ್ಲಿರುವ ನುಡಿಗಟ್ಟುಗಳೂ ಗೌಡಕನ್ನಡದ ರೂಪದಲ್ಲಿ ಬಳಕೆಯಾಗುತ್ತವೆ (ಟೋಪಿ ಹಾಕು–ತೊಪ್ಪಿ ಹಾಕ್). ಗೌಡ ಕನ್ನಡದಲ್ಲಿ ವಿಶಿಷ್ಟವಾಗಿರುವ ನುಡಿಗಟ್ಟುಗಳನ್ನು ಅವುಗಳ ಅರ್ಥದೊಂದಿಗೆ ಉದಾಹರಣೆ ಸಹಿತ ತಿಳಿಸಲಾಗಿದೆ (ಗರ್ಬ ನಡ್‌ಗ್–ಅತಿಯಾಗಿ ಹೆದರು).

ಕೊಡಗು ಜಿಲ್ಲೆ ಒಂದು ಬಹುಭಾಷಿಕ ಪ್ರದೇಶವಾಗಿದೆ. ಇಲ್ಲಿ 'ಕೊಡವ' ಭಾಷೆ ಮತ್ತು 'ಗೌಡ ಕನ್ನಡ' ಭಾಷೆ ಪ್ರಮುಖ ಭಾಷೆಗಳಾಗಿವೆ. ಜನಾಂಗೀಯ ದೃಷ್ಟಿಯಿಂದ ನೋಡಿದರೆ ಇಲ್ಲಿ ವಿವಿಧ ಗುಂಪಿನ ಜನರು, ಬುಡಕಟ್ಟು ಗುಂಪುಗಳು ಇರುವುದು ಕಂಡು ಬಂದಿದೆ. ಇದರಿಂದಾಗಿ

ಇವರ ಭಾಷಿಕ ವ್ಯವಹಾರದಲ್ಲಿ ನುಡಿಬೆರಕೆ ಮತ್ತು ನುಡಿಜಿಗಿತ ಪ್ರಕ್ರಿಯೆಗಳು ನಡೆಯುತ್ತಿದೆ. ಇವುಗಳನ್ನು ಕ್ಷೇತ್ರಕಾರ್ಯದ ಮೂಲಕ ಗುರುತಿಸಿಕೊಳ್ಳಲಾಗಿದೆ.

ಕೊಡಗಿನ ಗೌಡ ಕನ್ನಡದ ಮೇಲೆ ಇಂಗ್ಲಿಶ್ ಭಾಷೆಯ ಪ್ರಭಾವ ಆಗಿದೆ. ಇಲ್ಲಿನ ಭಾಷಿಕ ವ್ಯವಹಾರದಲ್ಲಿ ಹೆಚ್ಚಾಗಿ ಇಂಗ್ಲಿಶ್ ಭಾಷೆಯ ನುಡಿಗಳು ಬೆರೆತಿದೆ. ಕೊಡಗಿನ ಗೌಡ ಕನ್ನಡದಲ್ಲಿ ಇರುವ ಅನೇಕ ಪದಗಳು ಕೊಡವ ಬಾಷೆಯ ಪದಗಳೇ ಆಗಿವೆ. ಕೊಡವ ಭಾಷೆಯ ಪದಗಳು ಅದೇ ಅರ್ಥದಲ್ಲಿ ಗೌಡ ಕನ್ನಡದಲ್ಲಿ ಬಳಕೆಯಾಗುತ್ತಿದೆ. ಈ ಪದಗಳು ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಗೌಡ ಕನ್ನಡಿಗರ ಭಾಷೆ ಗೌಡ ಕನ್ನಡದಲ್ಲಿ ಬಳಕೆಯಲ್ಲಿಲ್ಲ. ಹವ್ಯಕ ಭಾಷೆಯ ಕೆಲವು ಪದಗಳು ಸ್ವಲ್ಪ ಬದಲಾವಣೆಗಳೊಂದಿಗೆ ಗೌಡ ಕನ್ನಡದಲ್ಲಿ ಬಳಕೆಯಲ್ಲಿದೆ. ತುಳು ಭಾಷೆಯ ಪ್ರಭಾವನ್ನು ಇಲ್ಲಿ ಗುರುತಿಸಲಾಗಿದೆ. ನುಡಿ ಜಿಗಿತಗಳಲ್ಲಿ ಇವುಗಳೊಂದಿಗೆ ನೆರೆ ರಾಜ್ಯ ಕೇರಳದ ಭಾಷೆಯಾದ ಮಲಯಾಳಂ ಭಾಷೆಯ ಪ್ರಭಾವವೂ ನುಡಿಜಿಗಿತ ನುಡಿಬೆರಕೆಗಳ ಮೇಲೆ ಆಗಿದೆ. ಇಲ್ಲಿ ಹೆಚ್ಚಾಗಿ ಸಾರ್ವಜನಿಕ ಸಭೆ, ಸಮಾರಂಭಗಳಲ್ಲಿ, ಆಚರಣೆಗಳಲ್ಲಿ, ಸಾರ್ವಜನಿಕ ಸ್ಥಳಗಳಲ್ಲಿ ಇತರ ಭಾಷೆಯ ಜನರು ಪರಸ್ಪರ ಕಲೆತು ಮಾತನಾಡುವ ಸಂದರ್ಭಗಳಲ್ಲಿ ನುಡಿಜಿಗಿತ ಮತ್ತು ನುಡಿಬೆರಕೆಗಳು ಕಂಡು ಬಂದಿದೆ.

ಕೊಡಗಿನ ಗೌಡ ಕನ್ನಡದ ಮೇಲೆ ಕೊಡವ ಭಾಷೆಯ ಪ್ರಭಾವವು ಗಾದೆಗಳು (ಕಯಿಂಜ ಪುತ್ತರಿನ ಪಾಡಿತ್ ಎನ್ನ ಸುಕ), ಒಗಟುಗಳು (ಕಣ್ಣ್ ಕಾಣತ ಅಜ್ಜ ಪಾಲ ದಾಟುವೊ) ಮತ್ತು ನುಡಿಗಟ್ಟುಗಳ (ಪದ್ರಾಡ್) ಸ್ವೀಕಾರದ ಹಂತದಲ್ಲಿಯೂ ಆಗಿದೆ. ಈ ಪ್ರಭಾವವು ರಾಜಕೀಯ, ಆರ್ಥಿಕ, ಸಾಮಾಜಿಕ, ಪ್ರಾದೇಶಿಕ ಮತ್ತು ಸಾಂಸ್ಕೃತಿಕ ಕಾರಣಗಳಿಂದ ಆಗಿದೆ. ಈ ಕೊಡವ ಪದಗಳು ಅದೇ ಅರ್ಥದಲ್ಲಿ ಗೌಡ ಕನ್ನಡದಲ್ಲಿ ಬಳಕೆಯಲ್ಲಿದೆ. ಹೀಗೆ ಸ್ವೀಕರಣೆಗೊಂಡ ಪದಗಳು ಕೇವಲ ಕೊಡಗಿನ ಗೌಡ ಕನ್ನಡದಲ್ಲಿದ್ದು, ದಕ್ಷಿಣ ಕನ್ನಡ ಜಿಲ್ಲೆಯ ಗೌಡ ಕನ್ನಡದಲ್ಲಿಲ್ಲ. ಆದುದರಿಂದ ಇವುಗಳನ್ನು ಕೊಡವ ಭಾಷೆಯಿಂದ ಆದ ಪ್ರಭಾವ ಎಂದು ಗುರುತಿಸಲಾಗಿದೆ. ಈ ಪದಗಳ ಅರ್ಥವನ್ನು ಕೊಡವ, ಗೌಡ ಕನ್ನಡ ಮತ್ತು ಶಿಷ್ಟ ಕನ್ನಡದಲ್ಲಿ ನೀಡಿ ಉದಾಹರಣೆ ಸಹಿತ ವಿವರಿಸಲಾಗಿದೆ.

ಕೊಡವ ಭಾಷೆಯಲ್ಲಿರುವ ಸಂಬಂಧವಾಚಕಗಳು ಮತ್ತು ಸಂಬೋಧನಾ ರೂಪಗಳು (ಕುಞಪ್ಪ, ಬೋಜಪ್ಪ) ಕೂಡ ಗೌಡ ಕನ್ನಡದಲ್ಲಿ ಬಳಕೆಯಲ್ಲಿದೆ.

ಹವ್ಯಕ ಭಾಷೆ ಮತ್ತು ಗೌಡ ಕನ್ನಡ ಭಾಷೆಯ ನಡುವೆ ಸಾಮ್ಯತೆ ಇದೆ. ಪಂಜ ಸೀಮೆಯಲ್ಲಿರುವ ಹವ್ಯಕರು ಮಾತನಾಡುವ ಭಾಷೆಯು ಗೌಡ ಕನ್ನಡಕ್ಕೆ ಹತ್ತಿರವಾಗಿದೆ. ಗೌಡ ಕನ್ನಡದ ಲಿಂಗ ವ್ಯವಸ್ಥೆ ಮತ್ತು ಹವ್ಯಕ ಕನ್ನಡದ ಲಿಂಗ ವ್ಯವಸ್ಥೆ ಒಂದೇ ರೀತಿಯಾಗಿದೆ. ಹವ್ಯಕ ಕನ್ನಡದಲ್ಲಿಯೂ ಗೌಡ ಕನ್ನಡದಂತೆಯೇ ಪುಲ್ಲಿಂಗ ಪುಲ್ಲಿಂಗೇತರ ಸರ್ವನಾಮಗಳಲ್ಲಿ ಸ್ತ್ರೀಲಿಂಗಕ್ಕೆ ಪ್ರತ್ಯೇಕ ಪದವಿಲ್ಲ.

ಗೌಡ ಕನ್ನಡದ ಕ್ರಿಯಾರಚನೆಗಳಲ್ಲಿ ಮೊದಲ ಸ್ವರ 'ಒ' ಇದ್ದುದು ಹವ್ಯಕದಲ್ಲಿಯೂ ಕೆಲವೊಂದು ಇದೇ ರೂಪದಲ್ಲಿ ಕಂಡು ಬಂದಿದೆ (ಕೊಣಿ, ಹೊರಿ). ತುಳು ಮತ್ತು ಗೌಡಕನ್ನಡದಲ್ಲಿ ಬಹುಸಂಖ್ಯೆಯ ಪದಗಳು ರೂಪ ಸಾದೃಶ್ಯ ಮತ್ತು ಅರ್ಥ ಸಾದೃಶ್ಯದಿಂದ ಒಂದೇ ಬಗೆಯಾಗಿ ಬಳಕೆಯಲ್ಲಿದೆ (ಪಿಜಿನ್, ಮಾಯ್ಪು). ಇವೇ ಅಲ್ಲದೆ ತುಳುವಿನ ಗಾದೆಗಳು (ಅಜ್ಜಿ ತಾಂಕಿನ ಪುಳ್ಳಿ ಬೊಜ್ಜ ತಿನಿಯರೆ) ಒಗಟುಗಳು (ಅಪ್ಪೆ ಕೊರಿ ಪಜೆ ಮಡಿಪರೆ ಬಲ್ಲಿ ಅಮ್ಮೆ ಕೊರಿ ಪಣವು ಲೆಕ್ಕ ಮಲ್ಪರೆ ಬಲ್ಲಿ) ಇತ್ಯಾದಿಗಳು ಗೌಡ ಕನ್ನಡದಲ್ಲಿ ಬಳಕೆಗೊಳ್ಳುತ್ತದೆ.

ಒಟ್ಟಾರೆ ಗೌಡಕನ್ನಡವು ಕನ್ನಡದ ಪ್ರಭೇದ ಭಾಷೆಯಾಗಿ ತನ್ನತನವನ್ನು ಉಳಿಸಿ ಕೊಂಡಿರುವುದನ್ನು ಈ ಅಧ್ಯಯನದಲ್ಲಿ ಕಂಡುಕೊಳ್ಳಲಾಗಿದೆ.

ಅನುಬಂಧಗಳು

ಅನುಬಂಧ ೧

ಕಥೆ : ೧ ಅಪ್ಪನ ರಂಪಾಟ

ಪೇಟೆಗೆ ಅಪ್ಪ ನನ್ನನೇ ಕರ್ಕಂಡೋದು. ಅಕ್ಕಯ್ಯ ಮರ್ಟರಲ್ಲ ಏನ್ ಮಾಡಿರೂ ಕರ್ಕಂಡೋದ್ಲೆ. ಯಾಕೆತ ನಂಗೆ ಈಗ ಗೊತ್ತಾತ್. ಅಪ್ಪ ಪೇಟೆಲಿ ನನ್ನ ನಿಂಗೆ ಅದ್ ಬೇಕಾಮನೆ, ಇದ್ ಬೇಕಾಮನೆತ ಕೇಳ್ದು, ನಾನ್ ಬ್ಯಾಡ ಬ್ಯಾಡತ ಹೇಳ್ದು. ಅಕ್ಕಯ್ಯ ಮಾತ್ರ ಅದ್ ಬೇಕ್, ಇದ್ ಬೇಕ್‌ತ ಹಟ ಮಾಡ್ದು. ಅದಿಕೆ ನನ್ನನ ಕರ್ಕಂಡೋದರೆ ದುಡ್ಡು ಕರ್ಚೆ ಇಲ್ಲೆ, ಹೆಗ್‌ಲ್‌ಲಿ ಕೂರ್ಸಿಕಂಡ್ ನನ್ನನ ಕರ್ಕಂಡೋಗ್ತಿತ್ತ್.

ಹಟ್ಟಿಲಿದ್ದ ದೊಡ್ಡ ದೊಡ್ಡ ಎತ್ತ್‌ಗಳ ಮಾರುದು, ಲಾಚಾರಾದ ಎತ್ತ್‌ಗಳ ಕ್ರಯ ಕೊಟ್ಟ್ ತಾದು, ಇದೇ ಅಪ್ಪನ ಕೆಲ್ಸ. ಅದೊಮ್ಮೆ ನಂಗೆ ಸರಿ ಗ್ಯಾನ ಇಲ್ಲೆ, ಗೋಣಿಕೊಪ್ಪಲಿ ದನದ ಸಂತೆ. ಎತ್ತ್ ತರೋಕು ತ ಎಪ್ಪತ್ತ್ ರೂಪಾಯಿನ ಜೋಬಿಗೆ ತುರ್ಕಿಕಂಡ್ ನನ್ನ ಹೆಗ್‌ಲ್‌ಲಿ ಕೂರ್ಸಿಕಂಡ್ ಹೊತಾರೆ ಚುಮಿ ಚುಮಿ ಬೆಳ್‌ಕ್ ಇರ್ಕನೇ ಹೊರ್ಟತ್. ದಾರಿ ಉದ್ದ ನೀನ್ ಹಂಗೆ ಆಕು, ಹಿಂಗೆ ಆಕುತ ಅಪ್ಪ ಹೇಳ್ದಂಗೆ ನಾನ್ ಆತ್ ಆತ್‌ತೇ ಹೆಳ್ತಿದ್ದೆ.

ಮಾರ್ಕೆಟಿಗೆ ಹೋದೊ. ಮೂಡ್‌ಸೀಮೆವು ನೋಡೋಕು, ಎತ್ತ್‌ಗಳ್ಗೆ ಚಟೀರ್ ಪಟೀರ್ತ ಹೊಡ್ದ್ ಓಡ್ಸುದು! ಏತ್ತ್‌ಗ ಆಗ ಬಾಲ ಎತ್ತಿಕಂಡ್ ಓಡ್ತಿದ್ದೊ. ಅಪ್ಪಂಗೆ ಕುಸೀ ಆಗಿ ಪಟಯ ಎತ್ತ್‌ನ ಯಾಪಾರ ಮಾಡ್ತ್. ದಳ್ಳಾಳಿಗ ಅಪ್ಪನ ಸುತ್ತ ಮುತ್ತ ಬಂದ್ ಮುತ್ತಿಕಂಡೊ. ಒಬ್ಬಂತೂ ತಬ್ಬಿಕಂಡತ್. ಹೆಂಗಾರ್ ಮಾಡಿ ದುಡ್ಡು ಚೊಟ್ಟೊಕಲೇ, ಹಂಗೂ ಹಿಂಗೂ ಯಾಪಾರ ಆತ್. ಅಂವ ಎತ್ತ್‌ನ ಅಪ್ಪನ ಕೈಗೆ ಕೊಡಿಕೆ ಮುಂದೆ ಸೊಲ್ಪ ಹುಲ್ಲು, ಸಗ್‌ಣಿ ತಕ್ಕಂಡ್ ಎತ್ತ್‌ನ ಸುತ್ತ ತಂದ್ ಬಿಸಾಕಿ ಬಳ್ಳಿನ ಅಪ್ಪನ ಕೈಗೆ ಕೊಟ್ಟತ್. ಅಪ್ಪನ ಕೈಲಿ ಎತ್ತ್‌ನ ಬಳ್ಳಿ, ಹೆಗ್‌ಲ್ ಮ್ಯಾಲೆ ನಾನ್.

ಮನೆಗೆ ಎತ್ತ್‌ಕನ ಮಯಮಯ ಕತ್ತಲೆ ಆಗಿತ್ತ್. ಅವ್ವ, ಅಕ್ಕಯ್ಯ ನಮ್ಮನೇ ಪಾರ ಕಾಯ್ತಿದ್ದೊ. ಕೆಂಜು ನಾಯಿ ಎತ್ತ್‌ನ ಸುತ್ತ ಸುತ್ತ್‌ಕನ ಎತ್ತ್ ತಪಕ್‌ತ ಒದ್ದತ್. ಆ ಒತ್ತಕೆ ನಾಯಿ ಸೆಗ್‌ಣಿ ಗುಂಡಿಗೆ ಹಾರಿ ಬೀತ್. ಇಲ್ಲಿಂದ ಸುರಾತ್ ಎತ್ತ್‌ನ ಕತೆ. ಅವ್ವಂಗೆ ಹೊಸಾ ಕೆಲ್ಸ ಸುರು. ಮಕ್ಕಳ ಇಸ್ಕೂಲಿಗೆ ಕಳ್ಸೋಕು, ಪಟಯ ಎತ್ತ್‌ನ ಜುಲಾಪಿಗೆ ಮದ್ದ್ ಕೊಡೋಕು, ಬೊಳಿ ಬುಡ್ಕನ ಅಪ್ಪ ಊಡಿಕೆ ಹೋಕನ ಅವ್ವನೂ ಒಟ್ಟಿಗೆ ಹೋಕು. ಇಲ್ಲರೆ ಅಪ್ಪನ ಸಿಟ್ಟ್ ನೆತ್ತಿಗೇರ್ದು. ಗದ್ದೆಲಿ

ನೊಗದ ಯುಡ್ಡ ಬಾಗಕೆ ಪಟಯನ, ಬಲ್ದ ಬಾಗಕೆ ಚೆನಿಯನ ಕಟ್ಟಿದ ಮ್ಯಾಲೆ ಅವ್ವ ಮನೆಗೆ ಬಾದು.

ಒಂದಿನ ಸಾಂಯ್ಕಾಲ ಅಪ್ಪ ಏನ್ ಮಾಡ್ತ್ ಗೊತ್ತುಟ್ಟಾ? ಸೊಲ್ಪ ಹರ್‌ಳೆಣ್ಣೆ ಬೆಳೀ ಬಟ್ಟೆ, ಕಿಚ್ಚಿನ ಪೆಟ್ಟಿಗೆ ತಕ್ಕಂಡ್ ಹಟ್ಟಿಗೋತು. ನಾನ್ ಕೊತ್ತಿಮರಿ ಹಾರ್‍ದಂಗೆ ಹಾರಿಕಂಡ್ ಹೋಗಿ ಮರೇಲಿ ನಿತ್ತ್‌ಕಂಡೆ. ಅಪ್ಪ ಪಟಯ ಎತ್ತ್‌ನ ಕೊಂಬಿಗೆ ಬಟ್ಟೆ ಸುತ್ತಿ ಕೊಡಿಂದ ಯೆಣ್ಣೆ ಹೊಯ್ತ್, ಬೆಂಕಿ ಕಡ್ಡಿ ಗೀರಿ ಬೆಂಕಿ ಕೊಟ್ಟತ್. ಆಗ ಆ ಕೊಂಬ್ ಪಟ್ಟೆ ಪಟ್ಟೆ ಕಾಂಬೊದು. ನಂಗೆ ಪುಕು ಪುಕುತ ಆತಿತ್ತ್. ಕೊಂಬ್‌ಲಿ ಕಿಚ್ಚಿ ಹೊತ್ತಿದೆ. ಅಪ್ಪನ ಕತೆ ಎಂತತ ಗ್ಯಾನ ಮಾಡ್ದೆ. ಗೊತ್ತಾತ್‌ಲೆ. ಅಪ್ಪನೇ ಕೇಳ್ನೋತೇಳ್‌ರೆ ಊಡ್‌ವ ಕೋಲ್‌ಲೇ ಬಾರ್‍ಸಿರೆ ಏನ್ ಮಾಡ್ದು? ಅವ್ವನ ಕೇಳ್ದೆ. ಆಗ "ಎತ್ತ್ ಹುಲ್ಲ್‌ನ ಮುದ್ದೆ ಮುದ್ದೆ ಉಗ್ದದೆ. ಅದಿಕೆ ಹಲ್ಲ್ ಗಟ್ಟಿ ಇಲ್ಲೆ. ಕೊಂಬ್ ಕಾಸಿರೆ ಗಟ್ಟಿ ಆದೆತ ಯಾರೋ ಹೇಳ್ದೊಗಡ! ಅದಿಕೆ ಅಪ್ಪ ಎತ್ತ್‌ನ ಕೊಂಬಿಗೆ ಬೆಂಕಿ ಕೊಟ್ಟದ್"ತ ಅವ್ವ ಹೇಳ್ತ್. ಅಲ್ಲ ಗ್ಯಾನ ಮಾಡಿ, ಆ ಎತ್ತ್ ಎಸ್ಟ್ ಕಸ್ಟಪಟ್ಟಿರ್ದು? ಹೊತಾರೆ ನೋಡ್ದೆ, ಕೊಂಬ್ ಕಪ್ಪಾವುಟು. ಹೊಟ್ಟೆಲಿದ್ದ ಸೆಗ್‌ಣಿನ ಬುಕ್ಕಿ ಬುಕ್ಕಿ ಹಾಕಿಯುಟ್ಟು. ಎತ್ತ್‌ಗೆ ನಿಲ್ಲಿಕೂ ಆದುಲೆ, ಮಲ್ಗಿಕೂ ಆದುಲೆ. ಅಸ್ಟ್ ತುಂಡಾಗಿ ಕಟ್ಟಿರೆ ಹೆಂಗೆ ಮಲ್ಗುದು?

ಇದಾಗಿ ಹದ್ನೈದ್ ದಿನ ಆಗಿರ್ದು, ನಾನ್, ಅಕ್ಕಯ್ಯ ಇಸ್ಕೂಲಿಗೆ ಹೋಗಿ ಮನೆಗೆ ಬಂದರೆ ಅವ್ವಪ್ಪ ಇಬ್ಬರೂ ಮನೆಲಿಲ್ಲೆ. ಹಟ್ಟಿಕಡೆ ಸದ್ದಾದಂಗೆ ಆತ್. ನಾವು ನೆಟ್ಟಂಗೆ ಹಟ್ಟಿಗೋದೊ. ಅಲ್ಲಿ ನೋಡ್ರೆ ಅವ್ವ ಎತ್ತ್‌ನ ಬಾಲ ಹಿಡ್ದ್ ಎಳ್ದದೆ, ಅಪ್ಪ ಕೊಂಬ್‌ನ ಎಳ್ದದೆ, ಎತ್ತ್ ಮಾತ್ರ ಮಸ್‌ಗುದುಲೆ! ಕೆಂಜು ನಾಯಿಗೆ ಕುಸಿಯೋ ಕುಸಿ. ಅದ್ ಅತ್ತೊಮ್ಮೆ ಇತ್ತೊಮ್ಮೆ ಬೊಕ್ ಬೊವ್ವ್‌ತ ಹಾರಾಡ್ದೆ. ಅಪ್ಪ ಅಂಬಟೆ ಕಚ್ಚಿಕಂಡ್ "ಏಳ್ ಏಳ್ ನಿನ್ನ ಬಾಯಿಗೆ"......ತೇಳ್ಕಂಡ್ ಎತ್ತಿದೆ. ಅದೆಲ್ಲಿ ಎದ್ದದೆ? ಕಾಲ್ಕೈಗೆ ಕೋಟ ಹತ್ತಿಟ್ಟು. ನಂಗೆ ಒಂದ್ಕಡೆಂದ ಕುಸೀ ಆತ್. ಯಾಕೆ ಗೊತ್ತುಟ್ಟಾ? ಎತ್ತ್ ಸತ್ತರೆ ಜಡ್ಡ್ ತಿಂಬಕೆ ಗಿಡ್‌ಇ ಬಂದವೆ, ಆಗ ಗಿಡ್‌ಇಗಳಿಗೆ ಕಲ್ಲ್ ಹೊಡೆಯಕ್. ಜಡ್ಡ್ ತಿಂಬಕೆ ನಾಯಿಗ ಕಚ್ಚಾಡ್‌ಕನ ದೊಣ್ಣೆ ತಕಂಡ್ ಬೊಡಿಯಕ್‌ತ.

ಅಪ್ಪ ಮನೆಗೆ ಹೋಗಿ ಕೈಕಾಲ್ ತೊಳ್ದ್ ನಾಕಾಣಿ ಪಾವುಲಿನ ಬೆಳೀ ಬಟ್ಟೆಲಿ ಕಟ್ಟಿಕಂಡ್ ಹಟ್ಟಿಗೆ ಬಾತ್. ಕಾಲ್ ಜೋಡ್ಸಿಕಂಡ್ ಹರಿಕೆ ಹೇಳಿಕೆ ಸುರುಮಾಡ್ತ್. "ಸಾಮಿ ಅಂಗರಂಗೆ ಹೇಳ್ಕೊಂಬೊದ್ ಏನ್‌ತೇಳ್ರೆ, ನೀನ್ ನೋಡ್ದಂಗೆ ಎತ್ತ್ ಅಡ್ಡ ಬಿದ್ದೋವುಟು. ನಿನ್ನ ಹೆಸ್‌ರ್‌ಲಿ ಹಣ್ಕಾಯಿ ಮಾಡ್ತಾ ಒಳೆ. ಮೀದ ನೀರ್‌ಲಾಗಲಿ, ಒಡ್ದ ಕಾಯಿಲಾಗಲಿ, ಮುರ್ದ ಬಾಳೆಹಣ್ಣ್‌ಲಾಗಲಿ ತೊಪ್ಪು ಇರ್ದು, ಆದ ತೊಪ್ಪು ನೊಪ್ಪು ಪಾಲ್ಸಿಕಣೋಕು. ಚೆನಿಯ ಎತ್ತ್ ಇನ್ನೂ ಬಾತ್‌ಲೆ, ಅದರ ಹಟ್ಟಿಗೆ ಬರೊವಂಗೆ ಮಾಡೋಕು. ಹುಲಿ ಬಾಯಿಗೆ ಸಿಕ್ಕಿರೂ ಕಾಪಾಡ್ವ ಬಾರ ನಿಂದ್. ದನಕರ್‌ಗ ಹೋದಲ್ಲಿ ಬಂದಲ್ಲಿ ಸುಕಮುಕ ಕೊಡೋಕು. ಬಂದ ಕಸ್ಟ ಬಂದೋತು. ಇನ್ನ್ ಬಾಕೆ ಬೊಪ್ತ್.

ಈ ನಾಕಾಣಿ ಹಣಲಿ ನೀನ್ ಹಿಡ್ದ್ ನಿಲ್ಲೊಕು ಸಾಮೀ...ಂತೇಳಿ ಸೂರಿಗೆ ಕಟ್ಟಿತ್. ಅಪ್ಪನ ಹೇಳಿಕೆ ಮುಗಿಯಕನ ಅವ್ವ ಸಣ್ಣ ಮೆಣ್ಸ್‌ನ ಅರ್ದ್ದ ತಾತ್.

ಸಣ್ಣ ಮೆಣ್ಸ್‌ನ ಬೆದ್‌ರ್ ಗೊಟ್ಟಕೆ ತುಂಬಿಸಿ ಎತ್ತ್‌ನ ಬಾಯಿ ಬುಡ್ಸಿ ಹೊಯ್ದೊ. ಸೊಪ್ಪ ಹೊತ್ತಿಗೆ ಎತ್ತ್ ಕೆಮಿ ಆಡ್ಸಿತ್. ಆಗ ಹಿಡಿಬಡಿತ ಹೇಳಿ ಏನೇನೋ ಮಾಡ್ಕನ ಎತ್ತ್ ಎದ್ದ್ ನಿಲ್ಲೊಕಾ? ನಿತ್ತ ಎತ್ತ್ ಉರಿ ತಡೆಯಕಾಗದೆ ಚೊರೋತ ಉಚ್ಚೆ ಹೊಯ್ತ್. ನಂಗೆ ಬೇಜಾರಾತ್. ನಾ ಮೊಕ ಪೂಜಿಕಂಡ್ ಮನೆಗೆ ಹೋದೆ.

ಮಾರನೆ ದಿನ ಚೆನಿಯ ಎತ್ತ್ ಹಟ್ಟಿಗೆ ಬಾತ್.ಅದರ ಬೆನ್ನ್ ನೋಡ್ರೆ ಪೂರಾ ಬರೆ ಹಂಗಂಗೇ ಕಂಡದೆ. ಯಾರ ಗದ್ದೆಗೆ ಹೋಗಿತ್ತೋ ಏನೋ, ಕಟ್ಟಿ ಹಾಕಿ ಸಮ ಬಡ್ದೊಳೊ.

ನಾನ್ ಕಾಯಿ ತಕಂಡ್ ಅಂಗರನ ಕಲ್ಲಿಗೆ ಹೊಡ್ದ್ ನೀರ್‌ನ ನಾನೇ ಕುಡ್ದೆ. ಒಂದ್ ಚೂರ್ ಕಾಯಿನ ಕಲ್ಲ್‌ಲೇ ಇಸಿದೆ. ಕಡೇಲಿ ಬಂದ್ ತಿಂದನೆತ ಗ್ಯಾನ ಮಾಡಿಕಂಡ್ ಅಸ್ಟ್ ದೂರ ಹೋಗೊಳೆಯೋ ಇಲ್ಲೆಯೋ ಆ ಕೆಂಜು ನಾಯಿ ಕಾಯಿ ಚೂರ್‌ನ ತಿಂದ್ ಅದೇ ಕಲ್ಲಿಗೆ ಉಚ್ಚೆ ಹೊಯ್ದು ಬಡೋಕಾ? ಚೆ! ಅಂಗರನ ಕಲ್ಲಿಗೆ ಅದ್ ಅಸುದ್ದ ಮಾಡ್ತಲೆ, ನಾನ್ ಕಲ್ಲ್‌ನ ತೊಳ್ದರೆ ನಾಯಿ ಹಿಂಗೆ ಮಾಡ್ತಲೆ, ದೇವನ ಬೈಯ್ಕಂಡೆ ಸಮಾದಾನ ಆತ್. ಯಾಕೆತ ಹೇಳ್ರೆ ಅದನೆಲ್ಲಾ ಆ ದೇವ ಮರೆಲಿ ನೋಡ್ದೆ. ಎದ್ರಿಗೆ ಅದ್ ಬಾದುಲೆ. ಅಂದೂ ಅಸ್ಟೆ, ಇಂದೂ ಅಸ್ಟೆ, ದೇವ ಎದ್ರಿಗೆ ಬಾತೂ ಇಲ್ಲೆ, ಅದ್ ಬಾಕೂ ಇಲ್ಲೆ.

ಕಥೆ: ೨ ಕಾರ್ತಿಂಗಳ ದೆವ್ವ !

ಕಾರ್ತಿಂಗಲಿ ದೆವ್ವಕೆ ಎಡೆ ಇಸದೆ ಇದ್ದರೆ ಉದ್ದಾರ ಇಲ್ಲೆ. ಯಾವುದಾರ್ ಒಂದ್ ಆಯಿತ್ವಾರ ರಾತ್ರಿ ದೆವ್ವಗಳಿಗೆ ಒಳ್ಳ ಒಂದು ಊಟ ಕೊಡ್ದು ಮಾಮೂಲಿ. ಆ ದೆವ್ವಕೆ ಅಂತಿಂತಾ ಕೋಳಿ ಆಕಿಲೆ. ಬಾರೀ ಸುದ್ದ ಮುದ್ರಿಕೆಲಿರೋಕು. ಹೇಂಟೆ ಲಾಕಿಮನಿ ಆದರೆ ಅದ್ ಮೊಟ್ಟೆ ಇಕ್ಕಿರಿಕೆ ಬತ್ತ್. ಮೊಟ್ಟೆ ಇಕ್ಕಿತೋ ಮೊಟ್ಟೆನ ಯಾರೂ ಮುಟ್ಟಂಗಿಲ್ಲೆ. ಆ ಕೋಳಿನೂ, ಮೊಟ್ಟೆನೂ ಒಟ್ಟಿಗೆ ಗೈಪು ಮಾಡೋಕು.

ಎಡೆ ಇಕ್ಕಂವ ಬೆಳಿಗೆಂದೇ ಪಟ್ನಿಲಿರೋಕು. ತಲೆಂದಿಳಿ ಮೀದ್, ಅನ್ನ ಹಾಕದ ರೊಟ್ಟಿನ ತಿನ್ನಕ್. ಅನ್ನ ಉಂಬಕೆ ಬತ್ತ್, ಮದ್‌ಮಾಸ ಮುಟ್ಟಕೆ ಬತ್ತ್. ಹ್ಲಾಂ! ಕೋಳಿನ ಅಂದ್ ಬೆಳಿಗ್ಗೆ ಮೇಯಕೆ ಬುಡ್ದಾಗಲಿ ಅವುಕೆ ಮೇಚಿ ಹಾಕುದಾಗಲಿ ಬತ್ತ್. ಮನೆಯಂವ ಪಟ್ನಿ, ಕೋಳಿಗೆ ಉಪವಾಸ!!! ದೆವ್ವಕೆ ರಾತ್ರಿ ಗದ್ದಾಳದ ಊಟ! ಸರಿ, ಕತ್ತಲಾಕೆ ಮುಂದೆ ಕೊಡಿ ಬಾಳೆಲೆನ ತಂದ್ ಇಸೋಕು. ಕುಟುಂಬಸ್ತರ್ ಇದ್ದರೆ ಅವುಕೆ ಇಲ್ಲರೆ ಕಾಸಾ ನೆಂಟ್‌ರ್‌ಗಳಿಗೆ ಹೇಳಿದ್ದವೆ. ಅವು ಕತ್ತಲಾಕನ ಒಂದಿಬ್ಬರೋ ಇಲ್ಲೆ ಮೂರೋ ಜನ ಬಂದವೆ. ಅಸ್ಟೊತ್ತಿಗೆ ಈ ಮನೆಲಿ ಕೋಳಿನ ಕೊಂದ್ ಹಾಕಿದ್ದವೆ. ಕೋಳಿ ಕೊಲ್ಲ್‌ಕನ ಯಜಮಾನ ಕಾಲ್ ತೊಳ್ದಿರೋಕು. ಅಸ್ಟೇ ಅಲ್ಲ ಕೋಳಿ

ಕಾಲ್‌ನಸ ತೊಳಿಯೋಕು. ಇದೆಲ್ಲಾ ಆದಮೇಲೆ ಕೋಳಿನ ಎರ್‌ಡ್ ಕೈಲಿ ಹಿಡ್‌ಕಂಡ್ ಮನ್‌ಸ್‌ಲೇ ನಾಕ್ ಮಾತ್ ಹೇಳಿಕಂಡ್ ಕೈಯೊಳಗಿದ್ದ ಕೋಳಿ ಸಮೇತ ಎತ್ತಿ ನಮಸ್ಕಾರ ಮಾಡ್ದಂಗೆ ಮಾಡಿ, ಮತ್ತೆ ಕೋಳಿ ಕಾಲ್, ರೆಕ್ಕೆನೂ ಸೇರ್‌ಸಿ ಹಿಡ್‌ಕಂಡ್ ಇನ್ನೊಂದ್ ಕೈಂದ ಕುತ್ತಿಗೆನ ಕೊಸ್ಕ್ ಕೊಸ್ಕ್‌ತ ಎರ್‌ಡ್ ಮೂರ್ ಸತಿ ಎಳ್ದ್ ಅದರ ನಾಡಿ ತುಂಡು ಮಾಡಿ ಮೆಲ್ಲೆ ನೆಲಕೆ ಹಾಕಿದೆ. ಕೋಳಿ ದಪ ದಪಾಂತ ಒದ್ದಾಡ್ದೆ. ಆಗ ಹೊರಗೆ ಇದ್ದ ಕೋಳಿಗ ಆ ಕೋಳಿಗೆ ಮೆಟ್ಟಿಕೆ ಹೋದವೆ.ಆ ಕೋಳಿಗಳ ಅತ್ತ ಓಡ್ಸಿ ಆಕನ ಇನ್ನೊಂದು ಕೋಳಿನ ಕೊಂದ್‌ಹಾಕಿದೆ. ಮತ್ತೆ ಪುನಾ ಇನ್ನೊಂದ್ ಕೋಳಿನೂ ಕೊಂದದೆ. ಹಿಂಗೆ ಕೆಲವೊಮ್ಮೆ ಮೂರ್, ಐದ್ ಕೋಳಿಗಳ ಕೊಂದ್ ಹಾಕಕನ ಕೆಲವು ಕೋಳಿಗ ಆಕಾಸಕ್ಕೆ ಕಾಲು ಕೊಟ್ಟಂಗೆ ಮಾಡಿ ರೆಕ್ಕೆ ಅಗಲ್ಸಿ ಬಿದ್ದ್ ಕಂಡಿದ್ದವೆ. ಆಗ 'ಹಾರ ತಕಾ, ಲಾಯ್ಕಾಗಿ ಹಾರ ತಕಾಂತ' ಹೇಳೋಕು. ಆದರೂ ಆ ಕೋಳಿ ಹಂಗೇ ಬಿದ್ದಿದ್ದರೆ ಕೈಂದ ಮುಟ್ಟಿಕೆ ಬತ್ತ್. ದೊಣ್ಣೆಂದ ಮೆಲ್ಲ ಅದರ ಉಂದೋಕು. ಆಗ ಅದ್ ಜೀವ ಹೋವ ಸಂಕಟಲಿ ಮತ್ತೊಮ್ಮೆ ಒದ್ದಾಡಿ ಕಂಪ್‌ಂಚಿ ಮಲ್‌ಗಿದೆ. ಮತ್ತೆ ನೀರ್ ತಕ್ಕಳ್ಸಿ ಶುದ್ದ ಮಾಡ್ದ ಮೇಲೆ ಎತ್ತಿಕಂಡ್ ಬಂದ್ ತೊಪ್ಪುಟ ಕೀಳೋಕು. ಹಿಂಗೆ ತೊಪ್ಪುಟ ಕೀಳೊಕನ ಚಕ್ಕಳ ಜಾರಿಕೆ ಬತ್ತ್. ಕೋಳಿನ ಕೊದಿವ ನೀರಿಗೆ ಹಾಕಿ ತೊಪ್ಪುಟ ಕೀಳಿಕಾಗದ್. ಕೊತ್ತಿಯಾಗಲಿ, ನಾಯಿಯಾಗಲಿ ಕೋಳಿದ್ ಕರ್‌ಳ್‌ನೋ ಮತ್ತೊಂದನೋ ತಿಂಬಕೆ ಬತ್ತೇ ಬತ್ತ್. ಹಂಗೆ ತಿಂದರೆ ಅಸುದ್ದ!. ಮಾಸ ಮಾಡ್‌ಕನ ಕರೆಡ ಮತ್ತೆ ಪಟ್ಟೆಕಾಯಿನ ಜೊತೆಯಾಗಿ ಬಾಳೆ ನಾರ್‌ಲಿ ಕಟ್ಟಿ ಬೇಯಕೆ ಹಾಕೋಕು. ಇಲ್ಲರೆ ಕರೆಡನೇ ಬೇರೆ, ಪಟ್ಟೆಕಾಯಿನೇ ಬೇರೆ ಆಗಿ ಎಡೆ ಇಕ್ಕಿಕೆ ಕಸ್ಟ ಆದೆ. ಮಾಸ ಗೈಪು ಬೇಯಕನ ಬೆಂದುಟ್ಟೊ, ಇಲ್ಲೆಯೋ, ಉಪ್ಪು ಉಟ್ಟೋ, ಹುಳಿಯುಟ್ಟೋಂತಾ ರುಚಿ ನೋಡಿಕಾಗದ್. ಗೈಪು ಚಟ್ಟಿದ್ ನಡೂಲಿ ಕುದ್ದರೆ ಎಲ್ಲಾ ಸರಿ ಉಟ್ಟೂತ, ಅದಿಲ್ಲರೆ ಬೆಂಕಿ ಕೊಳ್ಳಿಗೆ ಗೈಪುನ ರಸನ ಹೊಯ್ದ್ ನೋಡುವ ಸಮರ್ತ ಅಡಿಗೆಯವು ಒಳೊ. ಅದಕಿಂತಲೂ ಸಮರ್ತರ್ ಗೈಪು ಕೊದಿಯಕನೇ ಅದರ್‌ಂದ ಹೊರ್ಡುವ ವಾಸನೇಂದನೇ ಗೊತ್ತು ಮಾಡಿಬುಟ್ಟವೆ! ಅಬ್ಬಾ! ಅವರ ಮೂಗೆ!

ಅದೆಲ್ಲಾ ಇರ್ಲಿ, ಇಲ್ಲೊಂದ್ ಕಡೆ ಒಂದ್ ತಮಾಸೆ ಆಗೋತು. ಅಪ್ಪಂಗೆ ವಯಸ್ಸಾತ್, ಮಕ್ಕ ಸಣ್ಣವು. ಆದರೆ ಎಡೆ ಇಕ್ಕದಿದ್ದರೆ ದೆವ್ವಗ ಮನೆ ಸುತ್ತ ಕೊಣ್ದವೆ. ಹಂಗಾರೆ ಯಾರ್ ಕೋಳಿ ಕೊಲ್ಲುದು? ಅಪ್ಪನ ಕೆಲ್ಸ ಅವ್ವಂಗೆ ಬಾತ್. ಓ, ಅವಂಗೆ ಪ್ರಮೋಸನ್. ಆದರೆ ಯೆಡೆ ಇಕ್ಕುದು ಮಾತ್ರ ಅಪ್ಪನೆ. ಸರಿ, ಕೋಳಿ ಕೊಲ್ಲುವ ಕೆಲ್ಸ ಅವ್ವಂಗೆ ಬಂದಾಕನ ಅಯ್ಯೋ! ಹೆಂಗಪ್ಪಾತ ಅವ್ವ ಪರ್‌ದಾಡ್‌ತ್. ಅವ್ವ ಕೋಳಿ ಕೊಂದತೇಲೇತ ಅಲ್ಲ. ನೆಂಟ್‌ರ್ ಗಿಂಟ್‌ರ್ ಬಾಕನ ಕೋಳಿ ಕೊಲ್ಲ್‌ಕನ, ಕೋಳಿ ಕುತ್ತಿಗೆ ಚಕ್ಕಳ ಜಾರಿ ಹೋದರೂ ಹೋಗಲಿ, ಕೆಲವೊಮ್ಮೆ ಕೋಳಿನೇ ಬ್ಯಾರೆ, ತಲೆನೇ ಬ್ಯಾರೆ. ಆದರೂ ಅಗಲಿ ಆದರೆ ದೆವ್ವದ ಕೋಳಿದ್ ಹಮಿ ರಕ್ತನೂ ಬಾಕೇ ಬತ್ತ್.

ಒಂದ್ನೂರ್ ಗಾಯ ಆಗದಂಗೆ ಕೋಳಿದ್ ನಾಡಿ ಮಾತ್ರ ತುಂಡಾಕು. ಹಂಗೆ ಕೊಲ್ಲುದರ್ಲಿ ಅಪ್ಪ ಎಕ್ಸ್‌ಪರ್ಟ್. ಅವ್ವಂಗೆ ಈ ರೀತಿ ಕೊಲ್ಲಿಕೆ ಗೊತ್ತಾಲೆ.

ಅಂದ್ ಮೂರ್ ಕೋಳಿಗಳ ಕೊಲ್ಲೋಕು. ಬೇರೆ ಬೇರೆ ಮೂರ್ ಕುಕ್ಕೆಲಿ ಮುಚ್ಚಿದ ಕೋಳಿನ ಮಕ್ಕ ಹಿಡ್‌ಕಂಡೊ. ಬೆಳಿಗೆಂದ ಕುಕ್ಕೆ ಒಳಗೆ ಸುತ್ತಾಡಿ ಸುತ್ತಾಡಿ ಸುಸ್ತಾಗಿದ್ದ ಕೋಳಿ ಕಾಲೆಲ್ಲಾ ಜಿಡ್ಡಾಗಿತ್ತ್. ನೀರ್‌ತಂದೊ, ಕೋಳಿಕಾಲ್ ತೊಳ್ದೊ, ಅವ್ವನ ಕೈಗೆ ಒಂದ್ ಕೋಳಿನ ಕೊಟ್ಟೊ. ಅಪ್ಪ ಅಂಗಳ ಕರೇಲಿ ದೊಣ್ಣೆ ಊರಿಕಂಡ್ ನಿತ್ತಿತ್ತ್. ಅವ್ವ ಕೋಳಿನ ಎಡಗೈಲಿ ಹಿಡ್‌ಕಣ್ತ್. ಬಲಗೈಲಿ ಕುತ್ತಿಗೆ ಹಿಡ್ಕಂಡ್ ಕೊಸ್ಕ್ ಕೊಸ್ಕತ ಕೊಸ್ಕಿತ್. ಕೋಳಿಗೆ ಏನೂ ಆತೇಲೆ. ಇನ್ನ್ ಮೆಲ್ಲ ಮೆಲ್ಲ ಕುತ್ತಿಗೆನ ತಿರ್‌ಟಿನೆತ ತಿರ್‌ಟಿತ್. ಕುತಿಗೆ ತುಂಡಾಕೆ ಬತ್ತ್. ಹಂಗೋ ಹಿಂಗೋ ತಿರ್‌ಟಿ ನೆಲಕೆ ಬಡ್ಕತ ಹಾಕಿತ್. ಹಂಗೆ ನೆಲಕೆ ಕೋಳಿ ಬಿತ್ತೋ ಇಲ್ಲೆಯೋ ಕೋಳಿದ್ ಕುತ್ತಿಗೆ ತಿರ್ಗಿಹೋತು. ಮನೆಕಡೆ ತಲೆ, ತ್ವಾಟಕಡೆ ಕಾಲ್. ಹಿಂಗೆ ಕೋಳಿ ಮನೆನ ನೋಡಿಕಂಡ್ ತ್ವಾಟಕಡೆ ಓಡಿ ಹೋತ್. ಆಗ ಅಪ್ಪ ಅವ್ವಂಗೆ ಬಡಿಯಕೆ ದೊಣ್ಣೆ ಎತ್ತಿ ನಿತ್ತತ್. ಮಕ್ಕಳಿಗೆ ನಗೆ ತಡಿಯಕೆ ಬತ್ತ್. ನೆಗಾಡ್‌ರೆ ಅಪ್ಪನ ದೊಣ್ಣೆ ಪೆಟ್ಟ್ ಬಿದ್ದದೆ. ಅಸ್ಟೊತ್ತಿಗೆ ಒಬ್ಬ ಕೋಳಿ ಹಿಂದೆ ಓಡ್‌ತ್. ಆ ಕೋಳಿ ತೋಟಕಡೆಂದ ಇತ್ತ ಓಡಿ ಬಾತ್. ಈಗ ಅದರ ತಲೆ ತ್ವಾಟ ಕಡೆ, ಕಾಲ್ ಮನೆಕಡೆ. ಹಂಗೆ ಓಡಿ ಬಂದ ಕೋಳಿನ ಹಿಡಿಯಕೆ ಒಂತರಾ ತಕ್ಕುಮುಕ್ಕು. ದೆವ್ವನೇ ಕೋಳಿ ಮ್ಯಾಲೆ ಕುದ್ದಟ್ಟುಂತೇಳುವಂಗೆ ಮಕ್ಕ ಹೆದ್‌ರಿಬುಟ್ಟೊ. ಅಸ್ಟೊತ್ತಿಗೆ ಅಲ್ಲಿಲ್ಲಿ ಓಡಾಡ್ದ ಈ ಕೋಳಿ ಬ್ರೇಕ್ ಇಲ್ಲದ ಲಾರಿನೋ ಬಸ್ಸೋ ಬರೆಗೆ ತಾಂಗಿ ನಿತ್ತದಲ್ಲಾ ಹಂಗೆ ಜಗ್‌ಲ್‌ಗೆ ತಾಂಗಿ ನಿತ್ತ್‌ಕಣ್‌ತ್. ಹೆಂಗಾರ್ ಮಾಡಿ ಹಿಡ್‌ಕಂಡೊ. ಅಪ್ಪ ದೆವ್ವಕೆ ಲಾಯ್ಕಾಗಿ ಎರ್‌ಡ್ ಮಾತ್ ಹೇಳ್ತ್. ಅವ್ವ ಮನಾ ಆ ಕೋಳಿ ತಲೆನ ತಿರ್‌ಟಿ ತಿರ್‌ಟಿ ಹಾಕಿತ್. ಹೆಂಗೋ ಕೋಳಿ ಸತ್ತತ್. ಇನ್ನು ಎರ್‌ಡ್ ಕೋಳಿ ಬಾಕಿ ಉಟ್ಟು. ಅದ್ ಅಲ್ಲೆಲ್ಲ್ಯುಟ್ಟು? ಒಂದ್ ಕೋಳಿ ಈ ಗೌಜಿ ನಡ್‌ವೆ ಕೈಂದ ತಪ್ಪಸಿ ಓಡಿಟ್ಟು. ಬೆಳಗೆಂದ ಏನೂ ಮೇಚಿ ಮಾಡದ ಕೋಳಿ ಮರ್‌ಲೋ ಮಣ್ಣೋ ಸಿಕ್ಕಿದರ ತಿಂಬಕೆ ಪೇಚಾಡ್ತ ಇತ್ತ್. ಕತ್ತಲೆ ಬ್ಯಾರೆ ಆಗ್‌ತಾ ಇತ್ತಲ್ಲ, ಬಾಕಿ ಕೋಳಿಗ ಕುದ್ರಿಕೆ ಹೋಕನ ಈ ಕೋಳಿನೂ ಅತ್ತ ಹೋತ್, ಹೋಗಿ ಹಿಡ್ಕೊಂಡೊ. ಹೇಂಗಾರ್ ಮಾಡಿ ಅವ್ವ ಎರ್‌ಡನೆ ಕೋಳಿ ಕೊಂದ್ ಹಾಕಿತ್. ಸರಿ ಮೂರನೆ ಕೋಳಿನ ಕೊಲ್ಲ್‌ಕನ ಕತ್ತಲೆ ಆಗಿಯೇ ಹೋತು. ಅವ್ವ ಆ ಕೋಳಿನ ಕುತ್ತಿಗೆನ ತಿರ್‌ಟ್‌ಕನ ಕುತ್ತಿಗೆ ತುಂಡಾಗಿ ತಲೆ ಬ್ಯಾರೆ ಕೋಳಿ ಬ್ಯಾರೆ ಆಗೋತು. ಅಪ್ಪಂಗೆ ಗೊತ್ತಾತ್‌ಲೆ, ಅವ್ವನೂ ಹೇಳ್ತ್‌ಲೆ, ಮಕ್ಕಳೂ ಗುಟ್ಟು ಬುಟ್ಟತ್‌ಲೆ. ಸದ್ಯ ದೆವ್ವಗಳೂ ಅಪ್ಪಂಗೆ ಚಾಡಿ ಹೇಳ್ತ್‌ಲೆ. ಎಲ್ಲಾರ್ ಅಪ್ಪಂಗೆ ಈ ವಿಚಾರ ಗೊತ್ತಾಗಿದ್ದರೆ, ಅವ್ವನೇ ಎಡೆ ಇಕ್ಕಿ ಬುಡ್ತಿತ್ತೋ ಏನೋ?

ಈಗ ಕೋಳಿನ ಅಚ್ಚ್‌ಕಟ್ಟ್ ಮಾಡೋಕು. ಹಂಗೆ ಮಾಡ್‌ಕನ ಮಕ್ಕಳ ಗೋಳು. ಆ ಕೋಳಿ ಹೇನ್‌ಗ ಮೂರಾ ಅಲ್ಲಿ ಇಲ್ಲಿ ನುಗ್ಗಿ ಹರ್‍ದಾಡ್ತಾ ಒಳೊ. ಕಚ್ಚವು ಕಚ್ತಾ ಒಳೊ. ಹಾಳಾದ ಕೋಳಿನ

ಕೊದಿವ ನೀರ್‌ಗೆ ಹಾಕಿಕೆ ಬ್ಯಾರೆ ಆಗದ್. ಹಂಗೆ ಹಾಕಿರೆ ಹೇನ್‌ಗೆಲ್ಲಾ ಪಡ್ಚ ಆತಿತ್ತ್. ಇಬ್ಬರ್ ಮಕ್ಕ ಮೂರ್ ಕೋಳಿದೂ ತೊಪ್ಪುಟ ತೆಗ್ದೊ. ತಲೆ ಇಲ್ಲದ ಕೋಳಿದ್ ನಡೆ ಬುಡ್ಸಿ ಆಕನ ನೆಂಟರ್ ಬಂದೊ. ಅವು ಏನಾರ್ ಸೊಲ್ಪ ಮುಂದೆ ಬಂದಿದ್ದರೆ "ಈ!!! ಕೋಳಿನ ತಲೆ ತುಂಡ್ ಮಾಡ್ದ್ ಯಾಕೇಂತ ರಾಗ ಎಳ್ದಿರುವೊ. ಸದ್ಯ ಅವು ತಡಾ ಆಗಿ ಬಂದದ್ ಬಾರಿ ಒಳ್ಳದಾತ್. ಎಲ್ಲವು ಸೇರಿಕಂಡೊ, ಮಾಸ ಮಾಡ್ದೊ.

ಅವ್ವ ಕಾಯಿ ಒಡ್ತ್, ಮೆಣ್ಸ್ ಕಡ್ದಾಕನ ಇನ್ನೊಂದ್ ಕಾಯಿನ ಹೋಳು ಮಾಡ್ದೊ, ಗೈಪುಗೆ ಸೊರ್ಗಿದೊ. ಎರ್‌ಡ್ ಕೋಳಿಗಳ ಒಂದೇ ಚೆಟ್ಟಿಲಿ ಗೈಪು ಮಾಡ್ದೊ. ಇನ್ನೊಂದರ ಬ್ಯಾರೆ ಮಾಡ್ದೊ. ಗೈಪು ಬ್ಯಾರೆ ಬ್ಯಾರೆ ಆಗಿ ಬೇತ್. ನೀರ್ ದೋಸೆನೂ ಆತ್. ಅನ್ನನೂ ಬೇತ್, ರಾತ್ರಿ ಗಂಟೆ ಹತ್ತೂ ಆತ್. ಕೊಡಿ ಬಾಳೆಲೆ ಹಾಸಿದೊ, ಎಡೆ ಇಕ್ಕಿಕೆ ಅಪ್ಪನ ಕರ್‍ದೊ. ಅಪ್ಪ ನರ್ಕಿಕಂಡ್ ಬುಕ್ಕಿಕಂಡ್ ಬಾತ್. ಆ ಎಡೆಗೆ ಅದ್ ಈ ಎಡೆಗೆ ಇದ್‌ತ ಹೇಳ್ತ್. ಚಳ್ಳೆಗೆ ಕಳ್ಳ್ ಹೊಯ್ದೊ. ಎಡೆಗೆಲ್ಲಾ ಇಕ್ಕಿದ ಮ್ಯಾಲೆ ತುಪ್ಪನೂ ಹಾಕಿದೊ, ನೆಣೆ ಹೋಸಿ ಇಸಿದೊ. ಎಲ್ಲವೂ ಅಕ್ಕಿ ತಕಂಡೊ. ಅಪ್ಪ ಈಗ ನಾಕ್ ಮಾತ್ ಹೇಳ್ತ್. "ಈಗ ಏನ್‌ಂತೇಳ್‌ರೆ ವರ್ಸ ವರ್ಸ ಕೊಡುವಂಗೆ ಈ ವರ್ಸನೂ ಎಡೆ ಕೊಡ್ತಾ ಒಳೆ. ಮಾಡ್ದ ಅಡಿಗೆಲಾಗಲಿ, ಇಕ್ಕಿದ ಎಡೆಲಾಗಲಿ ಹೆಚ್ಚ್‌ಕಮ್ಮಿ ಆಗಿದ್ದರೂ ತಪ್ಪ್‌ನೆಲ್ಲಾ ಒಪ್ಪ್ ಪಾಲ್ಸಿಕಂಡ್ ತ್ವಾಟ ತೊಡಿಗೆಗೆ, ಗದ್ದೆ ಬೆಳೆಗೆ, ದನ ಕರುಗಳಿಗೆ, ಮಕ್ಕ ಮರಿಗಳಿಗೆ ಹೋದಲ್ಲಿ ಬಂದಲ್ಲಿ ಯಡ್ಡ ಕಾಲ್ ಎಡ್ಗದಂಗೆ, ಮುಡ್ದ ಹೂ ಬಾಡದಂಗೆ ಕಾಪಾಡಿಕಂಡ್ ಸುಕ ಕೊಡ್ಪ ಬಾರನೆಲ್ಲಾ ನಿಮ್ಮ ಮ್ಯಾಲೆ ಬುಟ್ಟೋಳಿ ಸ್ವಾಮಿತ ಹೇಳ್ತ್. ಆಗ ಎಡೆಗೆ ಎಲ್ಲವೂ ಅಕ್ಕಿ ಹಾಕಿದೊ. ಅಕ್ಕಿ ಎಡೆಗೂ ಬೀತ್, ಮುಂದೆ ನಿತ್ತವರ ತಲೆಗೂ ಬೀತ್. ತಿರ್ಗಿ ನಿತ್ತೊ. ಯಾರ್‍ದೂ ಮಾತಿಲ್ಲೆ. ನೆಣೆ ಚಟ್ ಚಟ್ ಜಿರ್ ಜಿರ್‌ತ ಸದ್ದ್ ಮಾಡಿಕಂಡ್ ಹೊತ್ತ್‌ತಿತ್ತ್. ಹೊರಗೆಲ್ಲೋ ಮುಚ್ಚಿದ ಕೊತ್ತಿ ಮಿಯಾಂವ್ ಮಿಯಾಂವ್‌ತ ಕಿರ್‌ಚಾಡ್ತಿತ್ತ್. ಸರಿ ಎಲ್ಲವೂ ತಿರ್‍ಗ್ನೋತ ಅಪ್ಪ ಹೇಳ್ತ್. ಎಡೆ ಕಡೆ ಎಲ್ಲವೂ ತಿರ್ಗಿದೊ.

ಒಳ್ಳಳ್ಳ ಎಡೆಗಳ ಎಳ್ಕಂಡೊ, ಚಳ್ಳೆಲಿದ್ದ ಕಳ್ಳ್‌ನ ಪ್ರಸಾದಾತೇಳಿ ದೊಡ್ಡವು ತಕಂಡೊ. ಚಾಪೆ ಹಾಸಿದ ಕಡೆ ಸಾಲಾಗಿ ಕುದ್ದೊ. ಅವ್ವ ಗೈಪು ಚೆಟ್ಟಿನ ತಂದ್ ನಡೂಲಿ ಇಸಿತ್. ಎನ್ನೆಸ್ ಕುಪ್ಪಿ ಮದ್ಯ ಕುದ್ದತ್. ಹುಯ್ಕಂಡ್ ಕುಡ್ದೊ, ಹಾಕಂಡ್ ತಿಂದೊ, ಪಟ್ಟ ಉಂಡ್ ಎದ್ದೊ.

ಅಸ್ಪೊತ್ತಿಗೆ ಕಾರ್ತಿಂಗಳ ಮಳೆನ ಕೇಳೋಕಾ? ಜಿರಿಗುಟ್ಟಿಕಂಡ್ ಹೊಡಿಯತಾ ಇತ್ತ್. ಅಪ್ಪಂಗೆ ಕುಸೀ ಆತ್. "ಒಳ್ಳ ದಿನ ಇಂದ್ ಒಳ್ಳ ಮಳೆ ಹೊಡಿಯತಾ ಉಟ್ಟುತ ಹೇಳಿಕಂಡ್ ಮಲ್ಗಿಕೆ ಹೋತ್. ಇನ್ನೊಂದ್ ಕಾರ್ತಿಂಗ ಬ್ಯಾಗ ಬಾತ ಮಕ್ಕ ಹೇಳಿಕಂಡ್ ಸುರ್ಬಿ ಮಲ್ಗಿದೊ. ಬಂದ ನೆಂಟ್‌ರ್ ದೊಂದಿ ಹೋಸಿಕಂಡ್, ಗೊರ್ಗ ಹಾಕಂಡ್ ದಾರಿ ಕೂಡ್ದೊ. ಅವ್ವ ಮಾತ್ರ ತಲೆ ತುಂಡಾದ ಕೋಳಿನೇ ಗ್ಯಾನ ಮಾಡಿಕಂಡ್ ಮಲ್ಗಿತ್.

ಪ್ರಮುಖ ವಕ್ತೃಗಳು

ಹೆಸರು	ವಯಸ್ಸು	ಊರು
ಅಯ್ಯಣ್ಣ	೬೫	ಮದೆನಾಡು
ಅವಿನಾಶ್	೩೩	ಪಂಜ, ದ.ಕ.
ಈರಪ್ಪ	೩೫	ನಾಪೋಕ್ಲು
ಇಬ್ಬನಿ	೪	ಮಡಿಕೇರಿ
ಉಮಾವತಿ	೪೫	ಭಾಗಮಂಡಲ
ಕಮಲಾಕ್ಷಿ	೬೩	ಸಣ್ಣ ಪುಲಿಕೋಟು
ಕಾರ್ಯಪ್ಪ	೬೬	ಮೇಕೇರಿ
ಕಾವೇರಮ್ಮ	೫೮	ತಾವೂರು
ಕಾಳಪ್ಪ	೫೮	ಕೈಕಾಡು
ಕಾಂತಿ	೪೩	ಆಲೂರು ಸಿದ್ಧಾಪುರ
ಕುಶನ್ ಪೂವಯ್ಯ	೧೦	ಮಡಿಕೇರಿ
ಕುಸುಮ	೩೦	ವಿರಾಜಪೇಟೆ
ಕೇಶವಭಟ್ಟ(ಹವ್ಯಕ)	೬೫	ಮಡಿಕೇರಿ
ಗಗನ್	೨೮	ಸೋಮವಾರಪೇಟೆ
ಗಣೇಶ್	೩೮	ಕುಶಾಲನಗರ
ಗೌರವ್ ಮುತ್ತಣ್ಣ	೧೩	ಮಡಿಕೇರಿ
ಚಂಗಪ್ಪ	೫೮	ಮರಂದೋಡ
ಚಂದ್ರಮ್ಮ	೭೦	ವಿರಾಜಪೇಟೆ
ಜನನಿ	೩	ಮರಂದೋಡ
ಜಯಮ್ಮ ಬ ಚೆಟ್ಟಿಮಾಡ	೬೫	ಸುಳ್ಯ
ಜಾನಕಿ ಬೆಳ್ಯಪ್ಪ	೫೪	ಕಗ್ಗೋಡ್ಲು
ತಾರ	೩೦	ಗೋಣಿಕೊಪ್ಪ
ತಿಮ್ಮಯ್ಯ	೬೦	ವಿರಾಜಪೇಟೆ
ತಿಮ್ಮಯ್ಯ	೨	ಮಡಿಕೇರಿ
ದೇವಕಿ	೫೪	ಬಿಳಿಗೇರಿ
ಪೂಣಚ್ಚ	೬೦	ಮರಂದೋಡ

ಪೊನ್ನವ್ವ	೮೨	ಕೈಕೇರಿ, ಗೋಣಿಕೊಪ್ಪ
ಬಸಪ್ಪ	೫೦	ಮೈಸೂರು
ಬಿದ್ದಪ್ಪ	೫೩	ಕೆದಮುಳ್ಳೂರು
ಬೆಳ್ಯಪ್ಪ	೫೪	ಕಗ್ಗೋಡ್ಲು
ಬಾಲಕೃಷ್ಣ	೬೮	ಕರಿಕೆ
ಬೋಜಪ್ಪ	೪೩	ಕರಡಿಗೋಡು
ಬೋಪಣ್ಣ	೩	ಮಡಿಕೇರಿ
ಬೋಪಣ್ಣ	೭	ಕುಶಾಲನಗರ
ಭಾಗ್ಯ	೫೬	ಮೂರ್ನಾಡು
ಮಮತ ಸೋಮಣ್ಣ	೩೩	ಪಾರಾಣೆ
ಮಾಚಮ್ಮ	೫೫	ಮರಂದೋಡ
ಮಾಯಮ್ಮ	೫೪	ಮಾಯಮುಡಿ
ಮೀನಾಕ್ಷಿ	೪೨	ಮರಂದೋಡ
ರಶ್ಮಿ (ಹವ್ಯಕ)	೩೨	ಮಡಿಕೇರಿ
ರಾಮಯ್ಯ	೬೫	ಕೆದಮುಳ್ಳೂರು
ವಿನುಕುಮಾರ್	೩೯	ಸಣ್ಣ ಪುಲಿಕೋಟು
ಶಂಕರಭಟ್ಟ	೪೦	ಪುತ್ತೂರು
ಶೀಲಾವತಿ ಕೊಳಂಬೆ	೭೮	ಸುಳ್ಯ
ಸಾವಿತ್ರಿ	೬೦	ಗುಡ್ಡೆ ಹೊಸೂರು
ಸೋಮಣ್ಣ	೩೫	ಪಾರಾಣೆ
ಸೋನು	೨	ವಿರಾಜಪೇಟೆ

ಆಕರ ಗ್ರಂಥಸೂಚಿ:

ಕನ್ನಡ:

೧. ಅಮರೇಶ ನುಗಡೋಣಿ: ೨೦೦೮, ಕನ್ನಡ ಸಂಶೋಧನೆಯ ವೈಧಾನಿಕತೆಗಳು, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨. ಅಶೋಕ ಕುಮಾರ ರಂಜೇರೆ: ೨೦೧೦, ಪದವಿನ್ಯಾಸ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.

೩. ಅಂಗಡಿ ಎಸ್.ಎಸ್.: ೨೦೦೦, ಕನ್ನಡ ಕ್ರಿಯಾ ರೂಪಗಳು, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.

೪. ಅಂಗಡಿ ಎಸ್.ಎಸ್.: ೨೦೦೨, ಸಂಬಂಧವಾಚಕಗಳು ಮತ್ತು ಸಂಬೋಧನೆಗಳು, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.

೫. ಕಲಬುರ್ಗಿ ಎಂ.ಎಂ.: ೧೯೮೯, ಕನ್ನಡ ನಾಮ ವಿಜ್ಞಾನ, ಸ್ವಪ್ನ ಬುಕ್ ಹೌಸ್, ಬೆಂಗಳೂರು.

೬. ಕಾಳೇಗೌಡ ನಾಗವಾರ: ೧೯೭೭, ಬೀದಿ ಮಕ್ಕಳು ಬೆಳೆದೊ, ಗಾದೆಗಳ ಸಂಕಲನ, ಸ್ವಪ್ನ ಬುಕ್ ಹೌಸ್, ಬೆಂಗಳೂರು.

೭. ಕುಶಾಲಪ್ಪ ಗೌಡ ಕೆ.: ೨೦೦೭, ಕನ್ನಡ ಸಂಕ್ಷಿಪ್ತ ವ್ಯಾಕರಣ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.

೮. ಕೆಂಪೇಗೌಡ ಕೆ.: ೨೦೦೭, ಐತಿಹಾಸಿಕ ಭಾಷಾ ವಿಜ್ಞಾನ ಮತ್ತು ತೌಲನಿಕ ಭಾಷಾ ವಿಜ್ಞಾನ, ಸ್ವಪ್ನ ಬುಕ್ ಹೌಸ್, ಬೆಂಗಳೂರು.

೯. ಕೃಷ್ಣಯ್ಯ ಡಿ.ಎನ್.: ೧೯೭೪, ಕೊಡಗಿನ ಇತಿಹಾಸ, ಪ್ರಸಾರಾಂಗ, ಮೈಸೂರು ವಿಶ್ವ ವಿದ್ಯಾಲಯ, ಮೈಸೂರು.

೧೦. ಗಣಪತಿ ಬಿ.ಡಿ.: ೧೯೬೭, ಕೊಡವರು, ಶಾರದಾ ಪ್ರೆಸ್, ಮಂಗಳೂರು.

೧೧. ಗಣಪತಿ ವಿ. ಗುಡ್ಡೇರ: ೧೯೭೦, ಕೊಡಗಿನಲ್ಲಿ ಗೌಡರ ಪದ್ಧತಿಗಳು, ಕೊಡಗು ಮತ್ತು ದಕ್ಷಿಣ ಕನ್ನಡ ಗೌಡ ಸಮಾಜ, ಬೆಂಗಳೂರು.

೧೨. ಗುರುರಾಜ ಬೆಣಕಲ್: ೨೦೧೦, ರೋಚಕ ಒಗಟುಗಳು, ಸ್ವಪ್ನ ಬುಕ್ ಹೌಸ್, ಬೆಂಗಳೂರು–೦೯.

೧೩. ಗೊರವರ ಬ.ಸೋ.: ೨೦೦೮, ಕನ್ನಡ ರಚನಾತ್ಮಕ ಮತ್ತು ಸಮಾಜೋಭಾಷಿಕ ಅಧ್ಯಯನ, ಲಡಾಯಿ ಪ್ರಕಾಶನ, ಗದಗ.

೧೪. ಗೋಪಾಲ್ ಟಿ.ಎಸ್.: ೨೦೧೩, ಕನ್ನಡ ನುಡಿಗಟ್ಟುಗಳು, ನವ ಕರ್ನಾಟಕ ಪಬ್ಲಿಕೇಶನ್ಸ್ ಪ್ರೈವೇಟ್ ಲಿಮಿಟೆಡ್, ಬೆಂಗಳೂರು.

೧೫. ಗಂಗಾನಾಯಕ್ ಕೆ.ಎನ್.: ೨೦೧೨, ಸಮಗ್ರ ಕನ್ನಡ ಗಾದೆಗಳು ಸಂಪುಟ:೧, ಕುವೆಂಪು ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು

೧೬. ಚಿದಾನಂದ ಮೂರ್ತಿ ಎಂ.: ೧೯೬೫, ಭಾಷಾ ವಿಜ್ಞಾನದ ಮೂಲ ತತ್ವಗಳು, ಡಿ.ವಿ.ಕೆ. ಮೂರ್ತಿ, ಪ್ರಕಾಶಕರು, ಮೈಸೂರು.

೧೭. ಚಿನ್ನಪ್ಪ ಗೌಡ ಕೆ.: ೨೦೦೩, ಗೌಡ ಜನಾಂಗ ಇತಿಹಾಸ ಮತ್ತು ಸಂಸ್ಕೃತಿ, ಬೆಳ್ಳಿಹಬ್ಬ ಆಚರಣಾ ಸಮಿತಿ, ಒಕ್ಕಲಿಗರ ಯಾನೆ ಗೌಡರ ಸಂಘ, ಮಂಗಳೂರು.

೧೮. ಚಿನ್ನಪ್ಪ ಗೌಡ ಕೆ.: ೧೯೯೦, ಭೂತಾರಾಧನೆ ಜನಪದೀಯ ಅಧ್ಯಯನ, ಮದಿಪು ಪ್ರಕಾಶನ, ಮಂಗಳ ಗಂಗೋತ್ರಿ, ಮಂಗಳೂರು.

೧೯. ಚಂದ್ರ ಪೂಜಾರಿ ಎಂ.: ೨೦೦೮, ಸಂಶೋಧನ ಜವಾಬ್ದಾರಿ, ಪ್ರಸಾರಾಂಗ, ಕನ್ನಡ ವಿಶ್ವ ವಿದ್ಯಾಲಯ, ಹಂಪಿ.

೨೦. ತುಳಸಿ ದೇವಿ ಕೊಡಗು: ೧೯೮೭, ವಿರಾಜಪೇಟೆ ತಾಲೂಕು ದರ್ಶನ, ಡಿ.ಬಿ.ಎಚ್. ಪ್ರಕಾಶನ, ಬೆಂಗಳೂರು.

೨೧. ದೇವಿ ಪ್ರಸಾದ್ ಎನ್.ಎಸ್.: ೨೦೦೩, ಕೊಡಗಿನಲ್ಲಿ ಭಾಷಾ ಸಾಂಸ್ಕೃತಿಕ ಸಾಮರಸ್ಯ, ಅಮರ ಕ್ರಾಂತಿ ಉತ್ಸವ ಸಮಿತಿ, ಸುಳ್ಯ ದಕ್ಷಿಣ ಕನ್ನಡ ಜಿಲ್ಲೆ.

೨೨. ನಾಗರಾಜ್ ಎಂ.ಬಿ.: ೨೦೦೪, ಕೊಡಗಿನ ಕೈಮಡಗಳು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೨೩. ನಾಗೇಶ್ ಕೆ. ಹೆಬ್ಬಾಲೆ: ಕಾವೇರಿ ಜಾನಪದ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨೪. ನಾಗೇಶ್ ಹೆಚ್.ಕೆ.: ೧೯೯೯, ಕೊಡವರ ಮದುವೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨೫. ನಾಗೇಶ್ ಕಾಲೂರು: ೨೦೧೩, ಕೊಡವ ಭಾಷಿಕ ಜನಾಂಗಗಳ ಸಾಂಸ್ಕೃತಿಕ ಬದುಕು, ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ, ಮಡಿಕೇರಿ.

೨೬. ನಾರಾಯಣ ಕೆ.ವಿ.: ೨೦೦೫, ಭಾಷೆ ವಿಶ್ವಕೋಶ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨೭. ನಾರಾಯಣ ಕೆ.ವಿ.: ೨೦೦೦, ವ್ಯಕ್ತಿನಾಮಗಳ ಸ್ವರೂಪ ಮತ್ತು ವಿಶ್ಲೇಶಣೆ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨೮. ನಾರಾಯಣ ಕೆ.ವಿ.: ೧೯೯೫, ಕನ್ನಡಶೈಲಿ ಕೈಪಿಡಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨೯. ನಾರಾಯಣ ಕೆ.ವಿ.: ೨೦೦೭, ಕನ್ನಡ ಜಗತ್ತು ಅರ್ಧ ಶತಮಾನ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೩೦. ಪಾಂಡುರಂಗ ಬಾಬು ಡಿ.: ೨೦೧೦, ನಮ್ಮ ಆಟಗಳು ನುಡಿಗಟ್ಟು, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.

೩೧. ಪಾಂಡುರಂಗ ಬಾಬು ಡಿ.: ೨೦೦೫, ನುಡಿನೋಟ, ಆಕಾಶ್ ಪ್ರಕಾಶನ, ಹೊಸಪೇಟೆ.

೩೨. ಪ್ರಭಾಕರ ಶಿಶಿಲ ಬಿ.: ೨೦೦೩, ಸಮರಸ, ದೇವಿಪ್ರಸಾದ್ ಅಭಿನಂದನಾ ಸಮಿತಿ, ಸಂಪಾಜೆ.

೩೩. ಬಸವರಾಜ ಬಿ.: ೨೦೦೮, ಚೇತನ ಕನ್ನಡ ವ್ಯಾಕರಣ, ಎಮ್.ಎಸ್.ಎಸ್. ಪಬ್ಲಿಕೇಶನ್ಸ್, ಗದಗ.

೩೪. ಭಾಸ್ಕರ ಟಿ.ಎಂ.: ೨೦೦೭, ನಮ್ಮ ಸುತ್ತಿನ ಒಗಟುಗಳು, ಮರುಗ ಪ್ರಕಾಶನ, ಗುಲಬರ್ಗ.

೩೫. ಮಹದೇವಯ್ಯ ಪಿ.: ೨೦೦೬, ದಲಿತರು ಭಾಷೆ ಮತ್ತು ಸಮಾಜ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೩೬. ಮಹದೇವಯ್ಯ ಪಿ.: ೨೦೦೦, ಸಾಮಾಜಿಕ ಉಪಭಾಷೆ, ಮಂಟಪಮಾಲೆ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.

೩೭. ಮಾನಸ (ಸಂ): ೨೦೦೭, ಸುಪ್ರಸಿದ್ಧ ಸಾವಿರಾರು ಒಗಟುಗಳು, ತನು ಮನು ಪ್ರಕಾಶನ, ಮೈಸೂರು.

೩೮. ರಮೇಶ್ ಉತ್ತಪ್ಪ ಐತಿಚಂಡ: ೨೦೧೪, ಕೊಡವ ಸಾಂಸ್ಕೃತಿಕ ಅಧ್ಯಯನ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೩೯. ರಹಮತ್ ತರಿಕೆರೆ: ೨೦೦೭, ಕನ್ನಡ ಸಂಶೋಧನೆ ತಾತ್ವಿಕ ವಿಚಾರ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.

೪೦. ರಾಮೇಗೌಡ: ೨೦೦೯, ನಮ್ಮ ಗಾದೆಗಳು, ಡಿ.ವಿ.ಕೆ ಮೂರ್ತಿ, ಪ್ರಕಾಶಕರು, ಮೈಸೂರು–೪.

೪೧. ರಾಮೇಗೌಡ: ೧೯೭೦, ನಮ್ಮ ಒಗಟುಗಳು, ಡಿ.ವಿ.ಕೆ ಮೂರ್ತಿ, ಪ್ರಕಾಶಕರು, ಮೈಸೂರು–೪.

೪೨. ರಾಮೇಗೌಡ: ೧೯೬೩, ಕಿಟ್ಟೆಲ್ ಕೋಶದ ಗಾದೆಗಳು, ಡಿ.ವಿ.ಕೆ ಮೂರ್ತಿ, ಪ್ರಕಾಶಕರು, ಮೈಸೂರು–೪.

೪೩. ರೇಣುಕಾ ಪ್ರಸಾದ್ ಕೆ.ವಿ.: ೧೯೯೮, ಅಕ್ಷಯ, ದಕ್ಷಿಣ ಕನ್ನಡ ಜಿಲ್ಲೆ ೭ನೇ ಕನ್ನಡ ಸಾಹಿತ್ಯ ಸಮ್ಮೇಳನ ಸ್ಮರಣ ಸಂಚಿಕೆ, ಸುಳ್ಯ.

೪೪. ವಿವೇಕ ರೈ: ೨೦೦೭, ತುಳು ಸಾಹಿತ್ಯ ಚರಿತ್ರೆ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.

೪೫. ವಿಶ್ವನಾಥ ರೈ. ಕುದ್ಕಾಡಿ: ಗಾದೆಗಳಿಗೊಂದು ಭಾಷ್ಯ ಭಾಗ-೧, ವಿಶ್ವ ಕಲಾನಿಕೇತನ, ಪುತ್ತೂರು.

೪೬. ಶಂಕರಭಟ್ಟ ಡಿ.ಎನ್.: ೧೯೯೯, ಕನ್ನಡ ಪದಗಳ ಒಳರಚನೆ, ಭಾಷಾ ಪ್ರಕಾಶನ, ಮೈಸೂರು.

೪೭. ಶಂಕರಭಟ್ಟ ಡಿ.ಎನ್.: ೨೦೦೩, ಕನ್ನಡದ ಸರ್ವನಾಮಗಳು, ಭಾಷಾ ಪ್ರಕಾಶನ, ಮೈಸೂರು.

೪೮. ಶಂಕರಭಟ್ಟ ಡಿ.ಎನ್.: ೨೦೦೮, ಮಾತಿನ ಒಳಗುಟ್ಟು, ಭಾಷಾ ಪ್ರಕಾಶನ, ಹೆಗ್ಗೋಡು, ಸಾಗರ.

೪೯. ಶ್ರೀಧರ್ ಎಸ್.ಎಸ್.: ೧೯೯೫, ಇಂದಿನ ಕನ್ನಡ ರಚನೆ ಮತ್ತು ಬಳಕೆ, ಅಭಿನವ ಪ್ರಕಾಶನ, ವಿಜಯನಗರ, ಬೆಂಗಳೂರು.

೫೦. ಶ್ರೀಮತಿ ಎಚ್.ಎಸ್.:೨೦೦೭, ಹೆಣ್ಣು ಮತ್ತು ಭಾಷೆ, ಮಹಿಳಾ ಅಧ್ಯಯನ ಕೇಂದ್ರ, ಪ್ರಸಾರಾಂಗ, ಕನ್ನಡ ವಿಶ್ವ ವಿದ್ಯಾಲಯ, ಹಂಪಿ.

೫೧. ಶ್ರೀ ಕಂಠಯ್ಯ ತೀ. ನಂ.: ೨೦೦೪, ಕನ್ನಡ ಮಧ್ಯಮ ವ್ಯಾಕರಣ, ಗೀತಾ ಬುಕ್ ಹೌಸ್, ಮೈಸೂರು.

೫೨. ಸರಸ್ವತಿ ಪ್ರಕಾಶ್ ಕೋರನ: ೨೦೧೦, ಕೊಡಗು ಗೌಡ ಸಮುದಾಯ, ಮುದ್ದಶ್ರೀ ಗ್ರಂಥಮಾಲೆ, ಬೆಂಗಳೂರು.

೫೩. ಸುಧಾಕರ: ೧೯೭೩, ನಮ್ಮ ಸುತ್ತಿನ ಗಾದೆಗಳು, ಕಾವ್ಯಶ್ರೀ ಪ್ರಕಾಶನ, ಮೈಸೂರು.

೫೪. ಸೂರ್ಯನಾಥ ಯು. ಕಾಮತ್: ೧೯೯೨, ಕೊಡಗು ಜಿಲ್ಲೆ ಕರ್ನಾಟಕ ಗೆಸೆಟಿಯರ್, ಬೆಂಗಳೂರು.

೫೫. ಸೋಮಶೇಖರ ಗೌಡ: ೨೦೦೭, ಸಾಮಾಜಿಕ ಭಾಷಾ ವಿಜ್ಞಾನ, ಪ್ರಸಾರಾಂಗ ಮಾನಸ ಗಂಗೋತ್ರಿ, ಮೈಸೂರು.

೫೬. ಸಂಗಮೇಶ ಸವದತ್ತಿ ಮಠ: ೧೯೭೯, ಕನ್ನಡ ಭಾಷಾ ವ್ಯಾಸಾಂಗ, ರೂಪರಶ್ಮಿ ಪ್ರಕಾಶನ, ಧಾರವಾಡ.

೫೭. ಸಂಗಮೇಶ ಸವದತ್ತಿ ಮಠ: ೨೦೦೮, ಕನ್ನಡ ಭಾಷಾ ಸ್ವರೂಪ, ರೂಪರಶ್ಮಿ ಪ್ರಕಾಶನ, ಕಲಬುರ್ಗಿ.

೫೮. ಸಂಗಮೇಶ ಸವದತ್ತಿ ಮಠ: ೧೯೯೮, ಕನ್ನಡ ಭಾಷಾ ಪ್ರಭೇಧಗಳು, ಮಂಟಪಮಾಲೆ-೪೨, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.

೫೯. ಸಾಂಬಮೂರ್ತಿ: ೨೦೦೬, ಕನ್ನಡದಲ್ಲಿ ಪ್ರತ್ಯಯಗಳು, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.

೬೦. ಸಾಂಬಮೂರ್ತಿ: ೨೦೧೦, ಕನ್ನಡ ಕ್ರಿಯಾರಚನೆ ಬಗೆಗಳು, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಗೌಡ ಕನ್ನಡ:

೧. ಈರಪ್ಪ ಸೂದನ: ೧೯೮೭, ಗೌಡದೊನಿ ಪಾಕ್ಷಿಕ ಪತ್ರಿಕೆ.

೨. ಕುಶಾಲಪ್ಪ ಗೌಡ (ಸಂ): ೧೯೯೬, ವೀಳ್ಯ, ದಕ್ಷಿಣ ಕನ್ನಟ ಮತ್ತು ಕೊಡಗು ಜಿಲ್ಲೆ ಗೌಡ ಸಮ್ಮೇಳನ, ಸ್ಮರಣ ಸಂಚಿಕೆ, ಸುಳ್ಯ.

೩. ಗಂಗಾಧರ ಕೆ.ಆರ್: ೨೦೧೩, ಅರೆಭಾಷೆ–ಕನ್ನಡ–ಇಂಗ್ಲಿಶ್ ಶಬ್ಧಕೋಶ, ಗೌಡ ಸೋಶಿಯೋ ಎಜುಕೇಶನ್ ಟ್ರಸ್ಟ್, ಸುಳ್ಯ.

೪. ಜಯಮ್ಮ ಬ. ಚೆಟ್ಟಿಮಾಡ: ೧೯೯೮, ಹಳಬರ ಜೋಳಿಗೆ ಭಾಗ–೩, ಕಾವ್ಯ ಕಾವೇರಿ ಸಂದೀಪಿನಿ, ಸುಳ್ಯ.

೫. ಜಾನಕಿ ಬೆಳ್ಯಪ್ಪ ಬೈತಡ್ಕ: ೨೦೦೯, ಅಕ್ಷಯ, ಕೊಡಗು ಗೌಡ ಮಹಿಳಾ ಒಕ್ಕೂಟ, ಮಡಿಕೇರಿ, ಕೊಡಗು.

೬. ಜೋಯಪ್ಪ ಬಾರೆಯಂಡ: ೨೦೦೩, ಚಾಂಪಾ, ಸಣ್ಣ ಕತೆಗ, ಕೊಡಗು ಗೌಡ ವಿದ್ಯಾ ಸಂಘ, ಮಡಿಕೇರಿ.

೭. ಭವಾನಿಶಂಕರ್ ಹೊದ್ದೆಟ್ಟಿ: ೨೦೦೩, ಸಂತೃಪ್ತಿ, ಅರೆಕನ್ನಡ ಪದ್ಯಗ, ಬಂಟಮಲೆ ಪ್ರಕಾಶನ, ಸುಳ್ಯ.

೮. ಮುಡೂರು ಟಿ.ಬಿ.: ೧೯೮೫, ಸ್ಪಂದನ, ಕೊಡಗು ಜಿಲ್ಲಾ ಗೌಡ ಸಮ್ಮೇಳನ ೮೫, ಸಮ್ಮೇಳನ ಸಮಿತಿ, ದಕ್ಷಿಣ ಕನ್ನಡ ಮತ್ತು ಕೊಡಗು ಗೌಡ ಸಮಾಜ, ಸುಳ್ಯ.

೯. ಯಶವಂತ ಕುಡಕಲ್ಲು: ೨೦೦೩, ತೊಂಬರ, ಬಂಡಮಲೆ ಪ್ರಕಾಶನ, ಗುತ್ತಿಗಾರು, ಸುಳ್ಯ.

೧೦. ವೀರಪ್ಪ ಗೌಡ (ಸಂ): ೧೯೭೦, ಕೊಡಗು ಮತ್ತು ದಕ್ಷಿಣ ಕನ್ನಡ ಮಧ್ಯಮ ವ್ಯಾಕರಣ, ಗೀತಾ ಬುಕ್ ಹೌಸ್, ಮೈಸೂರು.

೧೧. ಶೀಲಾಮಣಿ ಪಟ್ಟಡ (ಸಂ): ೧೯೯೯, ಕೊಡಗು ಸಂಗಾತಿ, ಅರೆಭಾಷೆ ಪಾಕ್ಷಿಕ ಪತ್ರಿಕೆ, ಸಂಚಿಕೆ ೨೩, ಸಂಚಿಕೆ ೨೪, ಸಂಚಿಕೆ ೧೭.

೧೨. ಸೀತಾರಾಮ ಕೇವಳ: ೨೦೦೩, ಬಾಂದವ್ಯ, ಗೌಡ ಯುವ ಸಮಾವೇಶ, ಸಮಾವೇಶ ಸಂಘಟನಾ ಸಮಿತಿ, ಸುಳ್ಯ.

ಕೊಡವ:

೧. ಅಪ್ಪಯ್ಯ ಎಸ್. ಪೊಂಜಾಂಡ: ೨೦೦೩, ಕೊಡವ ಶಬ್ಧಕೋಶ, ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ, ಮಡಿಕೇರಿ.

೨. ಚಿಣ್ಣಪ್ಪ ನಡಿಕೇರಿಯಂಡ: ೧೯೨೪, ಪಟ್ಟೋಲೆ ಪಳಮೆ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.

೩. ಡಾಟಿ ಪೂವಯ್ಯ ಉಳ್ಳಿಯಡ (ಸಂ): ೨೦೦೩, ಕೊಡವ ಸಿರಿ, ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ, ಮಡಿಕೇರಿ.

೪. ಬೊಳ್ಳಚೆಟ್ಟೀರ ಎ. ಕುಶಾಲಪ್ಪ: ಪೊನ್ನಕ್ಕ್, ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ, ಮಡಿಕೇರಿ.

೫. ಸ್ವಾತಿ ಹೊಟ್ಟೇಂಗಡ: ೨೦೧೧, ಕೊಡವಡ ನಮ್ಮೆನಾಳ್, ಮಂಗಲ ಪಿಞ ಚಾವ್ ಪದ್ಧತಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ತುಳು:

೧. ಅಮೃತ ಸೋಮೇಶ್ವರ: ೨೦೧೦, ಪೊಸ ಗಾದೆಲು, ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ, ಮಂಗಳೂರು.

೨. ಜ್ಯೋತಿ ಚೇಳ್ಯಾರು: ೨೦೦೮, ಗಾದೆಲು, ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ, ಮಂಗಳೂರು.

೩. ರಾವ್ ಪಿ.ಎಸ್.: ೨೦೦೬, ತುಳು ತೆರಿಯೊನ್ಲೆ, ದುರ್ಗಾ ಪ್ರಕಾಶನ, ಮಂಗಳೂರು.

೪. ಸುರೇಶ್ ಬಿ: ೨೦೧೨, ತುಳುಟು ಪಾತೆರ್ಲೆ, ಸ್ಟೂಡೆಂಟ್ ಬುಕ್ ಕಂಪನಿ, ಮಂಗಳೂರು.

ENGLISH:

1. Jenfnifer Marie Bayer: 1985, Dynamics Of Language Maintence Among Linguistic Minorities, Central Institute Of Indian Language, Mysore.

2. Jenfnifer Marie Bayer: 1986 A Sociolinguistic Investigation Of The English Spoken By The Anglo-Indians In Mysore City, Central Institute Of Indian Language, Mysore.

3. Jenfnifer Marie Bayer with Rajshree Subbaiah: 1981, Methods In Sociolinguistics, Central Institute Of Indian Languages, mYsore.

4. Kushalappa Gowda K.: 1970, Gowda Kannada, Annamalai University, Tamilnadu.

ಸಂಶೋಧನಾ ಪ್ರಬಂಧಗಳು:

೧. ಆಂಜನೇಯ : ೨೦೦೬, ಮ್ಯಾಸಬೇಡರ ಕನ್ನಡ ಸಮಾಜೋಭಾಷಿಕ ಅಧ್ಯಯನ, ಪಿಎಚ್.ಡಿ. ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨. ನಾಗರಾಜ: ೨೦೧೩, ಯಾದಗಿರಿ ಜಿಲ್ಲೆಯ ಶಿಶುಭಾಷಾ ರೂಪಗಳು, ಎಂಫಿಲ್ ಸಂಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೩. ಭಾಗ್ಯಲಕ್ಷ್ಮಿ ಎಂ.: ಬಳ್ಳಾರಿ ಪರಿಸರದ ಕನ್ನಡ ತೆಲುಗು ದ್ವಿಭಾಷಿಕತೆ: ಸಮಾಜೋಭಾಷಿಕ ಅಧ್ಯಯನ, ಪಿಎಚ್.ಡಿ. ಮಹಾಪ್ರಬಂಧ, ಕನ್ನಡ ವಿಶ್ವ ವಿದ್ಯಾಲಯ, ಹಂಪಿ.

೪. ಪುರುಷೋತ್ತಮ ಬಿಳಿಮಲೆ: ೧೯೮೫, ಸುಳ್ಯ ಪರಿಸರದ ಗೌಡ ಜನಾಂಗ ಒಂದು ಸಾಂಸ್ಕೃತಿಕ ಅಧ್ಯಯನ, ಪಿಎಚ್.ಡಿ. ಮಹಾ ಪ್ರಬಂಧ, ಮಂಗಳೂರು ವಿಶ್ವ ವಿದ್ಯಾನಿಲಯ.

೫. ಲಾವಣ್ಯ ಸಿ.ಪಿ.: ೨೦೦೮, ಕೊಡಗಿನ ಗೌಡ ಕನ್ನಡದ ಕ್ರಿಯಾ ರಚನೆಗಳು, ಎಂಫಿಲ್ ಸಂಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೬. ಸರಸ್ವತಿ ಪ್ರಕಾಶ್ ಕೋರನ: ೨೦೦೮, ಕೊಡಗು ಗೌಡ ಸಮುದಾಯ, ಸಾಂಸ್ಕೃತಿಕ ಅನನ್ಯತೆ, ಮತ್ತು ಚಲನಶೀಲತೆ, ಪಿಎಚ್.ಡಿ ಮಹಾ ಪ್ರಬಂಧ, ಕರ್ನಾಟಕ ರಾಜ್ಯ ಮುಕ್ತ ವಿಶ್ವ ವಿದ್ಯಾನಿಲಯ, ಮೈಸೂರು.

ಪ್ರಕಟಿತ ಲೇಖನಗಳು:

೧. ಲಾವಣ್ಯ ಸಿ.ಪಿ.: ೨೦೧೫, ನಮ್ಮ ಕನ್ನಡ, ಸಂಚಿಕೆ–೬೮, ಗೌಡಕನ್ನಡದಲ್ಲಿ ಹೆಣ್ಣಿನ ಭಾಷೆ, ಸಂ: ಪಿ. ಮಹದೇವಯ್ಯ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨. ಲಾವಣ್ಯ ಸಿ.ಪಿ.: ೨೦೧೫, ಅನನ್ಯ ನುಡಿ ಮಾಸಪತ್ರಿಕೆ, ಸಂಪುಟ–೩, ಸಂಚಿಕೆ–೧೧, ಕೊಡಗಿನ ಗೌಡ ಸಮುದಾಯದಲ್ಲಿ ಭಿನ್ನಪಗಳ ಪ್ರಾಮುಖ್ಯತೆ, ಸಂ: ಪ್ರಕಾಶನ: ಎಂ.ವಿ. ತ್ಯಾಗರಾಜ್, ಬೆಂಗಳೂರು.